ಸಂವಾದ

ಜನವರಿ ೨೦೧೦ ರೂ. ೨೦

ಲಿಬ್ಬರಾನ್ ವರದಿ ಸುತ್ತಮುತ್ತ

ಮಸೀದಿ ನಾಶದ ನಂತರ...

ಮಾತರಂ

ಲರಿಸಂ

ಸಂವಾದ

ಮಾಸ ಪತ್ರಿಕೆ

ಸಂಪುಟ ೮ ಸಂಚಿಕೆ ೩

ಜನವರಿ ೨೦೧೦

ಸಂಪಾದಕ :
ಇಂದೂಧರ ಹೊನ್ನಾಪುರ

ಸಂಪಾದಕೀಯ ಬಳಗ :
ಡಾ॥ ನಟರಾಜ್ ಹುಳಿಯಾರ್
ಪ್ರೊ॥ ರಹಮತ್ ತರೀಕೆರೆ
ಡಾ॥ ಕೆ. ಪುಟ್ಟಸ್ವಾಮಿ
ಡಾ॥ ಡಿ. ಡೊಮಿನಿಕ್
ಡಾ॥ ಬಿ.ಯು. ಸುಮಾ
ಡಾ॥ ಜಿ. ಪಾಂಡುನಾಯಕ್
ಎನ್. ಕೆ. ಹನುಮಂತಯ್ಯ

ವಿಳಾಸ: ಸ್ಫೂರ್ತಿಧಾಮ,
ಅಂಜನಾನಗರ, ಮಾಗಡಿ ರಸ್ತೆ,
ವಿಶ್ವನೀಡಂ ಅಂಚೆ
ಬೆಂಗಳೂರು–೫೬೦ ೦೯೧

PRINTED AND PUBLISHED BY
S.R. GOVINDU
ON BEHALF OF SPOORTHIDHAMA
ANJANA NAGAR, MAGADI ROAD
VISHWANEEDAM POST
BANGALORE - 560 091
✆ Editorial: 9448048306
✆ Circulation: 080-23480278, 9945264687
e-mail : samvaada@hotmail.com
honnapura@yahoo.co.in

EDITOR :
INDUDHARA HONNAPURA

- ❑ ಪತ್ರಗಳು ೦೩
- ❑ ಹೊಸ ಪುಸ್ತಕ ೦೪
- ❑ ಅಂತರಂಗ ೦೫
- ❑ ಸಂಪಾದಕರೊಂದಿಗೆ ಸಂವಾದ:
  - ○ ಅನಂತ್ ನಾಯಕ್ . ಎನ್ ೦೬
  - ○ ಭರತ್ ರಾಜ್ ೦೭
- ❑ ಹಸಿವು–ಬಡತನ–ಆಹಾರ ಸುಭದ್ರತೆಯ ಸುತ್ತಮುತ್ತ
  - ○ ಮ. ಶ್ರೀ. ಮುರಳಿ ಕೃಷ್ಣ ೧೦
- ❑ ಆ ದಶಕ ಬಿಡುಗಡೆಯ ಮಾತು
  - ○ ದೇವನೂರ ಮಹದೇವ ೧೨
- ❑ ವಂದೇ ಮಾತರಂ ಮತ್ತು ಸೆಕ್ಯುಲರಿಸಂ
  - ○ ಡಿ. ಎಸ್. ನಾಗಭೂಷಣ ೧೪



- ❑ ನೆರೆ ಪರಿಹಾರದಲ್ಲಿ ಪ್ಯಾರಾಸೈಟುಗಳು!
  - ○ ಶಿವಸುಂದರ್ ೧೮
- ❑ ಲಿಬ್ರಹಾನ್ ವರದಿ ಸುತ್ತ ಮುತ್ತ...
  - ○ ನಾ ದಿವಾಕರ ೨೦
- ❑ ಕರಾವಳಿ ಕರ್ನಾಟಕ ಮರಾಟಿ ಜನಾಂಗ ಗೋಂದೋಳು ಪೂಜೆ: ಸ್ವರೂಪ ಮತ್ತು ಉದ್ದೇಶಗಳು
  - ○ ಡಾ.ಕೆ.ಸುಂದರ ನಾಯಕ್, ಭಾ.ಅ.ಸೇ. ೨೬
- ❑ ಜಾತಿ ವರ್ಚಸ್ವಿಕರಣದೊಂದಿಗೆ ಬಸವ ತತ್ವದ ಹೋರಾಟ
  - ○ ಜಿ. ಎಸ್. ದಸ್ತಾಪೂರ ೩೦
- ❑ ಬುಲ್ಡೋಸರ್ ಕುಟುಕಿದ ಮೊತ್ತಿ
  - ○ ದೇವು ಹನೆಹಳ್ಳಿ ೩೪

- ❑ ಮಾತೃ ಭಾಷೆ: ಹಾಗಂದರೇನು?
  - ○ ಮೇಟಿ ಮಲ್ಲಿಕಾರ್ಜುನ ೩೮
- ❑ ಪುಸ್ತಕ ಅವಲೋಕನ: ಸಾಹಿತ್ಯ–ಸಂಸ್ಕೃತಿ: ಬಹುಮುಖಿ ಪರಿಕಲ್ಪನೆಗಳ ತಾತ್ವಿಕ ಚಿಂತನೆ
  - ○ ಡಾ. ಎಂ. ಮುನಿಯಪ್ಪ ೪೨
- ❑ ಕಾಲಮಾನ... ೨ ದಲಿತ–ಮುಸ್ಲಿಂ ಚಳುವಳಿ ಮೀಸಲಾತಿ ಸಮಸ್ಯೆ
  - ○ ಡಾ. ಮುಜಾಫ್ಫರ್ ಅಸ್ಸಾದಿ ೪೪
- ❑ ದಲಿತ್ ಡೈರಿ
  - ○ ಚಂದ್ರಭಾನ್ ಪ್ರಸಾದ್/ಸತ್ಯಪ್ರಕಾಶ್ ೪೬
- ❑ ಬುದ್ಧಾಯಣ ೫೦
  - ○ ಸಿ. ಎಚ್. ರಾಜಶೇಖರ್

ಕವನಗಳು : ❑ ಬೆಳಕಿನೊಂದಿಗೆ ೨೯ ❑ ಮಗು ಹೋದ ದಿಕ್ಕಿನಲ್ಲಿ ೪೯

ಮುಖಪುಟ ವಿನ್ಯಾಸ: ಮುರಳೀಧರ ರಾಠೋಡ್

(ಇಲ್ಲಿನ ಲೇಖನಗಳಲ್ಲಿ ಪ್ರಕಟವಾಗಿರುವ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದವು)

'ಕೈದಿಗಳ ಬಿಡುಗಡೆಯಲ್ಲಿ ರಾಜಕೀಯ ಬೇಡ'

ಮಾನ್ಯರೇ,

ರಾಜ್ಯದ ವಿವಿಧ ಕಾರಾಗೃಹಗ ಳಲ್ಲಿ ಕಠಿಣ ಸಜಾ (14ವರ್ಷ)ವನ್ನನುಭವಿಸುತ್ತಿರುವವರಲ್ಲಿ ಈಗಾಗಲೇ ಬಹಳಷ್ಟು ವರ್ಷಗಳನ್ನು ಪೂರೈಸಿರುವ ಮಹಿಳೆಯರು ಮತ್ತು ಪುರುಷ ಬಂಧಿಗಳನ್ನು ಉತ್ತಮ ನಡತೆಯ ಮೇರೆಗೆ ಬಿಡುಗಡೆಗೊಳಿಸಲು ಕೋರಿ ರಾಜ್ಯ ಸರ್ಕಾರವು ಒಟ್ಟು 594 ಜನರ ಪಟ್ಟಿಯನ್ನು ಸಿದ್ಧಪಡಿಸಿ ರಾಜ್ಯಪಾಲರ ಅನುಮತಿಗಾಗಿ ಕಳುಹಿಸಿಕೊಟ್ಟಿದೆ. ಇದು ಕಾರಾಗೃಹಗಳ ಬಂಧಿಗಳಲ್ಲಿ ಮತ್ತು ಅವರುಗಳ ಕುಟುಂಬದವರುಗಳಲ್ಲಿ, ಸಂಬಂಧಿ ಕರುಗಳಲ್ಲಿ ಹೊಸ ಬದುಕಿನ ಆಶಯವೊಂದನ್ನು ಮೂಡಿಸಿದಂತಾಗಿದೆ. ಇಷ್ಟು ದಿನಗಳ ಕಾಲ 4 ಗೋಡೆಗಳ ಮಧ್ಯೆ ಕಬ್ಬಿಣದ ಸಲಾಖೆಯೊಳಗೆ ದಿನ ನೂಕುತ್ತಿರುವ ಅದೆಷ್ಟೋ ನೊಂದ ಜನರ ಹೊರಗೆ ಸ್ವತಂತ್ರವಾಗಿ ಹಕ್ಕಿಯಂತೆ ಹಾರಾಡಬೇಕೆಂಬ ಕನಸನ್ನು ಸಾಕಾರಗೊಳಿಸಬೇಕಿರುವ ಮಾನವೀಯ ಜವಾಬ್ದಾರಿ ನಮ್ಮ ರಾಜ್ಯದ ರಾಜ್ಯಪಾಲರಾದ ಎಚ್. ಆರ್. ಭಾರದ್ವಾಜ್‌ರವರ ಮೇಲಿದೆ.

ಅದೆಷ್ಟೋ ಅಮಾಯಕ ಬಂಧಿಗಳು ತಾವು ಯಾವ ತಪ್ಪನ್ನೂ ಮಾಡದಿದ್ದಾಗ್ಯೂ ಸಮಯ ಸಂದರ್ಭಗಳಿಂದಾಗಿ ಅಪರಾಧಿಗಳಾಗಿ ಶಿಕ್ಷೆಯನ್ನನುಭವಿಸುವಂತಾಗಿದೆ. ಇಂತಹ ಹಲವರಲ್ಲಿ ವಯಸ್ಸಾದವರ ಸಂಖ್ಯೆಯೇ ಅಪಾರವಾಗಿದ್ದು ಅವರುಗಳ ಸ್ಥಿತಿಗತಿ ಮಾನಸಿಕ ಪರಿಸ್ಥಿತಿ ಶೋಚನೀಯವಾದುದಾಗಿರುತ್ತದೆ. ಒಂದು ಹೆಣ್ಣಿನ ಗಂಡ ಅಥವಾ ಒಂದು ಗಂಡಿನ ಹೆಂಡತಿ ಮತ್ತು ಕುಟುಂಬದ ಸೊಸೆ ಸತ್ತರೆಂದರೆ ಸಾಕು, ಸತ್ತವರ ಹೆಂಡ್ತಿ ಅಥವಾ ಗಂಡ ಅಥವಾ ಅತ್ತೆ ಮಾವಂದಿರನ್ನು ಪೊಲೀಸರು ಕರೆತಂದು ದೂರು ದಾಖಲಿಸಿರುತ್ತಾರೆ. ಸತ್ತವರ ಪರವಾಗಿ ವ್ಯಕ್ತಿಯೊಬ್ಬರು ದೂರು ನೀಡಿದಾಗ ಪೊಲೀಸರದನ್ನು ದಾಖಲಿಸಿಕೊಂಡು ಆರೋಪಿತರನ್ನು ಬಂಧಿಸಿ ವಿಚಾರಣೆ ನಡೆಸಬೇಕಿರುವುದು ಸೂಕ್ತವಾದುದೆ, ಆದರೆ ಕೆಲವೊಮ್ಮೆ ನಡೆದಿರುವ ಸಾವುಗಳಲ್ಲಿ ಆರೋಪಿತರು ನಿರಪರಾಧಿಗಳಾಗಿರುತ್ತಾರೆ. ಇಂತಹ ಸಂದರ್ಭದಲ್ಲಿ ಪೊಲೀಸರು ದೂರೊಂದರ ವಿಚಾರಣೆ ನಡೆಸಿ 3 ತಿಂಗಳೊಳಗೆ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸುವಾಗ ನಿರಪರಾಧಿಗಳಾಗಿದ್ದವರ ಬಗ್ಗೆ ರಿ ರಿಪೋರ್ಟ್ ಹಾಕಲು ಕಾನೂನಿನಲ್ಲಿ ಅವಕಾಶಗಳಿವೆ.

ಪತ್ರಾಗಾರ

ಆದರೆ ಇದು ಸರಿಯಾಗಿ ಜಾರಿಯಾಗದಿರುವ ಕಾರಣ ಹಣ್ಣುಹಣ್ಣು ಮುದುಕ ಮುದುಕಿಯರೂ ಕಾರಾಗೃಹಕ್ಕೆ ಬರುವಂತಾಗುತ್ತಿದೆ. ಸರಿ ದೂರು ದಾಖಲಾದ ಮೇರೆಗೆ ತಂದೆ, ತಾಯಿ, ಗಂಡ ಮೂವರೂ ಜೈಲಿಗೆ ಬರುತ್ತಾರೆ. 1–2 ಅಥವಾ ಮೂರು ತಿಂಗಳಲ್ಲಿ ಜಾಮೀನಿನ ಮೇಲೆ ಹೊರಗಡೆ ಹೋಗುತ್ತಾರೆ. ಕೇಸಿನ ವಿಚಾರಣೆಯೆಲ್ಲಾ ನಡೆದು ಕೆಲವೊಮ್ಮೆ ಸಾಕ್ಷಿಯಾಧಾರಗಳ ಕೊರತೆಯಿಂದಾಗಿ ಕೇಸೇ ಹೋಗಿಬಿಡುತ್ತದೆ. ಇಲ್ಲಾ ಕಠಿಣಸಜೆ ಅಥವಾ ಸಾದಾ ಸಜೆಯನ್ನು ನ್ಯಾಯಾಧೀಶರು ನಿಗಧಿಪಡಿಸುತ್ತಾರೆ. ಈ ಬಗ್ಗೆಯೂ ಉಚ್ಚನ್ಯಾಯಾಲಯಕ್ಕೆ ಮನವಿ ಸಲ್ಲಿಸಿ, ಜಾಮೀನಿನ ಮೇಲೆ ಬಿಡುಗಡೆಗೊಂಡು ಉಚ್ಚನ್ಯಾಯಾಲಯದಲ್ಲಿಯೂ ಮತ್ತೊಮ್ಮೆ ವಿಚಾರಣೆ ನಡೆದು ಆರೋಪಿಗಳನ್ನು ಖುಲಾಸೆಗೊಳಿಸುವಂತಹ ತೀರ್ಪು ಕೆಲವೊಮ್ಮೆ ಪ್ರಕಟವಾದರೆ ಕೆಲವೊಮ್ಮೆ ಕೆಳಗಿನ ನ್ಯಾಯಾಲಯದ ತೀರ್ಪನ್ನು ಉಚ್ಚನ್ಯಾಯಾಲಯವೂ ಎತ್ತಿ ಹಿಡಿಯುತ್ತದೆ.

ಇಂತಹ ತೀರ್ಪುಗಳಲ್ಲಿ ಹಣವಿರದ, ಯಾವ ತಪ್ಪನ್ನೂ ಮಾಡದೆ ಸಂದರ್ಭಗಳಿಂದಾಗಿ ಅಪರಾಧಿಗಳಾಗಿ ಕಾರಾಗೃಹಗಳಲ್ಲಿ ಬಂಧಿಯಾಗುವರೇ ಹೆಚ್ಚು. ಹಣ, ಇನ್‌ಫ್ಲುಯನ್ಸ್‌ಗಳಿದ್ದವರು ಏನೇ ತಪ್ಪು ಮಾಡಿದ್ದಾಗ್ಯೂ ತಪ್ಪಿಸಿಕೊಂಡು ಬಿಡುತ್ತಾರೆ. ಆದರೆ ಅಮಾಯಕರನೇತರು ನರಕ ಅನುಭವಿಸಬೇಕು ಕೆಲ ಸಜಾ ಬಂಧಿಗಳು 18–20 ವರ್ಷಗಳ ತಮ್ಮ ವಿರುದ್ಧವಾಗಿ ದಾಖಲಾದ ಕೇಸಿನ ಸುತ್ತಾಮುತ್ತವೇ ತಿರುಗುತ್ತಾ ಮನೆ, ಮಠ, ಆಸ್ತಿ, ಪಾಸ್ತಿಗಳೆಲ್ಲವನ್ನು, ಜೀವನದ ಮುಖ್ಯ ಪಟ್ಟವನ್ನೇ ಸರ್ವನಾಶ ಮಾಡಿಕೊಂಡು ಕಾರಾಗೃಹದ ಗೋಡೆಗಳ ಮಧ್ಯೆಯೇ ಚಿತ್ರ ಹಿಂಸೆಗಳನ್ನನುಭವಿಸುತ್ತಿದ್ದಾರೆ.

ಒಂದು ವೇಳೆ ಪರಿಸ್ಥಿತಿಯ ಒತ್ತಡಗಳಿಂದಾಗಿ, ಅಚಾನಕ್ಕಾಗಿ ತಪ್ಪು ಮಾಡಿಬಂದಿದ್ದಾಗ್ಯೂ ಅಂತಹವರುಗಳೂ ಹಲವು ವರ್ಷಗಳನ್ನು ಕಾರಾಗೃಹದಲ್ಲಿ ಕಳೆದು ಪರಿವರ್ತನೆಗೊಂಡಿರುತ್ತಾರೆ. ಅಂತಹವರುಗಳಿಗೆ ಕ್ಷಮೆಯೇ ಇಲ್ಲವೇ. ಕೆಲ ರಾಜಕೀಯ ನಾಯಕರುಗಳು, ಹಿರಿಯ ಐ.ಎ.ಎಸ್., ಐ.ಪಿ.ಎಸ್ ಅಧಿಕಾರಿಗಳು ಬಹಿರಂಗವಾಗಿಯೇ ಭ್ರಷ್ಟಾಚಾರದಲ್ಲಿ ತೊಡಗಿ ಅಪರಾಧವೆಸಗುತ್ತಿದ್ದಾರೆ. ಕೊಲೆ, ಸುಲಿಗೆ, ದರೋಡೆಗಳನ್ನೇ ತಮ್ಮ ವೃತ್ತಿಯನ್ನಾಗಿಸಿಕೊಂಡಿರುವವರು ಹಲವರು ತಲೆಮರೆಸಿಕೊಂಡು ತಿರುಗಾಡುತ್ತಿದ್ದಾರೆ. ಆದರೆ ಪೊಲೀಸರು ಎಳೆ ತರುವುದು ಮೊತ್ತ ಅಮಾಯಕರನ್ನು, ಅನಕ್ಷರಸ್ಥರನ್ನು, ಹಿಂದೆ ಮುಂದೆ ಯಾರೂ ಇರಂದತಹವರನ್ನು ಒಬ್ಬ ವ್ಯಕ್ತಿ ಅಪರಾಧವೆಸಗುತ್ತಾನೆಂದರೆ ಸಮಾಜದಲ್ಲಿನ ಅವ್ಯವಸ್ಥೆಯ ಕೊಡುಗೆಗಳೂ ಇರುವುದನ್ನು ಯಾರೂ ತಳ್ಳಿ ಹಾಕಲಾಗುವುದಿಲ್ಲ.

ವ್ಯಕ್ತಿಯೊಬ್ಬನು ಉದ್ದೇಶ ಪೂರಕವಾಗಿ ಕೊಲೆ ಸುಲಿಗೆ ದರೋಡೆಗಳನ್ನೇ ತನ್ನ ವೃತ್ತಿಯನ್ನಾಗಿಸಿಕೊಂಡಿದ್ದಲ್ಲಿ ಖಂಡಿತ

(9ನೇ ಪುಟಕ್ಕೆ)

ಮನಸ್ಸುಗಳು ತೆರೆದುಕೊಳ್ಳಲಿ!

ಮಾನ್ಯರೇ,

ಮಾನ್ಯ ಜಿ.ವಿ.ಸುಂದರ್ ಅವರು 1962–65ರಲ್ಲಿ ತಾವು ಅನುಭವಿಸಿದ್ದ ಬರಗಾಲದ ಹಿನ್ನೆಲೆಯ ಚಿತ್ರಣವನ್ನು ಕೊಡುತ್ತಾ, ಆಗಿನ ಪ್ರಧಾನ ಮಂತ್ರಿ ಲಾಲ್ ಬಹದ್ದೂರು ಶಾಸ್ತ್ರೀಯವರ ಕಾಲದಲ್ಲಿ ಅಮೇರಿಕಾದಿಂದ ಗೋದಿ, ಜೋಳ ಆಮದಾಗಿತ್ತು; ಅದು ನಮ್ಮ ಆಹಾರವಾಗಿಲ್ಲದಿದ್ದಾಗ್ಯೂ ತಿಂದಿದ್ದೆವು, ಒಗ್ಗಿಸಿಕೊಂಡಿದ್ದೆವು; ಈಗ ಅವು ನಮ್ಮದ್ದೇ ಬೆಳೆಯಾಗಿದೆಯೆಂದು ಉಲ್ಲೇಖಿಸುತ್ತಾರೆ.

ಸ್ವಾತಂತ್ರ್ಯ ಪೂರ್ವದಲ್ಲಿ ಅಂದರೆ 1942ರಲ್ಲಿ, ಆಗಿನ ಬ್ರಿಟಿಷ್ ವಸಾಹತುಶಾಹಿ ಸರಕಾರದ ಪೊಲೀಸರು, ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮನೆ ಮನೆ ಹೊಕ್ಕಿ, ತತ್ಕಾಲೀನ ಉಪಯೋಗಕ್ಕೆ ಶೇಖರಿಸಿಟ್ಟಿದ್ದ ಅಕ್ಕಿ, ಭತ್ತಗಳನ್ನು ಎತ್ತಿಕೊಂಡು ಹೋಗಿದ್ದರು. ಪರಿಣಾಮವಾಗಿ ಹೊಸ ಬೆಳೆ ಸಿಗುವವರೆಗೆ ಶ್ರೀಮಂತರಿಂದ ಬಡವರವರೆಗೆ ಗೆಡ್ಡೆಗೆಣಸು, ಮಾವು ಹಲಸು, ಸೊಪ್ಪು ಸೆದೆಗಳನ್ನು ತಿಂದು ಬದುಕುವಂತಾಗಿತ್ತು. ಇದು ಪ್ರತ್ಯಕ್ಷಾನುಭವವಾಗಿದೆ. ಇದನ್ನು ಮಾನ್ಯ ಲೇಖಕರು ಕೇಳಿಸಿ ಕೊಂಡಿರಲಿಕ್ಕಿಲ್ಲವೆಂದು ಕಾಣುತ್ತದೆ.

ಅವರು ಮುಂದುವರಿದು – ಬ್ರಾಹ್ಮಣರು ಮೆಣಸಿನ ಕಾಯಿ, ಮೂಲಂಗಿ, ಬದನೆಕಾಯಿಗಳನ್ನು ತಿನ್ನುತ್ತಿರಲಿಲ್ಲ; ಈಗಲೂ ತಿನ್ನುತ್ತಿಲ್ಲ. ಕಾರಣ ಅವು ಬ್ರಹ್ಮಸೃಷ್ಟಿಯಲ್ಲ; ವಿಶ್ವಾಮಿತ್ರ ಸೃಷ್ಟಿಯೆನ್ನುವ ನಂಬಿಕೆಯನ್ನುವರು. ಅಷ್ಟೇ ಅಲ್ಲ; ಅವು ಆಫ್ರಿಕಾ ಮತ್ತು ಯುರೋಪ್ ದೇಶಗಳ ತಳಿ, ಈಗ ನಮ್ಮದು ಎನ್ನುತ್ತಾರೆ. ಇರಬಹುದು.

ಸಂದೇಹವೆಂದರೆ– ಬಿ.ಟಿ. ಬದನೆ ಅಥವಾ ಕುಲಾಂತರಿ ತಳಿಗಳ ಉತ್ಪಾದಕತೆಯನ್ನು ಮರೆತಿರುವರೊ ಅಥವಾ ಅವು ವಿಷಕಾರಿಯೆಂದು ಘೋಷಣೆ ಮಾಡಿರುವ ವಿಜ್ಞಾನಿಗಳನ್ನು ಅಜ್ಞಾನಿಗಳೆಂದು ತೀರ್ಮಾನಿಸಿರುವರೋ ಎಂದು ಗೊತ್ತಾಗುವುದಿಲ್ಲ.

ಮತ್ತಿನ್ನೊಂದು ಓದಿ ತಿಳಿದ ಸಂಗತಿಯೆಂದರೆ–ಬಿ.ಟಿ ಹತ್ತಿ ಬೆಳಗಾರರು ಆತ್ಮಹತ್ಯೆ ಮಾಡಿಕೊಂಡಿರುವುದರ ದಾಖಲೆ. ಅದೂ ವೈಜ್ಞಾನಿಕ ವಾರ್ತೆಯೆ. ಇದು ಮತಿಭ್ರಾಂತಿಯಿರಬಹುದೇ? ಮುದುಡಿರುವ ಮನಸ್ಸುಗಳು ತೆರೆದುಕೊಳ್ಳಲಿ ಎನ್ನುವ ಆಶಯದೊಂದಿಗೆ.

ಪಿ. ಗೋಕುಲ್‌ದಾಸ್
ಮಂಗಳೂರು



ಚಂದಾ ವಿವರ

ಬಿಡಿ ಪ್ರತಿ ರೂ.೨೦/–

	೧ ವರ್ಷಕ್ಕೆ	೩ ವರ್ಷಕ್ಕೆ	೫ ವರ್ಷಕ್ಕೆ
ವ್ಯಕ್ತಿಗಳು, ನೌಕರರು ಮತ್ತು ವೃತ್ತಿಪರರಿಗೆ	ರೂ.೨೦೦/–	ರೂ.೫೦೦/–	ರೂ.೮೦೦/–
ಸಂಘ–ಸಂಸ್ಥೆಗಳು/ಉದ್ಯಮಿಗಳಿಗೆ	ರೂ.೨೫೦/–	ರೂ.೭೦೦/–	ರೂ.೧೦೦೦
ವಿಶೇಷ ಹಿತೈಷಿ ಚಂದದಾರರಿಗೆ	ರೂ.೫೦೦/–	ರೂ.೧೫೦೦/–	ರೂ.೨೫೦೦/–

ಆಜೀವ ಚಂದಾ ರೂ.೫,೦೦೦/–
ಪೋಷಕ ಚಂದಾ ರೂ.೧೦,೦೦೦/–

ವಿ.ಸೂ: ಬೆಂಗಳೂರು ನಗರ ವ್ಯಾಪ್ತಿಯ ಹೊರಗಿನ ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ. ಎಂ.ಓ./ಡಿ.ಡಿ. ಮಾತ್ರ ಕಳುಹಿಸಬೇಕು. ಚೆಕ್ಕು ಡಿಡಿಗಳು 'ಸಂವಾದ' ಹೆಸರಿನಲ್ಲಿರಲಿ.

ಹೊಸ ಪುಸ್ತಕ



ಅಭಿಧಮ್ಮರ್ಥಸಂಗ್ರಹ
ಪೂಜ್ಯ ಭದಂತ ಅನುರುದ್ಧ ಥೇರ
ಅನು: ಪೂಜ್ಯ ಭಂತೆ ಬೋಧಿದತ್ತ

ಈ ವಿಶಾಲ ಜಗತ್ತಿನ ಜ್ಞಾನಿಗಳ ಸಮೂಹದಲ್ಲಿ ಅಗ್ರಗಣ್ಯರಾದವರು ಭಗವಾನ್ ಬುದ್ಧರು. ಬುದ್ಧರ ಜ್ಞಾನ ಅಪರಿಮಿತವು-ಅಗಾಧವು ಆದಂತಹ ಜ್ಞಾನ ಬಂಡಾರವೇ ಆಗಿದೆ. ಭಗವಾನ್ ಬುದ್ಧರ ಶ್ರೇಷ್ಠ ಉಪದೇಶಗಳನ್ನು ತಿಪಿಟಕ ಗ್ರಂಥಗಳಲ್ಲಿ ಬಹಳ ವಿಸ್ತಾರವಾಗಿ ತಿಳಿಸಲಾಗಿದೆ. ಅದರಲ್ಲಿಯೂ ಬುದ್ಧರ ಉತ್ಕೃಷ್ಟ ಉಪದೇಶಗಳನ್ನು ಅಭಿಧಮ್ಮ ಗ್ರಂಥಗಳಲ್ಲಿ ಸೂಕ್ಷ್ಮಾತಿ ಸೂಕ್ಷ್ಮವಾಗಿ ವಿಶ್ಲೇಷಣೆ ಮಾಡಿ ವಿವರಿಸಲಾಗಿದೆ. ಪ್ರಸ್ತುತ ಗ್ರಂಥದಲ್ಲಿ ಹುಟ್ಟು, ಸಾವಿನ ಹಿಂದಿನ ಕಾರಣ, ಚಿತ್ತಗಳು, ಆಲೋಚನಾ ಪ್ರಕ್ರಿಯೆ, ಮಾನಸಿಕ ಸ್ಥಿತಿಗಳ ಬಗ್ಗೆ ಇತ್ಯಾದಿ ಗಮನಾರ್ಹ ಸಂಗತಿಗಳ ಬಗ್ಗೆ ಸವಿವರವಾಗಿ ತಿಳಿಸಲಾಗಿದೆ.

ಪ್ರಕಾಶಕರು: ಮಹಾವನ ಬುದ್ಧವಿಹಾರ
ಸ್ಫೂರ್ತಿಧಾಮ, ಅಂಜನಾನಗರ
ಬೆಂಗಳೂರು-560091

ರಂಗರೂಪಕ ಮತ್ತು
ಹಿಂದಣ ಅನಂತ
ಲೇ: ಲಿಂಗದೇವರು ಹಳೆಮನೆ
ಬೆಲೆ: ತಲಾ ರೂ. ೯೦/-

'ರಂಗರೂಪಕ' ಕೃತಿಯು ಆಧುನಿಕ ಕನ್ನಡ ರಂಗಭೂಮಿಯ ಕುರಿತ ಲೇಖನಗಳ ಸಂಗ್ರಹ. ಕನ್ನಡ ರಂಗಭೂಮಿ ಬೆಳೆದು ಬಂದ ಬಗೆಯನ್ನು, ಅದರ ಅಭಿವ್ಯಕ್ತಿಯ ಸ್ವರೂಪಗಳು ಬದಲಾದ ರೀತಿಯನ್ನು ವಿಶ್ಲೇಷಿಸುವ ಇಲ್ಲಿನ ಲೇಖನಗಳು ನಮ್ಮ ರಂಗಭೂಮಿಯ ಚರಿತ್ರೆಯನ್ನು ಕೂಲಂಕುಶವಾಗಿ ವಿಶ್ಲೇಷಿಸುತ್ತವೆ.

'ಹಿಂದಣ ಅನಂತ' ಪುಸ್ತಕದ ಮುಖ್ಯ ಸೊಲ್ಲು ಇರುವುದು ಬಸವೇತರ ವಚನಕಾರರ ಪ್ರತಿಭೆಯನ್ನು ಕುರಿತು. ಬಸವಣ್ಣನಂತೆಯೇ ಆ ಕಾಲದ ನೂರಾರು ವಚನಕಾರರು ಅಂದಿನ ಸಾಮಾಜಿಕ ತಳಹದಿಯನ್ನು ಮರುನಿರ್ಮಿಸುವ ಪ್ರಯತ್ನದಲ್ಲಿ ಬಹಳ ಶಕ್ತಿಯುತವಾದ ವಚನಗಳನ್ನು ರಚಿಸಿದ್ದಾರೆ. ಪ್ರಜಾಪ್ರಭುತ್ವದ ಕಾಣ್ಕೆ ಮತ್ತು ತಿಳಿವುಗಳನ್ನು ವಿಸ್ತರಿಸುವಲ್ಲಿ ಹಾಗೂ ವಚನ ಚಳವಳಿಯ ತಾತ್ವಿಕ ಆಯಾಮಗಳನ್ನು ಅನುಸಂಧಾನ ಮಾಡಿಕೊಳ್ಳುವಲ್ಲಿ ಈ ಎಲ್ಲ ವಚನಕಾರರೂ ಗಮನಾರ್ಹರು. ಬಸವಣ್ಣನ ಹಿಂದಿನಿಂದಲೂ ಮತ್ತು ಆನಂತರದಲ್ಲೂ ಇದ್ದು ಬರೆದ ಇಂಥ ಮಹತ್ತರ ವಚನಕಾರರ ಪ್ರತಿಭೆಯನ್ನು, ಸಿಟ್ಟನ್ನೂ, ತತ್ವಾದರ್ಶಗಳನ್ನೂ, ನೇಮನಿಷ್ಠೆಗಳನ್ನೂ ಹಾಗೂ ಶರಣತ್ವವನ್ನು ಕುರಿತು ಈ ಲೇಖನಗಳು ಮಾತನಾಡುತ್ತವೆ.

ಪ್ರಕಾಶನ: ನಿರಂತರ ಪ್ರಕಾಶನ
ಕಾಂತರಾಜೇ ಅರಸ್ ರಸ್ತೆ,
ಸರಸ್ವತಿಪುರಂ, ಮೈಸೂರು-೯





ಸೂಫಿ ಕಥಾ ಲೋಕ
ಕನ್ನಡಕ್ಕೆ: ಪ್ರೊ.ಬಿ.ಗಂಗಾಧರ ಮೂರ್ತಿ
ಬೆಲೆ : 140/-

'ಸೂಫಿ ಕಥಾ ಲೋಕ' ಅದ್ಭುತ ಕಥೆಗಳ ಅಪರೂಪದ ಸಂಕಲನ. ಇಲ್ಲಿನ ಕಥೆಗಳು ಮನಸ್ಸಿಗೆ ನಾಟುವಂತೆ ಇವೆ. ಒಮ್ಮೆ ಓದಿದರೆ ಸದಾ ಕಾಲ ಸ್ಮೃತಿಯಲ್ಲಿ ಉಳಿಯುವ ಇಲ್ಲಿನ ಕಥೆಗಳು ವಿವಿಧ ಸಂಸ್ಕೃತಿಯ ಸಾರವನ್ನು ಕನ್ನಡಕ್ಕೆ ಭಟ್ಟಿ ಇಳಿಸಿದಂತೆ ಒದಗಿಬರುತ್ತವೆ. ವಿಶೇಷವಾಗಿ ಅರಬ್ ಜಗತ್ತಿನಲ್ಲಿ ಹುಟ್ಟಿ ಜಗತ್ತಿನಾದ್ಯಂತ ಹಬ್ಬಿರುವ ಈ ಕಥೆಗಳು ಕನ್ನಡಕ್ಕಂತೂ ಬಹುದೊಡ್ಡ ಕೊಡುಗೆಗಳು. ಕನ್ನಡದಲ್ಲಿ ಈವರೆಗೆ ಹಲವು ಸೂಫಿ ಕಥಾ ಸಂಕಲನಗಳು ಬಂದಿರುವುವಾದರೂ ಈ ಸಂಕಲನ ಅವುಗಳೆಲ್ಲದರ ನಡುವೆ ಎದ್ದು ನಿಲ್ಲುತ್ತದೆ.

ಪ್ರಕಾಶಕರು: ಚಿಂತನ ಪುಸ್ತಕ,
ಬೆಂಗಳೂರು



ದಶರಥನ ವನವಾಸ
ಚಿತ್ರಾ ಮುದ್ಗಲ್,
ಅನು: ಆರ್. ಪಿ. ಹೆಗಡೆ
ಬೆಲೆ : 90/-

ಹಿಂದಿಯ ಬಹು ಮುಖ್ಯ ಲೇಖಕಿಯರಲ್ಲಿ ಒಬ್ಬರಾದ ಚಿತ್ರಾ ಅವರ ಪ್ರಸ್ತುತ ಕಥಾ ಸಂಕಲನ ಹೆಣ್ಣು ಮಕ್ಕಳ ಬದುಕಿನ ಕೊನೆಯಿಲ್ಲದ ತಾಪತ್ರಯ, ಅಸಹಾಯಕತೆ ಮತ್ತು ವ್ಯವಸ್ಥೆಯ ತಣ್ಣಗಿನ ಕ್ರೌರ್ಯವನ್ನು ಸಮರ್ಥವಾಗಿ ಬಿಚ್ಚಿಡುವ ಕೃತಿ. ಇಲ್ಲಿನ ಯಾವ ಕಥೆಗಳಲ್ಲೂ ವಾದಗಳಿಲ್ಲ, ಕ್ರಾಂತಿಯ ಘೋಷಣೆಗಳಿಲ್ಲ, ಭ್ರಮೆಗಳಿಲ್ಲ, ದ್ವೇಷವಿಲ್ಲ. ಅಷ್ಟೊಂದು ನಿರ್ಲಿಪ್ತವಾಗಿ ಬದುಕಿನ ಬರ್ಬರತೆಯನ್ನು ವಾಸ್ತವದ ನೆಲೆಗಟ್ಟಿನಲ್ಲಿ ಲೇಖಕಿ ಬಿಚ್ಚಿಡುತ್ತಾರೆ. ಸಾಹಿತ್ಯಸಕ್ತರು ಓದಲೇಬೇಕಾದ ಕೃತಿ ಇದು.

ಪ್ರಕಾಶಕರು: ಚಿಂತನ ಪುಸ್ತಕ
ಬೆಂಗಳೂರು

ದರುಶನ
ಲೇ: ಸವಿತಾ ನಾಗಭೂಷಣ
ಬೆಲೆ: ರೂ. 40/-

ಕನ್ನಡದ ಅಪರೂಪದ ಸೂಕ್ಷ್ಮ ಮನಸ್ಸಿನ ಕವಿ ಸವಿತಾ ನಾಗಭೂಷಣ ಅವರ ಐದನೆ ಕವನ ಸಂಕಲನ ಇದು. ಅತ್ಯಂತ ಸರಳವಾಗಿ ಸುಂದರವಾಗಿ ಬೆಟ್ಟ-ಗುಡ್ಡ, ಕಾಡು, ಗಿಡ, ಮರ, ಬಳ್ಳಿ, ಹೂವು-ಹಣ್ಣು, ಮತ್ತು ಹೊಳೆ-ಮಳೆ, ಮೋಡಗಳಂತೆ ಜೀವಂತವಾಗಿ ನಳನಳಿಸುವ ಕಾವ್ಯ ಸವಿತಾ ಅವರ ವಿಶೇಷ. ವರ್ತಮಾನದ ಮನುಷ್ಯನ ಆಳದ ಸಂತೋಷ-ನೆಮ್ಮದಿಗಳನ್ನು, ದುಃಖ-ವಿಷಾದಗಳನ್ನು ಅಂತಃಕರಣ ಪೂರ್ವಕವಾಗಿ ತಮ್ಮ ಕಾವ್ಯದಲ್ಲಿ ತೆರೆದಿಡುವ ಕವಿ ನಾಡಿನ ಎಲ್ಲ ಓದುಗರು ಹಾಗೂ ವಿಮರ್ಶಕರಿಬ್ಬರ ಮನಸ್ಸನ್ನು ಏಕ ಕಾಲದಲ್ಲಿ ಗೆದ್ದಿದ್ದಾರೆ.

ಪ್ರಕಾಶಕರು: ಲೋಹಿಯಾ ಪ್ರಕಾಶನ
'ಕ್ಷಿತಿಜ' ಕಪ್ಪುಗಲ್ಲು ರಸ್ತೆ, ಗಾಂಧಿನಗರ,
ಬಳ್ಳಾರಿ-583 103



ಸಂಪಾದಕೀಯ

ಅಂತರಂಗ

ಮಾನ ಗೇಡಿಗಳ ಸರ್ಕಾರ!

ಹಿಂದೊಮ್ಮೆ ವಿರೋಧ ಪಕ್ಷದ ನಾಯಕ ಸಿದ್ಧರಾಮಯ್ಯ ಅವರು ಇದು 'ರ್‍ಯಾಸ್ಕಲ್'ಗಳ ಸರ್ಕಾರ ಎಂದು ಮೂದಲಿಸಿದ್ದರು. ಆಗ ಸಿದ್ಧರಾಮಯ್ಯನವರ ಮಾತು ತುಂಬಾ ಕಠಿಣವಾಯಿತೆಂದು ಬಹಳ ಜನ ಅಂದುಕೊಂಡಿದ್ದರು. ಆದರೆ ಕಳೆದ ಕೆಲವು ತಿಂಗಳುಗಳಿಂದ ಸರ್ಕಾರ ಮತ್ತು ಅದರ ಜವಾಬ್ದಾರಿಯನ್ನು ಹೊತ್ತವರು ನಡೆದುಕೊಳ್ಳುತ್ತಿರುವುದನ್ನು ನೋಡಿದರೆ ಸಿದ್ಧರಾಮಯ್ಯನವರ ಮಾತುಗಳು ತುಂಬಾ ಮೆದುವಾದ ಟೀಕೆಯಂತೆ ಕಾಣಿಸತೊಡಗಿವೆ.

ಬಿಜೆಪಿ ಸರ್ಕಾರ ರಚನೆಯಾದಾಗಿನಿಂದಲೇ ಎಡವಟ್ಟುಗಳನ್ನು ಮಾಡುತ್ತಲೇ ಇದೆ. ಸಂಘಪರಿವಾರದ ಹಿಂದುತ್ವ ಹೇರುವ ಗುಪ್ತ ಕಾರ್ಯಕ್ರಮಗಳನ್ನು ಬಿಟ್ಟರೆ, ಬೇರೆ ಯಾವುದೇ ಜನಪರ ಕಾರ್ಯಕ್ರಮಗಳನ್ನು ಸರ್ಕಾರ ವ್ಯವಸ್ಥಿತವಾಗಿ ಹಾಕಿಕೊಳ್ಳಲಾಗುತ್ತಿಲ್ಲ. ದೂರದರ್ಶಿತ್ವ ಇಲ್ಲದ, ಕ್ಷಣಿಕ ರಾಜಕೀಯ ಲಾಭದ ಉದ್ದೇಶಗಳನ್ನು ಮಾತ್ರ ಹೊಂದಿರುವುದು ಸರ್ಕಾರದ ಎಲ್ಲ ತೀರ್ಮಾನಗಳಲ್ಲಿ ಸ್ಪಷ್ಟವಾಗಿ ಕಾಣಿಸುತ್ತಿದೆ.

ರಾಜ್ಯವನ್ನು ಕಾಡುತ್ತಿರುವ ಯಾವುದೇ ಸಮಸ್ಯೆಗಳನ್ನು ಬಗೆಹರಿಸುವುದರಲ್ಲಿ ಸರ್ಕಾರದ ಸಾಧನೆ ಬರೀ ಸೊನ್ನೆ. ವಿದ್ಯುತ್ ಸಮಸ್ಯೆಯನ್ನು ಪರಿಹರಿಸುವುದರಲ್ಲಾಗಲಿ, ಪ್ರಕೃತಿ ವೈಪರೀತ್ಯದಿಂದ ಉಂಟಾದ ನೆರೆ ಹಾವಳಿ ಸಂತ್ರಸ್ಥರಿಗೆ ಪುನರ್ ವಸತಿ ಕಲ್ಪಿಸುವುದರಲ್ಲಾಗಲಿ ಸರ್ಕಾರ ಸಂಪೂರ್ಣ ವಿಫಲವಾಗಿದೆ. ಇದೆಲ್ಲಕ್ಕಿಂತ ಹೆಚ್ಚಾಗಿ ನಾಡಿನ ನೆಲ, ಜನ, ಪ್ರಕೃತಿ ಸಂಪತ್ತನ್ನು ಉಳಿಸುವುದರಲ್ಲಂತೂ ಸರ್ಕಾರ ಅತ್ಯಂತ ಬೇಜವಾಬ್ದಾರಿಯಿಂದ ವರ್ತಿಸುತ್ತಿದ್ದು, ಲೂಟಿಕೋರರ ಪರ ಲಾಬಿ ಆರಂಭಿಸಿದೆ.

ಆಪರೇಷನ್ ಕಮಲದೊಂದಿಗೆ ಆರಂಭವಾದ ಸರ್ಕಾರದ ವೈಫಲ್ಯ ಯಡ್ಡಿ-ರೆಡ್ಡಿ ಕಳ್ಳ ಪೊಲೀಸ್ ಆಟದೊಂದಿಗೆ ಮುಂದುವರೆದು ಈಗ ರೇಣುಕಾಚಾರ್ಯನಂಥ ಚಾರಿತ್ರ್ಯಹೀನ ವ್ಯಕ್ತಿಯನ್ನು ಮಂತ್ರಿ ಮಾಡು ವವರೆಗೆ ಬಂದು ನಿಂತಿದೆ. ಇದು ಬಿಜೆಪಿ ಸರ್ಕಾರ ಮುಟ್ಟಿರುವ ಅಧಃಪತನದ ಸ್ಪಷ್ಟ ನಿದರ್ಶನ. ಇದರಿಂದಾಗಿ ಮುಖ್ಯಮಂತ್ರಿ ಯಡಿಯೂರಪ್ಪ ಅವರಿಗೆ ರಾಜ್ಯದ ಹಿತಕ್ಕಿಂತ ತಮ್ಮ ಕುರ್ಚಿಯೇ ಮುಖ್ಯವಾಗಿದೆ ಎಂಬುದು ಮತ್ತೊಮ್ಮೆ ಸಾಬೀತಾದಂತಾಗಿದೆ. ಬಹುಷಃ ಬಿಜೆಪಿ ಇಡೀ ದೇಶದಲ್ಲಿ ಕುಸಿಯುತ್ತಿರುವುದನ್ನು ನೋಡಿದರೆ, ದೇಶದ ಒಟ್ಟಾರೆ ಜನಮಾನಸದ ವಿರುದ್ಧವೇ ಅದು ಕೆಲಸ ಮಾಡುತ್ತಿದೆ ಅನ್ನಿಸುತ್ತದೆ. ತತ್ವ-ಸಿದ್ಧಾಂತ-ಚಾರಿತ್ರ್ಯ ಈ ಯಾವುದೂ ಬಿಜೆಪಿಗೆ ಮುಖ್ಯವಾಗಿ ಕಾಣಿಸುತ್ತಲೇ ಇಲ್ಲ. ದೊಡ್ಡ ದೇಶ ಭಕ್ತನಂತೆ ಸೋಗು ಹಾಕುವ ಪಕ್ಷ ಇಡೀ ನಾಡಿನ ಸಂಪತ್ತು ಲೂಟಿಯಾಗುತ್ತಿದ್ದರೂ ನೋಡಿಕೊಂಡು ಸುಮ್ಮನಿರುತ್ತದೆ ಮತ್ತು ಅಂಥ ಲೂಟಿಕೋರರಿಗೆ ಬೆಂಬಲವಾಗಿ ನಿಲ್ಲುತ್ತದೆ ಎಂದರೆ ಆಲೋಚಿಸಿ!

ಯಡಿಯೂರಪ್ಪ ಕೆಲವೇ ತಿಂಗಳ ಹಿಂದೆ ಆಡಿದ ಮಾತೇನು? 'ನಾಡಿನ ನೆಲ ಜಲ ಪ್ರಕೃತಿ ಸಂಪತ್ತು ಲೂಟಿಯಾಗುತ್ತಿದೆ. ಅದನ್ನು ಉಳಿಸಲಾಗದ ಅಸಹಾಯಕತೆಯಲ್ಲಿ ನಾನು ತೊಳಲಾಡುತ್ತಿದ್ದೇನೆ' ಎಂದು ಪರಿತಪಿಸುತ್ತಿದ್ದ ವ್ಯಕ್ತಿ, ಈಗ ಎಲ್ಲವೂ ಸರಿಯಾಗಿದೆ ಎನ್ನುತ್ತ ಲೂಟಿಕೋರರೊಂದಿಗೆ ಫೋಟೋ ತೆಗೆಸಿಕೊಂಡು ಓಡಾಡುತ್ತಿದ್ದಾರೆ! ಇದೆಂಥಾ ನಾಚಿಕೆಗೇಡು!! ಎಂಥಾ ಮಾನಗೇಡಿತನ!!!

ಯಡ್ಡಿ-ರೆಡ್ಡಿ ಹಗ್ಗ-ಜಗ್ಗಾಟದಲ್ಲಿ ಮೂರ್ಖರಾದವರು ನಾಡಿನ ಜನತೆ. ರೆಡ್ಡಿ ವಿರುದ್ಧ ಯಡಿಯೂರಪ್ಪ ತೊಡೆ ತಟ್ಟಿ ನಿಂತಾಗ ನಾಡಿನ ಜನಕ್ಕೆ ನಿಜವಾಗಿಯೂ ಸಂತೋಷವಾಗಿತ್ತು, ಕೇವಲ ಹಣದ ಮದದಿಂದ ಇಡೀ ಪ್ರಜಾಪ್ರಭುತ್ವ ವ್ಯವಸ್ಥೆಯನ್ನೇ ಕೊಂಡುಕೊಳ್ಳುತ್ತೇನೆಂದು ಅಹಂಕಾರದಿಂದ ಬೀಗುತ್ತಿದ್ದ ಜನಾರ್ಧನ ರೆಡ್ಡಿಗೆ ತಕ್ಕ ಪಾಠ ಕಲಿಸುತ್ತಾರೆಂಬ ಆಸೆ ಜನರಲ್ಲಿ ಮೊಳಕೆ ಒಡೆದಿತ್ತು. ಆದರೆ ಆದದ್ದೇನು? ದ್ರೋಹಿಗಳು, ವಂಚಕರು, ನೀಚರು, ಭಯೋತ್ಪಾದಕರೆಂದು ಪರಸ್ಪರರನ್ನು ದೂಷಿಸಿಕೊಳ್ಳುತ್ತಿದ್ದ ಯಡ್ಡಿ-ರೆಡ್ಡಿ ಕೊನೆಗೆ ಪರಸ್ಪರ ಕೇಕು ತಿನ್ನಿಸುತ್ತ, ಮಾಧ್ಯಮಗಳೆದುರು ಚೆಡ್ಡಿ ದೋಸ್ತಿಗಳಂತೆ ಫೋಟೋ ತೆಗೆಸಿಕೊಳ್ಳುತ್ತಾ ಜನರಿಗೆ ಮತ್ತೆ ಮಂಕುಬೂದಿ ಎರಚಿದರು. ಇವರ ಈ ಕಳ್ಳ-ಪೊಲೀಸ್ ಆಟದಲ್ಲಿ ಬಲಿಯಾದವರು ಮಾತ್ರ ರಾಜ್ಯದ ಜನತೆ!

ನಾಡಿನ ಅರ್ಧಭಾಗ ಸೂತಕದ ಮನೆಯಾಗಿದ್ದರೂ, ಮಂತ್ರಿ-ಶಾಸಕರ್‍ಯಾರೂ ಅತ್ತ ಕಾಲಿಡುತ್ತಿಲ್ಲ. ಜಗಳ ಬಗೆಹರಿದ ಕೂಡಲೇ ಆಕಾಶವನ್ನು ಕೈಗಿಡುತ್ತೇವೆಂದು ಹೇಳುತ್ತಿದ್ದ ಮುಖ್ಯಮಂತ್ರಿ ಕೇವಲ ಶಂಕುಸ್ಥಾಪನೆಯ ನಾಟಕವಾಡಿದ್ದು ಬಿಟ್ಟರೆ, ಉತ್ತರ ಕರ್ನಾಟಕದ ನೆರೆ ಸಂತ್ರಸ್ಥರಿಗೆ ಯಾವುದೇ ಪುನರ್ವಸತಿ ಕಲ್ಪಿಸಲಾಗಿಲ್ಲ. ಜನ ಹೊಲ-ಮನೆ-ಜಾನುವಾರುಗಳನ್ನು ಕಳೆದುಕೊಂಡು ಹಾಹಾಕಾರ ಪಡುತ್ತಿದ್ದಾರೆ. ಮಂತ್ರಿ ಶಾಸಕರು ಕಾಣಿಸುತ್ತಿಲ್ಲ. ಅಧಿಕಾರಿಗಳು ಆರ್ತರಿಗೆ ಆಸರೆ ನೀಡುವ ಬದಲು ದರ್ಬಾರು ನಡೆಸುತ್ತಿದ್ದಾರೆ. ಸರ್ಕಾರ, ಸಾರ್ವಜನಿಕರು ನೀಡಿದ ಸಾವಿರಾರು ಕೋಟಿ ರೂಪಾಯಿಗಳು ಎಲ್ಲಿ ಹೋದವು, ಏನಾದವು ಯಾರಿಗೂ ಗೊತ್ತಿಲ್ಲ. ಹಿಂದೆಂದೂ ಯಾವ ಸರ್ಕಾರಗಳೂ ಇಷ್ಟೊಂದು ಉಪೇಕ್ಷೆ-ಉದ್ಧಟತನ ತೋರಿರಲಿಲ್ಲ.

ಇಡೀ ಸರ್ಕಾರದಲ್ಲಿ ಮಾನವಂತರಂತೆ ಕಾಣುವ ಒಂದಿಬ್ಬರು ಮಂತ್ರಿಗಳನ್ನು ಬಿಟ್ಟರೆ ಉಳಿದವರೆಲ್ಲ ಲೂಟಿಯಲ್ಲೇ ನಿರತರಾಗಿದ್ದಾರೆ. ಭ್ರಷ್ಟಚಾರ, ಸ್ವಜನ ಪಕ್ಷಪಾತ, ಜಾತಿ, ಹಣ-ಇವುಗಳನ್ನು ಬಿಟ್ಟರೆ ಬೇರೆ ಯಾವುದಕ್ಕೂ ಸರ್ಕಾರದಲ್ಲಿ ಕವಡೆ ಕಾಸಿನ ಕಿಮ್ಮತ್ತೂ ಇಲ್ಲ. ಒಂದೆಡೆ ಸರ್ಕಾರಿ ಅಧಿಕಾರಿಗಳನ್ನು ಮನಸ್ಸಿಗೆ ಬಂದಂತೆ ವರ್ಗಾವಣೆ ಮಾಡಿ ಮಂತ್ರಿ-ಶಾಸಕರು ದುಡ್ಡು ಮಾಡುತ್ತಿದ್ದಾರೆ. ದುಡ್ಡು ಕೊಟ್ಟು ವರ್ಗಮಾಡಿಸಿಕೊಂಡ ಅಧಿಕಾರಿಗಳು ಸಿಕ್ಕಿದವರಿಗೆ ಸೀರುಂಡೆ ಎಂದು ದುಡ್ಡು ಬಾಚುತ್ತಿದ್ದಾರೆ. ಯಾವ ಮುಜುಗರವೂ ಇಲ್ಲದೆ ಅಧಿಕಾರಿಗಳು ಸಾರ್ವಜನಿಕವಾಗಿ ಲಂಚ ಪಡೆಯುತ್ತಿದ್ದಾರೆ. ವಿಚಿತ್ರ ಎಂದರೆ ಸರ್ಕಾರವೊಂದು ಇಷ್ಟೆಲ್ಲಾ ಮಾನಗೇಡಿ ಕೆಲಸಗಳಲ್ಲಿ ತೊಡಗಿಕೊಂಡಿದ್ದರೂ ವಿರೋಧ ಪಕ್ಷಗಳೂ ಕಂಡೂ ಕಾಣದಂತೆ ಸುಮ್ಮನಿವೆ. ಒಂದು ಪಕ್ಷ ಭಿನ್ನಮತದ ಕಿತ್ತಾಟದಿಂದಾಗಿ ಸರ್ಕಾರ ಬೀಳುವ ಪ್ರಸಂಗ ಬಂದರೆ ಅಧಿಕಾರ ಲಪಟಾಯಿಸುವ ಯೋಜನೆ ಬಿಟ್ಟರೆ ಬೇರೆ ಯಾವುದೇ ಚಿಂತನೆಗಳು ವಿರೋಧ ಪಕ್ಷಗಳಿಗಿಲ್ಲ. ಆಡಳಿತ ಪಕ್ಷ ನೈತಿಕವಾಗಿ ಎಷ್ಟು ಕುಸಿದಿದೆಯೋ ವಿರೋಧ ಪಕ್ಷಗಳೂ ಅಷ್ಟೇ ಅಧಃಪತನವನ್ನು ಕಂಡಿವೆ. ಕೊಡು-ಕೊಳ್ಳುವ ವ್ಯವಹಾರದಲ್ಲಿ ಸರ್ಕಾರದೊಂದಿಗೆ ಚೌಕಾಶಿಗೆ ಇಳಿದಿವೆ.

ಸಧ್ಯದ ಪರಿಸ್ಥಿತಿಯನ್ನು ನೋಡಿದರೆ ಈ ಮಾನಗೇಡಿ ಸರ್ಕಾರವಾಗಲಿ, ರಾಜಕೀಯ ಪಕ್ಷಗಳ ಜನ ದ್ರೋಹಿ ನಾಯಕರಾಗಲಿ ನಾಡಿನ ಕಷ್ಟ-ಕಾರ್ಪಣ್ಯಗಳಿಗೆ ಎದೆಕೊಡಲಾರರು. ಜನ ಸಮೂಹದಿಂದ ನಿಜ ಕಾಳಜಿಯ ಹೊಸ ರಾಜಕೀಯ ಶಕ್ತಿಯೊಂದು ಪುಟಿದೇಳದಿದ್ದರೆ ನಾಡಿನ ಸಂಕಷ್ಟಗಳಿಗೆ ಕೊನೆಯೇ ಇಲ್ಲವಾಗುತ್ತದೆಂಬ ಆತಂಕ ಎಲ್ಲ ಪ್ರಜ್ಞಾವಂತ ನಾಗರೀಕರನ್ನು ಕಾಡುತ್ತಿದೆ.

ಜನ ಜಾಗೃತರಾಗದಿದ್ದರೆ ನಾವು ಮತ್ತೆ ನಮ್ಮವರ ದಾಸ್ಯ-ಸಂಕೋಲೆಗಳಿಗೆ ಮತ್ತೆ ಸಿಕ್ಕಿ ಚಡಪಡಿಸಬೇಕಾಗುತ್ತದೆ.

○ ಇಂದೂಧರ ಹೊನ್ನಾಪುರ

ಸಂಪಾದಕರೊಡನೆ ಸಂವಾದ

ಶಾಲೆಗಳಲ್ಲಿ ಭಗವದ್ಗೀತೆ ಕಂಠಪಾಠ ಅಭಿಯಾನ

ಶಿಕ್ಷಣ ಕೇಸರೀಕರಣದ ಹುನ್ನಾರ

ಅನಂತ್ ನಾಯ್ಕ .ಎನ್

ಮಾನ್ಯ ಸಂಪಾದಕರಿಗೆ,

ಶಾಲೆಗಳಲ್ಲಿ ಕುಡಿಯುವ ನೀರಿಲ್ಲ, ಶೌಚಾಲಯಗಳಿಲ್ಲ. ಎಷ್ಟೋ ಕಡೆ ಅಗತ್ಯವಿರುವಷ್ಟು ಶಿಕ್ಷಕರಿಲ್ಲ. ಇಂತಹ ಮೂಲ ಭೂತ ಸೌಲಭ್ಯಗಳನ್ನು ನೀಡುವ ಬಗೆಗೆ ಗಮನ ನೀಡದ ಸರ್ಕಾರವು ಆರೆಸ್ಸೆಸ್‌ನ ಪ್ರಗತಿವಿರೋಧಿ ಮತಾಂಧ ವಿಚಾರವನ್ನು ವಿದ್ಯಾರ್ಥಿಗಳ ಮನಸ್ಸಿನಲ್ಲಿ ಬಿತ್ತಲು ಭಗವದ್ಗೀತೆಯ ಕಂಠಪಾಠ ಅಭಿಯಾನ ಯೋಜಿಸಿರುವುದನ್ನು ನಾಡಿನ ಪ್ರಜ್ಞಾವಂತ ಜನತೆ ಎಚ್ಚರದಿಂದ ಗಮನಿಸಬೇಕಿದೆ.

ಸರ್ವ ಜನಾಂಗದ ಶಾಂತಿಯ ತೋಟ ಕರ್ನಾಟಕದ ನೆಲದಲ್ಲಿ ರಾಜ್ಯದ ಬಿಜೆಪಿ ಸರ್ಕಾರ ತನ್ನ ರಹಸ್ಯ ಕಾರ್ಯ ಸೂಚಿ–ಹಿಡನ್ ಅಜೆಂಡಾವನ್ನು ಜಾರಿಗೊಳಿಸಲು ಪ್ರಯತ್ನಿಸುತ್ತಿದೆ. ಒಂದೆಡೆ ನೆರೆಹಾವಳಿಗೆ ಜನತೆ ತತ್ತರಿಸುತ್ತಿದೆ. ಇನ್ನೊಂದೆಡೆ ಅಧಿಕಾರದ ಕುರ್ಚಿಗಾಗಿ ಕಾದಾಟ ನಡೆಯುತ್ತಿದೆ. ಇದೆಲ್ಲದರ ಮಧ್ಯೆ ರಾಜ್ಯದ ಶಾಲೆಗಳ ಎಳೆಯ ಮಕ್ಕಳ ಮನದಲ್ಲಿ ಮತಾಂಧತೆಯನ್ನು ಬಿತ್ತುವ ಕೆಲಸ ಪ್ರಾಂಭಿಸಿರುವ ಸರ್ಕಾರ ಸದ್ದಿಲ್ಲದೆ 'ಭಗವದ್ಗೀತಾ ಕಂಠಪಾಠ ಅಭಿಯಾನ' ನಡೆಸಲು ಆದೇಶ ಹೊರಡಿಸಿದೆ.

ಉತ್ತರ ಕನ್ನಡ ಜಿಲ್ಲೆಯ ಶಿರಸಿಯ ಶ್ರೀ ಸೊಂದಾ ಸ್ವರ್ಣವಲ್ಲಿ ಮಹಾ ಸಂಸ್ಥಾನಕ್ಕೆ ಈ ಕಾರ್ಯ ನಡೆಸಲು ಎಲ್ಲಾ ಶಾಲೆಗಳು ಸಹಕರಿಸುವಂತೆ ಸರ್ಕಾರದ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆಯು ಸುತ್ತೋಲೆ ಹೊರಡಿಸಿ ಇದಕ್ಕೆ ಎಲ್ಲಾ ಅಧಿಕಾರಿಗಳು ಕಾರ್ಯಪ್ರವೃತ್ತರಾಗಲು ತಿಳಿಸಿದ್ದು, ಕೆಲ ಶಾಲೆಗಳಿಂದ ಒಬ್ಬೊಬ್ಬ ಶಿಕ್ಷಕರು ಶಿರಸಿಗೆ ಹೋಗಿ ತರಬೇತಿ ಪಡೆಯಲು ಸೂಚಿಸಲಾಗಿದೆ. ರಾಜ್ಯದ 13 ಜಿಲ್ಲೆಗಳಲ್ಲಿ ಶಾಲೆಗಳಲ್ಲಿ ಪ್ರಾರಂಭವಾಗಿರುವ ಈ ಅಭಿಯಾನ ಬೇರೆ ಜಿಲ್ಲೆಗಳಿಗೂ ವಿಸ್ತರಣೆಯಾಗಲಿದೆಯಂತೆ.

ಖಾಸಗಿ ಸಂಸ್ಥೆಯ ಮೂಲಕ ಕೇಸರೀಕರಣ

ರಾಷ್ಟ್ರೀಯ ಭಾವೈಕ್ಯತೆ, ಸಾಮಾಜಿಕ ಸಾಮರಸ್ಯ, ಮೌಲ್ಯ, ಶಿಕ್ಷಣವನ್ನು ಶಾಲಾ ಮಕ್ಕಳಿಗೆ ಕಲಿಸುವ ಸಲುವಾಗಿ ಭಗವದ್ಗೀತೆಯ 14–15 ಅಧ್ಯಾಯವನ್ನು ಕಂಠಪಾಠ ಮಾಡಿಸುವುದು ಈ ಅಭಿಯಾನದ ಉದ್ದೇಶವಂತೆ. ರಾಜ್ಯದ ಶಾಲಾ ಪಠ್ಯ ಪುಸ್ತಕಗಳಲ್ಲಿ ಮೌಲ್ಯ ಶಿಕ್ಷಣ ಕುರಿತು ಪಾಠಗಳು ಈಗಾಗಲೇ ಇವೆ. ಇನ್ನು ಅವುಗಳ ಅಗತ್ಯವೇನಾದರೂ ಇದ್ದರೆ ಅದಕ್ಕಾಗಿ ಸರ್ಕಾರದ DSERT, NCERT ಸೇರಿದಂತೆ ಶಿಕ್ಷಣ ಇಲಾಖೆಯು ಕ್ರಮವಹಿಸಿ ಶಿಕ್ಷಣ ತಜ್ಞರ ಸಲಹೆ ಪಡೆದು ಪಠ್ಯವಾಗಿ ರೂಪಿಸಬಹುದು. ಆದರೆ ಹಿಂಬಾಗಿಲ ಮೂಲಕ ಶಿರಸಿಯ ಶ್ರೀ ಸೋಂದಾಸ್ವರ್ಣವಲ್ಲಿ ಸಂಸ್ಥಾನ ಎಂಬ ಖಾಸಗಿ ಸಂಸ್ಥೆಗೆ ಈ ಕಾರ್ಯ ವಹಿಸುವುದು ಯಾವ ಕಾರಣಕ್ಕಾಗಿ ಎನ್ನುವುದು ಚರ್ಚೆಯಾಗಬೇಕಾಗಿದೆ.

ಸರ್ಕಾರಿ ಶಾಲೆಗಳಲ್ಲಿ ಖಾಸಗಿ ಸಂಸ್ಥೆಯ ಮೂಲಕ ಎಳೆಯ ಮಕ್ಕಳ ಮನಸ್ಸಿನಲ್ಲಿ ಮತಾಂಧತೆಯನ್ನು ಬಿತ್ತುವ' ಕಾರ್ಯ ಇದಾಗಿದ್ದು, ಶಿಕ್ಷಣ ರಂಗದ ಕೇಸರೀಕರಣದ ಮುಂದುವರಿದ ಭಾಗ ಇದಾಗಿದೆ. ಇದು ಭಾರತದ ಜಾತ್ಯಾತೀತ ಸಂವಿಧಾನದ ವಿರೋಧಿ ಅಭಿಯಾನವಾಗಿದೆ.

ಶಿಕ್ಷಣದಲ್ಲಿ ಧಾರ್ಮಿಕ ಹಸ್ತಕ್ಷೇಪ ಸಲ್ಲದು

ಶಾಲೆ ಎಂದರೆ ಒಂದು ಧರ್ಮೀಯರ ಮನೆಯಲ್ಲ. ಅದು ಬಹುಸಂಸ್ಕೃತಿಯನ್ನು ಆಚರಿಸುವ ಮಕ್ಕಳಿರುವ ಸುಂದರ ತೋಟ. ಅಲ್ಲಿ ಹಿಂದೂ–ಮುಸ್ಲಿಂ–ಕ್ರೈಸ್ತ–ಪಾರ್ಸಿ–ಜೈನ ಇತ್ಯಾದಿಗಳ ಜೊತೆಗೆ ಅವುಗಳನ್ನೆಲ್ಲಾ ಮೀರಿ ಬೆಳೆಯುವ ಕನಸು ಅರಳುತ್ತಿರುವ ಮನಸುಗಳು ಇರುತ್ತವೆ. ಅಂತಹ ಕಡೆ ಒಂದು ಧರ್ಮವನ್ನು ಪ್ರತಿನಿಧಿಸುವ ಗ್ರಂಥದ ಬೋಧನೆ ಸಾಧುವಲ್ಲ. ಅಲ್ಲಿ ಬೈಬಲ್, ಕುರಾನ್, ಭಗವದ್ಗೀತೆ ಅಥವಾ ವೇದಗಳು, ಇತ್ಯಾದಿ ಧಾರ್ಮಿಕ ಗ್ರಂಥಗಳನ್ನು ಒಪ್ಪುವ ಅಥವಾ ಒಪ್ಪದಿರುವ ಮಕ್ಕಳಿರಬಹುದು. ಅಂತಹ ಕಡೆ ಏಕಮುಖ ಧಾರ್ಮಿಕ ಪ್ರಚಾರ ಮತ್ತು ಬೋಧನೆ ಅನೇಕರನ್ನು ಘಾಸಿಗೊಳಿಸುತ್ತದೆ. ಅಷ್ಟೆ ಅಲ್ಲದೆ ಮನುಷ್ಯ ಪ್ರೀತಿಯ ಬದಲಾಗಿ ಧರ್ಮವೆಂಬ ದ್ವೇಷದ ಗೋಡೆಯನ್ನು ಕಟ್ಟುತ್ತದೆ. ಕೋಮು ವಿಷ ಬೀಜ ಬಿತ್ತುವ ಸಂಘಪರಿವಾರ ಪ್ರೇರಿತ ಈ ಅಭಿಯಾನ ನಾಡಿನ ಬಹುಸಂಸ್ಕೃತಿಯನ್ನು ನಾಶಪಡಿಸುತ್ತದೆ.

ಅಷ್ಟಾಗಿ ಭಗವದ್ಗೀತೆ ಸರ್ವ ಸಮ್ಮತವಲ್ಲ

ಬಹು ಹಿಂದಿನಿಂದಲೂ ಭಗವದ್ಗೀತೆಯ ಕುರಿತು ಪರ–ವಿರೋಧದ ಚರ್ಚೆಗಳು ನಡೆಯುತ್ತಲೇ ನಡೆಯುತ್ತಲೇ ಬಂದಿವೆ. ಭಗವದ್ಗೀತೆಯು ಚಾತುವರ್ಣ(ಜಾತಿಪದ್ಧತಿ) ವ್ಯವಸ್ಥೆಯನ್ನು ಸಮರ್ಥಿಸುತ್ತದೆ. ಅವೈಜ್ಞಾನಿಕವಾಗಿರುವ ಪೂರ್ವಜನ್ಮ, ಪಾಪ, ಪುಣ್ಯಗಳನ್ನು ನಂಬುವಂತೆ ಹೇಳುತ್ತದೆ. ಅಷ್ಟೇ ಅಲ್ಲದೆ ಅಸಮಾನತೆ, ಪಾಳೇಗಾರಿ ಮೌಲ್ಯಗಳನ್ನು ಬೆಳೆಸುವಂತಹ ನೀತಿಗಳನ್ನು ಒಳಗೊಂಡಿದೆ. ದುಡಿಯುವವರು ಯಾವುದೇ ಫಲಾಪೇಕ್ಷೆ ಇಲ್ಲದೆ ಗುಲಾಮರಂತೆ ದುಡಿಯಬೇಕೆಂದೂ ಹಾಗೂ ಶ್ರಮಕ್ಕೆ ಪ್ರತಿಫಲ ಕೇಳದೆ ಇರುವಂತೆ ಬೋಧಿಸುತ್ತದೆ. ಆಸ್ತಿಗಾಗಿ ಸಹೋದರ ಸಹೋದರಿಯರನ್ನು ಕೊಲ್ಲು ಎನ್ನುವ ಈ ಗೀತೆಯಸಾರ ಸಮಾಜದ ನೆಮ್ಮದಿ ಕದಡುವುದು ಆಗಿದೆ. ಕ್ರಮವಾಗಿ ತಲೆ–ತೋಳು–ತೊಡೆ– ಪಾದಗಳ ಮೂಲಕ ಬ್ರಾಹ್ಮಣ–ಕ್ಷತ್ರಿಯ–ವೈಶ್ಯ–ಶೂದ್ರರು ಹುಟ್ಟಿದರೆನ್ನುವುದನ್ನು ಸಮರ್ಥಿಸಿಕೊಳ್ಳುವ ಭಗವದ್ಗೀತೆ ಮನುಷ್ಯತ್ವದ ವಿರೋಧಿಯಾಗಿದೆ.

ಇದು ದಲಿತರು ಮಹಿಳೆಯರು ಶ್ರಮಿಕರನ್ನು ಮೇಲೆತ್ತುವ ಬದಲು ಸಂಪ್ರದಾಯ ಕಟ್ಟಳೆಗಳಿಗೆ ಸಿಲುಕಿಸಿ ಸಮಾಜದ ಪ್ರಗತಿಗೆ ತಡೆ ನೀಡುತ್ತದೆ. ಇಂತಹ ಗೀತೆಯನ್ನು ಬಹುಧರ್ಮಿಯ ವಿವಿಧ ನಂಬಿಕೆಯನ್ನು ಮಕ್ಕಳಿರುವ ಶಾಲೆಗಳಲ್ಲಿ ಬೋಧಿಸಲು ಹೊರಟಿರುವ ರಾಜ್ಯ ಸರ್ಕಾರದ ಕ್ರಮ ಅತ್ಯಂತ ಸಂವಿದಾನ ವಿರೋಧಿ ಕೃತ್ಯವಾಗಿದೆ.

ಮಾನವೀಯ ಮೌಲ್ಯಗಳು ಬೇಕಾದರೆ.....

ಭಾರತದಲ್ಲಿ ಕೋಮುಸಾಮರಸ್ಯಕ್ಕಾಗಿ ಸಾಮಾಜಿಕ

(8ನೇ ಪುಟಕ್ಕೆ)

ಬಹು ಹಿಂದಿನಿಂದಲೂ ಭಗವದ್ಗೀತೆಯ ಕುರಿತು ಪರ– ವಿರೋಧದ ಚರ್ಚೆಗಳು ನಡೆಯುತ್ತಲೇ ಬಂದಿವೆ. ಭಗವದ್ಗೀತೆಯು ಚಾತುವರ್ಣ ವ್ಯವಸ್ಥೆಯನ್ನು ಸಮರ್ಥಿಸುತ್ತದೆ. ಅವೈಜ್ಞಾನಿಕವಾಗಿರುವ ಪೂರ್ವಜನ್ಮ, ಪಾಪ, ಪುಣ್ಯಗಳನ್ನು ನಂಬುವಂತೆ ಹೇಳುತ್ತದೆ. ಅಷ್ಟೇ ಅಲ್ಲದೆ ಅಸಮಾನತೆ, ಪಾಳೇಗಾರಿ ಮೌಲ್ಯಗಳನ್ನು ಬೆಳೆಸುವಂತಹ ನೀತಿಗಳನ್ನು ಒಳಗೊಂಡಿದೆ. ದುಡಿಯುವವರು ಯಾವುದೇ ಫಲಾಪೇಕ್ಷೆ ಇಲ್ಲದೆ ಗುಲಾಮರಂತೆ ದುಡಿಯಬೇಕೆಂದೂ ಹಾಗೂ ಶ್ರಮಕ್ಕೆ ಪ್ರತಿಫಲ ಕೇಳದೆ ಇರುವಂತೆ ಬೋಧಿಸುತ್ತದೆ. ಆಸ್ತಿಗಾಗಿ ಸಹೋದರ ಸಹೋದರಿಯರನ್ನು ಕೊಲ್ಲು ಎನ್ನುವ ಈ ಗೀತೆಯಸಾರ ಸಮಾಜದ ನೆಮ್ಮದಿ ಕದಡುವುದು ಆಗಿದೆ.
ಕ್ರಮವಾಗಿ ತಲೆ–ತೋಳು–ತೊಡೆ–ಪಾದಗಳ ಮೂಲಕ ಬ್ರಾಹ್ಮಣ–ಕ್ಷತ್ರಿಯ–ವೈಶ್ಯ–ಶೂದ್ರರು ಹುಟ್ಟಿದರೆನ್ನುವುದನ್ನು ಸಮರ್ಥಿಸಿಕೊಳ್ಳುವ ಭಗವದ್ಗೀತೆ ಮನುಷ್ಯತ್ವದ ವಿರೋಧಿಯಾಗಿದೆ. ಇದು ದಲಿತರು ಮಹಿಳೆಯರು ಶ್ರಮಿಕರನ್ನು ಮೇಲೆತ್ತುವ ಬದಲು ಸಂಪ್ರದಾಯ ಕಟ್ಟಳೆಗಳಿಗೆ ಸಿಲುಕಿಸಿ ಸಮಾಜದ ಪ್ರಗತಿಗೆ ತಡೆ ನೀಡುತ್ತದೆ.

ಗಣಿ ಲೂಟಿಯ ರಾಜಕಾರಣವೂ ಜನರು ಮಾಡಬೇಕಾದ ಪರ್ಯಾಯವೂ

ಸಂಪಾದಕರೊಡನೆ ಸಂವಾದ

ಭರತ್ ರಾಜ್

ಮಾನ್ಯರೇ,

ಕರ್ನಾಟಕದಲ್ಲಿ ಗಣಿ ಮಾಲಿಕರ ಸೊಕ್ಕು, ದರ್ಪ, ದಬ್ಬಾಳಿಕೆ, ಗೂಂಡಾಗಿರಿಗಳು, ಹಗಲುದರೋಡೆಗಳು, ಜನರ ಬಗೆಗಿನ ಅಣಕಗಳು, ನಿರ್ಲಕ್ಷ್ಯಗಳು, ಬಿ.ಜೆ.ಪಿ ಸರ್ಕಾರದ ಗಣಿರೆಡ್ಡಿಗಳೊಂದಿಗಿನ ಶಾಮೀಲು ದಾರಿಕೆ ಎಲ್ಲರಿಗೂ ತಿಳಿದದ್ದೇ ಆಗಿದೆ. ಬಿ.ಜೆ.ಪಿ ಸರ್ಕಾರ ಗಣಿರೆಡ್ಡಿಗಳ ಹಗಲುದರೋಡೆಯ ಹಣದಿಂದಲೇ ಸರ್ಕಾರ ರಚಿಸಿಕೊಂಡು ರಾಜ್ಯದ ಜನರನ್ನು ಅಣಕವಾಡುತ್ತಾ ಹಾಗೂ ಹೀಗೂ ಅಧಿಕಾರ ನಡೆಸುತ್ತಿದೆ. ಇಂತಹ ದರೋಡೆ, ಗೂಂಡಾಗಿರಿ, ಅಪಹರಣ, ಗೃಹ (ರೆಸಾರ್ಟ್) ಬಂದನಗಳ ಕೊಚ್ಚೆಯಲ್ಲೇ ಆಪರೇಷನ್ ಕಮಲ ಅರಳಿದ್ದು.?!

ಇತ್ತೀಚೆಗೆ ಗಣಿರೆಡ್ಡಿಗಳು ರಾಜಾರೋಷವಾಗಿ ಅಕ್ರಮಗಳನ್ನು ಎಸಗುತ್ತಾ ಸರ್ಕಾರವನ್ನೇ ಮಾಫಿಯಾಕರಣಗೊಳಿಸುತ್ತಿರುವುದರ ವಿರುದ್ದ ಅಲ್ಲಲ್ಲಿ ಚದುರಿದಂತೆ ಪ್ರತಿಭಟನೆಗಳು ನಡೆಯುತ್ತಿವೆ. ಹಲವಾರು ಬುದ್ಧಿ ಜೀವಿಗಳು ಈ ಪ್ರತಿಭಟನೆಯಲ್ಲಿ ಸೇರಿದ್ದಾರೆ. ಜನರ ಕಣ್ಣಿಗೆ ಮಣ್ಣೆರ ಚಲು ಕಾಂಗ್ರೆಸ್ ಮತ್ತು ಜೆ.ಡಿ.ಎಸ್ ಪಕ್ಷಗಳು ಕೂಡ ಪ್ರತಿಭಟನೆ ಮಾಡಿ ದಂತೆ ತೋರಿಸಿಕೊಳ್ಳುತ್ತಿರುವುದೂ ಕಾಣುತ್ತಿದೆ. ರಾಜ್ಯದ ಜನತೆಗೆ ಸೇರಬೇಕಾಗಿರುವ ಖನಿಜ ಸಂಪತ್ತು ಇಂದು ಗಣಿ ಮಾಲಿಕರ ದುರಾಸೆ ದುರಾಚಾರಕ್ಕೆ ಬಳಕೆಯಾಗುತ್ತಿದೆ. ಮುಂದಿನ ಪೀಳಿಗೆಗೂ ಕಾಪಡಬೇಕಾದ ಇಂತಹ ಸಂಪತ್ತುಗಳ ಮೂಲಗಳನ್ನೇ ಬರಿದು ಮಾಡಿ ಬಗೆದು ವಿದೇಶಗಳಿಗೆ ಅಗ್ಗದ ದರದಲ್ಲಿ ಕಳುಹಿಸಲಾಗುತ್ತಿದೆ. ಕರುನಾಡಿನ ಜನರು ಗಣಿಧೂಳು ಕುಡಿದು ಮೂಗು ಬಾಯಿಗಳಲ್ಲಿ ರಕ್ತ ಕಾರುತ್ತಿದ್ದಾರೆ. ಹೃದಯಗಳಲ್ಲಿ ಧೂಳು ತುಂಬಿ ಹೃದಯ ಸಮಸ್ಯೆ, ಉಸಿರಾಟದ ತೊಂದರೆ ಅನುಭವಿಸುತ್ತಿದ್ದಾರೆ. ಹುಟ್ಟುವ ಮಕ್ಕಳೂ ಕೂಡ ಉಸಿರಾಟ ಹಾಗು ಹೃದಯ ಸಂಬಂದಿ ರೋಗಗಳೊಂದಿಗೇ ತಾಯಿಯ ಗರ್ಭದಿಂದ ಹೊರಬರುತ್ತಿವೆ. ಗಣಿಗಾರಿಕೆ ನಡೆಯುತ್ತಿರುವ ಸುತ್ತಮುತ್ತಲಿನ ಗ್ರಾಮಗಳ ಮನೆಗಳ ಗೋಡೆಗಳು ಬಿರುಕುಬಿಟ್ಟು ಕುಸಿಯುವ ಪರಿಸ್ಥಿತಿ ಬಂದಿದೆ. ಗಾಳಿ, ನೀರು ಮತ್ತು ಪರಿಸರ ಸರಿಪಡಿಸಲಾಗದ ಹಾನಿಗಳಿಗೆ ಒಳಗಾಗುತ್ತಿದೆ. ರೈತರ ಹೊಲಗಳಲ್ಲಿ ಹೆಪ್ಪುಗಟ್ಟಿರುವ ಗಣಿಧೂಳಿನಿಂದಾಗಿ ಉಳಲು, ಬಿತ್ತಲು, ಬೆಳೆಯಲು ಆಗದೆ ಪಾಳು ಬೀಳುತ್ತಿವೆ. ಬೆಳೆ ಹಾಕಿದರೂ ಹೂವರಳಿ ಕಾಳು ಕಟ್ಟದಂತಹ ಪಾಡು. ಸಾರ್ವಜನಿಕರಿಗಾಗಿರುವ ರಸ್ತೆಗಳು ತಿರುಗಾಡಲಾಗದಂತಾಗುತ್ತಿವೆ. ಬಹುತೇಕವಾಗಿ ಗಣಿ ಕಂಪನಿಗಳು ಮಠ ಪೀಠಗಳನ್ನು, ರಾಜಕೀಯ ಪುಡಾರಿಗಳನ್ನು, ಅಧಿಕಾರಿಗಳನ್ನು ತಮ್ಮ ಅಕ್ರಮ ಹಣದ ಮೂಲಕ ಕೊಂಡುಕೊಳ್ಳುತ್ತಿವೆ. ಇದೆಲ್ಲವನ್ನೂ ಮೀರಿ ಪ್ರಶ್ನಿಸಿದವರನ್ನು ತರಿದುಹಾಕಲು ಗೂಂಡಾಗಳನ್ನು ಇಟ್ಟುಕೊಂಡಿದ್ದಾರೆ. ಇಂತಹ ವಿನಾಶಕಾರಿ ಸಮಸ್ಯೆಗಳು ಬಳ್ಳಾರಿ, ಸಂಡೂರು, ತುಮಕೂರು, ಕುಣಿಗಲ್, ಚಿತ್ರದುರ್ಗ, ದಾವಣಗೆರೆ ಮೊದಲಾದ ಗಣಿಗಾರಿಕಾ ಪ್ರದೇಶಗಳಲ್ಲಿ ನಮ್ಮ ಅನುಭವಕ್ಕೆ ಬರುತ್ತಿವೆ.

ಗಣಿಗಾರಿಕೆಯ ಎಲ್ಲಾ ರೀತಿಯ ಪರಿಣಾಮಗಳ ಬಗ್ಗೆ ನುರಿತ ವೈದ್ಯರುಗಳು, ಭೂ ವಿಜ್ಞಾನಿಗಳು, ಹವಾಮಾನ ತಂತ್ರಜ್ಞರು ಮೊದಲಾದ ಪರಿಣತರ ತಂಡ ನಿರ್ಧಿಷ್ಟವಾಗಿ ತಪಾಸಣೆ ಮಾಡಿ ವರದಿ ಮಾಡಿದಲ್ಲಿ ಇನ್ನೂ ಭೀಕರ ಸತ್ಯಗಳು ಹೊರಬೀಳುವ ಬಗ್ಗೆ ಸಂಶಯ ಯಾರಿಗೂ ಬೇಕಿಲ್ಲ. ಇದು ಕೇವಲ ಕೆಲವೇ ಪ್ರದೇಶಗಳಿಗೆ ಮಾತ್ರ ಬಾಧಿಸುತ್ತದೆ ಎಂದು ಭಾವಿಸಿದಲ್ಲಿ ಅದು ತಪ್ಪಾಗುತ್ತದೆ.

ಗಣಿಗಾರಿಕೆಯ ಎಲ್ಲಾ ರೀತಿಯ ಪರಿಣಾಮಗಳ ಬಗ್ಗೆ ನುರಿತ ವೈದ್ಯರುಗಳು, ಭೂ ವಿಜ್ಞಾನಿಗಳು, ಹವಾಮಾನ ತಂತ್ರಜ್ಞರು ಮೊದಲಾದ ಪರಿಣತರ ತಂಡ ನಿರ್ಧಿಷ್ಟವಾಗಿ ತಪಾಸಣೆ ಮಾಡಿ ವರದಿ ಮಾಡಿದಲ್ಲಿ ಇನ್ನೂ ಭೀಕರ ಸತ್ಯಗಳು ಹೊರಬೀಳುವ ಬಗ್ಗೆ ಸಂಶಯ ಯಾರಿಗೂ ಬೇಕಿಲ್ಲ.

ಇದು ಕೇವಲ ಕೆಲವೇ ಪ್ರದೇಶಗಳಿಗೆ ಮಾತ್ರ ಬಾಧಿಸುತ್ತದೆ ಎಂದು ಭಾವಿಸಿದಲ್ಲಿ ಅದು ತಪ್ಪಾಗುತ್ತದೆ. ಅದು ಇಡೀ ಕರುನಾಡಿನ ಅಲ್ಲದೇ ಇತರ ಪ್ರದೇಶಗಳನ್ನು ಬೇರೆ ಬೇರೆ ರೀತಿಗಳಲ್ಲಿ ಬಾಧಿಸುತ್ತಿದೆ. ಮುಂದಿನ ಪೀಳಿಗೆಗೂ ಕಾಪಾಡುತ್ತಾ, ನಾಡಿನ ಜನರ ಅಗತ್ಯಗಳಿಗೆ ತಕ್ಕಂತೆ ಹಿತಮಿತವಾಗಿ ಬಳಸಬೇಕಾದ ನೈಸರ್ಗಿಕ ಸಂಪನ್ಮೂಲದ ಭಾರಿ ಪೋಲು, ತೀವ್ರ ಆರ್ಥಿಕ ನಷ್ಟ, ಭೂಮಿಯ ಹಾಳುಗೆಡುವುವಿಕೆ, ಅಂತರ್ಜಲದ ಕುಸಿತ, ಹವಾಮಾನ ಏರುಪೇರು, ಭೂಕಂಪ, ಅಕಾಲಿಕ ಮಳೆ, ಅತೀವವೃಷ್ಟಿ, ಅನಾವೃಷ್ಟಿ, ವಾತಾವರಣದ ಬಿಸಿ ಹೆಚ್ಚಳ, ವಾತಾವರಣದ ಧೂಳೀಕರಣ, ಜನರ ಆರೋಗ್ಯದ ತೀವ್ರ ಹದಗೆಡುವಿಕೆ ಹೀಗೆ ಹತ್ತು ಹಲವು ವಿಧಗಳಲ್ಲಿ ಇದೆಲ್ಲದರ ಪರಿಣಾಮ ಎಲ್ಲರ ಮೇಲೂ ಆಗುತ್ತಿದೆ.

ಇನ್ನೊಂದೆಡೆ ವಿದೇಶಿ ಹಾಗೂ ದಲ್ಲಾಳಿ ಗಣಿ ಕಂಪನಿಗಳ ಕಳ್ಳ ದಂಧೆ ಹಾಗೂ ಹಗಲುದರೋಡೆಗಾಗಿ ಉತ್ತರ ಹಾಗೂ ಮಧ್ಯಭಾರತದಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳೇ ಮಿಲಿಟರಿ ಕಳುಹಿಸಿ ತನ್ನ ದೇಶದ ಜನರ ವಿರುದ್ಧ ಯುದ್ಧವನ್ನೇ ಆರಂಭಿಸಿದೆ. ಈ ದೇಶದ ದುಡಿದುಣ್ಣೋ ಆದಿವಾಸಿಗಳು, ದಲಿತರು ಇನ್ನಿತರ ಜನರನ್ನು ಓಡಿಸಿ ಹತ್ತಾರು ಸಾವಿರ ಏಕರೆ ಪ್ರದೇಶಗಳನ್ನು ಬಿಡಿಸಿಕೊಡಲು ಜನರ ತೆರಿಗೆಯ ಸಾವಿರಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದೆ. ಇದಕ್ಕಾಗಿ ಸಾವಿರಗಟ್ಟಲೆ ದೇಶವಾಸಿಗಳನ್ನು ಬಲಿಕೊಡುತ್ತಿದೆ. ಈ ಬಗೆಗಿನ ವರದಿಗಳೂ ಕೂಡ ಹೊರಬರದಂತೆ ತಡೆಯುವ ಪ್ರಯತ್ನಗಳನ್ನು ಸರ್ಕಾರ ನಡೆಸಿದೆ.

ಪರಿಸ್ಥಿತಿ ಇಷ್ಟು ಗಂಭೀರದ್ದಾಗಿದ್ದರೂ ಕರುನಾಡಿನ ಪ್ರತಿಭಟನೆಯ ನಾಯಕತ್ವಗಳು ಅದನ್ನು ಸರಿಯಾಗಿ ಗ್ರಹಿ

ಸುತ್ತಿಲ್ಲ. ಕರುನಾಡಿನ ಬುದ್ಧಿಜೀವಿಗಳು ಹಾಗೂ ಮಾಧ್ಯಮಗಳು ಕೂಡ ಈ ಎಲ್ಲಾ ಭೀಕರ ಪರಿಣಾಮಗಳು- ಪರಿಸ್ಥಿತಿಗಳ ಬಗ್ಗೆ ಸಮಗ್ರವಾಗಿ ಚಿಂತಿಸಿದಂತೆ ತೋರುತ್ತಿಲ್ಲ.

ಇವರುಗಳು ಮುಂದಿಡುತ್ತಿರುವ ಒತ್ತಾಯಗಳಾದರೂ ಏನು? ಗಣಿರೆಡ್ಡಿಗಳನ್ನು ಸಂಪುಟದಿಂದ ತೆಗೆಯಬೇಕು, ಗಣಿಗಾರಿಕೆಯನ್ನು ರಾಷ್ಟ್ರೀಕರಣ ಮಾಡಬೇಕು, ಗಣಿರೆಡ್ಡಿಗಳ ಮೇಲೆ ಸಿ.ಬಿ.ಐ ತನಿಖೆ ನಡೆಸಬೇಕು, ಗಡಿ ನಕ್ಷೆ ಬದಲಾಯಿಸಿದ್ದರ ಬಗ್ಗೆ ಕ್ರಮ ಕೈಗೊಳ್ಳಬೇಕು ಇವೇ ಪ್ರಮುಖವಾಗಿ ಕೇಳಿಬರುತ್ತಿವೆ. ಇವುಗಳು ಬೇಡವೆಂದಲ್ಲ. ಆದರೆ ಸಮಸ್ಯೆಯ ಮೂಲವನ್ನು ಗ್ರಹಿಸಿ ಸರಿಪಡಿಸುವ ಕೆಲಸ ಮಾಡದಿದ್ದರೆ ಹೋರಾಟ ಪ್ರತಿಭಟನೆಗಳು ಯಾರದೋ ಕೆಲವರ ರಾಜಕೀಯ ಇಲ್ಲವೆ ಆರ್ಥಿಕ ಹಿತಾಸಕ್ತಿಗಳಿಗೆ ತಕ್ಕಂತೆ ಕಾರ್ಯ ಮಾಡುತ್ತವೆಯೇ ವಿನಃ ನಾಡಿಗಾಗಲೀ, ಜನರಿಗಾಗಲೀ ಯಾವ ಪ್ರಯೋಜನವೂ ಆಗುವುದಿಲ್ಲ. ಅದು ಗೊತ್ತಿದ್ದು ಅಥವಾ ಗೊತ್ತಿಲ್ಲದೆಯೂ ಸಂಭವಿಸಬಹುದು. ಉದಾಹರಣೆಗೆ ಗಣಿಗಾರಿಕೆಯ ರಾಷ್ಟ್ರೀಕರಣದ ಒತ್ತಾಯ, ಇದು ವಿದೇಶಿ ಕಂಪನಿಗಳು ಇಲ್ಲವೆ ದಲ್ಲಾಳಿಗಳಿಗೆ ಅನುಕೂಲ ಆಗುತ್ತದೆ. ಸರ್ಕಾರ ಇವುಗಳನ್ನು ಅವರಿಗೆ ವಹಿಸಿಕೊಡುತ್ತದೆ. ಇಲ್ಲಾ ಅಂದರೆ ಖಾಸಗಿ ಸಹಭಾಗಿತ್ವ ಎಂಬ ಹೆಸರಿನಲ್ಲಿ ಅಥವಾ ತಾನೇ ಅದೇ ಕೆಲಸವನ್ನು ಮಾಡುತ್ತದೆ. ಅಂದರೆ ಅದಿರು ಬಗೆದು, ಸಂಸ್ಕರಿಸಿ, ಮೊಗೆದು ವಿದೇಶಿ ಕಂಪನಿಗಳಿಗೆ ದುಗ್ಗಾಣಿ ಬೆಲೆಗೆ ಕೈ ಎತ್ತಿ ದಾನ ನೀಡುವುದು.

ಸರ್ಕಾರಿ ಸ್ವಾಮ್ಯದ ಕುದುರೆಮುಖ ಕಬ್ಬಿಣ ಅದಿರು ಕಂಪನಿ ಅದನ್ನೇ ತಾನೆ ಮಾಡಿದ್ದು. ಈಗ ಇರುವ ಸರ್ಕಾರಿ ಸ್ವಾಮ್ಯದ ಖನಿಜ ನಿಗಮ ಮಾಡುತ್ತಿರುವುದೂ ಕೂಡ ಪ್ರದಾನವಾಗಿ ಇಂತಹ ಕೆಲಸಗಳನ್ನೇ ತಾನೆ. ಹಾಗಾದಾಗ ಸಮಸ್ಯೆ ಪರಿಹಾರವಾಗುತ್ತದೆಯೆ.? ರೆಡ್ಡಿಗಳು ಸಂಪುಟದಿಂದ ಹೋಗಬಹುದು (ಅವರುಗಳನ್ನು ಸಚಿವರುಗಳನ್ನಾಗಿ ಮುಂದುವರೆಸುವುದು ಯಾವುದೇ ಕಾರಣಕ್ಕೂ ಸರಿಯಲ್ಲ ಆ ವಿಚಾರ ಬೇರೆ) ಆದರೆ ಜನರು ಹಾಗೂ ನಾಡಿಗೆ ಏನು ಪರಿಹಾರ? ಅದೇ ಭೀಕರ ಸ್ಥಿತಿ ಮುಂದುವರೆಯುತ್ತದೆ. ಜನರ ಹಾಗೂ ನಾಡಿನ ಆರೋಗ್ಯ ಪೂರ್ಣವಾಗಿ ಹದಗೆಡುತ್ತದೆ. ಇದನ್ನು ತಡೆಯಬೇಕಲ್ಲವೆ. ಅದೇ ತಾನೆ ಮುಖ್ಯ. ಹಾಗಿದ್ದಾಗ ಜನರು ಮತ್ತು ನಾಡಿನ ರಕ್ಷಣೆಗೆ ಅಗತ್ಯವಾಗಿರುವ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಸರ್ಕಾರ/ ರಾಜ್ಯಪಾಲರ ಮೇಲೆ ಒತ್ತಡ ಹೇರಬೇಕಾದುದು ನಾಗರಿಕ ಸಮಾಜದ ಕರ್ತವ್ಯ ಆಗುತ್ತದೆ ತಾನೆ.

ವಿದೇಶಿ ಹಾಗೂ ದಲ್ಲಾಳಿ ಗಣಿ ಕಂಪನಿಗಳ ಕಳ್ಳ ದಂಧೆ ಹಾಗೂ ಹಗಲು ದರೋಡೆಗಾಗಿ ಉತ್ತರ ಹಾಗೂ ಮಧ್ಯ ಭಾರತದಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳೇ ಮಿಲಿಟರಿ ಕಳುಹಿಸಿ ತನ್ನ ದೇಶದ ಜನರ ವಿರುದ್ಧ ಯುದ್ಧವನ್ನೇ ಆರಂಭಿಸಿದೆ.

ಎಲ್ಲಾ ಖಾಸಗಿ ಗಣಿಗಾರಿಕೆಗಳನ್ನು ನಿಲ್ಲಿಸುವುದು. ದೇಶದ ಜನರಿಗೆ ಏನು ಅಗತ್ಯ ಇದೆಯೋ ಆ ಮಟ್ಟಕ್ಕೆ ಖನಿಜಗಳನ್ನು ಜನರು ಮತ್ತು ಪರಿಸರಕ್ಕೆ ಹಾನಿಯಾಗದಂತೆ ಸರ್ಕಾರವೇ ತೆಗೆದು ದೇಶೀಯವಾಗಿ ಅಗತ್ಯವಸ್ತುಗಳನ್ನು ಉತ್ಪಾದಿಸಿ ಜನರಿಗೆ ಕಡಿಮೆ ಬೆಲೆಯಲ್ಲಿ ಒದಗಿಸುವುದು. ಭದ್ರಾವತಿ ಉಕ್ಕು ಕಾರ್ಖಾನೆ ಅದರ ಪೂರ್ಣ ಸಾಮರ್ಥ್ಯದಲ್ಲಿ ಉಕ್ಕು ತಯಾರಿಸುವಂತೆ ಕಾರ್ಯಕ್ಷಮತೆ ಹೆಚ್ಚಿಸುವುದು. ಎಲ್ಲಾ ರೀತಿಯ ಅದಿರು ರಫ್ತನ್ನು ತಕ್ಷಣವೇ ನಿಲ್ಲಿಸುವುದು. ಬೇರೆ ಬೇರೆ ರಾಷ್ಟ್ರಗಳೊಂದಿಗೆ ಮಾಡಿಕೊಂಡಿರುವ ಅದಿರು ರಫ್ತು ಹಾಗೂ ಗಣಿಗಾರಿಕಾ ಒಪ್ಪಂದಗಳನ್ನು ನಾಡು ಹಾಗೂ ಜನರ ಹಿತಾಸಕ್ತಿಯ ದೃಷ್ಟಿಯಿಂದ ರದ್ದುಗೊಳಿಸುವುದು. ನೈಸರ್ಗಿಕ ಸಂಪತ್ತನ್ನು ರಕ್ಷಿಸಿ ಹಿತಮಿತವಾಗಿ ಅಗತ್ಯಕ್ಕೆ ಅನುಗುಣವಾಗಿ ಬಳಸುವಂತಹ ನೀತಿ ರೂಪಿಸುವುದು. ಈಗಾಗಲೇ ಗಣಿಗಾರಿಕೆಯಿಂದ ಆಗಿರುವ ಪರಿಣಾಮಗಳ ಬಗ್ಗೆ ಅಧ್ಯಯನ ನಡೆಸಲು ಪರಿಣಿತರ ಸ್ವತಂತ್ರ ತಂಡವೊಂದನ್ನು ರಚಿಸುವುದು. ಅದರಲ್ಲಿ ಸಾರ್ವಜನಿಕವಾಗಿ ಪ್ರಾಮಾಣಿಕರೆಂದು ಮಾನ್ಯತೆ ಪಡೆದವರನ್ನು ಮಾತ್ರ ಒಳಗೊಳಿಸುವುದು. ಅದು ನೀಡುವ ವರದಿಯನ್ನು ಆಧರಿಸಿ ಆಗಿರುವ ಹಾನಿಯನ್ನು ಗರಿಷ್ಠವಾಗಿ ಸರಿಪಡಿಸಲು ಯತ್ನಿಸುವುದು.

ಗಣಿ ಲೂಟಿ ಮಾಡಿದವರನ್ನು, ಜನರು ಮತ್ತು ನಾಡಿಗೆ ಹಾನಿ ಮಾಡಿದವರನ್ನು ತೀವ್ರ ದಂಡನೆಗೆ ಒಳಪಡಿಸುವುದು. ಅಂತಹವರುಗಳ ರಾಜಕೀಯ ಅಧಿಕಾರ ಮತ್ತು ಪದವಿಗಳನ್ನು ರದ್ದುಗೊಳಿಸುವುದು. ಗಣಿಸಂಪತ್ತನ್ನು ಕೊಳ್ಳೆ ಹೊಡೆದು ದೋಚಿದ ಹಣ-ಆಸ್ತಿಯನ್ನು ವಶಪಡಿಸಿಕೊಳ್ಳುವುದು. ಈಗಾಗಲೇ ಗಣಿಗಾರಿಕೆಯಿಂದ ನಷ್ಟಕ್ಕೆ ಒಳಗಾದ ಜನರಿಗೆ ಅಗತ್ಯ ಪರ್ಯಾಯ ವ್ಯವಸ್ಥೆ ಮಾಡುವುದು. ಗಣಿ ಹಾನಿ ಮತ್ತು ಅದರ ಹಿಂದಿರುವ ಹಿತಾಸಕ್ತಿಗಳ ಬಗ್ಗೆ ಜನಸಾಮಾನ್ಯರಿಗೆ ಅರಿವು ಮೂಡಿಸಲು ವ್ಯಾಪಕವಾಗಿ ಪ್ರಚಾರಾಂದೋಲನ ನಡೆಸುವುದು. ಇದಕ್ಕಾಗಿ ಸಾಕ್ಷ್ಯಚಿತ್ರ, ವರ್ಣಚಿತ್ರ, ಸಿನಿಮಾ, ಬರಹ, ಭಾಷಣ ಮೊದಲಾದವುಗಳನ್ನು ಪರಿಣಾಮಕಾರಿಯಾಗಿ ಬಳಸುವುದು. ವಿಚಾರಸಂಕಿರಣ, ಸಮಾವೇಶ, ಪ್ರತಿಭಟನೆಗಳನ್ನು ಸಂಘಟಿಸುವುದು. ಜನಾಭಿಪ್ರಾಯ ರೂಪಿಸುತ್ತಾ ಸರ್ಕಾರದ ಮೇಲೆ ಒತ್ತಡ ತೀವ್ರಗೊಳಿಸುವುದು. ಇವುಗಳಲ್ಲವೆ ಈಗ ಆಗಬೇಕಿರುವುದು? □

ಶಾಲೆಗಳಲ್ಲಿ ಭಗವದ್ಗೀತೆ ಕಂಠಪಾಠ ಅಭಿಯಾನ

ಶಿಕ್ಷಣ ಕೇಸರೀಕರಣದ ಹುನ್ನಾರ

(6ನೇ ಪುಟದಿಂದ)

ಅನಿಷ್ಟಗಳಾದ -ಜಾತಿ ಅಸ್ಪೃಶ್ಯತೆ ನಾಶಪಡಿಸಲು, ಮೌಲ್ಯಾಧಾರಿತ ಶಿಕ್ಷಣ ವ್ಯವಸ್ಥೆಯ ಜಾರಿಗಾಗಿ ಈ ದೇಶದಲ್ಲಿ ಅನೇಕ ಚಳುವಳಿಗಳು ನಡೆದಿವೆ. ಅವುಗಳಲ್ಲಿ ದುಡಿದ ಅನೇಕ ಗಣ್ಯರ ಆದರ್ಶಗಳ ಕುರಿತು ಪರಿಚಯಿಸಿದರೆ ಸಾಕು. ಬುದ್ಧ, ಬಸವಣ್ಣ, ಕನಕದಾಸ, ಗುರುನಾನಕ್, ಟಿಪ್ಪುಸುಲ್ತಾನ್, ನಾರಾಯಣಗುರು, ಜ್ಯೋತಿ ಬಾಫುಲೆ, ಅಂಬೇಡ್ಕರ್, ಶಿಶುನಾಳ ಶರೀಫ, ಕುವೆಂಪು ಹೀಗೆ ಹಲವರು ಈ ಮೌಲ್ಯಗಳನ್ನು ಬೆಳೆಸಲಿಕ್ಕಾಗಿ ಉಳಿಸಲಿಕ್ಕಾಗಿ ದುಡಿದಿದ್ದಾರೆ. ಇವರ ಕುರಿತು ಪಠ್ಯವಾಗಲಿ. ಆಗ ಶೈಕ್ಷಣಿಕ ಪದ್ಧತಿ ಮೌಲ್ಯಯುತವಾಗಲಿದೆ.

ಇದು ಸಂಘಪರಿವಾರ ಪ್ರೇರಿತ ಬಿಜೆಪಿ ಸರ್ಕಾರಕ್ಕೆ ಬೇಕಾಗಿಲ್ಲ. ಏಕೆಂದರೆ ಈ ನಾಡನ್ನು ಪುರೋಹಿತಶಾಹಿಗಳ ಕಪಿಮುಷ್ಠಿಯಲ್ಲಿ ಕಟ್ಟಿಹಾಕಿ ಕೋಮು ರಾಜಕೀಯ ಮಾಡಲು ಹೊರಟಿದ್ದಾರೆ. ಅದಕ್ಕಾಗಿಯೇ ಸುಮಾರು 300 ಕೋಟಿಯಷ್ಟು ಹಣವನ್ನು ಈ ಸರ್ಕಾರ ವಿವಿಧ ಮಠಗಳಿಗೆ ನೀಡಿದ್ದು.

ಕಂಠಪಾಠ ಪ್ರಗತಿಯಲ್ಲ

ಕೆಲವು ಅಭಿಯಾನ ಮಾಡುವ ಮೂಲಕ ಶೈಕ್ಷಣಿಕ ಪ್ರಗತಿ ಸಾಧಿಸಬಹುದು ಎನ್ನುವ ಸರ್ಕಾರ ಭ್ರಮೆಯಿಂದ ನೈಜತೆಯ ಕಡೆಗೆ ತಿರುಗಬೇಕಿದೆ. ಶಾಲಾ ಮಕ್ಕಳಲ್ಲಿ ಪೌಷ್ಠಿಕತೆಯ ಕೊರತೆ ಕಾಡುತ್ತಿದೆ. ಸರ್ಕಾರದ ಬಿಸಿಯೂಟದಲ್ಲಿ ಗುಣಮಟ್ಟ ಇಲ್ಲದಾಗಿದೆ. ಪ್ರತಿ ವಿದ್ಯಾರ್ಥಿಗೆ ದಿನಕ್ಕೆ ಕೇವಲ 1ರೂ. ಖರ್ಚು ಮಾಡಲಾಗುತ್ತಿದೆ. ಶಾಲೆಗಳಲ್ಲಿ ಶಿಕ್ಷಕರ ಕೊರತೆ, ಕೊಠಡಿ, ನೀರು, ಶೌಚಾಲಯ; ಸೇರಿದಂತೆ ಮೂಲಸೌಲಭ್ಯ ಕೊರತೆ ಕಾಡುತ್ತಿದೆ. ಹೀಗಾಗಿ ಶೈಕ್ಷಣಿಕ ಪ್ರಗತಿಗೆ ಹಿನ್ನಡೆಯಾಗಿದೆ. ಇವುಗಳನ್ನು ಸರಿಪಡಿಸಲು ಕ್ರಮಕೈಗೊಳ್ಳಬೇಕಿರುವ ಸರ್ಕಾರ ಭಗವದ್ಗೀತೆಯ ಕಂಠಪಾಠ ಮಾಡಿಸಲು ಅಭಿಯಾನ ಸಮಸ್ಯೆಗಳನ್ನು ಮರೆಮಾಚುವ ತಂತ್ರವಾಗಿದೆ.

ಕೇಸರೀಕರಣಕ್ಕಾಗಿ ಹಲವು ಮುಖ

ರಾಜ್ಯದಲ್ಲಿ ಅಪರೂಪಕ್ಕೆ ಅಧಿಕಾರ ಹಿಡಿದ ಬಿಜೆಪಿ ಸರ್ಕಾರ ಶಿಕ್ಷಣ ಕೇಸರೀಕರಣಗೊಳಿಸಲಿಕ್ಕಾಗಿ ಹಲವು ದಾರಿಗಳನ್ನು ಹಿಡಿದಿದೆ. ಹಿಂದೆ ಭಯೋತ್ಪಾದನೆಯ ನೆಪಹೇಳಿ ಶಾಲಾ-ಕಾಲೇಜು ವಿದ್ಯಾರ್ಥಿಗಳಲ್ಲಿ ಕೋಮುದ್ವೇಷ ಹೆಚ್ಚಿಸುವ ಕಾರ್ಯಕ್ರಮ ನಡೆಯಿತು. ಧಾರ್ಮಿಕ ಆಚರಣೆಯ ಹೆಸರಿನಲ್ಲಿ ಸರ್ಕಾರಿ ಬೊಕ್ಕಸದ ಹಣ ಖರ್ಚು ಮಾಡಿ ಮುಜರಾಯಿ ಇಲಾಖೆಯ ಮೂಲಕ ಲಾಡು, ಗಂಗಾಜಲ ವಿತರಿಸಲಾಗಿತ್ತು. ಶಾಸಕರ ಪ್ರದೇಶಾಭಿವೃದ್ಧಿ ಹಣವನ್ನು ಜೀವ ವಿರೋಧಿ, ಅಭಿವೃದ್ಧಿ ವಿರೋಧಿ ಸಾಹಿತ್ಯವನ್ನು ಪ್ರಕಟಿಸುವ ಸಂಘಪರಿವಾರದ 'ರಾಷ್ಟ್ರೋತ್ಥಾನ ಸಾಹಿತ್ಯ ಪರಿಷತ್' ಸುಮಾರು 300 ಪುಸ್ತಕಗಳನ್ನು ರಾಜ್ಯದ ಶಾಲೆಗಳಿಗೆ ಖರೀದಿ ಮಾಡಬೇಕೆಂದು ಸರ್ಕಾರ ಆದೇಶ ಹೊರಡಿಸಿದೆ.

ಅಷ್ಟೆ ಅಲ್ಲದೆ ಜನರ ನಡುವೆ ಜೀವಂತ ವಾಗಿಲ್ಲದ ಭಾಷೆಯೊಂದಕ್ಕಾಗಿ 'ಸಂಸ್ಕೃತ ವೇದ ವಿಶ್ವವಿದ್ಯಾಲಯ' ತೆರೆಯಬೇಕೆಂದು ಹೊರಟಿದೆ. ಉನ್ನತ ಶಿಕ್ಷಣ ಹಂತದಲ್ಲಿ ಜ್ಯೋತಿಷ್ಯಶಾಸ್ತ್ರ ಬೋಧಿಸಲು ಹೊರಟಿರುವ ಸರ್ಕಾರ ಸಂಪೂರ್ಣವಾಗಿ ಶಿಕ್ಷಣದ ಕೇಸರೀಕರಣ ನಡೆಸಲು ಹಲವು ಮುಖಗಳ ಮೂಲಕ ಮುಂದಾಗುತ್ತಿದೆ.

ದೇಶದ ಸಮಗ್ರತೆಗೆ ಧಕ್ಕೆ ತರಬಹುದಾದ ಸರ್ಕಾರಗಳನ್ನು ಮತ್ತು ಈ ಆಲೋಚನೆಗಳನ್ನು ತಡೆಯಬೇಕಿದೆ. ವೈವಿಧ್ಯತೆಯಲ್ಲಿ ಏಕತೆ ಎನ್ನುವ ಈ ನೆಲದ ಕಾನೂನಿನ ಗೌರವ ಕೊಡದ ಬಿಜೆಪಿ ಸರ್ಕಾರದ ಈ ನೀತಿಗಳನ್ನು ನಮ್ಮ ಸಂವಿದಾನದ ಆಶಯಗಳಿಗೆ ವಿರುದ್ಧವಾಗಿರುವುದರಿಂದ ಇವುಗಳನ್ನು ಹಿಮ್ಮೆಟ್ಟಿಸಬೇಕಿದೆ. ವೈಜ್ಞಾನಿಕ, ವೈಚಾರಿಕ, ಪ್ರಗತಿಪರ ಮೌಲ್ಯಗಳು ಶಿಕ್ಷಣ ಪದ್ಧತಿಯಲ್ಲಿ ಇರುವಂತೆ ಜಾಗರೂಕತೆ ವಹಿಸಬೇಕಿದೆ.

ವಿವಿಧ ಅಭಿಯಾನದ ಮೂಲಕ ಕೋಟ್ಯಾಂತರ ಹಣ ವ್ಯಯ ಮಾಡುತ್ತಿರುವ ರಾಜ್ಯ ಸರ್ಕಾರದ ಈ ಶಿಕ್ಷಣ ಕೇಸರೀಕರಣದ ವಿರುದ್ಧ ಎಸ್‌ಎಫ್‌ಐ ಸಂಘಟನೆ ಪ್ರಬಲ ಹೋರಾಟ ರೂಪಿ ಸುತ್ತಿದ್ದು, ಈ ಚಳುವಳಿ ಬಲಿಷ್ಠಗೊಳಿಸಲು ಶಿಕ್ಷಣ ಪ್ರೇಮಿಗಳು ಭಾಗವಹಿಸಿ ಧರ್ಮನಿರಪೇಕ್ಷ-ಜಾತ್ಯಾತೀತ-ಪಂಪರೆಯ ನಾಡನ್ನು ಉಳಿಸಿಕೊಳ್ಳಬೇಕಾಗಿದೆ. □

'ಕೈದಿಗಳ ಬಿಡುಗಡೆಯಲ್ಲಿ ರಾಜಕೀಯ ಬೇಡ'

(3ನೇ ಪುಟದಿಂದ)

ವಾಗಿಯೂ ಅಂತಹವನ ವಿರುದ್ಧ ಕಠಿಣ ಕಾನೂನು ಕ್ರಮ ಜರುಗಿಸಲಿ. ಆದರೆ ಕಾರಾಗೃಹದಲ್ಲಿರುವ ಬಂಧಿಗಳೆಲ್ಲರನ್ನೂ ಒಂದೇ ತಕ್ಕಡಿಯಲ್ಲಿರಿಸಿ ತೂಗುವುದು ಅಷ್ಟು ಸಮಂಜಸವಾದುದಲ್ಲ. ಈ ನಿಟ್ಟಿನಲ್ಲಿ ಪೊಲೀಸರು, ಕಾನೂನು ಸೇವಾ ಸಂಸ್ಥೆಗಳು ಪ್ರಾಮಾಣಿಕತೆಯಿಂದ ಆರೋಪಿಗಳ ಸಹಾಯಕ್ಕೆ ಮುಂದಾಗಬೇಕಿರುತ್ತದೆ. ಅಮಾಯಕರಾಗಿದ್ದಾಗ್ಯೂ ಅಪರಾಧಿಗಳೆಂಬ ಹಣೆಪಟ್ಟಿ ಹೊತ್ತು ಹಲವು ವರ್ಷಗಳನ್ನು ಕಾರಾಗೃಹದಲ್ಲಿಯೇ ಕಳೆಯುತ್ತಿರುವ ಬಂಧಿಗಳ ಬಿಡುಗಡೆಗಾಗಿ ಸಂಘ, ಸಂಸ್ಥೆಗಳು, ಜನಪರ ಕಾಳಜಿಯುಳ್ಳವರೆಲ್ಲರೂ ಸಹಾಯ ಮಾಡಬೇಕಿದೆ.

ಪ್ರಸ್ತುತದಲ್ಲಿ 594 ಜನರನ್ನು ಬಿಡುಗಡೆಗೊಳಿಸಲು ನಡೆಸಲಾಗಿರುವ ಸರ್ಕಾರದ ತಯಾರಿಗಳು ಅದೆಷ್ಟೋ ಅಮಾಯಕ ಮತ್ತು ಪರಿವರ್ತನೆಗೊಂಡಿರುವ ಸಜಾ ಬಂಧಿಗಳ ಹೋರಾಟದ ಫಲವಾಗಿದೆ. ಬದುಕುವ ಅನೇಕ ಭರವಸೆಗಳನ್ನು ಹೊತ್ತಿರುವ ಸಜಾ ಬಂಧಿಗಳಿಗೆ ಒಂದು ಅವಕಾಶವನ್ನು ನೀಡಲೇಬೇಕಿರುವುದು ರಾಜ್ಯಪಾಲರ ಮಾನವೀಯ ಧರ್ಮ. ಅದರೊಂದಿಗೆ ಸೂಕ್ತ ಕಾನೂನು ಕ್ರಮಗಳನ್ನು ಪಾಲಿಸಬೇಕಿದೆ. ಬಿಡುಗಡೆಗೊಳಿಸಲು ತೀರ್ಮಾನಿಸಿರುವ ಪ್ರತಿಯೊಬ್ಬ ವ್ಯಕ್ತಿಯ ಹಿನ್ನೆಲೆಯನ್ನು ಗಂಭೀರವಾಗಿ, ಅವಲೋಕಿಸಬೇಕು. ಏಕೆಂದರೆ ಕಠಿಣ ಸಜಾಕ್ಕೆ ಗುರಿಯಾಗಿ ಹಲವು ವರ್ಷಗಳನ್ನು ಕಳೆದಿರುವ ಬಂಧಿಗಳಲ್ಲಿ ಇತ್ತೀಚೆಗೆ ಮಹಿಳೆಯರನ್ನು ಅಮಾನುಷ ರೀತಿಯಲ್ಲಿ ಸರಣಿ ಹತ್ಯೆ ನಡೆಸಿ ಸಿಲುಕಿಕೊಂಡಿರುವ 'ಸೈನೈಡ್ ಶಿಕ್ಷಕ' ಮೋಹನ್ ಕುಮಾರ್‌ನಂತಹವನಿದ್ದು, ಇಂತಹವನೂ ಬಿಡುಗಡೆಯ ಅವಕಾಶವನ್ನು ದುರುಪಯೋಗ ಪಡಿಸಿಕೊಂಡು ಪುನಃ ಅಂತಹುದೇ ಕೃತ್ಯಗಳಿಗಿಳಿದರೆ ಸಾರ್ವಜನಿಕರಿಂದ ಆಕ್ಷೇಪಣೆಗಳು ಕೇಳಿಬರಬಹುದು. ಹಿಂದೊಮ್ಮೆ ಪಿರಿಯಾಪಟ್ಟಣದವರೊಬ್ಬರು ಬಿಡುಗಡೆಗೆ ವ್ಯತಿರಿಕ್ತವಾಗಿ ಮೇಲ್ಮನವಿ ಸಲ್ಲಿಸಿದ ಪರಿಣಾಮ ಕಳೆದ 3 ವರ್ಷಗಳಿಂದ ರಾಜ್ಯದಾದ್ಯಂತ ಯಾವ ಬಂಧಿಗಳನ್ನೂ ಬಿಡುಗಡೆ ಗೊಳಿಸಿರುವುದಿಲ್ಲ ಪರಿಣಾಮವಾಗಿ 8–9 ವರ್ಷ ಕಳೆದಿರುವ ಮಹಿಳಾ ಬಂಧಿಗಳು, 10–12 ವರ್ಷಗಳನ್ನು ಕಳೆದಿರುವ ಪುರುಷ ಬಂಧಿಗಳ ಜೀವನವೇ ಕಮರಿ ಹೋಗುತ್ತಿದೆ.

> **ಅಮಾಯಕ ಅಥವಾ ಪರಿವರ್ತನೆ ಗೊಂಡಿರುವ ಬಂಧಿಗಳ ಬಿಡುಗಡೆಗಾಗಿ ಸರ್ವಪಕ್ಷಗಳೂ ಮಾನವೀಯತೆಯನ್ನು ದೃಷ್ಟಿಯಲ್ಲಿರಿಸಿ ಕಾರ್ಯ ನಿರ್ವಹಿಸಬೇಕಿದೆಯೇ ವಿನಹ ಪಕ್ಷಗಳ ಕ್ರೆಡಿಟ್ ಎಂಬ ರಾಜಕೀಯವನ್ನು ಬೆರಸುವಂತಾಗಬಾರದು.**

ಪ್ರಸ್ತುತ ಸರ್ಕಾರದ ಸರ್ವಾನುಮತದ ತೀರ್ಮಾನಕ್ಕೆ ರಾಜ್ಯಪಾಲರು ಅನುಮತಿ ನೀಡಿದರೆ ಅಮಾಯಕ ಹಾಗೂ ಪರಿವರ್ತನೆ ಗೊಂಡಿರುವ ಬಂಧಿಗಳೆಲ್ಲರೂ ಬದುಕುವ ಆಸೆಯನ್ನುಳಿಸಿಕೊಂಡು, ಸಮಾಜದ ಉತ್ತಮ ವ್ಯಕ್ತಿಗಳಾಗಿ ರೂಪುಗೊಳ್ಳಲ್ಲೊಂದು ದಾರಿ ಮಾಡಿಕೊಟ್ಟಂತಾಗುತ್ತದೆ. ಏಕೆಂದರೆ ಮಹಿಳಾ ಬಂಧಿಗಳಾಗಲೀ, ಪುರುಷಬಂಧಿಗಳಾಗಲೀ ಪರಿವರ್ತನೆಯಾಗಿರುತ್ತಾರೆಂಬುದಕ್ಕೆ ಸಾಕ್ಷಿ ಇವರುಗಳ್ಯಾರೂ ಕಾರಾಗೃಹದಲ್ಲಿ ಸೋಮಾರಿಗಳಾಗಿ ಕುಳಿತಿರುವವರಲ್ಲ. ಎಂಬ್ರಾಯಿಡರಿ, ಟೈಲರಿಂಗ್, ಊದುಬತ್ತಿ ಹೊಸೆಯುವ ಕೆಲಸ, ಮರಗೆಲಸ, ಗಾರೆಕೆಲಸ, ಎಲೆಕ್ಟ್ರಿಕಲ್ ಕೆಲಸ, ಸ್ವಚ್ಛತಾ ಕೆಲಸ, ಮೆಡಿಕಲ್ ಡಿಪಾರ್ಟ್‌ಮೆಂಟ್, ಅಡುಗೆ ಕೆಲಸ, ಸೋಪು, ಸೀಮೆಸುಣ್ಣ, ಮೇಣದ ಬತ್ತಿ ತಯಾರಿಕಾ ಕೆಲಸ,.... ಹೀಗೆ ಹತ್ತು ಹಲವು ಕೆಲಸಗಳಲ್ಲಿ ತೊಡಗಿಸಿಕೊಳ್ಳುತ್ತಾ ತರಬೇತುಗೊಂಡಿರುವವರಾಗಿದ್ದಾರೆ.

ಇಂತಹವರು ಬಿಡುಗಡೆಗೊಂಡರೆ ತಮ್ಮ ಸ್ವಂತ ಕಾಲ ಮೇಲೆ ತಾವು ನಿಲ್ಲಲು ಸಾಧ್ಯತೆಗಳಿವೆ. ಮಾನ್ಯ ರಾಜ್ಯಪಾಲರು, ಸರ್ಕಾರದವರುಗಳು ಇಂತಹವರ ಬಗ್ಗೆ ಕೃಪೆ ತೋರಬೇಕಿದೆ. ಸಾಮಾನ್ಯವಾಗಿ ಕಾರಾಗೃಹಗಳ ಬಂಧಿಗಳ ಬಗ್ಗೆ ಪತ್ರಿಕೆಗಳಲ್ಲಿ ಸಹಾನುಭೂತಿಯಿಂದ ಬರೆಯಲಾಗುತ್ತಿಲ್ಲ ನಡೆಯುವ ಅನ್ಯಾಯಗಳ ಬಗ್ಗೆ, ಬಂಧಿತರ ಹಕ್ಕುಗಳ ಬಗ್ಗೆ ಕಾನೂನು ಸಂಸ್ಥೆಗಳಾಗಲೀ, ಖಾಸಗಿ ಸಂಘ ಸಂಸ್ಥೆಯವರುಗಳಾಗಲೀ ಯಾವ ಮಾತನ್ನೂ ಆಡುತ್ತಿಲ್ಲ. ಮಾಧ್ಯಮಗಳಲ್ಲಿಂದು ಅಪರಾಧ ಕೃತ್ಯಗಳನ್ನು ವೈಭವೀಕರಣಗೊಳಿಸಿ ತೋರಿಸಲಾಗುತ್ತಿರುವುದಕ್ಕೆ ಮೊದಲು ನಿಯಂತ್ರಣವನ್ನು ಹೇರುವ ಬಗ್ಗೆ ಸಾಮಾಜಿಕ ಕಳಕಳಿಯುಳ್ಳವರೆಲ್ಲರೂ ಆಲೋಚಿಸಬೇಕಿದೆ. ಈ ಮೂಲಕ ಮಾತ್ರವೇ ಅಪರಾಧ ಕೃತ್ಯಗಳನ್ನು ತಡೆಗಟ್ಟಲು ಸಾಧ್ಯವಿದೆ.

ರಾಜ್ಯದಾದ್ಯಂತ ಕಾರಾಗೃಹಗಳಲ್ಲಿನ ಬಂಧಿಗಳ ಉಪವಾಸ ಸತ್ಯಾಗ್ರಹಗಳಿಂದಾಗಿ ರಾಜ್ಯಸರ್ಕಾರವು ಹಲವು ವರ್ಷಗಳಿಂದ ಕಾರಾಗೃಹ ಶಿಕ್ಷೆಯನ್ನನುಭವಿಸುತ್ತಿರುವ ಬಂಧಿಗಳ ನಿಡುಗಡೆಗೆ ಸರ್ವಪಕ್ಷಗಳ ಒಪ್ಪಿಗೆಯನ್ನು ಪಡೆದು ಸರ್ವಾನುಮತದ ತೀರ್ಮಾನವನ್ನು ರಾಜ್ಯಪಾಲರಿಗೆ ರವಾನಿಸಿದೆ. ಇದರಲ್ಲಿಯೂ ಯಾವುದೇ ರಾಜಕೀಯಗಳು ನಡೆಯುವಂತಾಗಬಾರದು. ಏಕೆಂದರೆ ತೀರ್ಮಾನ ರಾಜ್ಯ ಸರ್ಕಾರದ್ದಾಗಿದ್ದು ಅನುಮತಿ ನೀಡಬೇಕಿರುವುದು ಕೇಂದ್ರ ಸರ್ಕಾರದಿಂದ ನೇಮಕಗೊಂಡಿರುವ ನಮ್ಮ ರಾಜ್ಯದ ರಾಜ್ಯಪಾಲರು. ಪ್ರಸ್ತುತ ತೀರ್ಮಾನಕ್ಕೆ ರಾಜ್ಯಪಾಲರು ತಮ್ಮ ಸಹಿ ಹಾಕಿ ಅನುಮತಿ ನೀಡಿಬಿಟ್ಟರೆ ಬಂಧಿಗಳನ್ನು ಬಿಡುಗಡೆಗೊಳಿಸಿದ ಕ್ರೆಡಿಟ್ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳೆರೆಡಕ್ಕೂ ದೊರಕುತ್ತದೆ. ಆದ್ದರಿಂದ ಅಮಾಯಕ ಅಥವಾ ಪರಿವರ್ತನೆಗೊಂಡಿರುವ ಬಂಧಿಗಳ ಬಿಡುಗಡೆಗಾಗಿ ಸರ್ವಪಕ್ಷಗಳೂ ಮಾನವೀಯತೆಯನ್ನು ದೃಷ್ಟಿಯಲ್ಲಿರಿಸಿ ಕಾರ್ಯ ನಿರ್ವಹಿಸಬೇಕಿದೆಯೇ ವಿನಹ ಪಕ್ಷಗಳ ಕ್ರೆಡಿಟ್ ಎಂಬ ರಾಜಕೀಯವನ್ನು ಬೆರಸುವಂತಾಗಬಾರದು. ಪತ್ರಿಕೆಗಳೂ, ಸಂಘ ಸಂಸ್ಥೆಗಳೂ ಈ ನಿಟ್ಟಿನಲ್ಲಿ ಒತ್ತಡವನ್ನುಂಟು ಮಾಡುವಲ್ಲಿ ಶ್ರಮಿಸಬೇಕಾಗಿ ವಿನಂತಿ.

ವಂದನೆಗಳೊಂದಿಗೆ,

ಸಜಾ ಬಂಧಿಗಳಲ್ಲಿ ಸಹಾನೂಭೂತಿಯನ್ನು ಹೊಂದಿರುವ ಸಾಮಾಜಿಕ ಕಳಕಳಿಯುಳ್ಳ ವಿಚಾರಣಾ ಬಂಧಿ

ಪ್ರಶ್ನೆ



ಪಟಾಕಿ
ಕುಂಡದಲ್ಲಿ ಸಿಡಿದ
ಹೂವುಗಳಿಗೆ

ಹೊಳಪು–ವೈಯಾರ
ಗಳಿರುತ್ತವೆ!

ಮಕರಂದ–ಸಂವೇದನೆ
ಇರುವುದಿಲ್ಲ

ಹಸಿದ
ಒಡಲಿಂದ ಸಿಡಿದ
ಅಕ್ರೋಷಗಳಿಗೆ

ಶತಮಾನದ
ಶೋಷಣೆ–ಅಪಮಾನ
ಗಳಿರುತ್ತವೆ

ದ್ವೇಷ–ಅಸೂಯೇ
ಗಳಿರುವುದಿಲ್ಲ.

○ ಲಕ್ಷ್ಮಣ್

ಜಾಗತಿಕ ಆರ್ಥಿಕ ಹಿಂಜರಿತದಿಂದ ಜನರ ಆದಾಯಗಳು ಕಡಿಮೆಯಾಗಿವೆ. ನಿರುದ್ಯೋಗ ಜಾಸ್ತಿಯಾಗಿದೆ. ಆಹಾರ ಪದಾರ್ಥಗಳ ಬೆಲೆಗಳು ಗಗನಕ್ಕೇರಿವೆ. ಈ ಎಲ್ಲ ನೇತ್ಯಾತ್ಮಕ ಬೆಳವಣಿಗೆಗಳಿಂದ ಹಸಿವಿನ ಕರಾಳತೆ ಉಲ್ಬಣಿಸಿದೆ. ಇದರಿಂದ ಜಾಗತಿಕ ಶಾಂತಿಗೆ ಮತ್ತು ಸುಭದ್ರತೆಗೆ ಒದಗಿದೆ ಸಂಚಕಾರ. ಆದುದರಿಂದ, ಮಿಲಿನಿಯಂ ಅಭಿವೃದ್ಧಿ ಗುರಿಗಳಿಂದ ಹಸಿವಿನ ಸಮಸ್ಯೆ ಸುಮಾರು ಅರ್ಧದಷ್ಟು ಇಳಿಮುಖವಾಗಿದೆ ಎಂಬ G-8 ರಾಷ್ಟ್ರಗಳ ನಿಲುವು ಪ್ರಶ್ನಾರ್ಹವಾದದ್ದು. ಕಳೆದ ವರ್ಷ ಅಕ್ಕಿ, ಗೋಧಿ ಮುಂತಾದ ಆಹಾರ ಪದಾರ್ಥಗಳ ಬೆಲೆಗಳು ತೀವ್ರವಾಗಿ ಏರಿದ್ದರಿಂದ ಕೆಲವು ಅಭಿವೃದ್ಧಿಶೀಲ ದೇಶಗಳಲ್ಲಿ "ಆಹಾರ ದಂಗೆಗಳು" ತಲೆದೋರಿದವು. ಈ ವರ್ಷ ಪರಿಸ್ಥಿತಿ ಸ್ವಲ್ಪ ಸುಧಾರಿಸಿದ್ದರೂ, ಹಸಿವು ಅನೇಕ ಮಿಲಿಯ ಮಂದಿಯನ್ನು ಕಾಡುತ್ತಿದೆ.

ಮ. ಶ್ರೀ. ಮುರಳಿ ಕೃಷ್ಣ

ಪ್ರತಿ ದಿನ ಪ್ರಪಂಚದಾದ್ಯಂತ ಸುಮಾರು 1.02 ಬಿಲಿಯನ್ ಜನರು ಹೊಟ್ಟೆಗಿಲ್ಲದೆ ನಿದ್ರಾದೇವಿಯ ಮಡಿಲಿಗೆ ಜಾರುತ್ತಿದ್ದಾರೆ. ಕಳೆದ ವರ್ಷ ಅಂತಹವರ ಸಂಖ್ಯೆ 915 ಮಿಲಿಯನ್‌ನಷ್ಟಿತ್ತು. ಈ ವರ್ಷ ಇದು ಶೇ. 11ರಷ್ಟು ವೃದ್ಧಿಸಿದೆ. ಏಷಿಯ ಮತ್ತು ಪೆಸಿಫಿಕ್ ಪ್ರದೇಶಗಳು ಜಗತ್ತಿನಲ್ಲೇ ಅತ್ಯಂತ ಹೆಚ್ಚಿನ ಜನಸಂಖ್ಯೆಯನ್ನು ಹೊಂದಿವೆ. ಇಲ್ಲಿ ಹಸಿವಿನಿಂದ ಕಂಗಾಲಾಗಿರುವ ಸುಮಾರು 642 ಮಿಲಿಯ ಮಂದಿ ವಾಸಿಸುತ್ತಿದ್ದಾರೆ. 2008–09 ಸಾಲಿನ ಅಂದಾಜುಗಳ(Estivates) ಅನ್ವಯ ನಮ್ಮ ರಾಷ್ಟ್ರದಲ್ಲಿ ಆಹಾರಧಾನ್ಯಗಳ ಉತ್ಪಾದನೆ 233.87 ಮಿಲಿಯ ಟನ್‌ಗಳಷ್ಟಾಗಿವೆ. ಆದರೂ ನಮ್ಮಲ್ಲಿರುವ ಹಸಿವಿನಿಂದ ಬಾಧಿತರಾಗಿರುವ ಮಂದಿಯ ಸಂಖ್ಯೆ ಸುಮಾರು 214 ಮಿಲಿಯನ್.

ಜಾಗತಿಕ ಆರ್ಥಿಕ ಹಿಂಜರಿತದಿಂದ ಜನರ ಆದಾಯಗಳು ಕಡಿಮೆಯಾಗಿವೆ. ನಿರುದ್ಯೋಗ ಜಾಸ್ತಿಯಾಗಿದೆ. ಆಹಾರ ಪದಾರ್ಥಗಳ ಬೆಲೆಗಳು ಗಗನಕ್ಕೇರಿವೆ. ಈ ಎಲ್ಲ ನೇತ್ಯಾತ್ಮಕ ಬೆಳವಣಿಗೆಗಳಿಂದ ಹಸಿವಿನ ಕರಾಳತೆ ಉಲ್ಬಣಿಸಿದೆ. ಇದರಿಂದ ಜಾಗತಿಕ ಶಾಂತಿಗೆ ಮತ್ತು ಸುಭದ್ರತೆಗೆ ಒದಗಿದೆ ಸಂಚಕಾರ. ಆದುದರಿಂದ, ಮಿಲಿನಿಯಂ ಅಭಿವೃದ್ಧಿ ಗುರಿಗಳಿಂದ ಹಸಿವಿನ ಸಮಸ್ಯೆ ಸುಮಾರು ಅರ್ಧದಷ್ಟು ಇಳಿಮುಖವಾಗಿದೆ ಎಂಬ G–8 ರಾಷ್ಟ್ರಗಳ ನಿಲುವು ಪ್ರಶ್ನಾರ್ಹವಾದದ್ದು.

ಕಳೆದ ವರ್ಷ (2008) ಅಕ್ಕಿ, ಗೋಧಿ ಮುಂತಾದ ಆಹಾರ ಪದಾರ್ಥಗಳ ಬೆಲೆಗಳು ತೀವ್ರವಾಗಿ ಏರಿದ್ದರಿಂದ ಕೆಲವು ಅಭಿವೃದ್ಧಿಶೀಲ ದೇಶಗಳಲ್ಲಿ "ಆಹಾರ ದಂಗೆಗಳು" ತಲೆದೋರಿದವು. ಈ ವರ್ಷ ಪರಿಸ್ಥಿತಿ ಸ್ವಲ್ಪ ಸುಧಾರಿಸಿದ್ದರೂ, ಹಸಿವು ಅನೇಕ ಮಿಲಿಯ ಮಂದಿಯನ್ನು ಕಾಡುತ್ತಿದೆ. 2006ರ ದರಗಳಿಗೆ ಹೋಲಿಸಿದಾಗ, ಕಳೆದ ವರ್ಷದ ಕೊನೆಯಲ್ಲಿ ವರದಿಯಾದ ಬೆಲೆಗಳು ಶೇ.24 ರಷ್ಟು ಹೆಚ್ಚಿತ್ತು.

ಜಾಗತಿಕ ಮಟ್ಟದ ಆಹಾರ ಮತ್ತು ಕೃಷಿ, ಸಂಸ್ಥೆಯ ಇತ್ತೀಚಿನ ವರದಿಯಲ್ಲಿ ಕಳೆದ ವರ್ಷಕ್ಕಿಂತ 100ಮಿಲಿಯ ಹೆಚ್ಚಿನ ಜನರು ಹಸಿವಿನ ಹಾಹಾಕಾರಗಳಿಗೆ ತುತ್ತಾಗಿದ್ದಾರೆ, ಎಂಬುದು ಬಹಿರಂಗಗೊಂಡಿರುವ ಒಂದು ಆತಂಕಕಾರಿ ಅಂಶ. ಅಂದರೆ, ಅವರೆಲ್ಲ ಪ್ರತಿ ದಿನ ಸೇವಿಸುತ್ತಿರುವುದು 1800 ಕ್ಯಾಲೋರಿಗಿಂತಲೂ ಕಡಿಮೆ ಆಹಾರ ಎಂದರ್ಥ. ಈ ಸ್ತರದ ಮಂದಿ ಹೆಚ್ಚಾಗಿ ಕಂಡುಬರುವುದು ಬಡ ಮತ್ತು ಅಭಿವೃದ್ಧಿ ಶೀಲ ದೇಶಗಳಲ್ಲಿ. ಶ್ರೀಮಂತ ರಾಷ್ಟ್ರಗಳಿಗೆ ಹೋಲಿಸಿದರೆ, ಈ ದೇಶಗಳಲ್ಲಿ ಆಹಾರ ಪದಾರ್ಥಗಳ ಬೆಲೆಗಳು ಕಡಿಮೆ ಗತಿಯಲ್ಲಿ ಇಳಿದಿವೆ. ಆದುದರಿಂದ ಇಂತಹ ದೇಶಗಳಿಗೆ ಹೆಚ್ಚಿನ ಕೃಷಿ ಹೂಡಿಕೆ ಮತ್ತು ಆರ್ಥಿಕ ಸಹಾಯ ಅವಶ್ಯಕ. ಆದರೆ ಅಂತಾರಾಷ್ಟ್ರೀಯ ವಿತ್ತ ನಿಧಿ (ಐಎಂಎಫ್), ವಿಶ್ವಬ್ಯಾಂಕ್ ಮತ್ತು ವಿಶ್ವ ವ್ಯಾಪಾರ ಸಂಸ್ಥೆಗಳು ಹಾಕುತ್ತ ಬಂದಿರುವ ನಿಬಂಧನೆಗಳು ಬಡ ಮತ್ತು ಅಭಿವೃದ್ಧಿಶೀಲ ದೇಶಗಳಿಗೆ ಗಂಡಾಂತರಕಾರಿಯಾಗಿದೆ. ಏಕೆಂದರೆ ಅವು ಆ ದೇಶಗಳ ಸರ್ಕಾರಗಳು ಕೃಷಿ ಕ್ಷೇತ್ರದ ಮೇಲಿನ ಹೂಡಿಕೆಯನ್ನು ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ನೀಡುವ ಸಾಲಗಳನ್ನು ಮತ್ತು ಸಹಾಯ ಧನವನ್ನು ಕಡಿತಗೊಳಿಸಬೇಕೆಂದು ತೀವ್ರ ಒತ್ತಡಗಳನ್ನು ಹೇರುತ್ತಿವೆ.

ಅಭಿವೃದ್ಧಿಶೀಲ ರಾಷ್ಟ್ರವಾದ ಭಾರತವೂ ಈ ಅಂತಾರಾಷ್ಟ್ರೀಯ ಸಂಸ್ಥೆಗಳು ವಿಧಿಸುತ್ತ ಬಂದಿರುವ ಷರತ್ತುಗಳಿಂದ ತತ್ತರಿಸಿದೆ. ಜಾಗತಿಕ ಹಸಿವಿನ ಸೂಚ್ಯಾಂಕದ(Global Hunger Index) ಪ್ರಕಾರ 118 ದೇಶಗಳ ಪೈಕಿ ಭಾರತದ ಸ್ಥಾನ 94. ಡಾ॥ ಅರ್ಜುನ್ ಸೇನ್ ಗುಪ್ತಾ ವರದಿಯ ಅನ್ವಯ ನಮ್ಮ ರಾಷ್ಟ್ರದಲ್ಲಿ ದಿನವೊಂದಕ್ಕೆ ರೂ.20 ವರಮಾನಗಳಿಸುತ್ತಿರುವ ಮಂದಿ ಜನಸಂಖ್ಯೆಯ ಶೆ.77 ರಷ್ಟಿದ್ದಾರೆ. ಪುರುಷರಿಗಿಂತ ಹಸಿವಿನಿಂದ ಬಾಧಿತರಾಗಿರುವುದು ಮಹಿಳೆಯರು ಮತ್ತು ಮಕ್ಕಳು ಹೆಚ್ಚು ಎಂದು ಅನೇಕ ವರದಿಗಳು ತಿಳಿಸಿವೆ. ನಮ್ಮ ರಾಷ್ಟ್ರದಲ್ಲಿ 57 ಮಿಲಿಯ ಮಕ್ಕಳು ಕಡಿಮೆ ತೂಕದಿಂದ ನರಳುತ್ತಿದ್ದಾರೆ. ಆಹಾರ ಪದಾರ್ಥಗಳ ಉತ್ಪಾದನೆಯಲ್ಲಿ ಹೆಚ್ಚುವರಿ ಕಂಡುಬಂದರೂ ಈ ಪರಿಯ ಪರಿಸ್ಥಿತಿ ಇರುವುದು ಚಿಂತನಾರ್ಹ ವಿಷಯವೇ ಸರಿ. ಬೆಂಕಿಗೆ ತುಪ್ಪ ಸುರಿದಂತೆ, ಸರ್ಕಾರ ಉತ್ಪಾದಕರಿಂದ ಆಹಾರ ಪದಾರ್ಥಗಳನ್ನು ಖರೀದಿಸುವುದರ ಬದಲು ಗೋಧಿ, ಅಕ್ಕಿ ಮತ್ತು ಧಾನ್ಯಗಳನ್ನು ಅಂತಾರಾಷ್ಟ್ರೀಯ ಮಾರುಕಟ್ಟೆಗಳಿಂದ ದುಪ್ಪಟ್ಟು–ಮಾರುಪಟ್ಟು ಮಾರುಕಟ್ಟೆ ದರಗಳಲ್ಲಿ ಖರೀದಿಸಿರುವುದು ಟೀಕೆಗೆ ಒಳಗಾಗಿರುವ ಒಂದು ಕ್ರಮ.

ಇತ್ತೀಚೆಗೆ ಕೇಂದ್ರ ಸರ್ಕಾರದ ಬೇಜವಾಬ್ದಾರಿತನದಿಂದ ಸುಮಾರು 15 ಲಕ್ಷ ಟನ್‌ಗಳಷ್ಟು ಅಮದು ಮಾಡಿದ ದ್ವಿದಳ ಧಾನ್ಯಗಳು ನಮ್ಮ ಬಂದರುಗಳಲ್ಲಿ ಕೊಳೆಯುತ್ತಿರುವುದು ಮಾಧ್ಯಮಗಳಲ್ಲಿ ವರದಿಯಾಗಿದೆ. ಇದರಿಂದ MMTC, NAFED, PEC ಮತ್ತು STC ಯಂಥ ಸರ್ಕಾರಿ ಸಂಸ್ಥೆಗಳಿಗೆ ತಲಾ ರೂ. 700 ಕೋಟಿ ನಷ್ಟವಾಗಿದೆ. ಕಳೆದ ಎರಡು ವರ್ಷಗಳಲ್ಲಿ ಸ್ಥಳೀಯ ಮಾರುಕಟ್ಟೆ ದರಗಳಿಗಿಂತ ಹೆಚ್ಚಿನ ದರದಲ್ಲಿ ಅಂತರಾಷ್ಟ್ರಿಯ ಮಾರುಕಟ್ಟೆಗಳಿಂದ ಸುಮಾರು 4 ಮಿಲಿಯನ್ ಟನ್‌ಗಳಷ್ಟು ದ್ವಿದಳ ಧಾನ್ಯಗಳನ್ನು ಆಮದು ಮಾಡಿಕೊಳ್ಳಲಾಯಿತು. ಆದರೆ ರಾಜ್ಯ ಸರ್ಕಾರಗಳು ಈ ಧಾನ್ಯಗಳನ್ನು ಖರೀದಿಸಲು ಹಿಂದೇಟು ಹೊಡೆದವು. ಕಾರಣ ಅವುಗಳ ಹೆಚ್ಚಿನ ಬೆಲೆಗಳು!

ಸಂಸತ್ತಿನ ಕಳೆದ ಅಧಿವೇಶನದಲ್ಲಿ ಅಕ್ಕಿ ಹಗರಣದ ಬಗೆಗೆ ಕೋಲಾಹಲ ಉಂಟಾಯಿತು. ಆಫ್ರಿಕಾಕ್ಕೆ ಸುಮಾರು 1,17,000 ಟನ್‌ಗಳ ಅಕ್ಕಿ ರವಾನೆ ಮತ್ತು 21 ದೇಶಗಳಿಗೆ ಅಕ್ಕಿ ಮತ್ತು ಗೋಧಿಯನ್ನು ಮಾರಿದ್ದು ನಿಂದನೆಗೆ ಒಳಗಾಯಿತು.

ಏರುತ್ತಿರುವ ಆಹಾರ ಪದಾರ್ಥಗಳ ಬೆಲೆಗಳು ಹಾಗೂ ಆಹಾರ ಅಭದ್ರತೆ ಜಗತ್ತಿನಾದ್ಯಂತ ಕಾಡುತ್ತಿರುವ ಜ್ವಲಂತ ಸಮಸ್ಯೆಗಳಾಗಿವೆ. ಏರುಪೇರು

ಹಸಿವು–ಬಡತನ–ಆಹಾರ ಸುಭದ್ರತೆಯ ಸುತ್ತಮುತ್ತ

ಆರ್ಥಿಕ ಅಭಿವೃದ್ಧಿಯಿಂದ ಸೃಷ್ಟಿಯಾಗಿ ರುವ ಸಂಪತ್ತಿನ ಅಸಮ ಹಂಚಿಕೆ ಈ ವಿಷಮ ಪರಿಸ್ಥಿಯ ಪ್ರಧಾನ ಪ್ರತಿಫಲ ಹಾಗೆಯೇ ಜಾಗತಿಕ ಸ್ಪರ್ಧೆ ಮತ್ತು ನಿಟ್ಟಾ ವ್ಯಾಪಾರದ ಜೊತೆ ತಳುಕು ಹಾಕಿಕೊಂಡಿರುವ, ಅಧಿಕ ಪ್ರಮಾಣದ ರಫ್ತಿಗೆ ಒತ್ತು ನೀಡುತ್ತಿರುವ ಕೃಷಿ ನೀತಿಗಳನ್ನು ಆಧಾರಿಸಿರುವ ಕೈಗಾರಿಕಾ ಅಭಿವೃದ್ಧಿ ಮಾದರಿಯೂ ಒಂದು ಮುಖ್ಯ ಕಾರಣವಾಗಿರುವುದು ಗಮನಾರ್ಹ ಸಂಗತಿ.

ಆಹಾರ ಸುಭದ್ರತೆಗೆ ಹಲವು ಆಯಾಮಗಳಿವೆ. ಒಳ್ಳೆಯ ಕುಡಿಯುವ ನೀರು, ನೈರ್ಮಲ್ಯ, ಪ್ರಾಥಮಿಕ ಆರೋಗ್ಯ ರಕ್ಷಣೆ, ಶಿಕ್ಷಣ ಇತ್ಯಾದಿಗಳನ್ನು ಒಳಗೊಂಡಿರುವ ಸಮತೂಕದ ಆಹಾರ ಪ್ರತಿಯೊಬ್ಬ ವ್ಯಕ್ತಿಗೂ ದೊರೆತು, ಅವನು(ಳು) ಆರೋಗ್ಯದಾಯಕ ಮತ್ತು ಫಲದಾಯಕ ಜೀವನವನ್ನು ನಡೆಸುವಂತಾದರೆ ಆಗ ಆಹಾರ ಸುಭದ್ರತೆ ನೆಲೆಸಿದೆ ಎನ್ನಬಹುದು.

ನಮ್ಮ ರಾಷ್ಟ್ರ ಎದುರಿಸುತ್ತಿರುವ ಭೀಕರ ಪರಿಸ್ಥಿತಿ ಕುಂಭಕರ್ಣನ ನಿದ್ರೆಯ ಸರ್ಕಾರವನ್ನು ಎಚ್ಚರಗೊಳಿಸಿದೆ. ಪ್ರಸ್ತುತ ಅದು ಆತುರಾತುರವಾಗಿ ರಾಷ್ಟ್ರೀಯ ಆಹಾರ ಸುಭದ್ರತಾ ಕಾಯಿದೆಯನ್ನು ಜಾರಿಮಾಡಲು ಮುಂದಾಗಿದೆ. ಇದರಡಿ, ಸರ್ಕಾರ ಪ್ರತಿ ಒಂದು ಬಡತನ ರೇಖೆಗಿಂತ ಕೆಳಗಿರುವ (BPL) ಕುಟುಂಬಕ್ಕೆ ತಿಂಗಳಿಗೆ 25 ಕೆ.ಜಿ ಅಕ್ಕಿ ಅಥವಾ ಗೋಧಿಯನ್ನು ಕೇಜಿಯೊಂದಕ್ಕೆ ರೂ.3/-ರ ದರದಲ್ಲಿ ನೀಡಲು ಯೋಚಿಸಿದೆ. ಈ ಪ್ರಮಾಣ ಐದು ಸದಸ್ಯರಿರುವ ಒಂದು ಬಿಪಿಎಲ್ ಕುಟುಂಬಕ್ಕೆ ಸಾಕಾಗುತ್ತದೆಯೇ? ಎಂಬುದು ಯೋಚನಾರ್ಹ ಪ್ರಶ್ನೆ. ಏಕೆಂದರೆ, ಒಂದು ಊಟಕ್ಕೆ ಒಂದು ಕೆಜಿ ಅಕ್ಕಿ ಅಥವಾ ಗೋಧಿ ಬಳಸಿದರೆ, ಸುಮರು 25 ದಿನಗಳಿಗೆ ಮಾತ್ರ ಇದು ಪೂರೈಸಬಲ್ಲದು. ಉಳಿದ 5-6 ದಿನಗಳು, ಆ ಕುಟುಂಬ ಹಸಿವಿನಿಂದ ನರಳಬೇಕಾಗುತ್ತದೆ. ಈ ಕಾರ್ಯಕ್ರಮದಡಿ, ಇಂಥಾ ಒಂದು ಕುಟುಂಬಕ್ಕೆ ಎರಡು ಹೊತ್ತಿನ –ಕೂಳು ದೊರೆಯುವುದಿಲ್ಲ.

ಈಗ ಅಂತ್ಯೋದಯ ಯೋಜನೆಯಲ್ಲಿ ಸರ್ಕಾರ 89.5 ಮಿಲಿಯ ಬಿಪಿಎಲ್ ಕುಟುಂಬಗಳಿಗೆ ತಿಂಗಳಿಗೆ 35ಕೆಜಿ ಆಹಾರ ಪದಾರ್ಥಗಳನ್ನು ನೀಡುತ್ತಿದೆ. ಇತ್ತೀಚೆಗೆ ರಾಜ್ಯಗಳ ಪ್ರತಿನಿಧಿಗಳು ಕೇಂದ್ರ ಆಹಾರ ಕಾರ್ಯದರ್ಶಿಯವರೊಡನೆ ಒಂದು ಸಭೆ ನಡೆಸಿದರು ಅದರಲ್ಲಿ ಸುಮಾರು 2.5ಕೋಟಿ ಅಂತ್ಯೋದಯ ಅನ್ನ ಯೋಜನೆಯ ಫಲಾನುಭವಿಗಳನ್ನು ಒಳಗೊಂಡು ಸುಮಾರು 11 ಕೋಟಿ ಬಿಪಿಎಲ್ ಕಾರ್ಡುದಾರರಿಗೆ ಈ ನೂತನ ಯೋಜನೆ ಆಹಾರ ಪದಾರ್ಥಗಳನ್ನು ನೀಡಬೇಕಾಗಬಹುದೆಂದು ಅಂದಾಜಿಸಲಾಯಿತು. ಈ ಯೋಜನೆಯು ಶಾಸನಾಬದ್ಧವಾಗಿರುವುದರಿಂದ, ಕೇಂದ್ರ ಸರ್ಕಾರ ನಿಗದಿತ ಮಟ್ಟದಲ್ಲಿ ಆಹಾರ ಪದಾರ್ಥಗಳನ್ನು ಸರಬರಾಜು ಮಾಡಬೇಕಾಗುತ್ತದೆ ಹಾಗೂ ರಾಜ್ಯ ಸರ್ಕಾರಗಳು ಅದನ್ನು ಫಲಾನುಭವಿಗಳಿಗೆ ತಲುಪಿಸಬೇಕಾಗಿರುತ್ತದೆ. ಇದಕ್ಕಾಗಿ ಸರ್ಕಾರ ದೋಷರಹಿತ ಸರಬರಾಜು ವ್ಯವಸ್ಥೆಯನ್ನು ರೂಪಿಸಬೇಕಾಗಿರುವುದು ಅನಿವಾರ್ಯ.

ಸಾರ್ವಜನಿಕ ಪಡಿತರ ವ್ಯವಸ್ಥೆಯ ಕುಂದು ಕೊರತೆಗಳನ್ನು ಶಮನಗೊಳಿಸುವ ದಿಶೆಯಲ್ಲಿ ಸೂಕ್ತ ಕ್ರಮಗಳನ್ನು ಜಾರಿ ಮಾಡುವ ನಿಟ್ಟಿನಲ್ಲಿ ಕೆಲವು ಅಂಶಗಳನ್ನು ಆಹಾರ ಸುಭದ್ರತೆಯ ಬಿಲ್‌ನಲ್ಲಿ ಸೇರ್ಪಡೆಗೊಳಿಸಬೇಕು. ಶೇಖರಣೆಯ (Procurement) ವ್ಯವಸ್ಥೆಯಲ್ಲೂ ಸುಧಾರಣೆಗಳಾಗಬೇಕು. ಇವುಗಳಿಂದ ಸಣ್ಣ ಹಾಗೂ ಅತಿ ಸಣ್ಣ ರೈತರ ಹಿತಾಸಕ್ತಿಗಳು ಕಾಪಾಡುವಂತಾಗಬೇಕು. ಹೀಗಾದಾಗ ಮಾತ್ರ, ರೈತರ ಆತ್ಮಹತ್ಯೆಗಳು ಕಡಿಮೆಯಾಗಬಹುದು. ನಮ್ಮ ರಾಷ್ಟ್ರದ ಆಹಾರ ದಾಸ್ತಾನಿನ ಪ್ರಮಾಣದಲ್ಲಿ ಗಣನೀಯ ವೃದ್ಧಿ ಸಂಭವಿಸಲು ಸರ್ಕಾರ ಕೃಷಿ ಕ್ಷೇತ್ರದ ಉತ್ಪಾದಕತೆಯನ್ನು ಹೆಚ್ಚಿಸುವ ದಿಶೆಯಲ್ಲಿ ಸಮರ್ಪಕವಾದ ಕ್ರಮಗಳನ್ನು ಜಾರಿಗೊಳಿಸಬೇಕು.

ಪ್ರಸ್ತುತ ಭಾರತೀಯ ಆಹಾರ ನಿಗಮದ ದಾಸ್ತಾನಿನ ಸಾಮರ್ಥ್ಯ ಸಾಲದು. ಒಂದು ಅಂದಾಜಿನ ಪ್ರಕಾರ ಈಅಖ ಕೆಲವು ಗೋಡೌನ್‌ಗಳ ಶೇಖರಣಾ ಸಾಮರ್ಥ್ಯವನ್ನು ಹೆಚ್ಚಿಸಲು ಸುಮಾರು ರೂ.೬೦೦ ಕೋಟಿ ಬೇಕಾಗುತ್ತದೆ. ಅಲ್ಲದೆ, ವರ್ಷಪೂರ್ತಿ ಅವಶ್ಯಕತೆಗಳಿಗೆ ಸ್ಪಂದಿಸುವಂಥ ಕಾಯ್ದಿಟ್ಟ ದಾಸ್ತಾನು ವ್ಯವಸ್ಥೆಯ ಬಗೆಗೆ ಕೂಡ ಈ ವಿಧೇಯಕ ಗಮನ ಹರಿಸಬೇಕಾಗುತ್ತದೆ. ಏಕೆಂದರೆ, ಒಂದು ವರ್ಷದಲ್ಲಿ ಕೆಲವು ರಾಜ್ಯಗಳು ಬರದ ಪರಿಸ್ಥಿತಿಗೆ ಒಳಪಡಬಹುದು. ಆಗ ಸರ್ಕಾರ ಆಹಾರ ಪದಾರ್ಥಗಳ ಆಮದಿಗೆ ಮುಂದಾಗಬಹುದು. ಇವೆಲ್ಲ ಅಂಶಗಳನ್ನು ಗಣನೆಗೆ ತೆಗೆದುಕೊಳ್ಳುವುದು ಈ ವಿಧೇಯಕದ ಗುರಿಯಾಗ ಬೇಕು. ನಮ್ಮ ರಾಷ್ಟ್ರದಲ್ಲಿ ಉದ್ಯೋಗಾವಕಾಶಗಳು ಜಾಸ್ತಿಯಾಗಬೇಕು. ಸುಸ್ಥಿರ ನಡೆಸುವುದಕ್ಕೆ ಪೂರಕವಾಗುವಂಥ ವಾತಾವರಣ ಸೃಷ್ಟಿಯಾಗಬೇಕು. ಇದಕ್ಕಾಗಿ, ಯಾವುದೇ ದೀರ್ಘಾವಧಿಯ ಆಹಾರ ಸುಭದ್ರತಾ ಯೋಜನೆಯಲ್ಲಿ ಗ್ರಾಮೀಣ ಬಡವರ ಏಳಿಗೆಯ ಅಂಶವೂ ಸೇರ್ಪಡೆಯಾಗಿರಬೇಕು. ಕೈಗಾರಿಕೆ, ಗಣಿಗಾರಿಕೆ ಮತ್ತು ರಫ್ತುಗಳಿಗಾಗಿ ಕೃಷಿ ಕ್ಷೇತ್ರವನ್ನು ಬಲಿಕೊಡುವ ಪರಿಪಾಠ ನಿಲ್ಲಬೇಕು.

ಉದ್ದೇಶಿತ ರಾಷ್ಟ್ರೀಯ ಆಹಾರ ಭದ್ರತೆಯ ಕಾನೂನು ಎಲ್ಲರಿಗೆ ಆಹಾರವನ್ನು ಒದಗಿಸುವ ಆಶಯವನ್ನು ಹೊಂದಿದೆ. ಆದರೆ ಅದು ಬಡತನ ಹಾಗೂ ಹಸಿವಿನ ಮೂಲಭೂತ ಕಾರಣಗಳ ಬಗೆಗೆ ಬೀರದೆಯಿರುವುದರಿಂದ, ಜನರಿಗೆ ಆಹಾರದ ಹಕ್ಕು ಕೈಗೆಟುಕುತ್ತದೆಯೇ ಎಂಬುದು ಅಲ್ಲಲ್ಲಿ ಕೇಳಿಬರುತ್ತಿರುವ ಅಭಿಮತ. ಸರಿಯಾದ ಚರ್ಚೆಯಿಲ್ಲದೆ ಈ ಕಾನೂನಿನ ವಿಧೇಯಕವನ್ನು ತ್ವರಿತವಾಗಿ ಪೂರ್ಣಗೊಳಿಸುವ ಆತುರದಲ್ಲಿದೆ ಕೇಂದ್ರ ಸರ್ಕಾರ. ಹಾಗಾಗಿ, ಇದೊಂದು ಚಾಲ್ತಿಯಲ್ಲಿರುವ ಅಸಮರ್ಪಕ ಪಡಿತರ ವ್ಯವಸ್ಥೆಯ ಮತ್ತೊಂದು ಅವತಾರವಾಗುತ್ತದೆ ಎಂಬುದು ಕೆಲವು ವಿಶ್ಲೇಷಕರ ಪ್ರಾಮಾಣಿಕ ಅಳುಕು.

ಪ್ರಸ್ತುತ ಭಾರತೀಯ ಆಹಾರ ನಿಗಮದ (FCI) ದಾಸ್ತಾನಿನ ಸಾಮರ್ಥ್ಯ ಸಾಲದು: ಒಂದು ಅಂದಾಜಿನ ಪ್ರಕಾರ FCI ಕೆಲವು ಗೋಡೌನ್‌ಗಳ ಶೇಖರಣಾ ಸಾಮರ್ಥ್ಯವನ್ನು ಹೆಚ್ಚಿಸಲು ಸುಮಾರು ರೂ.600 ಕೋಟಿ ಬೇಕಾಗುತ್ತದೆ. ಅಲ್ಲದೆ, ವರ್ಷಪೂರ್ತಿ ಅವಶ್ಯಕತೆಗಳಿಗೆ ಸ್ಪಂದಿಸುವಂಥ ಕಾಯ್ದಿಟ್ಟ ದಾಸ್ತಾನು(Buffer Stock) ವ್ಯವಸ್ಥೆಯ ಬಗೆಗೆ ಕೂಡ ಈ ವಿಧೇಯಕ ಗಮನ ಹರಿಸಬೇಕಾಗುತ್ತದೆ. ಏಕೆಂದರೆ, ಒಂದು ವರ್ಷದಲ್ಲಿ ಕೆಲವು ರಾಜ್ಯಗಳು ಬರದ ಪರಿಸ್ಥಿತಿಗೆ ಒಳಪಡಬಹುದು. ಆಗ ಸರ್ಕಾರ ಆಹಾರ ಪದಾರ್ಥಗಳ ಆಮದಿಗೆ ಮುಂದಾಗಬಹುದು. ಇವೆಲ್ಲ ಅಂಶಗಳನ್ನು ಗಣನೆಗೆ ತೆಗೆದುಕೊಳ್ಳುವುದು ಈ ವಿಧೇಯಕದ ಗುರಿಯಾಗಬೇಕು.

ನಮ್ಮ ರಾಷ್ಟ್ರದಲ್ಲಿ ಉದ್ಯೋಗಾವಕಾಶಗಳು ಜಾಸ್ತಿಯಾಗಬೇಕು. ಸುಸ್ಥಿರ ನಡೆಸುವುದಕ್ಕೆ ಪೂರಕವಾಗುವಂಥ ವಾತಾವರಣ ಸೃಷ್ಟಿಯಾಗಬೇಕು. ಇದಕ್ಕಾಗಿ, ಯಾವುದೇ ದೀರ್ಘಾವಧಿಯ ಆಹಾರ ಸುಭದ್ರತಾ ಯೋಜನೆಯಲ್ಲಿ ಗ್ರಾಮೀಣ ಬಡವರ ಏಳಿಗಯ ಅಂಶವೂ ಸೇರ್ಪಡೆಯಾಗಿರಬೇಕು. ಕೈಗಾರಿಕೆ, ಗಣಿಗಾರಿಕೆ ಮತ್ತು ರಫ್ತುಗಳಿಗಾಗಿ ಕೃಷಿ ಕ್ಷೇತ್ರವನ್ನು ಬಲಿಕೊಡುವ ಪರಿಪಾಠ ನಿಲ್ಲಬೇಕು. ಭೂಸ್ವಾಧೀನ ಕಾರ್ಯಕ್ರಮದಿಂದ ಅನೇಕ ರೈತರು ಪ್ರವಾಸಾಯವನ್ನು ತೊರೆಯುತ್ತಿದ್ದಾರೆ.

ಅಂದರೆ ತಮಗಿರುವ ಒಂದೇ ಸುಭದ್ರ ಆರ್ಥಿಕ ಚಟುವಟಿಕೆಯಿಂದ ದೂರ ಸರಿಯುತ್ತಿದ್ದಾರೆ. ನಮ್ಮ ರಾಷ್ಟ್ರದಲ್ಲಿ ಇಂದಿಗೂ ಜನ ಸಂಖ್ಯೆಯ ಶೇ. 72 ಮಂದಿ ಕೃಷಿ ಕ್ಷೇತ್ರದ ಮೇಲೆ ಅವಲಂಬಿತರಾಗಿದ್ದಾರೆ. ಆದುದರಿಂದ ಸುಸ್ಥಿರ ಕೃಷಿ ಪದ್ಧತಿಗಳನ್ನು ಬಲಪಡಿಸಬೇಕಾಗಿರುವುದು ವರ್ತಮಾನದ ತುರ್ತು ಅಂತೆಯೇ, ನೈಸರ್ಗಿಕ ಸಂಪನ್ಮೂಲಗಳ ಆಧಾರಗಳಲ್ಲಿ ಪುನಶ್ಚೇತನ, ಅಂತರ್ಜಲದ ವೃದ್ಧಿ ಮತ್ತು ರೈತರು ಬೆಳೆದ ಬೆಳೆಗಳಿಗೆ ಧಾರಣೆಯ ಸ್ಥಿರತೆ ಬಗಗೆ ಕೂಡ ಸರ್ಕಾರ ವಿಶೇಷ ಒತ್ತನ್ನು ನೀಡಬೇಕು.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕಾಳಸಂತೆಯವರನ್ನು ಬಗ್ಗು ಬಡಿಯಬೇಕು. ಆದರೆ ಈ ಕ್ರಮವನ್ನು ಕಟ್ಟುನಿಟ್ಟಾಗಿ ಜಾರಿಮಾಡುವುದರಲ್ಲಿ ಸರ್ಕಾರಗಳು ಇಚ್ಛಾಶಕ್ತಿಯನ್ನು ಹೊಂದಿಲ್ಲ ಎಂದರೆ ತಪ್ಪಾಗುವುದಿಲ್ಲ. ಆಹಾರ ಸರಬರಾಜು ವ್ಯವಸ್ಥೆ ಇಂಥಾ ಸಮಾಜ ಘಾತುಕರ ಕಪಿಮುಷ್ಟಿಯಲ್ಲಿ ಸಿಲುಕಿದರೆ, ನಿಗದಿತವಾಗಿ, ನಿಯಮಿತ ಸಮಯದಲ್ಲಿ ಜನರಿಗೆ ಆಹಾರ ಪದಾರ್ಥಗಳು ತಲುಪುವುದಿಲ್ಲ. ಸಾರ್ವಜನಿಕ ಪಡಿತರ ವ್ಯವಸ್ಥೆಯಲ್ಲಿರುವ ಅನೇಕ ನ್ಯೂನತೆಗಳನ್ನು ನಿವಾರಿಸಬೇಕಾಗಿರುವುದು ಇಂದಿನ ಸರ್ಕಾರಗಳ ಮೇಲಿರುವ ದೊಡ್ಡ ಹೊಣೆ. ಆದರೆ ಈ ವಿಷಯದಲ್ಲೂ, ಸರ್ಕಾರಗಳು ಎಡವುತ್ತ ಬಂದಿರುವುದಕ್ಕೆ ಅನೇಕ ನಿದರ್ಶನಗಳಿವೆ. ಇದರಲ್ಲಿ ಸೂಕ್ತ ಬದಲಾವಣೆಗಳಾಗಬೇಕಿರುವುದು ತೀರ ಅವಶ್ಯ. ಬರದಂಥ ಪರಿಸ್ಥಿತಿ ಇದ್ದಾಗ್ಯೂ, ಆಹಾರ ಬಡವರಿಗೆ ತಲುಪದಿರುವ ಸಂದರ್ಭಗಳೇ ಜಾಸ್ತಿಯಿರುವುದು ಶುಭ ಸೂಚಕ ಬೆಳವಣಿಗೆಯಲ್ಲ.

ಜಿಡಿಪಿಯ ನಿಟ್ಟಿನಿಂದ ಒಂದು ರಾಷ್ಟ್ರ ಶ್ರೀಮಂತವಾಗಿ, ಅವರ ಮಿಲಿಯಗಟ್ಟಲೆ ಜನರು ಹಸಿವಿನ ಕರಾಳತೆಗೆ ಈಡಾಗಿದ್ದರೆ, ಅದರ ಏಳಿಗೆಯ ಹಾದಿಯನ್ನು "ಅಭಿವೃದ್ಧಿ" ಎಂದು ಪರಿಗಣಿಸಬಹುದೆ! ಎಂಬುದೇ ನಮ್ಮ ಮುಂದಿರುವ ಯಕ್ಷ ಪ್ರಶ್ನೆ. □

ಆ ದಶಕ – ಬಿಡುಗಡೆಯ ಮಾತು

ದೇವನೂರ ಮಹಾದೇವ

ನನಗೆ ಆಶ್ಚರ್ಯ ಕಾದಿತ್ತು –ನಾನು ಮನೆಗೆ ಬಂದಾಕ್ಷಣ ನನ್ನ ಪತ್ನಿ ಸುಮಿತ್ರಾ "ಶಾಮಣ್ಣ ಫೋನ್ ಮಾಡಿದ್ದರು. ಅವರ ಪುಸ್ತಕದ ಬಿಡುಗಡೆ ಅಂತೆ. ಹೋಗಿದ್ದು ಬನ್ನಿ" ಅಂದರು. ನಾನು ಯಾವುದಾದರೂ ಭಾಷಣಕ್ಕೆ ಒಪ್ಪಿ ಬಿಪಿ ಷುಗರ್ ಹೆಚ್ಚಿಸಿಕೊಂಡು ನರಳುವುದನ್ನು ಕಣ್ಣಾರೆ ಕಾಣುತ್ತ "ಯಾಕಾರು ಒಪಿಕೊಳ್ಳುತ್ತಿ" ಅನ್ನುತ್ತಿದ್ದ ಸುಮಿತ್ರಾ, ನಮ್ಮ 35 ವರ್ಷಗಳ ದಾಂಪತ್ಯದ ಸರ್ವೀಸ್‌ನಲ್ಲಿ "ಹೋಗಿದ್ದು ಬನ್ನಿ" ಎಂದು ಹೇಳಿದ್ದು ಇದೇ ಪ್ರಪ್ರಥಮ. ಆಗ ನನಗೆ ಅನ್ನಿಸಿಬಿಟ್ಟಿತು – ಈ ಕಡಿದಾಳು ಶಾಮಣ್ಣ ತುಂಬಾ ಪ್ರಭಾವಶಾಲಿ ಅಂತ. ಅಸಹಾಯಕನಾಗಿ ದುಸರಾ ಮಾತಾಡದೆ ಈಗ ಇಲ್ಲಿ ಬಂದು ನಿಂತಿದ್ದೇನೆ.

ನಾನು ಅಂದುಕೊಂಡಿದ್ದೆ– ಯಾವ ರೀತಿಯ ಪುಸ್ತಕ ಆಗುತ್ತದೆ ಇದು? ಕೆಲವು ಪತ್ರಗಳು, ಸಂದರ್ಶನ, ಪತ್ರಿಕಾ ವರದಿಗಳು ಸೇರಿ ಆಗುವ ಪುಸ್ತಕ ಪರಿಣಾಮಕಾರಿ ಆಗುವುದಿಲ್ಲವೇನೋ ಎಂಬ ಅನುಮಾನ ನನಗಿತ್ತು. ಇಲ್ಲೂ ನನಗೆ ಆಶ್ಚರ್ಯ ಕಾದಿತ್ತು. ಪುಸ್ತಕ ಓದಿದ ಮೇಲೆ ನನ್ನ ಅನಿಸಿಕೆ ಬುಡಮೇಲಾಯ್ತು. ಸರಳವಾಗಿ, ನೇರವಾಗಿ, ಸತ್ಯವಾಗಿ ಆ ದಶಕ ನನ್ನ ಕಣ್ಮುಂದೆ ಬಂತು. ಬಹುಶಃ ಇದಕ್ಕೆ ಕಾರಣ – ಇವು ಅಂತಃಕರಣದ ಸ್ಪಂದನಗಳಾಗಿದ್ದು ಇವು ಪ್ರಮಾಣಿಕತೆ ನಿಸ್ವಾರ್ಥತೆಯಿಂದ ಕೂಡಿರುವುದೇ ಕಾರಣವಾಗಿರಬಹುದು. ಮುಂದೆ–'ರೈತರ ಗಾಂಧಿ ಕಂಬಿಕಿತ್ತ ಪ್ರಸಂಗ. ಚಂದ್ರಗುತ್ತಿ ಜಾತಿ ಕ್ರೌರ್ಯ, ಮಾರಮ್ಮನಿಗೆ ನೀರು ಕೊಡದ ಪ್ರಸಂಗ'–ಈ ವರದಿಗಳು ತಮ್ಮ ವರದಿತನವನ್ನು ಮೀರಿಕೊಂಡು ಉತ್ತಮ ಬರವಣಿಗೆಗೆ ಮಾದರಿಗಳಾಗಿ ನಿಲ್ಲುತ್ತವೆ.

ಒಂದು ದೃಶ್ಯ ಸದಾ ನನಗೆ ನೆನಪಾಗುತ್ತದೆ–ಶಾಮಣ್ಣನವರನ್ನು ರೈತಸಂಘದ ರಾಜ್ಯ ಸಮಿತಿಯಿಂದ ಹೊರಹಾಕಲಾಗಿತ್ತು. ಯಾವುದೋ ಒಂದು ಸಭೆ ಸ್ಥಳ, ಸಂದರ್ಭ ಮರೆತುಬಿಟ್ಟಿದ್ದೇನೆ. ರಾತ್ರಿ ಶಾಮಣ್ಣನವರು ತಮ್ಮ ಚೀಲವನ್ನು ತಲೆಗಿಟ್ಟುಕೊಂಡು ಶ್ರೀಕೃಷ್ಣ ಪರಮಾತ್ಮನು ದನ ಕಾಯುತ್ತ ಒಂದು ಮಂಡಿ ಎತ್ತರಿಸಿ ಅದರ ಮೇಲೆ ಇನ್ನೊಂದು ಕಾಲಿಟ್ಟು ಮಲಗಿದ ಭಂಗಿಯಲ್ಲಿ ಇದ್ದಾರೆ. ಅವರ ಒಂದು ಕೈ ಕ್ಯಾಮೆರಾ ಹಿಡಿದಿದೆ. ಅವರ ಕಣ್ಣುಗಳು ಮುಚ್ಚಿವೆ. ಆದರೆ ಅವರಿಗೆ ನಿದ್ರೆ ಬಂದಿಲ್ಲ. ಅವರ ತಲೆ ಒಂದು ಕಣವೂ ನಿಂತ ಕಡೆ ನಿಲ್ಲುತ್ತಿಲ್ಲ. ಎಡದಿಂದ ಬಲಕ್ಕೆ ಹೊರಳುತ್ತಿತ್ತು. ಬಲದಿಂದ ಎಡಕ್ಕೆ ಹೊರಳುತ್ತಿತ್ತು. ನಾನು ಅದನ್ನು ನೋಡುವುದು, ನೋಡುವುದಕ್ಕೆ ಕಷ್ಟವಾಗೊ ಅಥವಾ ನಿದ್ದೆ ಎಳೆಯುತ್ತಿದದ್ದುರಿಂದಲೋ ಕಣ್ಣುಮುಚ್ಚುತ್ತಿದ್ದೆ. ಕಣ್ಣುಮುಚ್ಚಿದರೂ ಕಷ್ಟವಾಗಿ ಕಣ್ಣು ತೆರೆಯುತ್ತಿದ್ದೆ. ಬಹುಶಃ ಬೆಳಗಿನ ಜಾವದವರೆಗೂ ಹೀಗೆ ಜರುಗಿದೆ.

ಈ ದೃಶ್ಯ ಆಗಾಗ ನನ್ನ ಕಣ್ಮುಂದೆ ನಿಲ್ಲುತ್ತದೆ. ಇತ್ತೀಚೆಗೆ ಅಲ್ಲಿ ಶಾಮಣ್ಣ ಇರುವುದಿಲ್ಲ. ಬದಲಾಗಿ ದಲಿತ ಸಂಘರ್ಷ ಸಮಿತೀನೋ, ರೈತಸಂಘವೋ ಅಥವಾ ಇನ್ನಾವುದೋ ಪ್ರಗತಿಪರ ಚಳವಳಿ ಒಟ್ಟನಲ್ಲಿ ನಾಡಿನ ಸಾಕ್ಷಿ ಪ್ರಜ್ಞೆ ಹೊರಳಾಡುತ್ತಿರುವಂತೆ ಕಾಣುವ ಭ್ರಮೆಗೆ ಒಳಗಾಗಿದ್ದೇನೆ ನಾನು. ನಾವು ಬೆಳೆದಂತೆ ವಯಸ್ಸಾದಂತೆ ಹೀಗೆಲ್ಲಾ ಯಾಕಾಯ್ತು? ಒಂದು ಸಂಘಟನೆ ಸಾಂಸ್ಥಿಕ ಆಗುತ್ತ ನಡೆದುದರ ಪರಿಣಾಮವೆ ಇದು? 'ಸಹನೆ ಮತ್ತು ಪ್ರೀತಿ ನನ್ನ ಧರ್ಮ' ಇದು ಗಾಂಧಿಯವರ ಮಾತು. ಪ್ರೀತಿ ಇದ್ದ ಕಡೆ ಸಹನೆ ಇದ್ದೇ ಇರುತ್ತದೆ. ಆದರೆ ಸಹನೆ ಬೇಕಾಗಿರುವುದು– ನಾವು ಇಷ್ಟಪಡದ ವ್ಯಕ್ತಿ ಅಥವ ವಿಚಾರ ನಮ್ಮ ಕಣ್ಣಮುಂದೆಯೆ ಇರಬಾರದು, ಅದು ಧ್ವಂಸವಾಗಬೇಕು' ಎಂಬ ಅಪೇಕ್ಷೆ ನಮ್ಮನ್ನು ಆವರಿಸಿದಾಗ. ಆಗ ನಮ್ಮನ್ನು ಕಾಪಾಡಬಹುದಾದ್ದು ಸಹನೆ ಮಾತ್ರವೆ. ಅದೂ ಧರ್ಮಶ್ರದ್ಧೆಯ ತೀವ್ರತೆಯಲ್ಲಿ ನಮ್ಮ ಆಳಕ್ಕೆ ಇಳಿದಾಗ. ಈ ವಿವೇಕ ನಾವು ಏನನ್ನಾದರೂ ಕಟ್ಟುವಾಗಲೇ ನಮಗೆ ಬರಬೇಕಾಗಿದೆ.

ಪ್ರೀತಿ ಮತ್ತು ಸಹನೆಯ ಸ್ವಭಾವದವರಿಗೆ ನಾಯಕತ್ವ ಒಪ್ಪಿಸಬೇಕಾದ ಎಚ್ಚರಿಕೆಯನ್ನು ನಾವು ವಹಿಸಬೇಕಾಗಿದೆ. ಒಂದು ಸಂಘಟನೆ ಕಟ್ಟುವಾಗಲೇ ಅಂದರೆ ಬಿತ್ತನೆ ಮಾಡುವಾಗಲೇ ಈ ಎಚ್ಚರಿಕೆ ಮತ್ತು ವಿವೇಕ ಬೇಕಾಗಿದೆ. ಈ ಸಂದರ್ಭದಲ್ಲೇ ವಚನಕಾರರನ್ನು ನೆನಪಿಸಿಕೊಳ್ಳುತ್ತೇನೆ. ಸುಮಾರು ಜನ ಪ್ರತಿಭಾವಂತರು ಒಂದೇ ಕಾಲದಲ್ಲಿ ಒಟ್ಟಿಗೆ ಇದ್ದ ಅಪೂರ್ವ ಸಂದರ್ಭ. ಪ್ರತಿಯೊಬ್ಬರಿಗೂ ಅವರವರ ಇಷ್ಟದೈವ ಬೇರೆ. ವೃತ್ತಿಗಳೂ ಬೇರೆ ಬೇರೆ. ಇನ್ನೊಬ್ಬನ ಉಳಿಯುವಿಕೆಯು ತನ್ನ ಉಳಿಯುವಿಕೆಗೂ ಪೂರಕ ಎಂಬಂತೆ ಸಂವಾದ ಇಟ್ಟುಕೊಂಡಿದ್ದರು. ಅಹಂ ಇಲ್ಲಿ ವಿಜೃಂಭಿಸಲಿಲ್ಲ. ಎಷ್ಟೋ ಜನ ತಮ್ಮ ಅಂತರಂಗದ ವಿರುದ್ಧವೇ ಯುದ್ಧ ಮಾಡುತ್ತಿದ್ದರು. ಅವರದೊಂದು ಕುಟುಂಬವಾಗಿತ್ತು. ಮನೆಮಠ ಹೆಂಡತಿ ಮಕ್ಕಳನ್ನು ತೊರೆದು ಹಿಮಾಲಯಕ್ಕೆ ಹೋದವರು ಅಲ್ಲೂ ಜಗಳ ಮಾಡುವ ಉದಾಹರಣೆ ಇರುವಾಗ ಇದು ಹೇಗೆ ಸಾಧ್ಯವಾಯ್ತು? ಭೂಮಿ ಮೇಲೆ ಎಲ್ಲಾ ಕಡೆ ಹುಡುಕಿದರು ಸಿಗದ, ಆದರೆ ನಾವು ನಡೆದಾಡುತ್ತಿರುವ ನೆಲದಲ್ಲದಲ್ಲೇ ಇರುವ ಈ ಅದ್ಭುತವನ್ನು ನಮ್ಮೊಳಗಿಟ್ಟುಕೊಂಡು ನಾವು ಬೆಳಕು ಕಾಣಬೇಕಾಗಿದೆ.

ಈಗ ನಾವು ಬದುಕುತ್ತಿರುವ ಸಂದರ್ಭಕ್ಕೆ ಬಂದರೆ, ನಮ್ಮ ವ್ಯವಸ್ಥೆ, ಪ್ರಭುತ್ವ ದಿಗಿಲು ಹುಟ್ಟಿಸುವುದನ್ನು ಬಿಟ್ಟು ಬೇರೇನೂ ಕಾಣಿಸುತ್ತಿಲ್ಲ. ಕಳ್ಳತನಕ್ಕೂ ಒಂದು ನೀತಿ ನಿಯಮ ನಾಚಿಕೆ ಇರುತ್ತದಂತೆ. ದರೋಡೆ, ರೌಡಿಸಂಗೂ ಒಂದು ನೀತಿ ನಿಯಮ ನಾಚಿಕೆ ಇರುತ್ತದಂತೆ. ಇಂದು ಈ ಕಳ್ಳತನ ದರೋಡೆಗಳು ತಮ್ಮ ನಾಚಿಕೆ ಬಿಟ್ಟು ಎಲ್ಲಾ ಕ್ಷೇತ್ರದಲ್ಲೂ ಕುಣಿದು ಕುಪ್ಪಳಿಸುತ್ತಿದೆ. ಪ್ರಜಾಪ್ರಭುತ್ವಕ್ಕೆ ನೇಣು ಬಿಗಿಯುವ 'ಆಪರೇಷನ್ ಕಮಲ'ವನ್ನು ಸಮರ್ಥಿತಿಸಿಕೊಂಡು ವಿಜೃಂಭಿಸುವುದರಲ್ಲಿ ಕಿಂಚಿತ್ತಾದರೂ ನಾಚಿಕೆ ಇದೆಯಾ? ಹತ್ತು ವರ್ಷಗಳಲ್ಲೆ ಹತ್ತಾರು ಸಾವಿರಕೋಟಿ ನಾಡಿನ ಸಂಪತ್ತು ನುಂಗಿದ ಗಣಿರೆಡ್ಡಿ ಪಟಾಲಂ ಆಡುವ ಮಾತುಗಳನ್ನು ಕೇಳಿದರೆ ತಪ್ಪು ಮಾಡಿ ತಿದ್ದಿಕೊಳ್ಳಬಹುದಾದ ಮನುಷ್ಯರ ಮಾತುಗಳಂತೆ ಅವು ಕೇಳಿ ಬರುವುದಿಲ್ಲ. ಆಲಿಸಿ ನೋಡಿದ್ದೇನೆ, ನಿಜ–ಮನುಷ್ಯರ ಮಾತುಗಳಂತೆ ಅವರ ಮಾತುಗಳು ಕೇಳಿಬರುವುದಿಲ್ಲ. ಹಾಗೆ ಪ್ರವಾಹಕ್ಕೆ ಸಿಕ್ಕಿ ಉಸಿರು ಹಿಡಿದುಕೊಂಡು ಆಕಾಶ ನೋಡುತ್ತಿರುವ ಜನಸಮುದಾಯ ಕಂಡು ರಾಜ್ಯಪಾಲರು "ಪರಿಹಾರ ಕಾರ್ಯ ವಿಳಂಬವಾಯ್ತು ಅಂದರೆ ಮುಖ್ಯಮಂತ್ರಿ ಶ್ರೀ ಯಡಿಯೂರಪ್ಪನವರು–"ವಿಳಂಬವಾಗಿಲ್ಲ" ಅಂತ ಹೇಳುತ್ತಾರೆ.

ಇಂಥವರು ನಮ್ಮನ್ನು ಆಳುತ್ತಿದ್ದಾರೆ. ಇವರೆಲ್ಲಾ ತಮ್ಮ ನಾಚಿಕೆ ಸಾಕ್ಷಿಪ್ರಜ್ಞೆಯನ್ನು ಎಲ್ಲಿ ಗಿರವಿಗೆ ಇಟ್ಟಿದ್ದಾರೆ? ಅಥವಾ ಸಾಯಿಸಿಬಿಟ್ಟಿದ್ದಾರೋ ಹೇಗೋ? ಭೀತಿ ಆಗುತ್ತದೆ. ನಮ್ಮ ಚಿಂತನಕಾರರು ಹೆಚ್ಚಿರುವ ವಿಶ್ವವಿದ್ಯಾಲಯಗಳಿಗೆ ಬಂದರೂ ನಮ್ಮ ಭೀತಿ ಹೆಚ್ಚುತ್ತದೆಯೇ ಹೊರತು ಕಮ್ಮಿಯಾಗುವುದಿಲ್ಲ. ತಾರತಮ್ಯವನ್ನು ಮೌಲ್ಯವಾಗಿಸಿದ ಬ್ರಾಹ್ಮಣಿಕೆಯ ಅಪರಾಧಿ ಸ್ಥಾನವನ್ನು ಮರೆ ಮಾಚುವುದಕ್ಕಾಗಿಯೇ ಗೋಸುಂಬೆ ಸಿದ್ಧಾಂತದ ಬಿತ್ತನೆ ಕೆಲಸದಲ್ಲಿ ಕುವೆಂಪು ವಿಶ್ವವಿದ್ಯಾನಿಲಯದ ಕೆಲ ಬುದ್ಧಿಜೀವಿಗಳು ಕಾರ್ಯನಿರತರಾಗಿದ್ದಾರೆ. ಗೆಳೆಯ ಡಿ.ಎಸ್. ನಾಗಭೂಷಣ ವೀರಭದ್ರವತಾರ ತಾಳಿ ಅಷ್ಟೋ ಇಷ್ಟೋ ತಡೆಗಟ್ಟುತ್ತಿದ್ದಾರೆ.

ಇನ್ನೊಂದು ಕಡೆ– ಅಲೆಮಾರಿ ಸಮುದಾಯ ಬುಡ್ಗಜಂಗಮ, ಬೇಡಜಂಗಮರು ಪರಿಶಿಷ್ಟ ಜಾತಿಗೆ ಸೇರಿರುವಂತೆ ಲಿಂಗಾಯತ ಜಂಗಮರು ತಾವೂ ಬೇಡುವ ಜಂಗಮರೆಂದೂ ತಮಗೂ ಬೇಡ ಜಂಗಮರಿಗೂ ವ್ಯತ್ಯಾಸವಿಲ್ಲವೆಂದೂ ಹಾಗಾಗಿ ತಮ್ಮನ್ನೂ ಪರಿಶಿಷ್ಟ ಜಾತಿ ಮೀಸಲಾತಿಗೆ ಸೇರಿಸಬೇಕೆಂದೂ ಮಾನ ಮರ್ಯಾದೆ ನಾಚಿಕೆ ಬಿಟ್ಟು ಗದ್ದಲವೆಬ್ಬಿಸುತ್ತಿದ್ದಾರೆ. ದಲಿತ ಸಂಘಟನೆಗಳು ಒಂದಲ್ಲ ಹತ್ತಾರು ಇವೆ.

ಈಗ ನಾವು ಬದುಕುತ್ತಿರುವ ಸಂದರ್ಭಕ್ಕೆ ಬಂದರೆ, ನಮ್ಮ ವ್ಯವಸ್ಥೆ, ಪ್ರಭುತ್ವ ದಿಗಿಲು ಹುಟ್ಟಿಸುವುದನ್ನು ಬಿಟ್ಟು ಬೇರೇನೂ ಕಾಣಿಸುತ್ತಿಲ್ಲ. ಕಳ್ಳತನಕ್ಕೂ ಒಂದು ನೀತಿ ನಿಯಮ ನಾಚಿಕೆ ಇರುತ್ತದಂತೆ. ದರೋಡೆ, ರೌಡಿಸಂಗೂ ಒಂದು ನೀತಿ ನಿಯಮ ನಾಚಿಕೆ ಇರುತ್ತದಂತೆ. ಇಂದು ಈ ಕಳ್ಳತನ ದರೋಡೆಗಳು ತಮ್ಮ ನಾಚಿಕೆ ಬಿಟ್ಟು ಎಲ್ಲಾ ಕ್ಷೇತ್ರದಲ್ಲೂ ಕುಣಿದು ಕುಪ್ಪಳಿಸುತ್ತಿದೆ. ಪ್ರಜಾಪ್ರಭುತ್ವಕ್ಕೆ ನೇಣು ಬಿಗಿಯುವ 'ಆಪರೇಷನ್ ಕಮಲ'ವನ್ನು ಸಮರ್ಥಿತಿಸಿಕೊಂಡು ವಿಜೃಂಭಿಸುವುದರಲ್ಲಿ ಕಿಂಚಿತ್ತಾದರೂ ನಾಚಿಕೆ ಇದೆಯಾ? ಹತ್ತು ವರ್ಷಗಳಲ್ಲೆ ಹತ್ತಾರು ಸಾವಿರಕೋಟಿ ನಾಡಿನ ಸಂಪತ್ತು ನುಂಗಿದ ಗಣಿರೆಡ್ಡಿ ಪಟಾಲಂ ಆಡುವ ಮಾತುಗಳನ್ನು ಕೇಳಿದರೆ ತಪ್ಪು ಮಾಡಿ ತಿದ್ದಿಕೊಳ್ಳಬಹುದಾದ ಮನುಷ್ಯರ ಮಾತುಗಳಂತೆ ಅವು ಕೇಳಿ ಬರುವುದಿಲ್ಲ.

ಇವು ಕಣ್ಮುಚ್ಚಿ ಕುಳಿತಿವೆ.

ಈ ಲಿಂಗಾಯತ ಜಂಗಮರು ತಮ್ಮ ಬೇಡಿಕೆ ಈಡೇರಿಕೆಗಾಗಿ ಕೆಲವು ದಿನಗಳ ಹಿಂದೆ ಬೆಂಗಳೂರಿನಲ್ಲಿ ಒಂದು ಬೃಹತ್ ಸಮಾವೇಶ, ಉಪವಾಸ ಸತ್ಯಾಗ್ರಹ ಇತ್ಯಾದಿಗಳ ಸಿದ್ಧತೆ ಮಾಡುತ್ತಿದ್ದು ಅದನ್ನು ಅವರ ಅದೃಷ್ಟಕ್ಕೆ ಮುಂದೂಡಿದರು. ಆ ಸಂದರ್ಭದಲ್ಲಿ ಬುಡ್ಗ ಜಂಗಮ ಸಮುದಾಯಕ್ಕೆ ಸೇರಿದ ಪ್ರಜ್ಞಾವಂತ ಗೆಳೆಯ ಬಾಲಗುರುಮೂರ್ತಿಯವರು ಅವರ ಆತಂಕವನ್ನು ನನ್ನಲ್ಲಿ ಹಂಚಿಕೊಳ್ಳುತ್ತಿದ್ದರು– "ಸಾರ್, ಲಿಂಗಾಯತ ಜಂಗಮರು ಸಾವಿರ ಸಾವಿರ ಸೇರ್ತಾ ಇದ್ದಾರೆ: ನಮ್ಮ ಬುಡ್ಗ ಜಂಗಮರು ನಿಂತ ಕಡೆ ನಿಲ್ಲಲ್ಲ. ಚೆಲ್ಲೋಗಿರುತ್ತಾರೆ. ಸೇರಿಸೋದು ಕಷ್ಟ. ಹೇಗೆ ಪ್ರತಿಭಟಿಸುವುದು?"– ಇದು ಅವರ ತಲೆ ತಿಂತಿತ್ತು. ನನಗೂ ಹೊಳೆಯದೆ ಸುಮ್ಮನಿದ್ದಾಗ ನನಗೆ ಒಂದು ದರ್ಶನ ಆಯಿತು. ಅದನ್ನ ಅವರಿಗೆ ಹೀಗೆ ಹೇಳಿದೆ – "ನೀವೇನೂ ಯೋಚನೆ ಮಾಡಬೇಡಿ, ಪ್ರತಿಭಟಿಸುವುದಕ್ಕೆ ಕೇವಲ ಬೆರಳೆಣಿಕೆ ಜನ ಸಾಕು. ನಾಡಿನ ಕೆಲ ಪ್ರಜ್ಞಾವಂತರೂ ಕೂಡುತ್ತಾರೆ.

ನಾನು ಬರುವೆ. ನಾವು ಇಷ್ಟು ಮಾಡೋಣ – "ನಮ್ಮ ಬಂಧುಗಳಾದ ವೀರಶೈವ ಜಂಗಮರು ಜಮ್ಮ ಜೊತೆ ಪರಿಶಿಷ್ಟ ಜಾತಿಗೆ ಸೇರಲು ಪಾಪ ಉಪವಾಸ ಕೂತಿದ್ದಾರೆ. ಅವರಿಗೆ ನಮ್ಮ ಸಂಪ್ರದಾಯದ ಪೂಜೆಯ ನೈವೇದ್ಯ–ತ್ವಾಡದ(ಗದ್ದೆ ಇಲಿ) ಬಾಡು ಹಾಗು ಹೆಂಡವನ್ನು ಉಣಬಡಿಸಿ ಏನೊ ನಮ್ಮ ಮೆರವಣಿಗೆಯಲ್ಲಿ ನಡೆಯೋಣ ಅಂದೆ. ಆಮೇಲೆ ಹೇಳಿದೆ– 'ಹೇಗೂ ಪೋಲಿಸರು ಬಿಡಲ್ಲ. ನಿಮ್ಮ ಬುಡ್ಗ ಜಂಗಮರು ಹೇಗೊ ಎತ್ತೋ ನನಗೆ ಗೊತ್ತಿಲ್ಲ. ನನಗೂ ಸ್ವಲ್ಪ ಆಹಾರ ಪಾನೀಯ ಜೋಪಾನವಾಗಿ ಎತ್ತಿಟ್ಟಿರಿ!" ಎಂದಿದ್ದೆ. ಆ ಗೆಳೆಯ ಪಾಪ ತಕ್ಷಕ್ಕೆ ಸಮಾಧಾನ ಗೊಂಡರು.

ಈ ಜಂಗಮರದಾದ ಮೇಲೆ ಭಾರತವನ್ನು ಪ್ರಕಾಶಿಸುತ್ತ ಇರುವ ಐ.ಟಿ ಕ್ಷೇತ್ರದ ನಿರ್ಲಜ್ಜತೆಯನ್ನು ಮುಟ್ಟಿ ಈ ನಿರ್ಲಜ್ಜತಾ ಪ್ರಕರಣ ಮುಗಿಸುತ್ತೇನೆ. ಕತೆಯಾಗಿ ಚೆನ್ನಾಗಿರುವ 'ಹಲೋ ಭಾರತಿ' ಎಂಬ ವಸುಧೇಂದ್ರ ಕತೆಯ ವಸ್ತು ಹೀಗಿದೆ. ಭಾರತದ ಒಂದು ಕಂಪೆನಿಗೆ ಪರದೇಶದಿಂದ ಒಂದು ಹೊರಗುತ್ತಿಗೆ ಕೆಲಸ ಸಿಗುತ್ತದೆ. ಕೆಲಸ ಇದು– ಭಾರತ ಕಂಪೆನಿಯ ಗೌರವಾನ್ವಿತ ನೌಕರರು ಹೊರ ದೇಶದ ಗ್ರಾಹಕರಿಗೆ ಫೋನ್ ಮೂಲಕ ಮಾತಾಡಿ – ಏನೆಂದರೆ, ಅಲ್ಲಿನ ಹೆಣ್ಣಿಗೆ ಇಲ್ಲಿನ ಗಂಡು ಕಾಮೋದ್ರೇಕದ ಮಾತಾಡಿ ಅವಳು ಸ್ಖಲಿಸುವಂತೆ ಮಾಡಬೇಕು. ಹಾಗೆ ಅಲ್ಲಿನ ಗಂಡಿಗೆ ಇಲ್ಲಿನ ಹೆಣ್ಣು ಕಾಮೋದ್ರೇಕದ ಮಾತಾಡಿ ಆತ ಸ್ಖಲಿಸುವಂತೆ ಮಾಡಬೇಕು. ಇದು ಉದ್ಯೋಗ. ಇದಕ್ಕಾಗಿ ಟ್ರಯಲ್ ಅಂಡ್ ಎರರ್ ಆಗುತ್ತದೆ. ಆಗಿ, ಈ ಕಾರ್ಯದಲ್ಲಿ ಭಾರತದ ಕಂಪೆನಿ ಯಶಸ್ವಿಯಾಗುತ್ತದೆ. ಈ ಯಶಸ್ಸಿಗೆ ಭಾರತದ ನೌಕರರು ಕುಣಿದು ಕುಪ್ಪಳಿಸುತ್ತಾರೆ. ಕುಣಿದು ಕುಪ್ಪಳಿಸಿದ್ದೇನು? ನಿರ್ಲಜ್ಜ ಕುಣಿತ. ಇವುಗಳೆಲ್ಲಾ ಅಭಿವೃದ್ಧಿ ಎನಿಸಿ ಬಿಟ್ಟಿವೆ. ಅಭಿವೃದ್ಧಿ ಎಂದರೆ ಇದು– ಅದು ನಿರ್ಲಜ್ಜತೆಯದು ಹಾಗು ಅಸಮಾನತೆಯದು ಮಾತ್ರ.

ಹೀಗೆ ನಾವು ಮುಳುಗುತ್ತಿರುವ ಈ ಸ್ಥಿತಿಯಲ್ಲಿ ಚಿಂತನೆಯ ಮಟ್ಟದಲ್ಲಾದರೂ ಕಾಣಬಹುದಾದ ಕನಸುಗಳು ಇವೆಯೆ ಎಂದಾದರೂ ತಡಕಾಡ ಬೇಕಾಗಿದೆ. ಈ ಗಳಿಗೆಯಲ್ಲಿ ನನಗೆ ಭೂತಾನ್ ರಾಷ್ಟ್ರ ಕಣ್ಣಿಗೆ ಬೀಳುತ್ತಿದೆ. ಭೂತಾನ್ ರಾಷ್ಟ್ರವೇ ನಮ್ಮ ಕರ್ನಾಟಕದ ಒಂದೂವರೆ

ಮೇಲು ಜಾತಿ ಭ್ರಮಾರೋಗಕ್ಕೆ ತುತ್ತಾದ ವ್ಯಕ್ತಿ ತನ್ನ ರೋಗ, ಅಂದರೆ ತನ್ನದೇ ರೋಗ ಕಳೆದುಕೊಂಡರೆ ತಂತಾನೆ ಉದಾತ್ತ ಮೌಲ್ಯದ ಮನುಷ್ಯನಾಗಿ ಮಾರ್ಪಾಡಾಗಿ ಬಿಡುತ್ತಾನೆ. ಹೀಗೇ ಒಂದು ಹಳ್ಳಿಯಾದರೆ ಅದು ಆರೋಗ್ಯವಂತ ಮನುಷ್ಯರಿಂದ ತುಂಬಿದ ಹಳ್ಳಿಯಾಗುತ್ತದೆ. ಅದಕ್ಕಾಗೇ ಒಂದು ಸಮಾಜದ ಕ್ರಾಂತಿಕಾರತ್ವದ ನಿಜ ತಿಳಿಯಬೇಕಾದರೆ– ಊರೊಳಗೆ ಅಂಬೇಡ್ಕರ್ ಅಳತೆಗೋಲಾಗಬೇಕಿದೆ. ಇದಕ್ಕೆ ವಚನ ಆಂದೋಲನದ ವಾತಾವರಣಬೇಕು.

ಜಿಲ್ಲೆಯಷ್ಟಿರಬಹುದು. ಸಿಂಘಯಾಲ್ ವಾಂಗ್ಚುಕ್ ಈ ಚುಲ್ಪಾರಿ ದೇಶದ ಈ ಚುಲ್ಪಾರಿ ದೊರೆ ಜಗತ್ತಿಗೇ ಒಂದು ಸವಾಲು ಎಸೆದಿದ್ದಾನೆ. ಈ ಸವಾಲು ಜಗತ್ತಿಗೆ ನುಂಗಲಾರದ ತುತ್ತಾಗಿದೆ. ಆತ ಹೇಳುತ್ತಾನೆ "ಒಂದು ದೇಶದ ಅಭಿವೃದ್ಧಿಯನ್ನು ಆ ದೇಶದ ನಿರ್ಜೀವ ಭೌತಿಕ ವಸ್ತುಗಳ ಉತ್ಪಾದನೆಯ ಮೇಲೆ ಲೆಕ್ಕ ಹಾಕಬೇಡಿ.. ಬದಲಾಗಿ ಅಲ್ಲಿ ಜೀವಂತವಾಗಿರುವ ಜನರ ಸಂತೋಷದ ಮೇಲೆ ಹಾಗೂ ಸಮಾನತೆಯನ್ನು ಅಳತೆಗೋಲು ಮಾಡಿಕೊಂಡು ಲೆಕ್ಕ ಹಾಕಿ" ಅನ್ನುತ್ತಾನೆ.

ಆಮೇಲೆ ಅವನು ಅಭಿವೃದ್ಧಿಯ ಪರಿಕಲ್ಪನೆಗೆ ಸಂತೋಷ ಸಮಾನತೆ ಸೇರ್ಪಡೆಯಾಗುವುದಾದರೆ ಭೂತಾನ್ ಎಂಬ ಈ ಬಡರಾಷ್ಟ್ರವೇ ಜಗತ್ತಿನಲ್ಲೇ ಮೊದಲ ಅಭಿವೃದ್ಧಿ ಹೊಂದಿದ ರಾಷ್ಟ್ರವಾಗಿ ನಿಲ್ಲುತ್ತದೆ. ಅಮೆರಿಕಾವೋ ಚೈನಾವೋ ಅಥವಾ ಇಂಗ್ಲೆಂಡೋ ಅಲ್ಲ" ಅನ್ನುತ್ತಾನೆ– ಇದು ಎಲ್ಲರನ್ನೂ ದಿಕ್ಕೆಡಿಸಿದೆ. ಹೀಗೆ ದಿಕ್ಕೆಟ್ಟು 25ದೇಶಗಳ 90ಜನ ಪ್ರಜ್ಞಾವಂತ ಅರ್ಥಶಾಸ್ತ್ರಜ್ಞರು ಬ್ರೆಜಿಲ್‌ನಲ್ಲಿ ಈ ನವೆಂಬರ್ 20ನೇ ತಾರೀಖಿನಿಂದ 24ನೇ ತಾರೀಖಿನವರೆಗೂ ಚರ್ಚಿಸಿ ಸಂತೋಷ ಸಮಾನತೆಗಳನ್ನು ಅಭಿವೃದ್ಧಿಯ ಮಾನದಂಡ ಆಗಸಬಹುದಾದ ಸಾಧ್ಯತೆಯನ್ನು ಚರ್ಚಿಸುತ್ತಾ ತಲೆಕೆಡಿಸಿಕೊಂಡಿದ್ದಾರೆ.

ಈ ಎಳೆಯನ್ನು ಹಿಡಿದುಕೊಂಡು ನಾವು ಮುನ್ನಡೆಯಬಹುದಾದ ಸಾಧ್ಯತೆ ಇದೆಯೇ? ಇರುವುದಾದರೆ ಅಭಿವೃದ್ಧಿಯ ಮಾನದಂಡಕ್ಕೆ ಸಮಾನತೆ ಮತ್ತು ಸಂತೋಷವನ್ನೂ ಸೇರ್ಪಡಿಸುವುದರ ಜೊತೆಗೆ "ನೈಸರ್ಗಿಕ ಸಂಪತ್ತು" ರಾಷ್ಟ್ರೀಕರಣವಾಗಬೇಕು ಎಂಬುದನ್ನು ಇಂದು ಕೂಗಿ ಕೂಗಿ ಹೇಳಬೇಕಾಗಿದೆ. ಇದಕ್ಕಾಗಿ ಸ್ಥಳೀಯವಾಗಿ ಜಾಗತಿಕವಾಗಿ ಅಭಿಪ್ರಾಯ ರೂಪಿಸಿ ಹೋರಾಡಬೇಕಿದೆ. ಈ ಹೋರಾಟದ ನಾಯಕತ್ವವು ಸಹನೆ ಮತ್ತು ಪ್ರೀತಿ ಸ್ವಭಾವದವರ ಕೈಯಲ್ಲಿ ಇರುವಂತೆ ನೋಡಿಕೊಳ್ಳಬೇಕಾಗಿದೆ.

ಓ ದೇವರೇ – ಈ ಗಳಿಗೆಯಲ್ಲಿ ನನಗೆ ಅನಿಸುತ್ತಿದೆ–ಭೂತಾನ್ ಅನ್ನು ಆದರ್ಶ ಮಾಡಿಕೊಂಡು ಆಧುನಿಕತೆಯಿಂದ ಗೊಂದಲಕ್ಕೊಳಗಾಗಿರುವ ಇಸ್ಲಾಂ ಏನಾದರೂ ಈ ಮಾರ್ಗದಲ್ಲಿ ನಡೆಯುವದಾದರೆ ಅರ್ಥ ಜಗತ್ತು ಸುಂದರವಾಗಿ ಅದು ಇಡೀ ಭೂಮಂಡಲವನ್ನೆ ಪ್ರಭಾವಿಸಬಹುದೇನೋ. ಇದು ಇಸ್ಲಾಂಗೆ ಮಾತ್ರ ಸಾಧ್ಯ. ಇಲ್ಲಿ ಧಾರ್ಮಿಕ ಶ್ರದ್ಧೆ ಹೃದಯದ್ದು. ಇದರಿಂದಾಗಿಯೇ ಈ ಆಧುನಿಕತೆ ಅಭಿವೃದ್ಧಿ ಇತ್ಯಾದಿಗಳು ಇಸ್ಲಾಂನ ಅಸ್ತಿತ್ವವನ್ನು ತತ್ತರಿಸುವಂತೆ ಮಾಡಿವೆ. ಕ್ರಿಶ್ಚಿಯನ್ ಧರ್ಮ ಆಧುನಿಕತೆ ಹಾಗೂ ಹಾಲೀ ಅಭಿವೃದ್ಧಿಯ ಜತೆ ಹೊಂದಾಣಿಕೆ ಮಾಡಿಕೊಂಡಿರುವುದರಿಂದ ಇದಕ್ಕೆ ಈ ಸಾಧ್ಯತೆ ಕ್ಷೀಣ. ಹಿಂದೂ ಧರ್ಮಕ್ಕೆ ಬಂದರೆ–ಈ ಧರ್ಮಕ್ಕೆ ಅಸಮಾನತೆಯೇ ಬುನಾದಿಯಾಗಿರುವುದರಿಂದ ಇದಕ್ಕೆ ಧಾರ್ಮಿಕವಾಗಿ ಸಮಾನತೆಯ ಕಡೆಗೆ ಚಲಿಸುವುದು ಬಿಲ್ಕುಲ್ ಸಾಧ್ಯವಾಗದ ಮಾತು. ಹೀಗಿರುವುದರಿಂದ ಇಸ್ಲಾಂ ಕಡೆ ನಾವು ಹೀಗೆ ನೋಡಬಹುದೇ ಅಂತ ಒಂದೊಂದು ಸಲ ಅನಿಸತೊಡಗುತ್ತದೆ. ಯಾಕೆಂದರೆ ಅಮಿತವಾದ ಧರ್ಮ ಶ್ರದ್ಧೆಯೊಂದಿಗೆ ತನ್ನ ಸಮುದಾಯದೊಳಗೆ ಸಹೋದರ ಭಾವವೂ ಇರುವುದರಿಂದ ಹೀಗನಿಸುತ್ತಿದೆ.

ನಮ್ಮಲ್ಲಿ, ಅಂದರೆ, ಜಾತಿ– ಅಸ್ಪೃಶ್ಯತೆಯ ಭಾರತದಲ್ಲಿ ಒಂದು ಆಂದೋಲನದ ಕ್ರಾಂತಿಕಾರತ್ವವನ್ನು ಮತ್ತು ಮಾನವೀಯ ಅಂಶವನ್ನು, ಅಳತೆ ಮಾಡಲು ಒಂದು ಮಾನದಂಡ ಇಟ್ಟುಕೊಳ್ಳಲೇ ಬೇಕಾಗಿದೆ. ಅದೇ, ಗೆಳೆಯ ಡಿ.ಆರ್. ನಗರಾಜರ ಒಗಟಿನ ಮಾತು– "ಊರ ಒಳಗೆ ಅಂಬೇಡ್ಕರ್ ಊರ ಹೊರಗೆ ಗಾಂಧಿ" –ಈ ಒಗಟನ್ನು ಬಿಡಿಸಿ ಕೊಳ್ಳಬೇಕಾಗಿದೆ. ಯಾಕೆಂದರೆ ಭಾರತವು ಮೇಲು ಜಾತಿ ಭ್ರಮಾರೋಗ–ಕೀಳುಜಾತಿ ಭ್ರಮಾರೋಗಕ್ಕೆ ತುತ್ತಾಗಿ ನರಳುತ್ತಿದೆ. ಈ ಹಳೆರೋಗ ಗುಣಪಡಿಸಲು ಕಷ್ಟ. ಯಾಕೆಂದರೆ ಈ ರೋಗವನ್ನು ನಾವು ರೋಗವೆಂದೇ ಅಂದೊಕೊಂಡಿಲ್ಲ. ಇಂಥ ಮನಸ್ಥಿತಿಯಲ್ಲಿ ಊರ ಒಳಗೆ ಅಂಬೇಡ್ಕರ್ ಎಂದರೆ, ಮೇಲುಜಾತಿಯ ಭ್ರಮಾರೋಗಕ್ಕೆ ತುತ್ತಾದವರು ಅಸ್ಪೃಶ್ಯ ಅಂಬೇಡ್ಕರ್ ಸಮಾನತೆಯನ್ನು ಒಪ್ಪಿ ತಮ್ಮ ಮನೆಯಲ್ಲಿ ಅಂಬೇಡ್ಕರ್ ಭಾವಚಿತ್ರ ಇಟ್ಟು ಗೌರವಿಸುವುದಾದರೆ–ಕಲ್ಪಿಸಿಕೊಳ್ಳಿ– ಆ ವ್ಯಕ್ತಿಯ ಒಳಗೆ ಮತ್ತು ಹೊರಗೆ ಯಾವ ಬಗೆಯ ಯುದ್ಧ ಜರುಗಬಹುದು!

ಮೇಲು ಜಾತಿ ಭ್ರಮಾರೋಗಕ್ಕೆ ತುತ್ತಾದ ವ್ಯಕ್ತಿ ತನ್ನ ರೋಗ, ಅಂದರೆ ತನ್ನದೇ ರೋಗ ಕಳೆದುಕೊಂಡರೆ ತಂತಾನೆ ಉದಾತ್ತ ಮೌಲ್ಯದ ಮನುಷ್ಯನಾಗಿ ಮಾರ್ಪಾಡಾಗಿ ಬಿಡುತ್ತಾನೆ. ಹೀಗೇ ಒಂದು ಹಳ್ಳಿಯಾದರೆ ಅದು ಆರೋಗ್ಯವಂತ ಮನುಷ್ಯರಿಂದ ತುಂಬಿದ ಹಳ್ಳಿಯಾಗುತ್ತದೆ. ಅದಕ್ಕಾಗೇ ಒಂದು ಸಮಾಜದ ಕ್ರಾಂತಿಕಾರತ್ವದ ನಿಜ ತಿಳಿಯಬೇಕಾದರೆ– ಊರೊಳಗೆ ಅಂಬೇಡ್ಕರ್ ಅಳತೆಗೋಲಾಗ ಬೇಕಿದೆ. ಇದಕ್ಕೆ ವಚನ ಆಂದೋಲನದ ವಾತಾವರಣ ಬೇಕು. ಹಾಗೇ ಗಾಂಧಿ.

ಮನುಷ್ಯ ಕೇಂದ್ರಿತ ಆರ್ಥಿಕತೆ ಹಾಗೂ ಜಗತ್ತು ಒಂದು ಕುಟುಂಬ ಎಂಬ ಕನಸನ್ನು ನನಸು ಮಾಡುವುದಕ್ಕಾಗಿ ಗಾಂಧಿಬೇಕು. ಅಂದರೆ ಗಾಂಧಿ ಅಂಬೇಡ್ಕರ್ ಮತ್ತು ವಚನಕಾರರ ಕಲಸು ಮೇಲೋಗರಕ್ಕೆ ಎಲ್ಲಾ ಸಮಾನತಾ ಆಶಯಗಳನ್ನು ಕೂಡಿಸಿ ಇದಕ್ಕಾಗಿ ಸ್ವಾತಂತ್ರ್ಯ ಹೋರಾಟದ ತೀವ್ರತೆಯಲ್ಲಿ ಹೋರಾಡಿದರೆ....... ಹೋರಾಡಲೇ ಬೇಕಾಗಿದೆ. 'ಜಾಗತೀಕರಣ, ಖಾಸಗೀಕರಣ, ಉದಾರೀಕರಣಕ್ಕೆ ಅಂತಃಕರಣ ಇಲ್ಲ'–ಇದು–ಕಡಿದಾಳು ಶಾಮಣ್ಣನವರ ಮಾತು. ಇದು ಜಗತ್ತಿನ ಗೋಡೆ ಬರಹ ಆಗಬೇಕಾಗಿದೆ. ಅಂತಃಕರಣಕ್ಕಾಗಿ ಜಾಗತೀಕರಣ, ಅಂತಃಕರಣಕ್ಕಾಗಿ ಉದಾರೀಕರಣ ಅಂತಃಕರಣಕ್ಕಾಗಿ ಖಾಸಗೀಕರಣ–ಆಗಿಸುವತ್ತ ನಾವು ನಮ್ಮ ಹೆಜ್ಜೆಗಳನ್ನು ಇಡಬೇಕಾಗಿದೆ. □

ವಂದೇ ಮಾತರಂ ಮತ್ತು ಸೆಕ್ಯುಲರಿಸಂ

ಡಿ. ಎಸ್. ನಾಗಭೂಷಣ

ಪ್ರಿಯ ಇಂದೂಧರ್,

'ವಂದೇ ಮಾತರಂ' ಬಗ್ಗೆ 'ಸಂವಾದ'ದ ಡಿಸೆಂಬರ್ ಸಂಚಿಕೆಯಲ್ಲಿ ಶಿವಸುಂದರ್ ಬರೆದದ್ದನ್ನು ಓದಿದೆ. ಮೂರು ವರ್ಷಗಳ ಹಿಂದೆಯೇ ಸರ್ಕಾರ ಘೋಷಿಸಿ ಆಚರಿಸಿದ 'ವಂದೇ ಮಾತರಂ'ನ ಶತಮಾನೋತ್ಸವ ಸಂದರ್ಭದಲ್ಲಿ ಈ ಬಗ್ಗೆ ದೊಡ್ಡ ಗೊಂದಲ ಎದ್ದು, ವಾದ-ವಿವಾದಗಳು ನಡೆದು ನಂತರ ವಾತಾವರಣ ತಿಳಿಯಾಗಿತ್ತು. ಈಗ ದೇವಬಂದಿ ಮೌಲ್ವಿ ಆಕಾರಣವಾಗಿ ಈ ವಿಷಯವನ್ನು ಮತ್ತೆ ಎತ್ತಿ, ಮುಸ್ಲಿಮರು 'ವಂದೇ ಮಾತರಂ' ಹಾಡಬಾರದೆಂದು ಫತ್ವಾ ಹೊರಡಿಸಿದ್ದಾರೆ. ಈ ಹಿಂದೆ ವಿವಾದ ಎದ್ದಿದ್ದಾಗ ಈ ಬಗ್ಗೆ ವಿಫುಲವಾಗಿ ಬರೆದಿದ್ದ ಶಿವಸುಂದರ್ ಅವರು ಈಗ ಮತ್ತೆ ಈ ಫತ್ವಾ ವನ್ನು ಬೆಂಬಲಿಸುವವರ ಹಾಗೆ 'ವಂದೇ ಮಾತರಂ' ಹೇಗೆ ಇಸ್ಲಾಂ ಅಥವಾ ಮುಸ್ಲಿಮರಿಗೆ ವಿರುದ್ಧವಾಗಿದೆ ಎಂದು ವಿವರವಾಗಿ ಬರೆದಿದ್ದಾರೆ.

ಎಡಪಂಥೀಯ ರಾಜಕಾರಣ ಈಗ ಅದರೆಲ್ಲ ಆವೃತ್ತಿಗಳಲ್ಲಿ ಸಿದ್ಧ ಮಾದರಿಗೆ ಬಿದ್ದಂತೆ ತೋರುತ್ತದೆ. ತಮ್ಮ ರಾಜಕಾರಣಕ್ಕೆ ಯಾರದಾದರೂ ಸರಿ, ಹೇಗಾದರೂ ಸರಿ ಬೆಂಬಲ ಸಂಘಟಿಸಿಕೊಳ್ಳಲು ನಡೆಸುತ್ತಿರುವ ಪ್ರಯತ್ನ ಎಡಪಂಥೀಯ ರಾಜಕಾರಣದ ಉದ್ದೇಶಗಳನ್ನೇ ಸಂದೇಹಾಸ್ಪದಗೊಳಿಸಿದೆ. ಇದು ನಿಜವಾಗಿಯೂ ಆತಂಕದ ವಿಷಯ. ಈ ಹಿನ್ನೆಲೆಯಲ್ಲಿ, ಈ ಮೇಲೆ ಪ್ರಸ್ತಾಪಿಸಿದ ಮೂರು ವರ್ಷಗಳ ಹಿಂದಿನ 'ಸಂದರ್ಭ'ದಲ್ಲಿ–2006ರಲ್ಲಿ–'ವಂದೇ ಮಾತರಂ' ಬಗ್ಗೆ ನಾನು ಬರೆದಿದ್ದ ಲೇಖನವೊಂದನ್ನು ನಿಮ್ಮ ಮತ್ತು 'ಸಂವಾದ'ದ ಓದುಗರ ಅವಗಾಹನೆಗೆಂದು ಕಳಿಸುತ್ತಿದ್ದೇನೆ. ನನ್ನ ಮಾತುಗಳಲ್ಲಿ ತಥ್ಯವಿದೆ ಮತ್ತು ಅವು ಈ ಸಂದರ್ಭದಲ್ಲಿಯೂ ಪ್ರಸ್ತುತ ಎನಿಸಿದರೆ ಪ್ರಕಟಿಸುವ ಕೃಪೆ ಮಾಡಿ.

*   *   *   *   *   *

ನಾವು ಇತ್ತೀಚಿನ ದಿನಗಳಲ್ಲಿ ನಮ್ಮದೇ ಆದ 'ಸಾಮಾನ್ಯ ಭಾಷೆ'ಯಲ್ಲಿ ಮಾತನಾಡುವುದನ್ನು ಮರೆತ್ತಿದ್ದೇವೆ ಅನ್ನಿಸುತ್ತಿದೆ. ಬಾಯಿಬಿಟ್ಟರೆ ಬರುವುದು ನಾವು ನಂಬಿದ, ನಮ್ಮ ನಿಷ್ಠೆ ಇರುವ ರಾಜಕೀಯ ಪಕ್ಷದ ಅಥವಾ ಸಿದ್ಧಾಂತದ ಪರಿಭಾಷೆಯೇ. ಆ ಪರಿಭಾಷೆಯೂ ಆ ಪಕ್ಷದ ಅಥವಾ ಸಿದ್ಧಾಂತದ ತಾತ್ವಿಕತೆಯಿಂದ ಹುಟ್ಟಿದ್ದಲ್ಲ; ಬದಲಾಗಿ ಸದ್ಯದ ಪರಿಸ್ಥಿತಿಯಲ್ಲಿ ತನ್ನ ಎದುರಾಳಿ ಎನಿಸಿರುವ ರಾಜಕೀಯ ಪಕ್ಷದ ಅಥವಾ ಸಿದ್ಧಾಂತದ ವಿಶ್ವಾಸಾರ್ಹತೆಯನ್ನು ನಾಶ ಮಾಡುವ ಗುರಿಯನ್ನಷ್ಟೇ ಹೊಂದಿದ ಪ್ರತಿಕ್ರಿಯಾತ್ಮಕ ಪರಿಭಾಷೆ ಅದು. ಇಂತಹ ಪರಿಭಾಷೆಯ ಬಳಕೆಯಿಂದ ಯಾವ ಚರ್ಚೆಯೂ ಬೆಳೆಯಲಾರದು; ಯಾವ ಸತ್ಯವನ್ನೂ ಬಿಚ್ಚಿಡಲಾಗದು. ಬದಲಾಗಿ ಸತ್ಯ ಮತ್ತಷ್ಟು ಮುಚ್ಚಿ ಹೋಗುವ ಸಂಭವವೇ ಹೆಚ್ಚು. ಇದಕ್ಕೆ ಉದಾಹರಣೆ, 'ವಂದೇ ಮಾತರಂ' ಬಗ್ಗೆ ಈಗ ನಾಡಿನಾದ್ಯಂತ ಹಿಂದೂ ರಾಷ್ಟ್ರೀಯವಾದಿ ಎಂದು ಹೇಳಲಾಗುವ ಬಿಜೆಪಿ ಮತ್ತು ಅದರ ಪರಿವಾರ ಹಾಗೂ ಸೆಕ್ಯುಲರ್ ಎಂದು ಹೇಳಲಾಗುವ ಕಾಂಗ್ರೆಸ್ ಮತ್ತು ಅದರ ಮಿತ್ರ(ಹಾಗೂ ಎಲ್ಲ ಬಣ್ಣಗಳ ಎಡಪಂಥೀಯ) ಪಕ್ಷಗಳ ನಡುವೆ ನಡೆಯುತ್ತಿರುವ ಪರೋಕ್ಷ ಚರ್ಚೆ.

ಬಂಕಿಮಚಂದ್ರ ಚಟರ್ಜಿ

ಮೊದಲಾಗಿ ಈ ಚರ್ಚೆಗೆ ಮೂಲಕಾರಣವಾದ ಸಂಗತಿಯೇ ಚರ್ಚಾರ್ಹವಾಗಿದೆ. ಇದೇ ಸೆಪ್ಟೆಂಬರ್ 7ಕ್ಕೆ 'ವಂದೇ ಮಾತರಂ'ಗೆ ನೂರು ವರ್ಷವಂತೆ. ಯಾವ ಆಧಾರದ ಮೇಲೆ ಇದನ್ನು ನಿರ್ಧರಿಸಲಾಯಿತೋ ತಿಳಿಯದು! ಏಕೆಂದರೆ ಈ ಗೀತೆ ಒಳಗೊಂಡಿರುವ ಬಂಕಿಮಚಂದ್ರ ಚಟರ್ಜಿ ಅವರ ಬಂಗಾಳಿ ಕಾದಂಬರಿ ಮೊದಲ ಪ್ರಕಟವಾದದ್ದು 1882ರಲ್ಲಿ. ಆದರೆ ಈ ಗೀತೆಯನ್ನು ಕಾದಂಬರಿ ಭಾಗವಾಗಿ ಬರೆಯಲಾಗಿರಲಿಲ್ಲ. ಅದಕ್ಕೆ ಆರು ವರ್ಷಗಳ ಮುಂಚೆಯೇ ಚಟರ್ಜಿ ಆ ಗೀತೆಯನ್ನು ಒಂದು ಸ್ವತಂತ್ರ ಭಕ್ತಿಗೀತೆಯಾಗಿ ಬರೆದು ಪ್ರಚುರಪಡಿಸಿದ್ದರು. ಅದು ಬಂಗಾಳಿ ಸಾರಸ್ವತ ಲೋಕದಲ್ಲಿ ಜನಪ್ರಿಯವಾದ ಪರಿಣಾಮವಾಗಿಯೇ ಏನೋ ಮತ್ತು ಆರು ವರ್ಷಗಳ ನಂತರ ತಾವು ಬರೆದ 'ಆನಂದ ಮಠ' ಕಾದಂಬರಿಯ ವಸ್ತುವಿಗೆ ಸೂಕ್ತವಾದುದು ಎಂದೆನ್ನಿಸಿಯೇ ಏನೋ, ಚಟರ್ಜಿ ಆ ಹಾಡನ್ನು ಆ ಕಾದಂಬರಿಯಲ್ಲಿ ಸ್ಫೂರ್ತಿ ಗೀತೆಯಾಗಿ ಬಳಸಿದರು. ಹೀಗಾಗಿ ಈ ಹಾಡಿಗೆ ಈಗ 130 ವರ್ಷ.

ಕಾದಂಬರಿಯನ್ನೇ ಲೆಕ್ಕಕ್ಕೆ ತೆಗೆದುಕೊಂಡರೆ, 124 ವರ್ಷ. ಗೀತೆಯ ರಚನೆಯ ವರ್ಷವನ್ನು ಲೆಕ್ಕಕ್ಕೆ ತೆಗೆದು ಕೊಂಡರೆ ಅದಕ್ಕೆ 130 ವರ್ಷ. ಆದರೆ ಕೇಂದ್ರ ಮಾನವ ಸಂಪನ್ಮೂಲ ಸಚಿವ ಅರ್ಜುನ್ ಸಿಂಗ್‌ರ ದಾಖಲೆಗಳ ಪ್ರಕಾರ ಈ ಗೀತೆಗೆ ಈಗ ಶತಮಾನೋತ್ಸವದ ಸಂಭ್ರಮ! ಬಹುಶಃ ಇದು ಗೀತೆ ಮೊದಲ ಬಾರಿಗೆ ಸ್ವಾತಂತ್ರ್ಯ ಸಂಗ್ರಾಮದ ಸ್ಫೂರ್ತಿ ಗೀತೆಯಾಗಿ ಬಳಕೆಯಾಗಿ ಒಂದು ನೂರು ವರ್ಷಗಳಾಗಿರುವ ಸಂದರ್ಭವಿರಬಹುದು. (ಅದು 1906ರ ವಾರಾಣಾಸಿ ಕಾಂಗ್ರೆಸ್ ಸಮ್ಮೇಳನದಲ್ಲಿ ರವೀಂದ್ರನಾಥ ಠಾಕೂರರು ಈ ಗೀತೆಯನ್ನು ಹಾಡಿದ್ದರ ಶತಮಾನೋತ್ಸವವೆಂದೂ ಹೇಳಲಾಗುತ್ತದೆ.)

ಸ್ವಾತಂತ್ರ್ಯ ಸಂಗ್ರಾಮದಲ್ಲಿ ಈ ಹಾಡಿನ ಬಳಕೆಯ ಬಗ್ಗೆ ಸುಮಾರು ಒಂದು ನೂರು ವರ್ಷಗಳ ಹಿಂದಷ್ಟೆ (1908) ಪ್ರಥಮ ಬಾರಿಗೆ ಮುಸ್ಲಿಂ ಲೀಗ್ ತನ್ನ ಆಕ್ಷೇಪಣೆಯನ್ನು ವ್ಯಕ್ತಪಡಿಸಿತು. ಆದರೆ ಯಾರೂ ಇದನ್ನು ದಾಖಲೆಗಳೊಂದಿಗೆ ಸ್ಪಷ್ಟಗೊಳಿಸುವ ಗೋಜಿಗೆ ಹೋಗಿಲ್ಲ. ಬಿಜೆಪಿಯೊಂದಿಗೆ ರಾಷ್ಟ್ರ ಭಕ್ತಿ ಮೆರೆಯುವ ಸ್ಪರ್ಧೆಯ ತುರುಸಿನಲ್ಲಿ ಅರ್ಜುನ್ ಸಿಂಗ್‌ರಿಗೆ ಇದೆಲ್ಲ ಅಗತ್ಯವಾಗಿಯೇ ಕಂಡಿಲ್ಲ!

ಅರ್ಜುನ ಸಿಂಗರೇನೋ ರಾಷ್ಟ್ರ ಭಕ್ತಿ ಮೆರೆಯುವ ಹುರುಪಿನಲ್ಲಿ, ಸೆ. 7ರಂದು ರಾಷ್ಟ್ರದ ಎಲ್ಲ ಶಾಲೆಗಳಲ್ಲೂ 'ವಂದೇ ಮಾತರಂ' ಹಾಡಬೇಕು ಎಂಬ ಆದೇಶ ಹೊರಡಿಸಿದರು. ಆದರೆ ಈ ಆದೇಶದ ಬೆನ್ನಿಗೇ ಕೆಲವು ಮುಸ್ಲಿಂ ಧಾರ್ಮಿಕ ನಾಯಕರಿಂದ ಅಪಸ್ವರಗಳೂ ಕೇಳ ಹೊರಟವು. ಇದಕ್ಕೊಂದು ಹಿನ್ನೆಲೆಯೂ ಇತ್ತು. 1999ರಲ್ಲಿ ಉತ್ತರ

ಅರ್ಜುನ ಸಿಂಗರೇನೋ ರಾಷ್ಟ್ರ ಭಕ್ತಿ ಮೆರೆಯುವ ಹುರುಪಿನಲ್ಲಿ, ಸೆ. ೭ರಂದು ರಾಷ್ಟ್ರದ ಎಲ್ಲ ಶಾಲೆಗಳಲ್ಲೂ 'ವಂದೇ ಮಾತರಂ' ಹಾಡಬೇಕು ಎಂಬ ಆದೇಶ ಹೊರಡಿಸಿದರು. ಆದರೆ ಈ ಆದೇಶದ ಬೆನ್ನಿಗೇ ಕೆಲವು ಮುಸ್ಲಿಂ ಧಾರ್ಮಿಕ ನಾಯಕರಿಂದ ಅಪಸ್ವರಗಳೂ ಕೇಳ ಹೊರಟವು. ಇದಕ್ಕೊಂದು ಹಿನ್ನೆಲೆಯೂ ಇತ್ತು. ೧೯೯೯ರಲ್ಲಿ ಉತ್ತರ ಪ್ರದೇಶದಲ್ಲಿ ಅಧಿಕಾರದಲ್ಲಿದ್ದ ಬಿಜೆಪಿ 'ವಂದೇ ಮಾತರಾಂ' ಗೀತೆಯನ್ನು ರಾಜ್ಯದ ಎಲ್ಲ ಶಾಲೆಗಳಲ್ಲೂ ಪ್ರತಿದಿನ ಹಾಡುವುದನ್ನು ಕಡ್ಡಾಯಗೊಳಿಸುವ ಆದೇಶ ಹೊರಡಿಸಿ, ಆಗಿನ ಪ್ರಧಾನಿ ವಾಜಪೇಯಿಯವರ ಮಧ್ಯಸ್ಥಿಕೆಯಲ್ಲಿ ಅದನ್ನು ವಾಪಸ್ ಪಡೆದಿತ್ತು. ಆಗ ಎತ್ತಿದ್ದ ಆಕ್ಷೇಪಣೆಗಳನ್ನೇ ಈಗಲೂ ಮುಸ್ಲಿಂ ಧಾರ್ಮಿಕ ನಾಯಕರು ಪುನರುಚ್ಚರಿಸುತ್ತಿದ್ದಾರೆ.

ಪ್ರದೇಶದಲ್ಲಿ ಅಧಿಕಾರದಲ್ಲಿದ್ದ ಬಿಜೆಪಿ 'ವಂದೇ ಮಾತರಾಂ' ಗೀತೆಯನ್ನು ರಾಜ್ಯದ ಎಲ್ಲ ಶಾಲೆಗಳಲ್ಲೂ ಪ್ರತಿದಿನ ಹಾಡುವುದನ್ನು ಕಡ್ಡಾಯಗೊಳಿಸುವ ಆದೇಶ ಹೊರಡಿಸಿ, ಆಗಿನ ಪ್ರಧಾನಿ ವಾಜಪೇಯಿಯವರ ಮಧ್ಯಸ್ಥಿಕೆಯಲ್ಲಿ ಅದನ್ನು ವಾಪಸ್ ಪಡೆದಿತ್ತು. ಆಗ ಎತ್ತಿದ್ದ ಆಕ್ಷೇಪಣೆಗಳನ್ನೇ ಈಗಲೂ ಮುಸ್ಲಿಂ ಧಾರ್ಮಿಕ ನಾಯಕರು ಪುನರುಚ್ಚರಿಸುತ್ತಿದ್ದಾರೆ. ಅರ್ಜುನ್‌ಸಿಂಗ್‌ರೇನೋ ಈಗ ತಮ್ಮ ಆದೇಶದಲ್ಲಿ ಹಾಡುವುದು ಕಡ್ಡಾಯವೆಂದು ಹೇಳಿಲ್ಲ ಎಂದು ಸಮಜಾಯಿಷಿ ನೀಡಿ, ರಾಷ್ಟ್ರ ಭಕ್ತಿಯ ಜೊತೆಗೆ ಸ್ವಲ್ಪ ಸೆಕ್ಯುಲರಿಸಂನ್ನೂ ಬೆರೆಸಿ ಕಾಂಗ್ರೆಸ್ ನಿಲುವನ್ನು ಬ್ಯಾಲೆನ್ಸ್ ಮಾಡಲು ಹೊರಟಿದ್ದಾರೆ. ಅವರೆ ತಮ್ಮ ನಿಲುವಿನ ಬಗ್ಗೆ ತಮಗೇ ನಂಬಿಕೆ ಅಥವಾ ಭರವಸೆ ಇಲ್ಲದ್ದನ್ನು ಸೂಚಿಸುವ ಈ ಸಮಜಾಯಿಷಿ ಹುಟ್ಟು ಹಾಕಿರುವ ರಾಜಕಾರಣ, ಎಷ್ಟು ಅಪಾಯಕಾರಿ ಎಂಬುದರ ಪರಿವೆಯೇ ಅವರಿಗೆ ಇದ್ದಂತಿಲ್ಲ.

ದೆಹಲಿಯ ಷಾಹಿ ಇಮಾಂ 'ವಂದೇ ಮಾತರಂ' ಹಾಡುವುದು ಇಸ್ಲಾಂಗೆ ಬಗೆದ ದ್ರೋಹವೆಂದು ಘೋಷಿಸಿದ್ದಾರೆ. ಹೈದರಬಾದ್‌ನ ಇಬ್ಬರು ಮೌಲ್ವಿಗಳು, ಅದೆಷ್ಟೇ ಒಳ್ಳೆಯ ಗುಣಮಟ್ಟದ ಶಾಲೆಯಾಗಿದ್ದರೂ ಅಲ್ಲಿ 'ವಂದೇ ಮಾತರಂ' ಹಾಡುವಂತಿದ್ದರೆ, ಅಂತಹ ಶಾಲೆಗಳಿಂದ ತಮ್ಮ ಮಕ್ಕಳನ್ನು ಬಿಡಿಸಿಕೊಂಡು ಬರಲು ಮುಸ್ಲಿಮರಿಗೆ ಸೂಚನೆ(ಫತ್ವಾ) ನೀಡಿದ್ದಾರೆ. ಮುಸ್ಲಿಂ ವೈಯುಕ್ತಿಕ ಕಾನೂನು ಮಂಡಳಿಯ ಸದಸ್ಯರೊಬ್ಬರು-ಅವರು ಆಧುನಿಕ ವಿದ್ಯೆ ಪಡೆದವರು-ಪತ್ರಿಕೆಯೊಂದರಲ್ಲಿ ಪ್ರಕಟವಾದ 'ವಂದೇ ಮಾತರಂ' ವಿವಾದ ಕುರಿತ ವಿಶ್ಲೇಷಣಾತ್ಮಕ ಲೇಖನವು, ಲೇಖನದ ಜೊತೆಗೆ ಪ್ರಕಟವಾಗಿರುವ ಭಾರತ ಮಾತೆಯ ಚಿತ್ರದ ಕಾರಣದಿಂದಾಗಿ ಮೈಲಿಗೆಗೊಂಡಿದೆ ಎಂದು ಟಿ.ವಿ. ಸಂದರ್ಶನವೊಂದರಲ್ಲಿ ಹೇಳುತ್ತಾರೆ!

ಬಿಜೆಪಿಯವರಂತೂ ರಾಷ್ಟ್ರ ಭಕ್ತಿಯು 'ವಂದೇ ಮಾತರಂ'ನಲ್ಲಿ ಮಾತ್ರ ಅಡಗಿರುವಂತೆ, ಮುಸ್ಲಿಂ ಧಾರ್ಮಿಕ ನಾಯಕರ ಅಸಮಾಧಾನವನ್ನು ಇಡೀ ಮುಸ್ಲಿಂ ಸಮಾಜದ ಮೇಲೆ ಹೊರಿಸಿ, ತನ್ನ ಹಿಂದೂ ರಾಷ್ಟ್ರೀಯವಾದಿ ರಾಜಕಾರಣ ಕುರಿತು ಇತ್ತೀಚೆಗೆ ತನ್ನಲ್ಲೇ ಉಂಟಾಗಿದ್ದ ಕೆಲವು ಅಪನಂಬಿಕೆಗಳನ್ನು ಪರಿಹರಿಸಿಕೊಳ್ಳಲು ಹಾತೊರೆಯುತ್ತಿದೆ. ಹಾಗಾಗಿಯೇ ಅದು ಈಗ ತಾನು ಆಳುತ್ತಿರುವ ರಾಜ್ಯಗಳಲ್ಲಿ 'ವಂದೇ ಮಾತರಂ' ಗೀತೆಯನ್ನು ಶಾಲೆಗಳಲ್ಲಿ ಕಡ್ಡಾಯ ಮಾಡಿ ಆದೇಶ ಹೊರಡಿಸಿದೆ. ಈ ಗೊಂದಲದ ಮಧ್ಯೆ ಎಡಪಂಥೀಯರೆನಿಸಿಕೊಂಡ ಕೆಲವರು ತಮ್ಮ ಉಗ್ರ ಕ್ರಾಂತಿಕಾರಕತೆಯ ಅಂಗವಾಗಿ ಅಲ್ಪಸಂಖ್ಯಾತರ ಹಿತರಕ್ಷಣೆಗೆ ಮುಂದಾಗುವ ಉತ್ಸಾಹದಲ್ಲಿ ಸೆಕ್ಯುಲರಿಸಂ ಹೆಸರಿನಲ್ಲಿ 'ವಂದೇ ಮಾತರಂ' ಹಾಡಿನ ಬಗ್ಗೆಯೇ ಜನರಲ್ಲಿ ತಪ್ಪು ತಿಳುವಳಿಕೆ ಉಂಟು ಮಾಡಲು ಯತ್ನಿಸುತ್ತಿರುವುದು ವಿಷಾದಕರ. 'ನಮ್ಮ ನಾಡು' ಪತ್ರಿಕೆಯ ಇದೇ ಸೆಪ್ಟೆಂಬರ್ ತಿಂಗಳ ನಾಲ್ಕರ ಸಂಚಿಕೆಯಲ್ಲಿ ಪ್ರಕಟವಾದ ಆರ್. ರಾಮಕೃಷ್ಣ ಎಂಬುವವರ 'ವಂದೇ ಮಾತರಂ ವಕ್ತಾರರು' ಎಂಬ ಶೀರ್ಷಿಕೆಯ ಲೇಖನ ಇದಕ್ಕೊಂದು ಉದಾಹರಣೆಯಾಗಿದೆ. (ಇಂತಹುದೇ ಲೇಖನಗಳು 'ಅಗ್ನಿ' ವಾರಪತ್ರಿಕೆ ಹಾಗೂ 'ಸಂವಾದ' ಮಾಸಿಕದಲ್ಲೂ ಪ್ರಕಟವಾಗಿವೆ.)

ಈ ಸಂಬಂಧ ಮೊದಲು ಸ್ಪಷ್ಟಪಡಿಸಬೇಕಾದದ್ದು ಎಂದರೆ, 'ವಂದೇ ಮಾತರಂ' ಗೀತೆಗೆ 'ಆನಂದ ಮಠ' ಕಾದಂಬರಿಯ ಹೊರತಾಗಿಯೂ, ಅದು ಕಾದಂಬರಿ

ದೆಹಲಿಯ ಷಾಹಿ ಇಮಾಂ 'ವಂದೇ ಮಾತರಂ' ಹಾಡುವುದು ಇಸ್ಲಾಂಗೆ ಬಗೆದ ದ್ರೋಹವೆಂದು ಘೋಷಿಸಿದ್ದಾರೆ. ಹೈದರಬಾದ್‌ನ ಇಬ್ಬರು ಮೌಲ್ವಿಗಳು, ಅದೆಷ್ಟೇ ಒಳ್ಳೆಯ ಗುಣಮಟ್ಟದ ಶಾಲೆಯಾಗಿದ್ದರೂ ಅಲ್ಲಿ 'ವಂದೇ ಮಾತರಂ' ಹಾಡುವಂತಿದ್ದರೆ, ಅಂತಹ ಶಾಲೆಗಳಿಂದ ತಮ್ಮ ಮಕ್ಕಳನ್ನು ಬಿಡಿಸಿಕೊಂಡು ಬರಲು ಮುಸ್ಲಿಮರಿಗೆ ಸೂಚನೆ ನೀಡಿದ್ದಾರೆ. ಮುಸ್ಲಿಂ ವೈಯುಕ್ತಿಕ ಕಾನೂನು ಮಂಡಳಿಯ ಸದಸ್ಯರೊಬ್ಬರು-ಅವರು ಆಧುನಿಕ ವಿದ್ಯೆ ಪಡೆದವರು-ಪತ್ರಿಕೆಯೊಂದರಲ್ಲಿ ಪ್ರಕಟವಾದ 'ವಂದೇ ಮಾತರಂ' ವಿವಾದ ಕುರಿತ ವಿಶ್ಲೇಷಣಾತ್ಮಕ ಲೇಖನವು, ಲೇಖನದ ಜೊತೆಗೆ ಪ್ರಕಟವಾಗಿರುವ ಭಾರತ ಮಾತೆಯ ಚಿತ್ರದ ಕಾರಣದಿಂದಾಗಿ ಮೈಲಿಗೆಗೊಂಡಿದೆ ಎಂದು ಟಿ.ವಿ. ಸಂದರ್ಶನವೊಂದರಲ್ಲಿ ಹೇಳುತ್ತಾರೆ!

ರಚನೆಗೆ ಮುನ್ನವೇ ರಚಿತವಾಗಿ ಜನಪ್ರಿಯವಾಗಿದ್ದುದರಿಂದ, ಒಂದು ಸ್ವತಂತ್ರ ಅಸ್ತಿತ್ವವಿದೆ. ಹಾಗೂ, ಅದು ಬಳಕೆಯಾಗಿರುವ 'ಆನಂದ ಮಠ', ಭಾರತವು ಒಂದು ರಾಷ್ಟ್ರವಾಗಿ(ನೇಷನ್ ಸ್ಟೇಟ್ ಅನ್ನುವ ಅರ್ಥದಲ್ಲಿ) ಕಲ್ಪನೆಗೆ ಬರುವ ಮುನ್ನವೇ ರಚಿತವಾದ ಕೃತಿಯಾಗಿದ್ದು, ಮುಘಲರ ಆಳ್ವಿಕೆಯ ಕೊನೆಯ ಘಟ್ಟದ ರಾಜಕೀಯ ಸ್ಥಿತ್ಯಂತರವನ್ನು ಆಗಿನ ಬಂಗಾಳದ ಸಂದರ್ಭದಲ್ಲಿ ಚಿತ್ರಿಸುವ ಒಂದು ಐತಿಹಾಸಿಕ ಕಾದಂಬರಿಯಾಗಿದೆ ಎಂಬುದನ್ನು. ಎರಡು ರಾಜಕೀಯ ಸಂಸ್ಕೃತಿಗಳ ಘರ್ಷಣೆಯೇ ಇದರ ವಸ್ತು. ಹತ್ತೊಂಭತ್ತನೇ ಶತಮಾನದ ಬರವಣಿಗೆಯ ಭಾವನಾತ್ಮಕ ಶೈಲಿ ಹಾಗೂ ಐತಿಹಾಸಿಕ ಕಾದಂಬರಿ ಪ್ರಕಾರ ಬೇಡುವ ರಭಸ ಗತಿ, ಈ ಘರ್ಷಣೆಯನ್ನು ಅತಿ ಆವೇಶಭರಿತವನ್ನಾಗಿ ಮಾಡಿದೆಯಾದರೂ, ರಾಮಕೃಷ್ಣ ಅವರ ಲೇಖನ ತಿಳಿಸುವಂತೆ ಎಲ್ಲಿಯೂ ಮುಸ್ಲಿಮರ ರಕ್ತದೋಕುಳಿಯ ಸಂಭ್ರಮದಲ್ಲಿ ಹಿಂದೂಗಳು 'ವಂದೇ ಮಾತರಂ' ಹಾಡುವ ಹುಚ್ಚುತನ ಚಿತ್ರಿತವಾಗಿಲ್ಲ. ಎಲ್ಲ ಭಾರತೀಯ ಭಾಷೆಗಳ ಸಾಹಿತ್ಯದ ನವೋದಯಕ್ಕೆ ಸ್ಫೂರ್ತಿ ನೀಡಿದ ವಂಗ ನವೋದಯದ ಪಿತಾಮಹರೆನಿಸಿದ ಬಂಕಿಮರು ಅಷ್ಟು ರೂಕ್ಷ ಲೇಖಕರಲ್ಲ.

ಕಾದಂಬರಿಯಲ್ಲಿ 'ವಂದೇ ಮಾತರಂ' ಬಳಕೆಯಾಗಿರುವುದು ಮುಸ್ಲಿಂ ಆಳ್ವಿಕೆ ವಿರುದ್ಧ ಹೋರಾಟಕ್ಕೆ ಜನರನ್ನು ಸಜ್ಜುಗೊಳಿಸುವ ಸ್ಫೂರ್ತಿಗೀತೆಯಾಗಿ. ಆದರೆ ಈ ಗೀತೆಯಲ್ಲೆಲ್ಲೂ, ರಾಮಕೃಷ್ಣ ಅವರು ತಿಳಿಸಿರುವಂತೆ ಮುಸ್ಲಿಮರನ್ನು ಮ್ಲೇಚ್ಛರು, ಯವನರು ಎಂದು ಕರೆದು ಅವರನ್ನು ಕೊಚ್ಚು ಕಡಿ ಎಂದು ಕರೆ ಕೊಡುವ ಸಾಲುಗಳಿಲ್ಲ. ಇದ್ದರೆ ಯಾವ ಆವೃತ್ತಿಯಲ್ಲಿ ಎಂಬುದನ್ನು ದಯಬಿಟ್ಟು ತೋರಿಸಿಕೊಡುವುದು ಒಳ್ಳೆಯದು. ಏಕೆಂದರೆ ಈ ಗೀತೆಯು ಕಾದಂಬರಿಗೆ ಹೊರತಾದ ಸ್ವತಂತ್ರ ರಚನೆಯಾಗಿದ್ದು, ತನ್ನ ಸಂದರ್ಭದ ರಾಷ್ಟ್ರ ಕಲ್ಪನೆ ಕುರಿತಾದ ಭಕ್ತಿ-ಶ್ರದ್ಧೆಗಳಷ್ಟೇ ಅಲ್ಲಿ ಪ್ರತಿಬಿಂಬಿತವಾಗಿವೆ.

ವಿಷಾದವೆಂದರೆ, ಈ ಸಂದರ್ಭದಲ್ಲಿ ಈ ಗೀತೆಯನ್ನು ಬೆಂಬಲಿಸುವ ಮತ್ತು ಖಂಡಿಸುವ ಇಬ್ಬರಿಗೂ ಈ ಸಂಸ್ಕೃತ ಭೂಯಿಷ್ಠ ಗೀತೆಯ ಪೂರ್ಣ ಪಾಠದ ಪರಿಚಯವಾಗಲಿ, ಅದರ ವಿವಿಧ ಆವೃತ್ತಿ ಹಾಗೂ ಸಂಪಾದಿತ ರೂಪಗಳ ಹಿನ್ನೆಲೆಗಳಾಗಲೀ ತಿಳಿದಂತಿಲ್ಲ. ಅದರೆ ನಮ್ಮ 'ಪ್ರಗತಿಪರ'ರೆನ್ನಿಸಿಕೊಂಡ ಕೆಲ ಗೆಳೆಯರು ತಮ್ಮ ರಾಜಕೀಯಕ್ಕಾಗಿ ಈ ಗೀತೆಯನ್ನು ಖಂಡಿಸಲು ಮುಸ್ಲಿಂ ಧಾರ್ಮಿಕ ನಾಯಕರಿಗಿಂತ ಮುಂದೆ ಹೋಗಿದ್ದಾರೆ..... ನಮ್ಮದೇ ವಿಜಯನಗರ ಸಾಮ್ರಾಜ್ಯದ ಪತನದ ಕಥೆಯನ್ನು ಹಿಂದೂ-ಮುಸ್ಲಿಂ ಘರ್ಷಣೆಯ ಕಥೆಯನ್ನಾಗಿ ಪರಿಭಾವಿಸಬಾರದೆಂದು ಜನರಿಗೆ ವಿವೇಕ ಹೇಳುವ ನಾವು, ಬಂಗಾಳದ ಕಥೆ ಬಗ್ಗೆ ಏಕೆ ವಿವೇಕ ಕಳೆದುಕೊಂಡಂತೆ ವರ್ತಿಸುತ್ತೇವೆ? 'ಆನಂದ ಮಠ' ಕಾದಂಬರಿಯನ್ನು ಬಳಸಿಕೊಂಡು 'ವಂದೇ ಮಾತರಂ'ನ ಐತಿಹಾಸಿಕತೆಯನ್ನೇಕೆ ಅಲ್ಲಗಳೆಯಲು ಹೊರಟಿದ್ದೇವೆ? ಈ ಮೂಲಕ ನಾವು ಮಾಡುತ್ತಿರುವ ರಾಜಕಾರಣದ ಪರಿಣಾಮಗಳಾದರೂ ಎಂತಹವು? ಯೋಚಿಸಬೇಕಾಗಿದೆ.

ಇಪ್ಪತ್ತನೇ ಶತಮಾನದ ಆರಂಭದ ಹೊತ್ತಿಗೆ ವಂಗ ನವೋದಯ ಪ್ರಭಾವ ದೇಶಾದ್ಯಂತ ಆಗುತ್ತಿದ್ದಂತೆ, 'ವಂದೇ ಮಾತರಂ' ಆ ವೇಳೆಗೆ ಗರಿಗೆದರುತ್ತಿದ್ದ ಸ್ವಾತಂತ್ರ್ಯ ಆಂದೋಲನಕ್ಕೆ ಒಂದು ಘೋಷಣೆಯನ್ನು ನೀಡಿತಲ್ಲದೆ, ಸ್ಫೂರ್ತಿ ಗೀತೆಯೂ ಆಯಿತು. ಹಿಂದೂ-ಸಿಖ್-ಮುಸ್ಲಿಂ-ಕ್ರಿಶ್ಚಿಯರೆನ್ನದೇ ದೇಶಾದ್ಯಂತ ಜನಸ್ತೋಮ, ಈ ಘೋಷಣೆ-ಗೀತೆಯೊಂದಿಗೆ ಪ್ರಭಾತ್ ಫೇರಿಗಳನ್ನು ನಡೆಸುತ್ತಿತ್ತು. ಹಾಗೂ ಬ್ರಿಟಿಷ್ ಸಾಮ್ರಾಜ್ಯದ ವಿರುದ್ಧ ಜನರನ್ನು ಸಂಘಟಿಸಲು ಇದೊಂದು ಭಾವನಾತ್ಮಕ ಸಾಧನವಾಗಿ ಪರಿಣಮಿಸಿತು. 1908ರಲ್ಲಿಯೇ ತನ್ನ ಅಮೃತಸರ ಸಮಾವೇಶದಲ್ಲಿ ಅಖಿಲ ಭಾರತದ ಮುಸ್ಲಿಂ ಲೀಗ್ ಈ ಗೀತೆಯ ಬಗ್ಗೆ, ಅದರ ಧಾರ್ಮಿಕ ಸ್ವರೂಪದ ಬಗ್ಗೆ ಅಪ ಸ್ವರವೆತ್ತಿತ್ತಾದರೂ, ಲೀಗ್ ಆಗಲಿ, ಸ್ವಾತಂತ್ರ್ಯ ಆಂದೋಲನದ ಮುಂಚೂಣಿಯಲ್ಲಿದ್ದ ಕಾಂಗ್ರೆಸ್ಸಾಗಲೀ, ಆಗ ಇನ್ನೂ ಪರಿಣಾಮಕಾರಿ ಸಂಸ್ಥೆ, ಸಂಘಟನೆಗಳಾಗಿ ಬೆಳೆದಿರಿಲಿಲ್ಲವಾದ್ದರಿಂದ ಅದೊಂದು ದೊಡ್ಡ ವಿವಾದವಾಗಿ ಬೆಳೆಯಲಿಲ್ಲ.

ಆದರೆ ಮೂವತ್ತರ ದಶಕದ ಹೊತ್ತಿಗೆ 'ವಂದೇ ಮಾತರಂ' ಬಳಕೆಯೂ, ಕಾಂಗ್ರೆಸ್ಸೂ, ಮುಸ್ಲಿಂ ಲೀಗೂ ದೊಡ್ಡದಾಗಿ ಬೆಳೆದಿದ್ದವು. ಹಾಗಾಗಿ ವಿವಾದವೂ ದೊಡ್ಡದಾಯಿತು. ಆಗ ಕಾಂಗ್ರೆಸ್ ಈ ಬಗ್ಗೆ ನೆಹರೂ ಅಧ್ಯಕ್ಷತೆಯಲ್ಲಿ ಬಹುಧರ್ಮೀಯರ ಒಂದು ಪರಿಶೀಲನಾ ಸಮಿತಿ ನೇಮಿಸಿತು. 1937ರಲ್ಲಿ ಈ ಸಮಿತಿ 'ವಂದೇ ಮಾತರಂ'ಗೆ 'ಆನಂದ ಮಠ' ಕಾದಂಬರಿ ಹೊರತಾಗಿಯೂ ಸ್ವತಂತ್ರ ಅಸ್ತಿತ್ವವಿದೆಯೆಂದು ಘೋಷಿಸಿತಲ್ಲದೆ, ಈ ಗೀತೆ ಸ್ವಾತಂತ್ರ್ಯಾಂದೋಲನದ ಅವಿಭಾಜ್ಯ ಅಂಗವೆಂದು ಪರಿಗಣಿಸಿ, ಅದರ ಮೊದಲೆರಡು ಭಾಗಗಳು ಯಾವುದೇ ಧಾರ್ಮಿಕ ಸ್ವರೂಪ ಹೊಂದಿಲ್ಲವಾದ್ದರಿಂದ ಕಾಂಗ್ರೆಸ್ ಕಾರ್ಯಕ್ರಮಗಳಲ್ಲಿ ಆ ಭಾಗಗಳನ್ನಷ್ಟೇ ಹಾಡಬಹುದಾಗಿದೆ ಎಂದು ಸಲಹೆ ಮಾಡಿತು. ಅಲ್ಲಿಯವರೆಗೆ ಕೂಡಾ, ಈ ಭಾಗಗಳು ಸಾಹಿತ್ಯಿಕವಾಗಿ ಲಲಿತ ಸುಂದರವೂ, ಸುಭಗವೂ ಮತ್ತು ಲಯ ಮಾಧುರ್ಯದಿಂದ ಕೂಡಿದ್ದರಿಂದ

ಮತ್ತು ಮುಂದಿನ ಭಾಗಗಳು ಕ್ಲಿಷ್ಟವೂ ಬಹುಶಃ ಹಾಡಲು ಕಷ್ಟವೂ ಆಗಿದ್ದರಿಂದ, ಗೀತೆಯ ಮೊದಲೆರಡು ಭಾಗಗಳ ನ್ನಷ್ಟೇ ಹಾಡಲಾಗುತ್ತಿತ್ತು. ಈಗ ಅದಕ್ಕೆ ಅಧಿಕಾರ ಮುದ್ರೆ ಬಿದ್ದು ವಿವಾದಕ್ಕೆ ತೆರೆ ಎಳೆಯಲಾಯಿತಷ್ಟೆ.

ಸ್ವಾತಂತ್ರ್ಯ ಘೋಷಣೆಯ ಸಂದರ್ಭದಲ್ಲೂ ಸಂವಿಧಾನ ರಚನಾ ಸಭೆಯಲ್ಲಿ ಈ ಗೀತೆ ಚರ್ಚೆಗೆ ಬಂತು. ರಾಷ್ಟ್ರ ವಿಭಜನೆಯ ಕಹಿ ವಾತಾವರಣದ ಕಾರಣದಿಂದಾಗಿ ಆ ಹೊತ್ತಿಗಾಗಲೇ ವಾದ್ಯವೃಂದದಲ್ಲಿ 'ಭಾರತದ ರಾಷ್ಟ್ರೀಯ ಸೇನಾ(ಐ.ಎನ್.ಎ) ಗೀತೆ'ಯಾಗಿ ಜನಪ್ರಿಯವಾಗಿದ್ದ ಠಾಕೂರರ 'ಜನಗಣಮನ'ವನ್ನು ರಾಷ್ಟ್ರಗೀತೆಯನ್ನಾಗಿಯೂ, 'ವಂದೇ ಮಾತರಂ'ನ್ನು(ಮೊದಲೆರಡು ಭಾಗಗಳನ್ನಷ್ಟೇ ಒಳಗೊಂಡ ಸಂಪಾದಿತ ರೂಪವನ್ನು)ಸಮಾನ ಗೌರವದೊಡನೆ ರಾಷ್ಟ್ರೀಯ ಗೀತೆಯನ್ನಾಗಿಯೂ (ನ್ಯಾಷನಲ್ ಸಾಂಗ್)ಅಂಗೀಕರಿಸಲಾಯಿತು. ಆದುದರಿಂದ, ಅಧಿಕೃತವಾಗಿ ಈಗ 'ವಂದೇ ಮಾತರಂ' ಎಂದರೆ ಅದರ ಮೊದಲೆರಡು ಭಾಗಗಳಷ್ಟೇ. ರಾಷ್ಟ್ರದ ಅಧಿಕೃತ ಧ್ವನಿ ಎನಿಸಿರುವ ಆಕಾಶವಾಣಿ ಪ್ರತಿದಿನ ತನ್ನ ಕಾರ್ಯ ಕ್ರಮಗಳನ್ನು ಆರಂಭಿಸುವುದು 'ವಂದೇ ಮಾತರಂ'ನ ಈ ಆವೃತ್ತಿಯೊಂದಿಗೇ. ಮುಸ್ಲಿಂ ಧಾರ್ಮಿಕ ನಾಯಕರಿಗೆ ಈ ಬಗ್ಗೆಯೆಲ್ಲಾ ನಮ್ಮ 'ಪ್ರಗತಿಪರ' ಚಿಂತಕರಿಗಿಂತ ಹೆಚ್ಚು ಮಾಹಿತಿ ಇದ್ದಂತಿದೆ.

ಹಾಗಾಗಿಯೇ ಇವರು ಇಂದು ವಿರೋಧ ವ್ಯಕ್ತಪಡಿಸುತ್ತಿರುವುದು, 'ಆನಂದ ಮಠ' ಕಾದಂಬರಿಯ ಹಿನ್ನೆಲೆಯಲ್ಲಾಗಲೀ ಅಥವಾ ಗೀತೆಯ ಪೂರ್ಣಪಾಠದಲ್ಲಿ ದೇಶವನ್ನು ದುರ್ಗೆಯಾಗಿ ಕಂಡಿರುವ ಹಿಂದೂ ವಿಶಿಷ್ಟ ಗ್ರಹಿಕೆ ಬಗ್ಗೆಯಾಗಲೀ ಅಲ್ಲ. ಅವರ ವಿರೋಧವಿರುವುದು, ಗೀತೆಯ ಈ ಅಧಿಕೃತ ಆವೃತ್ತಿಯಲ್ಲೂ ದೇಶವನ್ನು 'ಮಾತೆ'ಯಾಗಿ ದೈವೀಕರಿಸಿ ಅದಕ್ಕೆ ವಂದನೆ ಸಲ್ಲಿಸುವ ಉಕ್ತಿ ಭಂಗಿ ಇರುವುದಕ್ಕಾಗಿ. ಏಕದೇವತಾ ಶ್ರದ್ಧೆಯ ಇಸ್ಲಾಂ ಧರ್ಮದಲ್ಲಿ ಅಲ್ಲಾಹ್ ಹೊರತಾಗಿ ಮಿಕ್ಕಾವ ದೈವಕ್ಕೂ ವಂದನೆ ಸಲ್ಲಿಸುವ ಅವಕಾಶವಿಲ್ಲದಿರುವುದರಿಂದ, ಈ ಗೀತೆಯನ್ನು ಹಾಡುವುದು ಧರ್ಮ ದ್ರೋಹವೆನಿಸಿಕೊಳ್ಳುವುದು ಎಂಬುದು ಅವರ ವಾದ. ಸಾಮಾನ್ಯ ನೋಟಕ್ಕೆ, ನಾವು ಒಪ್ಪಿಕೊಂಡಿರುವ ಪ್ರಜಾಪ್ರಭುತ್ವ ಹಾಗೂ ಸೆಕ್ಯುಲರ್ ತತ್ವಗಳ ಸಾಂವಿಧಾನಿಕ ನೆಲೆಯಲ್ಲಿ ಈ ವಾದ ಸರಿಯೆನಿಸುತ್ತದೆ. ಆದರೆ ಈ ವಾದದಲ್ಲಿರುವ ಜಡ ದೃಷ್ಟಿಕೋನವನ್ನೊಮ್ಮೆ ಭೇದಿಸಿ ನೋಡಿದಾಗ, ಇದು ಕೇವಲ ಮೊಂಡು ಹಠವೆನ್ನಿಸುತ್ತದೆ.

ಮುಸ್ಲಿಂ ಧರ್ಮದ ಪ್ರಕಾರ, ಇರುವುದೊಂದೇ ದೈವ-ಅಲ್ಲಾಹ್. ಈ ದೈವ ಅಮೂರ್ತ, ಅನಂತ. ಇಂತಹ ಅಮೂರ್ತ ಅನಂತತೆ, ಮುಸ್ಲಿಮರು ವಾಸಿಸುವ ಯಾವುದೇ ರಾಷ್ಟ್ರ ವ್ಯವಸ್ಥೆ(ಅಥವಾ ಜಾಗ ಎಂದೇ ಎನ್ನಿ)ಯೂ ಸೇರಿದಂತೆ ಸಕಲವನ್ನೂ ಒಳಗೊಂಡಿರಬೇಕಲ್ಲವೇ? ಹಾಗಿರುವಾಗ, ಇಂಥಹ ರಾಷ್ಟ್ರ ಕಲ್ಪನೆಗೆ ವಂದಿಸಿದರೆ ಆ ವಂದನೆ ಆ ಅಲ್ಲಾಹ್‌ಗೇ ಸಲ್ಲುವುದಲ್ಲವೇ? ಇನ್ನು ಮಾತೆ ಸ್ತ್ರೀಲಿಂಗವಾಗಿರುವದರಿಂದ ಅಲ್ಲಾಹ್‌ಗೆ ಲಿಂಗಾರೋಪ ಮಾಡಲಾಗಿದೆ ಎನ್ನುವ ಕಾರಣಕ್ಕೂ ಕೆಲವರಿಂದ ವಿರೋಧ ವ್ಯಕ್ತವಾಗುತ್ತಿದೆ. ಗೀತೆ, ದೇಶದ ಪ್ರಕೃತಿಸೌಂದರ್ಯ-ಭಾಷಾ ಮಾಧುರ್ಯಗಳನ್ನು ಕಾವ್ಯಭಾಷೆಯಲ್ಲಿ ಮಂಡಿಸುತ್ತಿರುವುದರಿಂದ, ಆ ಭಾಷೆಯ ಜಾಯಮಾನಕ್ಕೆ ತಕ್ಕಂತೆ ಆ ವರ್ಣನೆಯ ವಸ್ತುವಿಗೆ ಸಹಜವಾಗಿಯೇ ಸ್ತ್ರೀಲಿಂಗ ಆರೋಪಿತವಾಗಿದೆ. ಧರ್ಮ ಈ ಕಾವ್ಯ ತರ್ಕವನ್ನೂ ಸಹಿಸಲಾಗದಷ್ಟು ಅಸೂಕ್ಷ್ಮವೂ, ಜಡವೂ ಆಗಿರಲಿಕ್ಕಿಲ್ಲದೇ? ಇರಲಾರದು. ಆ ಅಸೂಕ್ಷ್ಮತೆ, ಜಡತೆ ವ್ಯಾಖ್ಯಾನಕಾರರದು-ಧಾರ್ಮಿಕ ನಾಯಕರದು. ಆದರೆ ಸೆಕ್ಯುಲರಿಸಂ ಹೆಸರಿನಲ್ಲಿ ಇದನ್ನು ಪ್ರೋತ್ಸಾಹಿಸುವುದು ಎಂತಹ ಮೂರ್ಖತನ!



ಡಾ॥ ರಾಮಮನೋಹರ ಲೋಹಿಯಾ

ಮಹಮ್ಮದ್ ಪೈಗಂಬರರೇ ಜಗತ್ತಿನ ಕೊನೆಯ ಪ್ರವಾದಿ ಎಂದು ನಂಬಿರುವ ಇಸ್ಲಾಂ, ವ್ಯಾಖ್ಯಾನಗಳಿಗೆ ಅವಕಾಶವೀಯದೆ ಮುಚ್ಚಿಕೊಂಡ(closed) ಧರ್ಮ ಎನ್ನುವ ಸಾಮಾನ್ಯ ಅಭಿಪ್ರಾಯವಿದೆ. ಇದು ಇಸ್ಲಾಮನ್ನು ಅನ್ಯರ ಧರ್ಮವೆಂದು, ಹೊರಗಿನಿಂದಷ್ಟೇ ನೋಡುವವರ ಅಭಿಪ್ರಾಯವಿರಬಹುದು. ಆದರೆ ಇಸ್ಲಾಂನೊಳಗೇ ಎಲ್ಲ ಧರ್ಮಗಳಲ್ಲಿರುವಂತೆಯೇ ಉದಾರವಾದಿ ಹಾಗೂ ಜಡವಾದಿ ನಿರೂಪಣೆಗಳಲ್ಲದೆ, ಅವುಗಳ ನಡುವೆಯೇ ಅನೇಕ ಧಾರೆಗಳಿದ್ದು, ವೈವಿಧ್ಯಮಯ ಮುಸ್ಲಿಂ ಜೀವನ ಶೈಲಿ, ನಂಬಿಕೆಗಳಿಗೆ ಕಾರಣವಾಗಿದೆ. ಎಷ್ಟಾದರೂ ಧರ್ಮವನ್ನೂ ಬದುಕಲ್ಲಿ ಕಾರ್ಯಶೀಲಗೊಳಿಸಬೇಕಾದುದು, ಸ್ಪಂದನಶೀಲವಾದ ಜನಸಮೂಹವೇ ತಾನೆ? ಕಾಲ ದೇಶಗಳಿಗೆ ತಕ್ಕಂತೆ ಧರ್ಮ-ಸಂಹಿತೆ ಮರುವ್ಯಾಖ್ಯಾನಗೊಳ್ಳಬೇಕೆಂದು ಕುರ್‍ರಾನ್ ಗ್ರಂಥವೇ ತಿಳಿಸುತ್ತದೆಂದು ಹೇಳುವ ಉದಾರವಾದಿ ಧಾರೆಯೊಂದು-ಇಜ್ತಿಹಾದ್-ಇಸ್ಲಾಮೀ ಜಗತ್ತಿನಾದ್ಯಂತ ಕ್ರಿಯಾಶೀಲವಾಗಿದೆ. ಆದರೆ ಜಡವಾದಿ ಧಾರೆ ಇದನ್ನು 'ಪರಿಶುದ್ಧ ಇಸ್ಲಾಂ' ಹೆಸರಿನಲ್ಲಿ ದಮನ ಮಾಡುತ್ತಾ ಬರುತ್ತಿದೆ.

ಈ ಪರಿಶುದ್ಧ ಇಸ್ಲಾಮಿಗಳ ಪ್ರಕಾರ ಕಾರ್ಗಿಲ್ ಯುದ್ಧ ಸಂದರ್ಭದಲ್ಲಿ 'ವಂದೇ ಮಾತರಂ' ಘೋಷಣೆ ಆಧರಿಸಿ ದೇಶಭಕ್ತಿ ಗೀತೆಗಳನ್ನು ಬರೆದ ಜಾವೆದ್ ಅಖ್ತರ್ ನಿಜ ಮುಸ್ಲಿಮನೇ ಅಲ್ಲವಂತೆ! (ಹಾಗಾಗಿಯೇ ಆತ, ದೇವಬಂದಿ ಮೌಲ್ವಿಯು 'ವಂದೇ ಮಾತರಂ' ಹಾಡಬಾರದೆಂದರೆ ನಾನು ಅದನ್ನು ಎರಡು ಬಾರಿ ಹಾಡುತ್ತೇನೆ; ಸಂಘ ಪರಿವಾರದವರು ಹಾಡಲೇಬೇಕೆಂದು ಒತ್ತಾಯಿಸಿದರೆ ಒಮ್ಮೆಯೂ ಹಾಡುವುದಿಲ್ಲ ಎನ್ನುತ್ತಾನೆ!) ಇನ್ನು ಶತಮಾನಗಳ ಹಿಂದೆಯೇ ಸರಸ್ವತಿ ಸ್ತುತಿ ಬರೆದ ಬಿಜಾಪುರದ ಸುಲ್ತಾನನಿಂದ ಹಿಡಿದು, ಇತ್ತೀಚಿನ ನಮ್ಮ 'ನಟವರ ಗಂಗಾಧರ' ಖ್ಯಾತಿಯ ಕರೀಂ ಖಾನ್ ಹಾಗೂ ಕಾಶಿ ವಿಶ್ವನಾಥನ ಭಕ್ತರಾದ ಬಿಸ್ಮಿಲ್ಲಾಖಾನರ ಗತಿಯೇನು? ಹಾಗೇ 'ವಂದೇ ಮಾತರಂ'ನ್ನು ಧ್ಯಾನಸ್ಥರಾಗಿ ಹಾಡುವ ಸೂಫಿ ಗಾಯಕರಾದ ಖಾನ್ ಬಂಧುಗಳು ಮತ್ತು ಈ ಗೀತೆಗೆ ಆಧುನಿಕ ಲಯ ಅಳವಡಿಸಿ ಜನಪ್ರಿಯಗೊಳಿಸಿರುವ ಎ.ಆರ್. ರೆಹಮಾನ್?

ಹೀಗೆ ಮುಸ್ಲಿಮರೇ ಈ ಜಡವಾದಿ ವ್ಯಾಖ್ಯಾನವನ್ನು ಧಿಕ್ಕರಿಸುತ್ತಿರುವಾಗ, ನಾವು ಸೆಕ್ಯುಲರಿಸಂ ಹೆಸರಿನಲ್ಲಿ ಇವರನ್ನು ನಿಜವಾದ ಮುಸ್ಲಿಮರೇ ಅಲ್ಲ ಎಂದು ತೀರ್ಪು ನೀಡುವ ಸಂಪ್ರದಾಯವಾದಿಗಳೊಂದಿಗೆ ನಿಂತಿರುವುದು ಎಂಥ ವಿಚಿತ್ರ! ಬಹುಮುಖಿ ಸಂಸ್ಕೃತಿಯ ಪ್ರತಿಪಾದಕರೆನಿಸಿಕೊಂಡ ನಾವು ಎಡಪಂಥೀಯರು ನಿಜವಾಗಿ ಗುರುತಿಸಿಕೊಳ್ಳಬೇಕಾದ್ದು, ರಾಷ್ಟ್ರೀಯ ಹೋರಾಟದ ದಟ್ಟ ನೆನಪು ತಂದುಕೊಡುವ ಗೀತೆಯೊಂದರ ಶತಮಾನೋತ್ಸವ ಸಂದರ್ಭದಲ್ಲಿ ಅದನ್ನು ಹಾಡಿ ಸಂಭ್ರಮಿಸೋಣ ಎಂದೊಡನೆ, ಮತಾಂತರದ ಭೀತಿಗೊಳಗಾದವರಂತೆ ಆಡುವ ಮತೀಯವಾದಿಗಳೊಂದಿಗೋ ಅಥವಾ ಇವರನ್ನು ಧಿಕ್ಕರಿಸಿ ನಿಂತವರೊಂದಿಗೋ? ಇವರಲ್ಲಿ ಯಾರು ಸೆಕ್ಯುಲರಿಸ್ಟರು? ಬಲಪಂಥೀಯ ಎದುರಾಳಿ ರಾಜಕಾರಣವನ್ನು ಎದುರಿಸಲು, ಮತೀಯ ಬಲಪಂಥೀಯತೆಗೆ ಪ್ರೋತ್ಸಾಹ ನೀಡುವುದು ಎಡಪಂಥೀಯ ರಾಜಕಾರಣವೆನ್ನಿಸಿಕೊಳ್ಳುತ್ತದೆಯೇ? ಸೆಕ್ಯುಲರ್ ರಾಜಕಾರಣವೆನ್ನಿಸಿಕೊಳ್ಳುತ್ತದೆಯೇ? ವಿಚಿತ್ರವೆಂದರೆ ಮತೀಯವಾದಿ ಗುಂಪುಗಳು ತಮ್ಮ ರಕ್ಷಣೆಗೆ ಬಳಸಿಕೊಳ್ಳುತ್ತಿರುವುದೇ 'ಸೆಕ್ಯುಲರಿಸಂ' ಅಸ್ತ್ರವನ್ನು. ಅವುಗಳ ಪ್ರಕಾರ ಸೆಕ್ಯುಲರಿಸಂ ಎಂದರೆ ಮತೀಯತೆಯ ಆಚರಣೆಯ ಸ್ವಾತಂತ್ರ್ಯ!

ಇದು ನಾವು ಕಳೆದ ಐವತ್ತು ವರ್ಷಗಳಿಂದೀಚೆಗೆ, 'ಸೆಕ್ಯುಲರಿಸಂ' ತತ್ವವನ್ನು ನಿರೂಪಿಸುತ್ತಾ, ಆಚರಿಸುತ್ತಾ ಬಂದ ರೀತಿ ನೀತಿಗಳ ಫಲವೇ ಆಗಿದೆ. ಸೆಕ್ಯುಲರಿಸಂ ಎಂಬ ಶಬ್ದಕ್ಕೆ ಸಮಾನಾಂತರವಾದ ಭಾರತೀಯ ಶಬ್ದದ ಬಗೆಗೆ ನಾವು ಈವರೆಗೆ ಒಮ್ಮತಕ್ಕೆ ಬರಲಾಗದಿರುವುದೇ ಈ ಬಿಕ್ಕಟ್ಟಿನ ಆಳವನ್ನು ಸೂಚಿಸುತ್ತದೆ. ನಾವೀಗ ಪರ್ಯಾಯ ಶಬ್ದಗಳಂತೆ ಬಳಸುವ ಜಾತ್ಯಾತೀತತೆ, ಸರ್ವಧರ್ಮ ಸಮಭಾವ, ಧರ್ಮ ನಿರಪೇಕ್ಷತೆ ಮುಂತಾದ ಶಬ್ದಗಳು ಹೊರಡಿಸುವ ಅರ್ಥಗಳೇ ಬೇರೆ ಬೇರೆ ನೆಲೆಯಾಗಿವೆ. ಎಷ್ಟಾದರೂ ಸೆಕ್ಯುಲರ್ ಎನ್ನುವ ಕಲ್ಪನೆಯೇ ಪಶ್ಚಿಮದ ಸಂಸ್ಕೃತಿಯಿಂದ ಕಡ ಪಡೆದುಕೊಂಡ ಕಲ್ಪನೆ. ಇದನ್ನು ಈವರೆಗೆ ದೇಶೀಯಗೊಳಿಸಿಕೊಳ್ಳಲು ನಮಗೆ ಸಾಧ್ಯವೇ ಆಗಿಲ್ಲದಿರುವುದಕ್ಕೆ, ಆರಂಭದಲ್ಲೇ ಅದಕ್ಕೆ 'ದೀರ್ಘಾವಧಿ ರಾಜಕಾರಣವೇ ಧರ್ಮ; ಅಲ್ಪಾವಧಿ ಧರ್ಮವೇ ರಾಜಕಾರಣ' ಎಂದು ನಂಬಿದ್ದ ಗಾಂಧಿ ಮಾದರಿ ಇದ್ದರೂ, ಆಧುನಿಕತೆಯ ಹುರುಪಿನಲ್ಲಿ ರಾಜಕಾರಣವನ್ನು ಧರ್ಮದಿಂದ ಪ್ರತ್ಯೇಕಿಸುವ ತತ್ವವೆಂದು ಅರ್ಥ ಕೊಟ್ಟುಕೊಂಡಿದ್ದೇ ಕಾರಣವಾಗಿದೆ.

ನಮ್ಮ ಮೊದಲ ಪ್ರಧಾನಮಂತ್ರಿ-ರಾಷ್ಟ್ರೀಯ ಹೀರೋ ನೆಹರೂ ತಮ್ಮನ್ನು ನಾಸ್ತಿಕನೆಂದು ಗುರುತಿಸಿಕೊಂಡಿದ್ದೂ ಇದಕ್ಕೆ ಕಾರಣವಿರಬಹುದು. ಆದರೆ ಭಾರತದ ಸರಾಸರಿ ಪ್ರಜೆ- ಆತ ಯಾವ ಧರ್ಮಕ್ಕೇ ಸೇರಿರಲಿ- ತನ್ನ ಧರ್ಮವನ್ನು ಮತಾ ಚರಣೆಗಳ ರೂಪದಲ್ಲಿ ತನ್ನ ವ್ಯಕ್ತಿತ್ವದ ಅವಿಭಾಜ್ಯ ಅಂಗ ಮಾಡಿಕೊಂಡ ಒಂದು ವಿಶಿಷ್ಟ ಸಾಂಸ್ಕೃತಿಕ ಪರಂಪರೆಗೆ ಸೇರಿದವನಾಗಿದ್ದಾನೆ. ಕಳೆದ ಐವತ್ತು ವರ್ಷಗಳ ಆಧುನೀಕರಣದ ಯಾವ ಶಕ್ತಿಯೂ, ಸಾಮಾನ್ಯ ಭಾರತೀಯನ ಮನೋಮಾತೃಕೆಯಲ್ಲಿನ ಈ ಮತಮೂಲವಾದ ಸಾಂಸ್ಕೃತಿಕ ಲಂಗರುಗ

ಳನ್ನು ಕಳಚಿ ಹಾಕಲಾಗಿಲ್ಲ ಮತ್ತು ಆತನ ವ್ಯಕ್ತಿತ್ವದಿಂದ ಮತವನ್ನು ಪ್ರತ್ಯೇಕಗೊಳಿಸಲಾಗಿಲ್ಲ.

ಹೀಗಾಗಿ ಆಧುನಿಕ ಅರ್ಥದ ಸೆಕ್ಯುಲರಿಸಂ, ಭಾರತೀಯ ರಾಜಕಾರಣದ ಆಂತರಂಗಿಕ ಸತ್ಯಗಳಿಗೇ ಎರವಾಗಿದ್ದುಕೊಂಡು, ಈ ಕಾರಣದಿಂದಾಗಿಯೇ ತನ್ನ ಅರ್ಥೋದ್ದೇಶಕ್ಕೆ ವ್ಯತಿರಿಕ್ತವಾದ ಕೆಲಸಗಳನ್ನೇ ಪ್ರೇರೇಪಿಸುತ್ತಾ ಬಂದಿದೆ. ಸರ್ದಾರ್ ಪಟೇಲರು ಗುಜರಾತ್‌ನಲ್ಲಿ ಸರ್ಕಾರಿ ವೆಚ್ಚದಲ್ಲಿ ಕೈಗೊಂಡ ಸೋಮನಾಥ ದೇವಾಲಯದ ಪುನರುದ್ಧಾರದ ಕಾರ್ಯದಿಂದ ಹಿಡಿದು, ಕೇರಳದಲ್ಲಿ ಕಮ್ಯೂನಿಸ್ಟರು ಮುಸ್ಲಿಂ ಬಹುಸಂಖ್ಯಾತ ಮಲಪ್ಪುರಂ ಜಿಲ್ಲೆ ನಿರ್ಮಾಣ ಮಾಡಿದ್ದು, ರಾಜೀವ್‌ಗಾಂಧಿ ಷಾ ಬಾನು ಪ್ರಕರಣದಲ್ಲಿ ನ್ಯಾಯಾಲಯದ ತೀರ್ಪನ್ನೇ ಬುಡಮೇಲುಗೊಳಿಸಿದ್ದು ಹಾಗೂ ಆ ಅನಾಹುತವನ್ನು ಬ್ಯಾಲೆನ್ಸ್ ಮಾಡಲೆಂಬಂತೆ ಬಾಬ್ರಿ ಮಸೀದಿಯ ಬೀಗ ತೆಗೆಸಿ ಪೂಜೆಗೆ ಅವಕಾಶ ಮಾಡಿಕೊಟ್ಟಿದ್ದವರೆಗೆ, ಈ ಘನ ಕೆಲಸಗಳ ವೈವಿಧ್ಯ ಹಬ್ಬಿದೆ. ಇದಕ್ಕೆ ಕಾರಣ ಬಹುಧರ್ಮೀಯ ಸಂದರ್ಭದ ಸಮಾಜವೊಂದರಲ್ಲಿ ಮತಾಚರಣೆಗಳು ತಮ್ಮ ಸಾಂಸ್ಕೃತಿಕ ಆಶಯಗಳನ್ನು ಮೀರಿ, ರಾಜಕೀಯ ಶಕ್ತಿಯಾಗಿ ಪ್ರದರ್ಶಿತವಾಗುವ ಅಪಾಯದ ಬಗ್ಗೆ ಅರಿವೇ ಇರದಂತೆ, ನಮ್ಮ ರಾಜಕಾರಣವನ್ನು ಮತ -ಧರ್ಮಗಳ ಚಲನಶೀಲತೆಯಿಂದ ಬೇರ್ಪಡಿಸಿಟ್ಟು ಸರಳೀಕರಿಸುವುದು.

ಇದರಿಂದಾಗಿ ಭಾರತೀಯ ರಾಜಕಾರಣ ತನ್ನ ದೃಷ್ಟಿಕೇಂದ್ರವನ್ನೇ ಕಳೆದುಕೊಂಡಿದೆ. ಹೀಗಾಗಿ ಕಳೆದ 15–20 ವರ್ಷಗಳಲ್ಲಿ ರಾಜಕಾರಣದ ಅರ್ಥ–ಆದ್ಯತೆಗಳೇ ಬುಡ ಮೇಲುಗೊಂಡು, ಕೋಮುವಾದಿ ರಾಜಕಾರಣ ಕ್ರಮೇಣ ಜನಸಮೂಹದ ವಿಶ್ವಾಸಾರ್ಹತೆ ಹಾಗೂ ಮಾನ್ಯತೆ ಗಳಿಸಿಕೊಂಡು ರಾಷ್ಟ್ರಜೀವನದ ಮಧ್ಯರಂಗಕ್ಕೆ ಬರುವಂತಾಗಿರುವುದು ಮತ್ತು ಇದರ ಸಂಕೀರ್ಣ ಪರಿಣಾಮವಾಗಿ ಈಗ ಇಡೀ ದೇಶ ಮತೀಯ ಭಯೋತ್ಪಾದನೆಗೆ ಸಿಕ್ಕಿ ತಲ್ಲಣಗೊಂಡಿರುವುದು; ಸದಾ ತನ್ನ ಕಟ್ಟೆಚ್ಚರದಲ್ಲಿರುವ ಭಯಂಕರ ಶಿಕ್ಷೆಗೆ ಒಳಗಾಗಿರುವುದು.

ಆದುದರಿಂದ ಈಗಲಾದರೂ ನಾವು 'ಸೆಕ್ಯುಲರಿಸಂ' ತತ್ವವನ್ನು ಪುನರ್‌ನಿರೂಪಿಸುವ ಕಡೆ ಗಮನಹರಿಸಬೇಕಿದೆ. ಅದು ತನ್ನ ಪಾಶ್ಚಿಮಾತ್ಯ ಆಧುನಿಕ ಅರ್ಥದಲ್ಲಿ ರಾಷ್ಟ್ರ ವಿಭಜನೆಯ ಉದ್ವಿಗ್ನ ಸಂದರ್ಭದಲ್ಲಿ ತನ್ನ ವಿಶಿಷ್ಟ ಕೊಡುಗೆ ಸಲ್ಲಿಸಿ; ನಂತರ ಒಂದು ರಾಜಕೀಯ ಸಾಧನವಾಗಿ ಅವನತಿಗೊಂಡು, ತನ್ನ ಮೂಲ ಆಶಯಕ್ಕೆ ವ್ಯತಿರಿಕ್ತವಾದ ರಾಜಕಾರಣಕ್ಕೆ ದಾರಿಮಾಡಿಕೊಟ್ಟಿದೆ. ಈಗ ಅದಕ್ಕೆ ಅಂತರ್ಧರ್ಮೀಯ ಸಂದರ್ಭದ ಮತ ವಿಶಿಷ್ಟ ಭಾರತೀಯ ವ್ಯಕ್ತಿತ್ವವನ್ನು ಅರ್ಥಮಾಡಿಕೊಂಡು ರಾಜಕೀಯವನ್ನು ನಿರ್ವಹಿಸುವ, ಒಂದು ಸಾಂಸ್ಕೃತಿಕ ಗ್ರಹಿಕೆಯ ಆಯಾಮವನ್ನು ನೀಡಬೇಕಾಗಿದೆ. ಧರ್ಮವನ್ನು ಒಂದು ಏಕಶಿಲಾ ರೂಪದ ಜಡಶಕ್ತಿಯಾಗಿ ನೋಡಿ ಅದು ಪ್ರಜಾಪ್ರಭುತ್ವವಾದಿ ರಾಜಕಾರಣಕ್ಕೆ ಕಂಟಕವೆಂದು ಭಾವಿಸುವ ತಪ್ಪು ಮಾಡದೆ, ಅದರೊಳಗಿನ ಬಹುಮುಖಿ ಚಲನಶೀಲತೆಯನ್ನು ಪ್ರಜಾಪ್ರಭುತ್ವವಾದಿ ರಾಜಕಾರಣದ ಗುರಿ ಸಾಧನೆಗೆ ಬಳಸುವ ಪ್ರತಿಭೆಯನ್ನು ಅದಕ್ಕೆ ರೂಢಿಸಿಕೊಡ ಬೇಕಿದೆ.

ಇದಕ್ಕೆ ಮೊದಲಾಗಿ ನಮ್ಮ ಜಾತ್ಯಾತೀತವಾದಿಗಳು ಹಾಗೂ ಪ್ರಗತಿಪರರು ಎನ್ನಿಸಿಕೊಂಡವರು, ಧರ್ಮ ಕುರಿತ ತಮ್ಮ ಇಬ್ಬಂದಿ ನಿಲುವನ್ನು ಪರಿಹರಿಸಿಕೊಳ್ಳಬೇಕಿದೆ. ಆಗ ಮಾತ್ರ ಧರ್ಮದ ಹೆಸರಲ್ಲಿ ನಡೆಯುವ ಮತೀಯ ರಾಜಕಾರಣವನ್ನು ಅದರೆಲ್ಲ ಅವತಾರಗಳಲ್ಲಿ

ಮತೀಯ ಉಗ್ರವಾದಿ ಗುಂಪುಗಳೊಂದಿಗೆ ರಾಜಕೀಯ ಉಗ್ರಗಾಮಿ ಗುಂಪುಗಳು ಸಂಪರ್ಕ ಸಾಧಿಸುತ್ತಿವೆಯೆಂದು ಹೇಳಲಾಗುತ್ತಿದೆ. ಆದುದರಿಂದ ಇದನ್ನು ತುರ್ತಾಗಿ–ಮುಸ್ಲಿಂ ಲೇಖಕರ, ಚಿಂತಕರ ಪ್ರಗತಿಪರ ಧಾರ್ಮಿಕ ನಾಯಕರ ಮುತುವರ್ಜಿಯಲ್ಲಿ–ಎಲ್ಲರೂ ಸೇರಿ ರೂಪಿಸಬೇಕಾಗಿದೆ. ಆಗ ಅದು ಇಡೀ ಭಾರತೀಯ ಸಮಾಜದ ಹೊಸ ಜಾಗೃತಿ ಆಂದೋಲನವಾಗಿ ವಿಸ್ತರಿಸಬಲ್ಲದು. ಅದಕ್ಕಾಗಿ ನಮ್ಮ ಹಳೆಯ ಸೆಕ್ಯುಲರ್ ಹ್ಯಾಂಗೋವರ್‌ಗಳಿಂದ ಕಳಚಿಕೊಂಡ ಒಂದು ಹೊಸ ಮನೋಭೂಮಿಕೆಯೇ ಸಿದ್ಧವಾಗಬೇಕಿದೆ.

ಸ್ಪಷ್ಟವಾಗಿ ಗುರುತಿಸಿ ಎದುರಿಸಲು ಸಾಧ್ಯವಾಗುತ್ತದೆ: ಶಿವಮೊಗ್ಗೆಯ ಬೀದಿ ಬೀದಿಗಳಲ್ಲಿ ಗಣಪತಿ ವಿಸರ್ಜನೆ ಸಂದರ್ಭದಲ್ಲಿ ಹತ್ತು–ಹನ್ನೆರಡು ವರ್ಷಗಳ ಬಾಲಕರೂ ಕೆಂಪು ತಿಲಕವಿಟ್ಟು ಕೇಸರಿ ತಲೆಪಟ್ಟಿ ಕಟ್ಟಿಕೊಂಡು ರಸ್ತೆಗಳಲ್ಲಿ ಉದ್ರಿಕ್ತವಾಗಿ ಕುಣಿಯುವುದನ್ನು ಕಂಡಾಗ ಆಗುವಷ್ಟೇ ಗಾಬರಿ; ಬೀದಿ ಬೀದಿಗಳಲ್ಲಿ ಹೆಚ್ಚುತ್ತಿರುವ ಬುರ್ಖಾ, ಗಡ್ಡ, ಟೋಪಿಗಳನ್ನು ಕಂಡಾಗಲೂ ಆಗತೊಡಗುತ್ತದೆ. ಇವೆರಡೂ ದೃಶ್ಯಗಳು ಇತ್ತೀಚಿನವರೆಗೆ ಭಾರತದ ಹೆಮ್ಮೆ ಎನಿಸಿದ್ದ ಬಹುಮುಖಿ ಧಾರ್ಮಿಕ ಸಂಸ್ಕೃತಿಯ ಸ್ಥಾನವನ್ನು ಏಕಮುಖಿ ಧಾರ್ಮಿಕ ರಾಜಕಾರಣ ಆಕ್ರಮಿಸಿಕೊಳ್ಳುತ್ತಿರುವುದರ ದ್ಯೋತಕಗಳೇ ಆಗಿವೆ. ಇವು ಪ್ರಜಾಪ್ರಭುತ್ವ – ಸಮಾಜವಾದಿ ಆದರ್ಶ–ಆಶಯಗಳಿಗೆ ಮಾರಕವೇ ಆಗಿವೆ.

ಇದರ ಬಗ್ಗೆ ತಾತ್ವಿಕ ಸ್ಪಷ್ಟತೆ ಹಾಗೂ ರಾಜಕೀಯ ಮುನ್ನೋಟ ಇದ್ದುದರಿಂದಲೇ ಸಮಾಜವಾದಿ ನಾಯಕ ಡಾ॥ ರಾಮಮನೋಹರ ಲೋಹಿಯಾ ಅವರು ಏಕರೂಪದ ನಾಗರೀಕ ಸಂಹಿತೆಯನ್ನು 1967ರಲ್ಲಿ ಚುನಾವಣಾ ವಿಷಯವನ್ನಾಗಿ ಮಾಡಿಕೊಂಡು, ಅದರ ಪರವಾಗಿ ಪ್ರಚಾರ ನಡೆಸುವ ದಿಟ್ಟತನ ತೋರಿಸಿದ್ದರು. ಇದರಿಂದಾಗಿ ಗಣನೀಯ ಮುಸ್ಲಿಂ ಜನಸಂಖ್ಯೆ ಇದ್ದ ಕ್ಷೇತ್ರಗಳಲ್ಲಿ ಅವರ ಪಟ್ಟ ಶಿಷ್ಯ ಕಿಷನ್ ಪಟ್ನಾಯಕ್ ಸೇರಿದಂತೆ ಅವರ ಅನೇಕ ಅಭ್ಯರ್ಥಿಗಳು ಸೋತರು. ಆದರೆ ರಾಜಕೀಯ ಮುತ್ಸದ್ದಿಯಾಗಿದ್ದ ಲೋಹಿಯಾಗೆ ರಾಜಕಾರಣವೆಂದರೆ ಬರೀ ಪಕ್ಷ ಕಟ್ಟುವುದಲ್ಲ, ದೇಶ ಕಟ್ಟುವುದೂ ಆಗಿತ್ತು; ನಿಜವಾದ ರಾಜಕಾರಣವೆಂದರೆ ದೇಶ ಕಟ್ಟುವುದರ ಅಂಗವಾಗಿ ಪಕ್ಷ ಕಟ್ಟುವುದೇ ಆಗಿದೆ ಎಂಬುದು ಗೊತ್ತಿತ್ತು.

ಆದರೆ ನಾವು ಇದನ್ನು ಅರ್ಥಮಾಡಿಕೊಳ್ಳಲು ಸತತವಾಗಿ ನಿರಾಕರಿಸುತ್ತಾ ಸೆಕ್ಯುಲರಿಸಂನ ಈಚಿನ ಆವೃತ್ತಿ ಪ್ರಕಾರ, 'ಹಿಂದೂ ಒಬ್ಬ ದುಷ್ಟ ಶತ್ರು; ಅವನನ್ನು ನಮ್ಮ ಪುರಾತನರು ಅವನ ಪುರಾತನರನ್ನು ದಮನ ಮಾಡಲು ಬಳಸಿಕೊಂಡ ಬಲ ಪ್ರಯೋಗದ ಮೂಲಕವೇ ನಿಗ್ರಹಿಸಬೇಕು' ಎಂಬ ಘೋಷಣಾಸಾಹಿತ್ಯವನ್ನು ಬಹಿರಂಗವಾಗಿ ಹಂಚಿ ಲಷ್ಕರನ್ನು ಬೆಳೆಸಿದ ಹಫೀಜ್ ಮಹಮ್ಮದ್ ಸಯೀದ್‌ನನ್ನು ಒಬ್ಬ ರಾಷ್ಟ್ರದ್ರೋಹಿ ಎಂದು ಪರಿಗಣಿಸದೆ, ಒಬ್ಬ ತಲೆಕೆಟ್ಟ ಮತೀಯವಾದಿ ಎಂದಷ್ಟೇ ಲಘುವಾಗಿ ಪರಿಗಣಿಸಿ ಉದಾಸೀನವಾಗಿರಲು ಸಾಧ್ಯವಾಯಿತು. ಇಂತಹ ರಾಜಕೀಯ ಅಪಾರ್ಥದಿಂದಾಗಿ ಉಂಟಾದ ವಾತಾವರಣದಿಂದಾಗಿಯೇ, 1999ರಲ್ಲಿ ಔರಂಗಾಬಾದ್‌ನಲ್ಲಿ 'ನಮ್ಮ ದೇಶ ಇಸ್ಲಾಂ; ಭಾರತವಲ್ಲ' ಎಂಬ ಭಾಷಣ -ಘೋಷಣೆಗಳು ಮೊಳಗಿದ ಸಿಮಿ(SIMI) ಸಮ್ಮೇಳನ ಯಾರ ಗಮನವನ್ನೂ ಸೆಳೆಯದೆ ನಡೆಯಲು ಸಾಧ್ಯವಾದದ್ದು.

ಈ ಸಮ್ಮೇಳನದಲ್ಲಿಯೇ ಈಚಿನ ಅಮಾನವೀಯ ಮುಂಬೈ ರೈಲು ಸರಣಿಸ್ಫೋಟ ದುರಂತವರೆಗೆ ಮುಟ್ಟಿರುವ ಭಯೋತ್ಪಾದನಾ ಕಾರ್ಯಕ್ರಮದ ಹಿಂದಿರುವ ಜಾಲದ ರಚನೆ ಆರಂಭವಾದದ್ದು ಎಂದು ಹೇಳಲಾಗಿದೆ. ಇದನ್ನು ಗುಪ್ತಚರ ಇಲಾಖೆಯೂ ಈಗ ಖಚಿತಪಡಿಸಿದೆ. (ವಿವರಗಳಿಗೆ ನೋಡಿ: ಜುಲೈ 28, 2006ರ 'ಫ್ರಂಟ್ ಲೈನ್') ಅಷ್ಟೇ ಅಲ್ಲ, ಮುಂಬೈ ರೈಲು ಸರಣಿ ಸ್ಫೋಟಗಳ ನಂತರ ಹಬ್ಬಿದ 'ಎಲ್ಲಾ ಮುಸ್ಲಿಮರೂ ಭಯೋತ್ಪಾದಕರಲ್ಲ; ಅದು ಭಯೋತ್ಪಾದಕರೆಲ್ಲರೂ ಮುಸ್ಲಿಮರೇ' ಎಂಬ ಎಸ್ಸೆಮ್ಮೆಸ್ಸ್‌ಗೆ ಈಗ ಅಧಿಕೃತ ಮುದ್ರೆಯೂ ಬಿದ್ದಿದೆ: ಸ್ಥಳೀಯ ಮುಸ್ಲಿಮರ' ಸಹಕಾರವಿಲ್ಲದೆ ಹೊರಗಿನವರು ಇಷ್ಟು ವ್ಯವಸ್ಥಿತವಾಗಿ ಹಾಗೂ ಕರಾರುವಾಕ್ಕಾಗಿ ಭಯೋತ್ಪಾದಕ ಕೃತ್ಯಗಳನ್ನು ನಡೆಸಲು ಸಾಧ್ಯವಿಲ್ಲವೆಂದು ಭಯೋತ್ಪಾದನಾ ನಿಗ್ರಹದಳವೇ ಈಗ ಹೇಳಿದೆ. ಇದು ನಿಜವಾದ ದುರಂತ, ಮುಸ್ಲಿಂ ಸಮಾಜದ ದುರಂತ ಹಾಗೂ ನಮ್ಮೆಲ್ಲರ ದುರಂತ–ರಾಷ್ಟ್ರೀಯ ದುರಂತ.

ಇದಕ್ಕೇನು ಕಾರಣ? ಸೆಕ್ಯುಲರಿಸಂ ಹೆಸರಿನಲ್ಲಿ ಮುಸ್ಲಿಂ ಸಮಾಜವನ್ನು ಒಂದು 'ಪ್ರತ್ಯೇಕ ಖಂಡ' ಎಂದು ನೋಡಿ, ಅದರೊಳಗಿನ ಸಂಪರ್ಕಶೀಲ ಬಹುಮುಖಿ ಸಂಸ್ಕೃತಿ ಸ್ರೋತವನ್ನು ಗುರುತಿಸಿ ಪ್ರೋತ್ಸಾಹಿಸದೇ ಹೋಗಿದ್ದು. ಈಗಲೂ ಅಲ್ಲಲ್ಲಿ ಈ ಸಮಾಜದಲ್ಲಿ ಅಂತಹ ಸಂಸ್ಕೃತಿಯ ಕಿಡಿಗಳು ಕಾಣುವುವಾದರೂ, ಅವು ಪೂರಕ ವಾತಾವರಣವಿಲ್ಲದೆ ಕ್ಷಣಿಕವಾಗಿ ಉರಿದು ಆರುತ್ತಾ, ಒಟ್ಟಾಗಿ ಒಂದು ಶಕ್ತಿಯಾಗಿ ಹೊರಹೊಮ್ಮಲಾಗದೆ ಉಳಿದಿವೆ. ಹಾಗೆ ಸಾಧ್ಯವಿದ್ದುದಾದರೆ ಸದ್ಯದ ಪರಿಸ್ಥಿತಿ ನಿಭಾಯಿಸಲು ಭಯೋತ್ಪಾದನಾ ಚಟುವಟಿಕೆಗಳ ಮೇಲೆ ನಿಗಾ ಇಡಲು ಮುಸ್ಲಿಂ ಸಮಾಜದೊಳಗೇ ಒಂದು ಜಾಗೃತಿ ಆಂದೋಲನ ಉಂಟಾಗಬೇಕಿತ್ತು; ಆದಂತೆ ತೋರುತ್ತಿಲ್ಲ. ಆದರೆ ಇಂದು ಇದು ಒಂದು ರಾಷ್ಟ್ರೀಯ ಅಗತ್ಯವಾಗಿದೆ.

ಏಕೆಂದರೆ ಮತೀಯ ಉಗ್ರವಾದಿ ಗುಂಪುಗಳೊಂದಿಗೆ ರಾಜಕೀಯ ಉಗ್ರಗಾಮಿ ಗುಂಪುಗಳು ಸಂಪರ್ಕ ಸಾಧಿಸುತ್ತಿವೆಯೆಂದು ಹೇಳಲಾಗುತ್ತಿದೆ. ಆದುದರಿಂದ ಇದನ್ನು ತುರ್ತಾಗಿ–ಮುಸ್ಲಿಂ ಲೇಖಕರ, ಚಿಂತಕರ, ಪ್ರಗತಿಪರ ಧಾರ್ಮಿಕ ನಾಯಕರ ಮುತುವರ್ಜಿಯಲ್ಲಿ–ಎಲ್ಲರೂ ಸೇರಿ ರೂಪಿಸಬೇಕಾಗಿದೆ. ಆಗ ಅದು ಇಡೀ ಭಾರತೀಯ ಸಮಾಜದ ಹೊಸ ಜಾಗೃತಿ ಆಂದೋಲನವಾಗಿ ವಿಸ್ತರಿಸಬಲ್ಲದು. ಅದಕ್ಕಾಗಿ ನಮ್ಮ ಹಳೆಯ ಸೆಕ್ಯುಲರ್ ಹ್ಯಾಂಗೋವರ್‌ಗಳಿಂದ ಕಳಚಿಕೊಂಡ ಒಂದು ಹೊಸ ಮನೋಭೂಮಿಕೆಯೇ ಸಿದ್ಧವಾಗಬೇಕಿದೆ. ಅದುವೇ ಹೊಸ ಸೆಕ್ಯುಲರಿಸಂನ ನಿಜವಾದ ಉದಯ. ಅಲ್ಲಿಂದಲೇ 'ವಂದೇ ಮಾತರಂ'ನ್ನು ಕಡ್ಡಾಯಗೊಳಿಸಲು ಹಾತೊರೆಯುವ ಮನಸ್ಸುಗಳ ಪ್ರತೀಕವೆನಿಸುವ ರಾಜಕಾರಣದ ಅಸ್ತಮಾನ ಕೂಡಾ. □

('ಬೇರು ಬಿಳಲು'–2006ರಿಂದ)

ನೆರೆ ಪರಿಹಾರದಲ್ಲಿ ಕಾರ್ಪೊರೇಟ್ ಪ್ಯಾರಾಸೈಟುಗಳು!

ಶಿವಸುಂದರ್

ಪ್ರಖ್ಯಾತ ಪತ್ರಕರ್ತ ಪಿ. ಸಾಯಿನಾಥ್‌ರವರು ಬರೆದಿರುವ "Everybody Loves a Good Drought" ಎಂಬ ಪುಸ್ತಕದಲ್ಲಿ ಹೇಗೆ ಬರಗಾಲವೂ ರಾಜಕಾರಣಿಗಳಿಗೆ ಮತ್ತು ಅಧಿಕಾರಿಗಳಿಗೆ ಹಬ್ಬದಂತ ಸಂತೋಷ ಉಂಟುಮಾಡುತ್ತದೆ ಎಂದು ವಿವರಿಸಿದ್ದಾರೆ. ಕರ್ನಾಟಕದ ಇಂದಿನ ಸಂದರ್ಭದಲ್ಲಿ 'ಬರ'ವನ್ನೇ ನೆರೆ ಎಂದು ಬದಲಿಸಿಕೊಂಡರೆ ಸಾಕು. ಆದರೆ ಇಂದಿನ ನೆರೆ ಸಂದರ್ಭದಲ್ಲಿ ಅವರುಗಳ ಜೊತೆಗೆ ಉದ್ಯಮಿಗಳನ್ನೂ ಪಟ್ಟಿಯಲ್ಲಿ ಸೇರಿಸಿಕೊಳ್ಳಬೇಕು! ನರೆ ಲಕ್ಷಾಂತರ ಜನರ ಬದುಕನ್ನೇ ಕೊಚ್ಚಿ ಹಾಕಿದ್ದರೆ ಈ ನೆರೆಯಲ್ಲೇ ಹಲವು ಬಗೆಯಲ್ಲಿ ಸಿರಿಯನ್ನು ದಕ್ಕಿಸಿಕೊಳ್ಳುತ್ತಿರುವ ಉದ್ಯಮಿಗಳು ಔದಾರ್ಯದ ಹೆಸರಲ್ಲಿ, ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿಯ ಹೆಸರಲ್ಲಿ ಪ್ಯಾರಾಸೈಟುಗಳಂತೆ ನೆರೆ ಸಂತ್ರಸ್ತರ ಬದುಕಿಗೆ ಹತ್ತಿಕೊಂಡಿದ್ದಾರೆ. ಪ್ಯಾರಾಸೈಟುಗಳು ತಾವು ನೆಲೆ ಕಂಡುಕೊಂಡ ಜೀವಿಗಳ ಪ್ರಾಣ ಮತ್ತು ಕಸುವನ್ನೇ ಹೀರಿ ಬದುಕುವಂತೆ ಈ ಕಾರ್ಪೊರೇಟ್ ಉದ್ಯಮಿಗಳು ನೆರೆ ಪರಿಹಾರವನ್ನೇ ಉದ್ಯಮವಾಗಿಸಿಕೊಂಡು ನೆರೆ ಸಂತ್ರಸ್ತರ ಪ್ರಾಣ ಮತ್ತು ಕಸುವನ್ನು ಹೀರಲಿದ್ದಾರೆ.

ಆದರ ಜೊತೆಗೆ ತಾವು ಮಾಡುತ್ತಿರುವುದೇ ಪರೋಪಕಾರ ಎಂಬಂತೆ ತಮ್ಮ ಸುಲಿಗೆಗೆ ಔದಾರ್ಯದ ಮುಸುಕನ್ನೂ ಹಾಕುತ್ತಿದ್ದಾರೆ. ಆ ಮುಸುಕನ್ನು Public- Private Partanership –PPP ಎಂಬ ಹೆಸರಲ್ಲಿ ಸರ್ಕಾರವೇ ಒದಗಿಸುತ್ತದೆ. ಮತ್ತು ಅದಕ್ಕೆ *"ಆಸರೆ"* ಎಂಬ ಕಾರ್ಪೊರೇಟ್ ಔದಾರ್ಯವನ್ನೂ ಮತ್ತು ಜನರ ನಿಸ್ಸಹಾಯಕತೆಯನ್ನು ಪ್ರತಿಬಿಂಬಿಸುವ ಹೆಸರನ್ನು ನೀಡಲಾಗಿದೆ. ಆದರೆ ನೆರೆ ಸಂತ್ರಸ್ತರ ದಾರುಣ ಪರಿಸ್ಥಿತಿಯ ಬಗ್ಗೆ ಕಣ್ಣಿಗೆಕಟ್ಟುವಂತೆ ವರದಿ ನೀಡಿದ ಮಾಧ್ಯಮಗಳಾಗಲೀ, ಜನತೆಯಾಗಲೀ ಈ "ಆಸರೆ"ಯ ರಾಜಕಾರಣದ ಬಗ್ಗೆ ತಲೆಕೆಡಿಸಿಕೊಳ್ಳುತ್ತಿಲ್ಲ!

ಕರ್ನಾಟಕ ಸರ್ಕಾರದ ವಿಪತ್ತು ನಿರ್ವಹಣಾ ಪ್ರಾಧಿಕಾರದ ಪ್ರಕಾರ ಒಟ್ಟಾರೆಯಾಗಿ ಕರ್ನಾಟಕದಲ್ಲಿ ನೆರೆಹಾವಳಿಯಿಂದ 3,58,755 ಮನೆಗಳು ಕುಸಿದಿವೆ. ಅಥವಾ ಹಾಳಾಗಿವೆ ಎಂದು ಅಂದಾಜು ಮಾಡಿದೆ. ಸರ್ಕಾರದ ಪ್ರಕಾರ ಇದರಲ್ಲಿ ಶೇ.50ರಷ್ಟು ಅಂದರೆ ಹೆಚ್ಚೂ ಕಡಿಮೆ 1.5 ಲಕ್ಷದಷ್ಟು ಮನೆಗಳನ್ನು ಖಾಸಗಿ ಸಹಯೋಗದೊಂದಿಗೆ ಅಂದರೆ ಪ್ರಧಾನವಾಗಿ ಉದ್ಯಮಿಗಳ ಮತ್ತು ಮಠ-ಮಾನ್ಯಗಳ ಸಹಕಾರದೊಂದಿಗೆ ಕಟ್ಟಿಸುವ ಇರಾದೆಯನ್ನು ಹೊಂದಿದೆ. ಸರ್ಕಾರ ನೀಡಿರುವ ಸೂಚನೆಯ ಪ್ರಕಾರ ಪ್ರತಿಯೊಂದು ಮನೆಯೂ ಆರ್.ಸಿ.ಸಿ ಚಾವಣಿ ಹೊಂದಿರಬೇಕು. ಸಿಮೆಂಟ್‌ನಿಂದ ಗೋಡೆ ಕಟ್ಟಿರಬೇಕು. ಹೀಗಾಗಿ ಪ್ರತಿ ಮನೆ ನಿರ್ಮಾಣಕ್ಕೆ ಒಂದು ಲಕ್ಷ ರೂ. ಖರ್ಚಾಗಬಹುದು ಎಂದು ಅಂದಾಜು ಮಾಡಲಾಗಿದೆ.

ಈ ಉದ್ಯಮದಲ್ಲಿ ಕೈಜೋಡಿಸುವ ಉದ್ಯಮಿಗಳೊಂದಿಗೆ ಸರ್ಕಾರ ಮಾಡಿಕೊಂಡಿರುವ MoUಗಳ ಪ್ರಕಾರ ಇದರಲ್ಲಿ ಕೈಜೋಡಿಸಲಿರುವ ಖಾಸಗಿ ಉದ್ಯಮಿಗಳಿಗೆ ಸರ್ಕಾರ ಭೂಮಿಯನ್ನು ಒದಗಿಸಲಿದೆ. ಅದೇ ರೀತಿ ಮನೆಗಳ ಆರ್ಕಿಟೆಕ್ಚರಲ್ ಡಿಸೈನ್ ಅನ್ನು ಒದಗಿಸುತ್ತದೆ. ಈ ಖಾಸಗಿ ಉದ್ಯಮಿಗಳು ಬಯಸಿದರೆ ಆ ಡಿಸೈನನ್ನು ಬಳಸಿಕೊಳ್ಳಬಹುದು. ಅಥವಾ ತಮ್ಮದೇ ಆದ ಡಿಸೈನ್ ಮೇರೆಗೂ ಮನೆ ಕಟ್ಟಬಹುದು. ನೆರೆ ಹಾವಳಿಯಾಗಿರುವ ಎಲ್ಲಿ ಬೇಕಾದರೂ ಅವರು ಮನೆ ಕಟ್ಟಲು ಮುಂದಾಗಬಹುದು. ಅಲ್ಲಿ ಜಮೀನು ಕೊಡಿಸುವ ಜವಾಬ್ದಾರಿ ಸರ್ಕಾರದ್ದು. ಅದಕ್ಕೆ ಬೇಕಾದ ಹಣವನ್ನು ಅವರು ಹೇಗಾದರೂ ರೂಢಿ ಸಿಕೊಳ್ಳಬಹುದು. ಅದಕ್ಕೆ ಸರ್ಕಾರ ತೆರಿಗೆ ವಿನಾಯತಿ ನೀಡುವುದಲ್ಲದೆ ಅದರ ನಿರ್ಮಾಣಕ್ಕೆ ಬೇಕಾದ ಸಾಮಾನು, ಯಂತ್ರಗಳ ಆಮದು ಇತ್ಯಾದಿಗಳ ಮೇಲೂ ತೆರಿಗೆ ವಿನಾಯತಿಯನ್ನು ನೀಡಲಿದೆ. ಅಷ್ಟು ಮಾತ್ರವಲ್ಲ. "ಇವೆಲ್ಲವೂ ಅತ್ಯಂತ ತ್ವರಿತವಾಗಿ ನಡೆಯಬೇಕಾಗಿರುವುದರಿಂದ ಕರ್ನಾಟಕ ಪಾರದರ್ಶಕತೆ ಕಾಯಿದೆ" ಇಂದಲೂ ವಿನಾಯತಿ ನೀಡಲಾಗಿದೆ.

ಅಂದರೆ ಈ ಮನೆ ನಿರ್ಮಾಣದಲ್ಲಿ ತೊಡಗಿಕೊಳ್ಳುವ ಕಂಪನಿಗಳನ್ನು ಆಯ್ಕೆ ಮಾಡಲು ಸರ್ಕಾರ ಟೆಂಡರ್ ಕರೆಯಬೇಕಿಲ್ಲ. ಅವರ

ಕರ್ನಾಟಕ ಸರ್ಕಾರದ ವಿಪತ್ತು ನಿರ್ವಹಣಾ ಪ್ರಾಧಿಕಾರದ ಪ್ರಕಾರ ಒಟ್ಟಾರೆಯಾಗಿ ಕರ್ನಾಟಕದಲ್ಲಿ ನೆರೆ ಹಾವಳಿಯಿಂದ ೩,೫೮,೭೫೫ ಮನೆಗಳು ಕುಸಿದಿವೆ. ಅಥವಾ ಹಾಳಾಗಿವೆ ಎಂದು ಅಂದಾಜು ಮಾಡಿದೆ. ಸರ್ಕಾರದ ಪ್ರಕಾರ ಇದರಲ್ಲಿ ಶೇ.೫೦ರಷ್ಟು ಅಂದರೆ ಹೆಚ್ಚೂ ಕಡಿಮೆ ೧.೫ ಲಕ್ಷದಷ್ಟು ಮನೆಗಳನ್ನು ಖಾಸಗಿ ಸಹಯೋಗದೊಂದಿಗೆ ಅಂದರೆ ಪ್ರಧಾನವಾಗಿ ಉದ್ಯಮಿಗಳ ಮತ್ತು ಮಠ-ಮಾನ್ಯಗಳ ಸಹಕಾರದೊಂದಿಗೆ ಕಟ್ಟಿಸುವ ಇರಾದೆಯನ್ನು ಹೊಂದಿದೆ. ಸರ್ಕಾರ ನೀಡಿರುವ ಸೂಚನೆಯ ಪ್ರಕಾರ ಪ್ರತಿಯೊಂದು ಮನೆಯೂ ಆರ್.ಸಿ.ಸಿ ಚಾವಣಿ ಹೊಂದಿರಬೇಕು. ಸಿಮೆಂಟ್‌ನಿಂದ ಗೋಡೆ ಕಟ್ಟಿರಬೇಕು. ಹೀಗಾಗಿ ಪ್ರತಿ ಮನೆ ನಿರ್ಮಾಣಕ್ಕೆ ಒಂದು ಲಕ್ಷ ರೂ. ಖರ್ಚಾಗಬಹುದು ಎಂದು ಅಂದಾಜು ಮಾಡಲಾಗಿದೆ.

ಪರಿಣತಿ ಮತ್ತು ಹಣದ ಮೂಲಗಳ ಬಗ್ಗೆ ಖಾತರಿ ಪಡೆದುಕೊಳ್ಳಬೇಕಿಲ್ಲ. ಇವೆಲ್ಲವೂ ಒಪ್ಪಂದ ಪತ್ರದಲ್ಲಿ ಇರುವ ಮಾತುಗಳು. ಆದರೆ ಅದರಲ್ಲಿ ಇರದೇ ಇರುವುದು ಏನೆಂದರೆ ಯಾವ ಹಳ್ಳಿಗಳನ್ನು ಸಂಪೂರ್ಣ ಅಥವಾ ಪಾಕ್ಷಿಕವಾಗಿ ಪುನರ್ ನಿರ್ಮಾಣ ಮಾಡಲು ಯೋಜಿಸಲಾಗಿರುವುದೋ ಅಲ್ಲಿ ಮನೆ ಕುಸಿತದ ಪರಿಹಾರಕ್ಕೆ ಸರ್ಕಾರ ಕೊಡಬೇಕಾದ 10,000-37,000 ರೂ. ಪರಿಹಾರವನ್ನು ಸರ್ಕಾರ ನೇರವಾಗಿ ಆಯಾ ಉದ್ಯಮಿಗಳಿಗೆ ಪರಭಾರೆ ಮಾಡುತ್ತದೆ. ಅಂದರೆ ಲಕ್ಷದಲ್ಲಿ 37,000 ದಷ್ಟು (ಶೇ.37ರಷ್ಟು)ಹಣವನ್ನು ಸರ್ಕಾರವೇ ಭರಿಸುತ್ತದೆ ಎಂದಾಯ್ತಲ್ಲವೇ?!

ಸರ್ಕಾರದ ಪ್ರಕಾರ ಒಟ್ಟು ಮನೆ ನಿರ್ಮಾಣದ ವೆಚ್ಚ 2000-3000 ಕೋಟಿ ರೂ. ಮೊತ್ತದ ವ್ಯವಹಾರ. ಅಲ್ಲದೆ ಅದಕ್ಕೆ ಸರಕಾರದಿಂದ ಬೇಕು ಬೇಕಾದ ಎಲ್ಲಾ ರಿಯಾಯತಿಗಳು. ಈ ಸುವರ್ಣಾವಕಾಶವನ್ನು ಉದ್ಯಮಿಗಳು ಎರಡು ರೀತಿಯಲ್ಲಿ ಬಳಸಿಕೊಳ್ಳುತ್ತಿದ್ದಾರೆ. ಮೊದಲನೆಯದಾಗಿ ಈ ಬಾಬತ್ತಿಗೆ ಹಲವು ಮೂಲದಿಂದ ಹಣ ಎತ್ತುವ ಅವಕಾಶ ಮತ್ತು ಅದಕ್ಕೆ ಸಿಗುವ ಹಲವು ರಿಯಾಯತಿಗಳ ಲಾಭ. ಈ Public- Private Partanership -PPP ಮಾದರಿಯಲ್ಲಿ ಸಾಮಾನ್ಯವಾಗಿ ಉದ್ಯಮಿಗಳು ತಮಗೆ ಸರ್ಕಾರ ಕೊಡುವ ಜಮೀನಿನಲ್ಲಿ ಅರ್ಧ ಭಾಗದಲ್ಲಿ ಮಾತ್ರ ಮನೆ ಮೇಲೆ ಮನೆಯನ್ನು ಕಟ್ಟಿ ಉಳಿದರ್ಧ ಭಾಗವನ್ನು ವಾಣಿಜ್ಯ ಉದ್ದೇಶಕ್ಕೆ ಬಳಸಿಕೊಳ್ಳಬಹುದು. ನೆರೆ ಪರಿಹಾರಕ್ಕೆ ಸಂಬಂಧಪಟ್ಟಂತೆ ಸರ್ಕಾರ-ಖಾಸಗಿ ಕಂಪನಿಗಳು ಮಾಡಿಕೊಂಡಿರುವ ಒಪ್ಪಂದದಲ್ಲಿ ಹೀಗೆ ಮಾಡಬಾರದು ಎಂಬ ಕಡ್ಡಾಯವೇನೂ ಇಲ್ಲ! ಇದಕ್ಕೂ ಸರ್ಕಾರವು ಪುಕ್ಕಟೆ ಒದಗಿಸುವ ಜಮೀನನ್ನೇ ಉದ್ಯಮಿಗಳು ಬಳಸಿಕೊಳ್ಳಬಹುದು! ಇದು ಉದ್ಯಮಿಗಳಿಗೆ ಸಿಗುವ ನೇರ ಲಾಭ.

ಎರಡನೆಯದಾಗಿ ಸೇವಾಭಾರತಿಯಂಥ ಚಡ್ಡಿ ಸಂಸ್ಥೆಗಳು ತಮ್ಮ ಈ 'ಸೇವಾ' ಉದ್ದೇಶವನ್ನು ಜಗತ್ತಿನಾದ್ಯಂತ ಪ್ರಚಾರ ಮಾಡಿ ಒಂದು ಮನೆ ಘಟಕಕ್ಕೆ ಲಕ್ಷ ಖರ್ಚಾಗುವುದೆಂದಿಟ್ಟು ಕೊಂಡರೂ ಕನಿಷ್ಠ ಎರಡು ಮೂರು ಪಟ್ಟು ಹಣ ಸಂಗ್ರಹ ಮಾಡಿಕೊಳ್ಳುತ್ತಾರೆ. ಮಧ್ಯಾಹ್ನದ ಬಿಸಿಯೂಟದ ಯೋಜನೆಯಲ್ಲೂ ಇಸ್ಕಾನ್, ಅಕ್ಷಯ ಸಂಸ್ಥೆಗಳು ಹಣ ಮಾಡಿದ್ದು ಹೀಗೆ. ಸರ್ಕಾರ ಉಳಿದವರಿಗೆ ಒಂದು ಊಟಕ್ಕೆ 2 ರೂ ಕೊಟ್ಟರೆ ಈ ಸಂಸ್ಥೆಗಳಿಗೆ 4ರೂ. ಕೊಡುತ್ತಾರೆ. ಇದರ ಜೊತೆಗೆ ಇವು ವಿದೇಶಿ ಸಂಸ್ಥೆಗಳಿಂದ ಒಂದು ಊಟಕ್ಕೆ ಏನಿಲ್ಲವೆಂದರೂ 8-10ರೂ ಹಣ ಎತ್ತುತ್ತಾರೆ.

ಹೀಗೆ ಬೇಕಾಬಿಟ್ಟಿ ಹಣ ಸಂಗ್ರಹಿಸಿ ಅದನ್ನು ಕೋಮುವಾದಿ ಉದ್ದೇಶಕ್ಕೆ ಬಳಸಿಕೊ ಳ್ಳುತ್ತಾರೆ. ಈಗ ಹೆಚ್ಚೂ ಕಡಿಮೆ ಎಲ್ಲಾ ದೊಡ್ಡ ದೊಡ್ಡ ಕಾರ್ಪೊರೇಟ್ ಉದ್ಯಮಗಳಿಗೂ ಒಂದು ಎನ್.ಜಿ.ಒ ಇರುವುದರಿಂದ ಅವೂ ಇದೇ ಮಾರ್ಗವನ್ನು ಅನುಸರಿಸಬಹುದು.

ಇದು ನೆರೆ ಬಂದಾಗ ಸಿರಿ ಮಾಡಿಕೊಳ್ಳುತ್ತಿರುವ ಒಂದೆರಡು ವಿಧಾನಗಳು. ಆದರೆ ಅದಕ್ಕಿಂತ ಕ್ರೂರವಾದದ್ದು ನೆರೆ ಪರಿಹಾರಕ್ಕೆ ದಾನ-ದತ್ತಿಯ ಹೆಸರಲ್ಲಿ ಬಿಡಿಗಾಸನ್ನು ಕೊಟ್ಟು ಸರ್ಕಾರವನ್ನು ತಮ್ಮ ಮುಂದಿನ ಮತ್ತು ಹಾಲಿ ಉದ್ಯಮಗಳಿಗೆ ಬೇಕಾದ ರೀತಿಯಲ್ಲಿ ಬಳಸಿಕೊಳ್ಳುವಂತೆ ಮಾಡುವ ಶಾಸನಬದ್ಧ ಭ್ರಷ್ಟಾಚಾರಕ್ಕೆ ಮುಂದಾಗುತ್ತಿರುವುದು ಮೂರನೆಯದು ಮತ್ತು ಪ್ರಧಾನವಾದದ್ದು.

ಈ ಪರೋಕ್ಷ ಮತ್ತು ಅತ್ಯಧಿಕ ಲಾಭ ಮಾಡಿಕೊಳ್ಳುವ ಅವಕಾಶವನ್ನು ಸರ್ಕಾರ ಒದಗಿಸಿರುವುದರಿಂದಲೇ ಉದ್ಯಮಿಗಳು ಸರ್ಕಾರಕ್ಕೆ "ಆಸರೆ"ಯಾಗಿರುವುದು. ಇದರ ಮುಖ್ಯಸ್ಥ ರಾಜೀವ್ ಚಂದ್ರಶೇಖರ್ ಎಂಬ ಆಧುನಿಕ ಚಡ್ಡಿ ಉದ್ಯಮಿಯೇ. ಸರ್ಕಾರದ ಪ್ರಕಾರ ಈಗಾಗಲೇ 29 ಹೆಚ್ಚು ಉದ್ಯಮಗಳು ಸರ್ಕಾರಕ್ಕೆ "ಆಸರೆ"ಯಾಗಲೂ ಮುಂದೆ ಬಂದಿವೆ. ಅವುಗಳಲ್ಲಿ ಇನ್ಫೋಸಿಸ್, ಮೈಕ್ರೊಸಾಫ್ಟ್, ಸಿಸ್ಕೊ, ಡೆಲ್ ನಂಥ ಸಾಫ್ಟ್‌ವೇರ್ ಉದ್ಯಮಗಳೂ, ಎಸ್.ಎಂ. ಕೃಷ್ಣನ ಅಳಿಯ ಸಿದ್ಧಾರ್ಥನ ಕಾಫಿ ಡೇ, ಎಸ್ಸಾರ್ ಸ್ಟೀಲ್ಸ್, ದಾಲ್ಮಿಯಾ ಸಿಮೆಂಟ್, ಕುರ್ಲಾನ್ ಹಾಸಿಗೆಗಳನ್ನು ತಯಾರು ಮಾಡುವ ಸೆಂಚುರಿ ಗ್ರೂಪ್, ಬಯೋಕಾನ್, ಮತ್ತು ಕ್ಲೇರ್‌ಜೆನ್ ನಂಥ ಉದ್ಯಮಿಗಳು ಸೇರಿಕೊಂಡಿದ್ದಾರೆ.

ನೆರೆ ಸಂತ್ರಸ್ತರಿಗೆ ಮನೆ ನಿರ್ಮಾಣ ಮಾಡಿಕೊಡಲು ಮುಂದಾಗಿರುವ ಈ ಸಂಸ್ಥೆಗಳ ಔದಾರ್ಯವನ್ನು ಸರ್ಕಾರವೂ ಒಳಗೊಂಡಂತೆ ಎಲ್ಲರೂ ಕೊಂಡಾಡುತ್ತಿರುವ ಈ ಸಂದರ್ಭದಲ್ಲಿ ಈ ಔದಾರ್ಯದ ಬೆಲೆ – cost ಎಷ್ಟು ಎಂದು ಅರ್ಥಮಾಡಿಕೊಳ್ಳುವುದು ಅತಿ ಮುಖ್ಯ. ಉದಾಹರಣೆಗೆ ಬೆಂಗಳೂರಿನಲ್ಲಿರುವ ಈ ಪ್ರಮುಖ ಸಾಫ್ಟ್‌ವೇರ್ ಸಂಸ್ಥೆಗಳು ಒಟ್ಟಾರೆ ಭಾರತದ ಸಾಫ್ಟ್‌ವೇರ್ ರಫ್ತು ಉದ್ಯಮದಲ್ಲಿ ಶೇ.35ರಷ್ಟು ಪಾಲನ್ನು ಹೊಂದಿವೆ. ಅದು 50 ಬಿಲಿಯನ್ ಅಮೆರಿಕನ್ ಡಾಲರ್‌ಗಳಾಗುತ್ತವೆ. ಅಂದರೆ ಸುಮಾರು 2,50,000 ಕೋಟಿ ರೂಪಾಯಿಗಳು. ಈ ವಹಿವಾಟಿನಿಂದ ಅವರಿಗೆ ಏನಿಲ್ಲವೆಂದರೂ ಶೇ.25ರಷ್ಟು ಲಾಭವಿದೆ. ಅಂದರೆ 75,000 ಕೋಟಿ ರೂಪಾಯಿಗಳಷ್ಟು.

ಯಾವುದೇ ಉದ್ಯಮದಲ್ಲಿ ಇರದಿರುವಷ್ಟು ಲಾಭವನ್ನು ಈ ಉದ್ಯಮಗಳು ಮಾಡಿಕೊಳ್ಳುತ್ತಿರಲು ಮುಖ್ಯ ಕಾರಣ ಸರ್ಕಾರದ ಉದ್ಯಮಪರ ಹಾಗೂ ಜನದ್ರೋಹಿ ನೀತಿಗಳೇ. ಉದಾಹರಣೆಗೆ ಸರ್ಕಾರ ಇವರುಗಳಿಗೆ ಪ್ರತಿ ವರ್ಷ ಕೊಡುತ್ತಿರುವ ತೆರಿಗೆ ವಿನಾಯತಿಯೇ ಏನಿಲ್ಲವೆಂದರೂ 1,75,000 ಕೋಟಿ ರೂಗಳಷ್ಟಾಗುತ್ತವೆ. ಇದಲ್ಲದೆ ಸರ್ಕಾರ ಇವರಿಗೆ ಎಸ್.ಇ.ಜೆಡ್ ಇನ್ನಿತ್ಯಾದಿ ಹೆಸರಿನಲ್ಲಿ ಕೊಡುವ ಪುಕ್ಕಟೆ ಜಮೀನು, ನೀರು, ವಿದ್ಯುತ್, ಇನ್ನಿತ್ಯಾದಿಗಳು ಏನಿಲ್ಲವೆಂದರೂ 50,000 ಕೋಟಿಗಳಿಗೂ ಹೆಚ್ಚು. ಆದರೆ ಇಂದು ಇಡೀ ನೆರೆ ಸಂತ್ರಸ್ತರ ಮನೆ ನಿರ್ಮಾಣಕ್ಕೆ ಸರ್ಕಾರ ಮಾಡಿರುವ ಅಂದಾಜು ವೆಚ್ಚವೇ ಕೇವಲ 3000 ಕೋಟಿ.

ಅಂದರೆ ಎಲ್ಲಾ ಸಂತ್ರಸ್ತರ ಮನೆ ನಿರ್ಮಾಣ ಮಾಡಲು ಸಾಫ್ಟ್‌ವೇರ್ ಕಂಪನಿಗಳ ಲಾಭದ 1/25 ಭಾಗದಷ್ಟು ಸಾಕು. ಅಥವಾ ಅವರಿಗೆ ನೀಡುತ್ತಿರುವ ತೆರಿಗೆ ರಿಯಾಯತಿಯನ್ನು ಒಂದು ವರ್ಷದ ಮಟ್ಟಿಗೆ ಹಿಂತೆಗೆದುಕೊಂಡರೂ ಎಲ್ಲಾ ನೆರೆ ಸಂತ್ರಸ್ತರಿಗೆ ಅರಮನೆಯನ್ನು ಕಟ್ಟಿಕೊಡಬಹುದು!

ಆದರೆ ಜನರಿಗೆ ಮರೆಮಾಚಿ ಸರ್ಕಾರದಿಂದ ಪಡೆದುಕೊಳ್ಳುತ್ತಿರುವ ಇಷ್ಟೊಂದು ರಿಯಾಯತಿಯ ಬದಲಿಗೆ ಇವುಗಳು ಕೊಡುತ್ತಿರುವ ದೇಣಿಗೆಯೆಷ್ಟು? ವರ್ಷಕ್ಕೆ 10,000 ಕೋಟಿಯಷ್ಟು ಲಾಭ ಮಾಡುವ ಇನ್ಫೊಸಿಸ್ ಕೊಡುತ್ತಿರುವ ದೇಣಿಗೆ 30 ಕೋಟಿ. ಅಂದರೆ ತಮ್ಮ ಲಾಭದ. 1/200 ರಷ್ಟು! ವರ್ಷಕ್ಕೆ 2000 ಕೋಟಿ ಲಾಭ ಇರುವ ದಾಲ್ಮಿಯಾ ನೀಡುತ್ತಿರುವ ದೇಣಿಗೆ ಕೇವಲ 10 ಕೋಟಿ! ಅಂದರೆ ಅವರ ಲಾಭದ 1/350ನೇ ಭಾಗದಷ್ಟು. ಆದರೆ ನೆರೆ ಸಂತ್ರಸ್ತರ ಬವಣೆಗೆ ಮರುಗಿ ಬೀದಿಯಲ್ಲಿ ಕೂಲಿ ಮಾಡುವ ಜನರೂ ಸಹ 100ರೂ ಕೂಲಿಯಲ್ಲಿ 50 ರೂ.ಅನ್ನು ಅಂದರೆ ತಮ್ಮ ಸಂಪಾದನೆಯ ಅರ್ಧ ಭಾಗದಷ್ಟನ್ನು ದೇಣಿಗೆಯನ್ನಾಗಿ ನೀಡುತ್ತಿದ್ದಾರೆ. ಆದರೆ ಇದು ಔದಾರ್ಯವೆಂದು ಪರಿಗಣನೆಯಾಗುವುದೇ ಇಲ್ಲ!

ಆದರೂ ಸರ್ಕಾರ ಅವರು ಕೊಡುವ ಭಿಕ್ಷೆಯನ್ನೇ ಮಹಾ ಔದಾರ್ಯವೆಂಬಂತೆ ಬಣ್ಣಿಸುತ್ತಿರಲು ಕಾರಣವೇನು? ಅದಕ್ಕೆ ಮೂರು ಕಾರಣಗಳಿವೆ. ಮೊದಲನೆಯದಾಗಿ ನೆರೆ ಪರಿಹಾರಕ್ಕೆ ಅಪಾರ ಪ್ರಮಾಣದ ಸಂಪನ್ಮೂಲ ಬೇಕು. ಮತ್ತು ಅಷ್ಟು ಸಂಪನ್ಮೂಲ ಸರ್ಕಾರದ ಬಳಿ ಇಲ್ಲ. ಆದ್ದರಿಂದ ಖಾಸಗಿಯವರನ್ನು ಮನಒಲಿಸಿ ಅವರ ದಾನ ಪಡೆದುಕೊಳ್ಳುವುದು ಬಿಟ್ಟರೆ ಬೇರೇ ದಾರಿಯಿಲ್ಲಯೆಂದು ಹೇಳುತ್ತಾ ಸರ್ಕಾರವು ತನ್ನ ಸಂವಿಧಾನಾತ್ಮಕ ಜವಾಬ್ದಾರಿಯಿಂದ ನುಣಿಚಿಕೊಂಡು ಆಡಳಿತದ ಖಾಸಗೀಕರಣ ಮಾಡುವ ನವ ಉದಾರವಾದಿ ಆರ್ಥಿಕ ಪ್ರಣಾಳಿಯನ್ನು ಅನಿವಾರ್ಯವೆಂಬಂತೆ ಬಿಂಬಿಸುವುದು.

ಎರಡನೆಯದು ಈ ಸಹಾಯಕ್ಕಾಗಿ ಅವರಿಗೆ ನಾವು ಪ್ರತ್ಯುಪಕಾರ ಮಾಡುವುದು ಅನಿವಾರ್ಯ ಎಂಬ ಭಾವನೆಯನ್ನು ಸಮಾಜದಲ್ಲಿ ಬಿತ್ತುವುದು. ಮೂರನೆಯದಾಗಿ ಮತ್ತು ಅತಿಮುಖ್ಯವಾಗಿ ನೆರೆ ಪರಿಹಾರವೆನ್ನುವುದು ಪ್ರಜಾತಂತ್ರದಲ್ಲಿ ಜನರ ಹಕ್ಕು. ಆದರೆ ಒಮ್ಮೆ ಜನರಿಗೆ ಈ ಹಕ್ಕಿನ ಪ್ರಜ್ಞೆ ಜಾಗ್ರತಗೊಂಡರೆ ಪಟ್ಟಭದ್ರ ಹಿತಾಸಕ್ತಿಗಳಿಗೆ ಅಭದ್ರತೆ ಕಾಡುವುದರಿಂದ ಖಾಸಗಿಯವರ ದಯಾಭಿಕ್ಷೆಯಿಲ್ಲದೆ ಇದು ಸಾಧ್ಯವಾಗುತ್ತಿರಲಿಲ್ಲ ಎಂಬ ಭಾವನೆ ಮೂಡಿಸಿ ಹಕ್ಕಿನ ಪ್ರಜ್ಞೆಯನ್ನು ಅಳಿಸಿ ಋಣೀ ಭಾವವನ್ನು ಹೆಚ್ಚಿಸುವುದು. ಇಂಥ ಸಾಮಾಜಿಕ ವ್ಯವಸ್ಥೆಯಿಂದಲೇ ಇಲ್ಲವೆ 60ವರ್ಷಗಳಿಂದಲೂ ಬಡವರ ಹೆಸರಲ್ಲಿ ಉಳ್ಳವರೇ ಆಳುತ್ತಾ ಉಣ್ಣುತ್ತಾ ಬಂದಿರುವುದು. ಆದ್ದರಿಂದಲೇ ಸರ್ಕಾರ ಈ ಪಿಪಿಪಿ ಎಂಬ ಬಣ್ಣದ ವೇಷವನ್ನು ಕಟ್ಟುತ್ತಿದೆ.

ಉದಾಹರಣೆಗೆ ಕ್ಲೇರ್‌ಜೆನ್ ಎಂಬ ಬಹುರಾಷ್ಟ್ರೀಯ ಕಂಪನಿ ಸಹ ಈ ಮನೆ ನಿರ್ಮಾಣದಲ್ಲಿ ಸರ್ಕಾರಕ್ಕೆ "ಆಸರೆ"ಯಾಗುತ್ತಿದೆ. ಈ ಕಂಪನಿ ಬಯೋಮಾಸ್ ಅಂದರೆ ಗಿಡಗಂಟೆಗಳಿಂದ ವಿದ್ಯುತ್ತನ್ನು ಉತ್ಪಾದಿಸುವ ಉದ್ಯಮದಲ್ಲಿ ತೊಡಗಿಕೊಂಡಿದೆ. ಕರ್ನಾಟಕ ಸರ್ಕಾರದೊಂದಿಗೆ 15 ವರ್ಷಗಳ ಕಾಲ ಲಾಭದಾಯಕ ದರದಲ್ಲಿ 74 ಮೆಗಾವ್ಯಾಟ್ ವಿದ್ಯುತ್ತನ್ನು ಸರಬರಾಜು ಮಾಡುವ ಒಪ್ಪಂದ ಮಾಡಿಕೊಂಡಿದೆ. ಈ ಒಪ್ಪಂದದಲ್ಲಿ ಅಧಿಕ ಲಾಭ ಬರುವಂತೆ ನೋಡಿಕೊಂಡಿರುವುದಲ್ಲದೆ ಸರ್ಕಾರ 15 ವರ್ಷಗಳ ಕಾಲ ಅದಕ್ಕೆ ಲಾಭದ ಮೇಲೆ ತೆರಿಗೆ ಸಹ ಹಾಕುವುದಿಲ್ಲ.

ಅಲ್ಲದೆ ಬಯೋಮಾಸ್ ಉತ್ಪಾದನೆಗೆಂದು ಆ ಕಂಪನಿಗೆ 6000 ಎಕರೆ ಜಮೀನನ್ನೂ ಸರ್ಕಾರ ನೀಡಲಿದೆ. ಇವುಗಳ ಒಟ್ಟು ಮೊತ್ತವೇ ನೂರಾರು ಕೋಟಿಗಳಿಗಿಂತ ಹೆಚ್ಚಾಗಲಿದೆ. ಸರ್ಕಾರ 15 ವರ್ಷದ ತೆರಿಗೆ ವಿನಾಯತಿಯನ್ನು ಒಂದು ವರ್ಷದ ಮಟ್ಟಿಗೆ ರದ್ದು ಮಾಡಿದ್ದರೂ 50ಕೋಟಿಗೂ ಹೆಚ್ಚು ಹಣ ಸಿಗುತ್ತಿತ್ತು. ಆದರೆ ಕ್ಲೇರ್‌ಕೆನ್ ಕಂಪನಿ 10 ಕೋಟಿ ಕೊಟ್ಟು ನೂರು ಕೋಟಿ ಗಳಿಸುತ್ತಿದೆ.

ಇದಕ್ಕಿಂತ ಒಳ್ಳೆಯ ಉದ್ಯಮ ಯಾವುದಿದೆ? ನೆರೆಯಲ್ಲು ಸಿರಿ ಮಾಡಿಕೊಳ್ಳುವ ಈ ಉದ್ಯಮಿಗಳಿಗೆ ನೆರೆ ಪರಿಹಾರ ಎಂಬುದು ಅತ್ಯಂತ ಲಾಭದಾಯಕ ಉದ್ಯಮವೇ ಆಗಿದೆ. ಅಲ್ಲವೇ? □

ಲಿಬ್ರಹಾನ್ ವರದಿ ಸುತ್ತ ಮುತ್ತ

ಮಸೀದಿ ನಾಶದ ನಂತರ...

ನಾ ದಿವಾಕರ

ವಾಲ್ಮೀಕಿ ರಾಮಾಯಣದಲ್ಲಿ ಉಲ್ಲೇಖಿಸಲಾಗಿರುವ ಅಯೋಧ್ಯಾ ಕಾಂಡವನ್ನು ಬಹಳಷ್ಟು ಜನ ಅರಿತಿರಲಾರರು. ಆದರೆ ೧೯೮೦ ರಿಂದ ೧೯೯೨ರ ಅವಧಿಯಲ್ಲಿ ಭಾರತೀಯ ಸಮಾಜದ ಸಮತೋಲನವನ್ನೇ ವಿನಾಶದಂಚಿಗೆ ಕೊಂಡೊಯ್ದ ಸಂಘ ಪರಿವಾರ ಕೃಪಾ ಪೋಷಿತ ನಾಟಕ ಮಂಡಲಿ ಪ್ರಸ್ತುತ ಪಡಿಸಿದ ಅಯೋಧ್ಯಾ ಕಾಂಡವನ್ನು ಅರಿಯದವರೇ ಇಲ್ಲ. ಅಯೋಧ್ಯೆ ಒಂದು ಪುಟ್ಟ ಪಟ್ಟಣ. ಇಲ್ಲಿ ಜನಸಂಖ್ಯೆಗೆ ಸಮನಾಗಿ ದೇವಸ್ಥಾನಗಳೂ ಇರಬಹುದೇನೋ! ರಾಮನ ಜನ್ಮಸ್ಥಳವೆಂದು ವಾದಿಸುವ ಸಾವಿರಾರು ದೇವಸ್ಥಾನಗಳು ಅಯೋಧ್ಯೆಯಲ್ಲಿವೆ. ಯಾವ ದೇವಾಲಯದ ಪುರೋಹಿತರನ್ನು ಕೇಳಿದರೂ ಅವರ ದೇವಾಲಯವೇ ರಾಮ ಹುಟ್ಟಿದ ಸ್ಥಳ ಎಂದು ಹೇಳುವುದು ಇಲ್ಲಿ ಸಾಮಾನ್ಯ.

17 ವರ್ಷಗಳ ಅವಧಿಯಲ್ಲಿ, 48 ವಿಸ್ತರಣೆಗಳನ್ನು ಪಡೆದು, 399 ಸಭೆಗಳನ್ನು ನಡೆಸಿ, 100ಕ್ಕೂ ಹೆಚ್ಚು ಸಾಕ್ಷಿಗಳನ್ನು ಪ್ರಶ್ನಿಸಿ 1000 ಪುಟಗಳ ಸಮಗ್ರ ವರದಿಯನ್ನು ಸಲ್ಲಿಸಿರುವ ನ್ಯಾಯಮೂರ್ತಿ ಲಿಬರ್ಹಾನ್ ಅವರ ಪರಿಶ್ರಮ ಮೆಚ್ಚತಕ್ಕದ್ದೇ. ಆದರೆ ಇಷ್ಟೆಲ್ಲಾ ಶ್ರಮವಹಿಸಿ, ಕೇಂದ್ರದ ಬೊಕ್ಕಸಕ್ಕೆ ಎಂಟು ಕೋಟಿ ರೂಗಳನ್ನು ಖರ್ಚುಮಾಡಿ, ಹಲವಾರು ವಿವಾದಗಳನ್ನು ಸೃಷ್ಟಿಸಿ ಸಂಸತ್ತಿಗೆ ಮಂಡಿಸಲಾಗಿರುವ ಈ ವರದಿಯಲ್ಲಿ ಏನಿದೆ? ಬಹುಶಃ ಈ ಪ್ರಶ್ನೆಗೆ ನ್ಯಾಯಮೂರ್ತಿಗಳೇ ಉತ್ತರಿಸಲಾರರು. ಡಿಸೆಂಬರ್ 6 1992ರಂದು ಧರ್ಮರಕ್ಷಣೆಯ ಹೆಸರಿನಲ್ಲಿ ಕೆಲವು ಫ್ಯಾಸಿಸ್ಟ್ ಶಕ್ತಿಗಳು ಐತಿಹಾಸಿಕ ಸ್ಮಾರಕವೊಂದನ್ನು ಹೊಡೆದುರುಳಿಸಿದ ಘಟನೆಯ ಕಾರಣಕರ್ತರು ಯಾರು, ಘಟನೆ ಹೇಗೆ ಸಂಭವಿಸಿತು, ಇಡೀ ಪ್ರಕರಣದ ಪೂರ್ವಾಪರಗಳೇನು, ರಾಜಕೀಯ, ಸೈದ್ಧಾಂತಿಕ, ಧಾರ್ಮಿಕ ಮತ್ತು ಸಾಮಾಜಿಕ ಉದ್ದಿಶ್ಯಗಳೇನು, ಧ್ವಂಸ ಕಾರ್ಯಾಚರಣೆಯ ರೂವಾರಿಗಳಾರು ಈ ಎಲ್ಲ ಪ್ರಶ್ನೆಗಳಿಗೆ ಉತ್ತರಗಳನ್ನು ಹುಡುಕುತ್ತಾ 17 ವರ್ಷಗಳ ಅಜ್ಞಾತವಾಸ ಅನುಭವಿಸಿದ ನಂತರ ನ್ಯಾ. ಲಿಬರ್ಹಾನ್ ಪ್ರಸ್ತುತ ಪಡಿಸುವುದು ಇಡೀ ದೇಶವೇ ಅರಿತಿರುವ ಸತ್ಯವನ್ನಷ್ಟೆ. ಈ ವರದಿಯನ್ನು ಸಲ್ಲಿಸಲು 17 ವರ್ಷಗಳ ಅವಶ್ಯಕತೆಯೇ ಇರಲಿಲ್ಲವೆಂದೂ ಹೇಳಬಹುದು.

ಆದರೂ ಲಿಬರ್ಹಾನ್ ಅವರ ಪರಿಶ್ರಮಕ್ಕೆ ಬೆಲೆ ನೀಡುವುದಕ್ಕಾದರೂ ದೇಶದ ಜನತೆ ವರದಿಯ ವಿವರಗಳನ್ನು ತಿಳಿದುಕೊಳ್ಳುವುದು ಅಗತ್ಯ. ನ್ಯಾಯಮೂರ್ತಿಗಳು ಸಂಗ್ರಹಿಸಿರುವ ದಾಖಲೆಗಳು ಅಪಾರ. ಸಂಘಪರಿವಾರದ ಆಂತರಿಕ ಸಭೆಗಳು, ಬೆದರಿಕೆಗಳು, ಕೇಸರಿಪಡೆಯ ಉದ್ರೇಕಕಾರಿ ಭಾಷಣಗಳು ಮತ್ತು ಎಚ್ಚರಿಕೆಗಳು, ಆಂದಿನ ಉತ್ತರ ಪ್ರದೇಶ ಮುಖ್ಯಮಂತ್ರಿಯ ನ್ಯಾಯಾಲಯ ಆದೇಶದ ಉಲ್ಲಂಘನೆ, ಭಾಜಪದ ನಾಯಕರಿಂದ ಪರಿಸ್ಥಿತಿಯ ದುರುಪಯೋಗ, ಬಾಬ್ರಿ ಮಸೀದಿ ಧ್ವಂಸಕ್ಕೆ ನೀಡಲಾಗಿದ್ದ ಮುನ್ಸೂಚನೆಗಳು, ಆಡಳಿತ ಯಂತ್ರದ ವೈಫಲ್ಯ, ಕೇಂದ್ರ ಸರ್ಕಾರ ನೀಡಿದ ಮುನ್ನೆಚ್ಚರಿಕೆಗಳು ಇವೇ ಮುಂತಾದವುಗಳನ್ನು ಸವಿಸ್ತಾರವಾಗಿ ದಾಖಲಿಸಲಾಗಿದೆ. 1000 ಪುಟದ ವರದಿಯಲ್ಲಿ ನ್ಯಾಯಮೂರ್ತಿಗಳು ಅಯೋಧ್ಯ ವಿವಾದವು ಹೇಗೆ ಉದ್ಭವಿಸಿತು, ಒಂದು ಸಣ್ಣ ವಿವಾದದಿಂದ ವ್ಯವಸ್ಥಿತ ಆಂದೋಲನವಾಗಿ ಹೇಗೆ ರೂಪುಗೊಂಡಿತು, ಇಡೀ ವಿವಾದವು ಬಾಬ್ರಿ ಮಸೀದಿ ಧ್ವಂಸದೊಡನೆ ಕೊನೆಗೊಳ್ಳದೆ, ಭಾರತೀಯ ಸೆಕ್ಯುಲರ್ ತಳಹದಿಯನ್ನೇ ಅಲುಗಾಡಿಸಿತು ಎಂಬುದನ್ನೂ ದಾಖಲಿಸಿದ್ದಾರೆ.

ಅಯೋಧ್ಯಾಕಾಂಡ

ವಾಲ್ಮೀಕಿ ರಾಮಾಯಣದಲ್ಲಿ ಉಲ್ಲೇಖಿಸಲಾಗಿರುವ ಅಯೋಧ್ಯಾ ಕಾಂಡವನ್ನು ಬಹಳಷ್ಟು ಜನ ಅರಿತಿರಲಾರರು. ಆದರೆ 1980 ರಿಂದ 1992ರ ಅವಧಿಯಲ್ಲಿ ಭಾರತೀಯ ಸಮಾಜದ ಸಮತೋಲನವನ್ನೇ ವಿನಾಶದಂಚಿಗೆ ಕೊಂಡೊಯ್ದ ಸಂಘಪರಿವಾರ ಕೃಪಾಪೋಷಿತ ನಾಟಕ ಮಂಡಲಿ ಪ್ರಸ್ತುತಪಡಿಸಿದ ಅಯೋಧ್ಯಾ ಕಾಂಡವನ್ನು ಅರಿಯದವರೇ ಇಲ್ಲ. ಅಯೋಧ್ಯೆ ಒಂದು ಪುಟ್ಟ ಪಟ್ಟಣ. ಇಲ್ಲಿ ಜನಸಂಖ್ಯೆಗೆ ಸಮನಾಗಿ ದೇವಸ್ಥಾನಗಳೂ ಇರಬಹುದೇನೋ! ರಾಮನ ಜನ್ಮಸ್ಥಳವೆಂದು ವಾದಿಸುವ ಸಾವಿರಾರು ದೇವಸ್ಥಾನಗಳು ಅಯೋಧ್ಯೆಯಲ್ಲಿವೆ. ಯಾವ ದೇವಾಲಯದ ಪುರೋಹಿತರನ್ನು ಕೇಳಿದರೂ ಅವರ ದೇವಾಲಯವೇ ರಾಮ ಹುಟ್ಟಿದ ಸ್ಥಳ ಎಂದು ಹೇಳುವುದು ಇಲ್ಲಿ ಸಾಮಾನ್ಯ. ಬಹುಶಃ ಪ್ರವಾಸಿಗರನ್ನು ಆಕರ್ಷಿಸಲೂ ಈ ತಂತ್ರವನ್ನು ಹೂಡಿರಬಹುದು. ಇಂತಿಪ್ಪ ಅಯೋಧ್ಯೆಯಲ್ಲಿ ಹದಿನಾರನೆಯ ಶತಮಾನದಲ್ಲಿ, ಮೊಘಲ್ ದೊರೆ ಬಾಬರ್ ನಿರ್ಮಿಸಿದನೆಂದು ಹೇಳಲಾಗುವ ಒಂದು ಮಸೀದಿಯನ್ನು ಬಾಬ್ರಿ ಮಸೀದಿ ಎಂದೇ ಕರೆಯಲಾಗುತ್ತಿತ್ತು. ಬಾಬ್ರಿ ಎಂದರೆ ಬಾಬರ್ ಎಂದು ಅರ್ಥೈಸುವುದನ್ನೂ ಅನೇಕ ಇತಿಹಾಸಕಾರರು ಒಪ್ಪುವುದಿಲ್ಲ. ಆದರೂ ರಾಮನ ಮಂದಿರವನ್ನು ಧ್ವಂಸ ಮಾಡಿಯೇ ಮಸೀದಿಯನ್ನು ನಿರ್ಮಿಸಲಾಯಿತು ಎಂಬ ನಂಬಿಕೆ ಮಾತ್ರ ಸ್ಥಳೀಯರಲ್ಲಿ ಬೇರೂರಿತ್ತು. ಈ ಸ್ಥಳೀಯ ಪ್ರಜ್ಞೆಯೇ ದೇಶದ ಸಮೂಹ ಪ್ರಜ್ಞೆಯಾಗಿ ಪರಿವರ್ತಿತವಾದ ಪ್ರಕ್ರಿಯೆಯನ್ನೇ ಅಯೋಧ್ಯಾ ಕಾಂಡವೆಂದು ಹೇಳಬಹುದು.

1949ರಿಂದ'ಲೇ ಅಯೋಧ್ಯೆಯ ರಾಮ ಜನ್ಮಸ್ಥಳ ವಿವಾದಿತವಾಗಿದ್ದರೂ 1975ರ ವರೆಗೂ ವಿವಾದ ಒಂದು ಸ್ಥಳೀಯ ಪೂಜಾ ಸ್ಥಳದ ಮಟ್ಟಕ್ಕೆ ಸೀಮಿತವಾಗಿತ್ತು. ಉತ್ತರ ಪ್ರದೇಶದ ವಿಧಾನ ಸಭೆಯ ದಾಖಲೆಗಳಲ್ಲೂ ಈ ವಿವಾದವನ್ನು ಕುರಿತ ಪ್ರಸ್ತಾಪ ಅಷ್ಟಾಗಿ ಇರಲಿಲ್ಲ. ಈ ಅವಧಿಯಲ್ಲಿ ಆರೆಸ್ಸೆಸ್ ಮತ್ತು ಜನಸಂಘ ಪಕ್ಷಗಳು ಉತ್ತರಪ್ರದೇಶದಲ್ಲಿ ಪ್ರಾಬಲ್ಯ ಹೊಂದಿದ್ದರೂ

ಸಂಘಪರಿವಾರಕ್ಕೆ ಅಯೋಧ್ಯ ವಿವಾದ ಮಹತ್ವದ್ದಾಗಿರಲಿಲ್ಲ. ರಾಮಜನ್ಮಭೂಮಿ ಎಂದು ಹೇಳಲಾಗುವ ದೇವಸ್ಥಾನದ ಮಹಂತ ರಾಮಚಂದ್ರ ದಾಸ್ ಪರಮಹಂಸ ಮತ್ತು ವಕ್ಫ್ ಮಂಡಲಿಯ ನಡುವೆ ಏರ್ಪಟ್ಟಿದ್ದ ವಿವಾದ ನ್ಯಾಯಾಲಯದ ಕಟಕಟೆಯಲ್ಲಿತ್ತು. ತುರ್ತುಪರಿಸ್ಥಿತಿಯ ಸಂಘರ್ಷ ಮತ್ತು ತದನಂತರದಲ್ಲಿ ಉಂಟಾದ ರಾಜಕೀಯ ಏರುಪೇರುಗಳ ಹಿನ್ನೆಲೆಯಲ್ಲಿ, ತನ್ನ ಹಿಂದೂ ಧರ್ಮ ಪುನರುತ್ಥಾನದ ಕನಸು ಚಿಗುರೊಡೆವ ಸೂಚನೆಗಳನ್ನು ಕಂಡ ಆರೆಸ್ಸೆಸ್ 1980ರಲ್ಲಿ ವಿಶ್ವ ಹಿಂದೂ ಪರಿಷತ್ ಸಂಘಟನೆಗೆ (ವಿಹಿಂಪ) ಹೊಸ ಸ್ವರೂಪ ನೀಡಿತ್ತು.

ಅಲ್ಲಿಯವರೆಗೂ ಒಂದು ಸಣ್ಣ ಮತೀಯ ಸಂಸ್ಥೆಯಾಗಿದ್ದ ವಿಹಿಂಪ ತನ್ನ ವಿಶ್ವರೂಪ ದರ್ಶನವನ್ನು ಪ್ರದರ್ಶಿಸಲು ಅಯೋಧ್ಯೆ ವಿವಾದವನ್ನು ಬಳಸಿಕೊಳ್ಳಲಾರಂಭಿಸಿತು. ಭಾರತದಲ್ಲೇ ಹಿಂದೂ ಸಮುದಾಯದ ಕೆಲವೇ ವರ್ಗಗಳನ್ನು ಪ್ರತಿನಿಧಿಸುತ್ತಿದ್ದ ವಿಹಿಂಪ ಸಂಘಟನೆಗೆ ತನ್ನ ವಿರಾಟ್ ಸ್ವರೂಪವನ್ನು ಹೊರಗೆಡಹಲು ಒಂದು ಸಾಂಕೇತಿಕ ವಿದ್ಯಮಾನದ ಅವಶ್ಯಕತೆಯೂ ಹೆಚ್ಚಾಗಿತ್ತು. ಈ ಸಂದರ್ಭದಲ್ಲಿ ದೇಶದಲ್ಲುಂಟಾದ ಆರ್ಥಿಕ ಮತ್ತು ರಾಜಕೀಯ ಬದಲಾವಣೆಗಳು ಹಾಗೂ ದೇಶದ ಜನತೆಯಲ್ಲಿ ಭುಗಿಲೆದ್ದಿದ್ದ ಆಕ್ರೋಶಗಳಿಗೆ ಒಂದು ವೇದಿಕೆಯನ್ನು ಸೃಷ್ಟಿಸಲು ಮತೀಯ ರಾಜಕಾರಣ ಉತ್ತಮ ಸಾಧನವಾಗಿ ಪರಿಣಮಿಸಿತ್ತು.

1980ರ ದಶಕದ ಆರಂಭದಲ್ಲಿ ಭಾರತದ ಆರ್ಥಿಕತೆಯಲ್ಲಿ ಉಂಟಾದ ಮಹತ್ತರ ಬದಲಾವಣೆಗಳು ದೇಶದ ಬಂಡವಾಳ ವ್ಯವಸ್ಥೆಯನ್ನೂ ಬಲಪಂಥೀಯ ಮಾರ್ಗದತ್ತ ಕೊಂಡೊಯ್ದಿತ್ತು. ಈ ಸಂದರ್ಭದಲ್ಲಿ ತಮ್ಮ ಫ್ಯಾಸಿಸ್ಟ್ ಸಿದ್ಧಾಂತವನ್ನು ಬಲಪಡಿಸಲು ಪ್ರಜಾಸತ್ತೆಯ ವ್ಯವಸ್ಥೆಯನ್ನೇ ಉಪಯೋಗಿಸಿಕೊಳ್ಳುವುದೂ ಸಂಘಪರಿವಾರಕ್ಕೆ ಅವಶ್ಯವಾಗಿತ್ತು. ಹಾಗಾಗಿ ಮತೀಯ ಸಂಘರ್ಷವನ್ನು ಸೃಷ್ಟಿಸುವ ಮೂಲಕ, ಸಾಮಾಜಿಕ ಸಾಮರಸ್ಯವನ್ನು ಭಂಗಗೊಳಿಸಿ, ಹಿಂದೂ ರಾಷ್ಟ್ರೀಯತೆಯ ಘೋಷಣೆಯ ಮೂಲಕ ತನ್ನ ಹಿಂದೂ ರಾಷ್ಟ್ರದ ಕಲ್ಪನೆಯನ್ನು ಸಾಕಾರಗೊಳಿಸಲು ಆರೆಸ್ಸೆಸ್ ಸಜ್ಜಾಗಿತ್ತು. ಇದರ ಪರಿಣಾಮವೇ 1983ರ ವಿಹಿಂಪದ "ರಾಮಜನ್ಮ ಭೂಮಿ ವಿಮೋಚನೆ" ಘೋಷಣೆ.

1984ರ ಏಪ್ರಿಲ್‌ನಲ್ಲಿ ವಿಹಿಂಪ, ಕೇಂದ್ರೀಯ ಮಾರ್ಗದರ್ಶಕ ಮಂಡಲಿ ಮತ್ತು ಧರ್ಮ ಸಂಸದ್ ಎಂಬ ಎರಡು ಕಾರ್ಯಕಾರಿಣಿ ಸಮಿತಿಗಳನ್ನು ರಚಿಸುವ ಮೂಲಕ ರಾಮಜನ್ಮಭೂಮಿ ವಿಮೋಚನೆಗೆ ಸಾಂಸ್ಥಿಕ ರೂಪ ನೀಡಿದ್ದೇ ಅಲ್ಲದೆ, ತನ್ನ ಕನಸಿನ ಹಿಂದೂ ರಾಷ್ಟ್ರದ ಸಂವಿಧಾನ ರಚನೆಗೂ ಚಾಲನೆ ನೀಡಿತ್ತು. ಎನ್‌ಡಿಎ ಆಡಳಿತಾವಧಿಯಲ್ಲಿ ಸಂವಿಧಾನ ಪರಾಮರ್ಶೆಯ ಪ್ರಸ್ತಾವನೆ ಬಂದಾಗ ಧರ್ಮಸಂಸದ್ ತನ್ನದೇ ಆದ ಪಾತ್ರ ವಹಿಸಿದ್ದನ್ನು ಇಲ್ಲಿ ಸ್ಮರಿಸಬಹುದು. ಈ ಎರಡೂ ಸಮಿತಿಗಳು ಅಯೋಧ್ಯಾ ವಿವಾದದ ನಿರ್ಣಾಯಕ ಅಧಿಕಾರಗಳಾದವು. ಇದೇ ಅವಧಿಯಲ್ಲಿ ವಿಹಿಂಪದ ಸೇನಾಪಡೆ ಭಜರಂಗ ದಳವನ್ನೂ ಸೃಷ್ಟಿಸಲಾಗಿ, ರಾಮಜನ್ಮಭೂಮಿ ವಿವಾದಕ್ಕೆ ಹೊಸ ತಿರುವು ದೊರೆತಿತ್ತು. ತನ್ನ ಸೈದ್ಧಾಂತಿಕ ಹೋರಾಟಕ್ಕೆ ಸಜ್ಜಾಗುವ ಕಾಲಾಳುಗಳನ್ನು ವಿಹಿಂಪ ಭಜರಂಗದಳದ ಮೂಲಕ ಕಂಡುಕೊಂಡಿತ್ತು. ಹಿಂಸಾತ್ಮಕ ಧೋರಣೆಯನ್ನೇ ತನ್ನ ಮೂಲಸಿದ್ಧಾಂತವಾಗಿ ಪರಿಗಣಿಸಿದ್ದ ಭಜರಂಗದಳ ಅರಾಜಕತೆಯನ್ನು ಸೃಷ್ಟಿಸುವುದರಲ್ಲಿ ನಿಷ್ಣಾತವಾಗಿದ್ದುದರಿಂದ ಪ್ರಪ್ರಥಮವಾಗಿ ವಿವಾದಿದ ಬಾಬ್ರಿಮಸೀದಿಯ ಬೀಗಗಳನ್ನು ತೆಗೆಯಲು ಆಗ್ರಹಿಸಿ ಉತ್ತರ ಪ್ರದೇಶ ಬಂದ್ ಕರೆ ನೀಡಲಾಗಿತ್ತು. ಅಯೋಧ್ಯಾ ಕಾಂಡದಿಂದ ಯುದ್ಧ ಕಾಂಡಕ್ಕೆ ಮುಂದುವರೆಯಲು ಇದು ಪೂರಕವಾಗಿತ್ತು.

1985ರ ಮಾರ್ಚಿಯಲ್ಲಿ ವಿಹಿಂಪ ಕೇಂದ್ರ ಸಮಿತಿಯು 50 ಲಕ್ಷ ರಾಮಭಕ್ತರ ರಾಮ ಸೇನೆಯನ್ನು ಸ್ಥಾಪಿಸುವ ಧ್ಯೇಯವನ್ನು ಘೋಷಿಸಿತ್ತು. ಬೀಗವನ್ನು ತೆಗೆಯದಿದ್ದಲ್ಲಿ ಆತ್ಮಾಹುತಿ ಮಾಡಿಕೊಳ್ಳುವುದಾಗಿ ಬೆದರಿಕೆ ಒಡ್ಡಿದ್ದ ರಾಮಚಂದ್ರ ದಾಸ್ ಪರಮಹಂಸ್, ರಾಜಕೀಯ ಬೆಂಬಲ ಇಲ್ಲದಿದ್ದರೆ ರಾಮಜನ್ಮಭೂಮಿ ವಿಮೋಚನೆ ಅಸಾಧ್ಯ ಎಂದು ಘೋಷಿಸಿದ್ದು ಆರೆಸ್ಸೆಸ್ ಸಂಘಟನೆಯನ್ನು ನೇರವಾಗಿ ಆಂದೋಲನಕ್ಕೆ ಆಹ್ವಾನಿಸುವ ಹುನ್ನಾರವಾಗಿತ್ತು. ಈ ವೇಳೆಗೆ ಉದಾರವಾದಿ ಮುಖವಾಡದ ವಾಜಪೇಯಿ ಅಧ್ಯಕ್ಷತೆಯಲ್ಲಿ ಸ್ವತಂತ್ರ ರಾಜಕೀಯ ಪಕ್ಷವಾಗಿ ಮುನ್ನಡೆದಿದ್ದ ಭಾಜಪ ಆರೆಸ್ಸೆಸ್‌ನೊಡನೆ ಕಲೆತು ಅಯೋಧ್ಯಾ ವಿವಾದಕ್ಕೆ ರಾಜಕೀಯ ತಿರುವು ನೀಡುವ ಸೂಚನೆಗಳನ್ನೂ ನೀಡಿತ್ತು.

1985ರ ಮಾರ್ಚಿಯಲ್ಲಿ ವಿಹಿಂಪ ಕೇಂದ್ರ ಸಮಿತಿಯು 50 ಲಕ್ಷ ರಾಮಭಕ್ತರ ರಾಮಸೇನೆಯನ್ನು ಸ್ಥಾಪಿಸುವ ಧ್ಯೇಯವನ್ನು ಘೋಷಿಸಿತ್ತು. ಬೀಗವನ್ನು ತೆಗೆಯದಿದ್ದಲ್ಲಿ ಆತ್ಮಾಹುತಿ ಮಾಡಿಕೊಳ್ಳುವುದಾಗಿ ಬೆದರಿಕೆ ಒಡ್ಡಿದ್ದ ರಾಮಚಂದ್ರ ದಾಸ್ ಪರಮಹಂಸ್, ರಾಜಕೀಯ ಬೆಂಬಲ ಇಲ್ಲದಿದ್ದರೆ ರಾಮಜನ್ಮಭೂಮಿ ವಿಮೋಚನೆ ಅಸಾಧ್ಯ ಎಂದು ಘೋಷಿಸಿದ್ದು ಆರೆಸ್ಸೆಸ್ ಸಂಘಟನೆಯನ್ನು ನೇರವಾಗಿ ಆಂದೋಲನಕ್ಕೆ ಆಹ್ವಾನಿಸುವ ಹುನ್ನಾರವಾಗಿತ್ತು. ಈ ವೇಳೆಗೆ ಉದಾರವಾದಿ ಮುಖವಾಡದ ವಾಜಪೇಯಿ ಅಧ್ಯಕ್ಷತೆಯಲ್ಲಿ ಸ್ವತಂತ್ರ ರಾಜಕೀಯ ಪಕ್ಷವಾಗಿ ಮುನ್ನಡೆದಿದ್ದ ಭಾಜಪ ಆರೆಸ್ಸೆಸ್‌ನೊಡನೆ ಕಲೆತು ಅಯೋಧ್ಯಾ ವಿವಾದಕ್ಕೆ ರಾಜಕೀಯ ತಿರುವು ನೀಡುವ ಸೂಚನೆಗಳನ್ನೂ ನೀಡಿತ್ತು. ಏತನ್ಮಧ್ಯೆ ಶಹಬಾನೋ ಪ್ರಕರಣದಲ್ಲಿ ಮುಸ್ಲಿಂ ಮತೀಯವಾದಿಗಳನ್ನು ಸಂತುಷ್ಟಿಗೊಳಿಸಲು ನ್ಯಾಯಾಲಯದ ಆದೇಶವನ್ನು ಮೀರಿ ಶಾಸನ ಜಾರಿಗೊಳಿಸಿದ್ದ ಪ್ರಧಾನಿ ರಾಜೀವ್‌ಗಾಂಧಿ ತೀವ್ರ ಪ್ರತಿರೋಧ ಎದುರಿಸಬೇಕಾಯಿತು.

ರಾಜೀವ್ ಸರ್ಕಾರದ ನಿಲುವು ಮುಸ್ಲಿಂ ಮಹಿಳೆಯರ ದೃಷ್ಟಿಯಲ್ಲಿ ವಿಶ್ವಾಸ ದ್ರೋಹವೇ ಆಗಿದ್ದರೂ, ಹಿಂದೂ ಮೂಲಭೂತವಾದಿಗಳ ದೃಷ್ಟಿಯಲ್ಲಿ ಮುಸ್ಲಿಂ ತುಷ್ಟೀಕರಣವಾಗಿತ್ತು. ಈ ಸಂದರ್ಭದಲ್ಲಿ ಹಿಂದೂ ಮೂಲಭೂತವಾದಿಗಳ ಪ್ರತಿರೋಧವನ್ನು ಎದುರಿಸಲಾಗದೆ ರಾಜೀವ್ ಗಾಂಧಿಯವರು ವಿವಾದಿತ ಬಾಬ್ರಿ ಮಸೀದಿಯ ಬೀಗಗಳನ್ನು ತೆಗೆಯಲು ಆದೇಶಿಸಿದ್ದು ಮುಸ್ಲಿಂ ಸಮುದಾಯದವರ ಕೆಂಗಣ್ಣಿಗೆ ಗುರಿಯಾಗಿತ್ತು. ತತ್ಪರಿಣಾಮವಾಗಿ ಅಖಿಲ ಭಾರತ ಬಾಬ್ರಿ ಮಸೀದಿ ಕ್ರಿಯಾ ಸಮಿತಿ ಉದ್ಭವಿಸಿತು. ಅಯೋಧ್ಯಾ ಕಾಂಡದಿಂದ ಯುದ್ಧ ಕಾಂಡಕ್ಕೆ ಪರಿವರ್ತಿತವಾಗಲು ವೇದಿಕೆ ಸಜ್ಜಾಗಿತ್ತು. ಲಿಬರ್ಹಾನ್ ವರದಿಯಲ್ಲಿ ರಾಜೀವ್ ಸರ್ಕಾರದ ಕ್ರಮದ ಉಲ್ಲೇಖವೇ ಇಲ್ಲದಿರುವುದು ಅಚ್ಚರಿ ಮೂಡಿಸುತ್ತದೆ.

1986ರ ಜನವರಿಯಲ್ಲಿ ಧರ್ಮಸಂಸದ್ ಆಶ್ರಯದಲ್ಲಿ ಅಯೋಧ್ಯೆಯ ವಿವಾದಿತ ಸ್ಥಳದಲ್ಲಿ ಶಿಲಾಪೂಜನ ಮಾಡುವ ನೀಲಿ ನಕ್ಷೆಯನ್ನು ಸಿದ್ಧಪಡಿಸಲಾಗಿತ್ತು. ತಮ್ಮ ಕನಸಿನ ಹಿಂದೂರಾಷ್ಟ್ರ ಮತ್ತು ಹಿಂದೂ ರಾಷ್ಟ್ರೀಯತೆಯನ್ನು ಸಾಕಾರಗೊಳಿಸಲು ಈ ನೀಲಿನಕ್ಷೆ ಸಂಘಪರಿವಾರಕ್ಕೆ ಕರಡು ಸಂವಿಧಾನವಾಗಿ ಪರಿಣಮಿಸಿತ್ತು. ಈ ಬೆಳವಣಿಗೆಗೆ ಪ್ರತಿಕ್ರಿಯೆಯಾಗಿ ಬಾಬ್ರಿ ಮಸೀದಿ ಕ್ರಿಯಾ ಸಮಿತಿ ಪ್ರತಿಭಟನಾ ಮೆರವಣಿಗೆಯನ್ನು ಆಯೋಜಿಸಿತ್ತು. ತದನಂತರ 1989ರ ನವಂಬರ್‌ನಲ್ಲಿ ವಿವಾದಿತ ಸ್ಥಳದಲ್ಲೇ ರಾಮಮಂದಿರದ ಶಿಲಾನ್ಯಾಸವನ್ನು ನೆರವೇರಿಸುವುದಾಗಿ ವಿಹಿಂಪ ಘೋಷಿಸಿತ್ತು. ಈ ವೇಳೆಗೆ ಅಡ್ವಾನಿಯವರು ಆಗಾಗ್ಗೆ ಉಲ್ಲೇಖಿಸುತ್ತಿದ್ದ ಭವ್ಯವಾದ, ಉಜ್ವಲವಾದ ರಾಮಮಂದಿರದ ಪ್ರತಿರೂಪ ಸಿದ್ಧವಾಗಿತ್ತು. ಇದೇ ಸಂದರ್ಭದಲ್ಲಿ ವಿ.ಪಿ. ಸಿಂಗ್ ಸರ್ಕಾರ ಮಂಡಲ್ ವರದಿಯನ್ನು ಜಾರಿಗೊಳಿಸಿದ್ದು ಅಯೋಧ್ಯಾ ಚಳುವಳಿಗೆ ಹೊಸ ತಿರುವು ನೀಡಿತ್ತು. ಮಂಡಲ ಮತ್ತು ಕಮಂಡಲಗಳ ನಡುವಿನ ಘರ್ಷಣೆಗೆ ರಾಜಕೀಯ ಸ್ವರೂಪ ನೀಡುವ ಮೂಲಕ ತೆರೆಮರೆಯಲ್ಲೇ ಮಂಡಲ್ ವಿರೋಧಿ ಗುಂಪುಗಳನ್ನು ಸಮರ್ಥಿಸಿದ ಭಾಜಪ-ಸಂಘಪರಿವಾರ ಉತ್ತರ ಭಾರತದಲ್ಲಿ ತನ್ನದೇ ಆದ ಪ್ರಾಬಲ್ಯವನ್ನು ವೃದ್ಧಿಸಿಕೊಂಡಿತ್ತು.

ವಿಹಿಂಪ ಸೃಷ್ಟಿಸಿದ ಈ ಅನುಕೂಲಕರ ಸನ್ನಿವೇಶವನ್ನು ತನ್ನ ರಾಜಕೀಯ ಉದ್ದೇಶಗಳಿಗೆ ಬಳಸಿಕೊಳ್ಳಲು ಮಂಡಲ-ಕಮಂಡಲ ಸಂಘರ್ಷ ಭಾಜಪಕ್ಕೆ ವೇದಿಕೆಯಾಗಿ ಪರಿಣಮಿಸಿತು. ಈ ಹಿನ್ನೆಲೆಯಲ್ಲೇ 1989ರ ಜೂನ್ ತಿಂಗಳಲ್ಲಿ ಹಿಮಾಚಲ ಪ್ರದೇಶದ ಪಾಲಂಪುರದಲ್ಲಿ ನಡೆದ ಭಾಜಪದ ಕಾರ್ಯಕಾರಿಣಿ ಸಮಿತಿ ಸಭೆಯನ್ನು ನಡೆಸಲಾಗಿತ್ತು. 1984ರ ಲೋಕಸಭಾ ಚುನಾವಣೆಗಳಲ್ಲಿ ಕೇವಲ ಎರಡು ಸ್ಥಾನಗಳಿಗೆ ತೃಪ್ತಿಪಟ್ಟುಕೊಂಡಿದ್ದ ಭಾಜಪಕ್ಕೆ ಮಂಡಲ್ ವಿರೋಧಿ ಚಳುವಳಿಗಿಂತಲೂ ವಿಹಿಂಪ-ಸಂಘಪರಿವಾರ ಪೋಷಿತ ಕಮಂಡಲ ಚಳುವಳಿ ಹೆಚ್ಚು ಅಪ್ಯಾಯಮಾನವಾಗಿತ್ತು. ಹಾಗಾಗಿಯೇ ಅಂದಿನವರೆಗೂ ಅಯೋಧ್ಯ ಚಳುವಳಿಗೂ ತಮ್ಮ ಪಕ್ಷಕ್ಕೂ ಸಂಬಂಧವಿಲ್ಲವೆಂದೇ ಪ್ರತಿಪಾದಿಸುತ್ತಿದ್ದ ಭಾಜಪ ಪಾಲಂಪುರ ಸಭೆಯಲ್ಲಿ ನೇರವಾಗಿ ರಾಮಮಂದಿರ ನಿರ್ಮಾಣಕ್ಕೆ ತನ್ನ ಬದ್ಧತೆ ಸೂಚಿಸಿತ್ತು. ಅಷ್ಟೇ ಅಲ್ಲದೆ ರಾಮಜನ್ಮಭೂಮಿ ಆಂದೋಲನದಲ್ಲಿ ನೇರವಾಗಿ ಭಾಗವಹಿಸಲೂ ನಿರ್ಧರಿಸಿತ್ತು. ರಾಮಮಂದಿರ ಹಿಂದೂ ಸಮುದಾಯದ ನಂಬಿಕೆ ಮತ್ತು ಶ್ರದ್ಧೆಯ ಪ್ರಶ್ನೆಯಾದ್ದರಿಂದ ಈ ವಿವಾದದಲ್ಲಿ ನ್ಯಾಯಾಂಗದ ನಿರ್ಣಯಗಳನ್ನು ಮಾನ್ಯಮಾಡಲಾಗುವುದಿಲ್ಲ ಎಂದೂ ಭಾಜಪ ಪ್ರತಿಪಾದಿಸಲಾರಂಭಿಸಿತು.

ಪಾಲಂಪುರ ನಿರ್ಣಯವನ್ನು ಕುರಿತು ಲಿಬರ್ಹಾನ್ ವರದಿಯಲ್ಲಿ ಏನೂ ಹೇಳಿಲ್ಲವಾದರೂ ಭಾರತದ ಭವಿಷ್ಯವನ್ನೇ ಬದಲಾಯಿಸುವ ಈ ನಿರ್ಣಯಗಳ ಮಹತ್ವವನ್ನು ನಿರ್ಲಕ್ಷಿಸಲಾಗುವುದಿಲ್ಲ. ಭಾರತದ ಸೆಕ್ಯುಲರ್ ಸಂಸ್ಕೃತಿ

ಮತ್ತು ಸಾಮಾಜಿಕ ಸಾಮರಸ್ಯವನ್ನು ಕದಡಿ ಪ್ರಕ್ಷುಬ್ಧತೆಯನ್ನುಂಟುಮಾಡುವ ಕೋಮುವಾದದ ವಿಷ ಸೃಷ್ಟಿಯಾದ್ದು ಈ ಹಿನ್ನೆಲೆಯಲ್ಲಿಯೇ. ಈ ನಿರ್ಣಯದಿಂದ ಉತ್ತೇಜಿತರಾದ ಭಾಜಪ ಮತ್ತು ಸಂಘಪರಿವಾರದ ಕಾರ್ಯಕರ್ತರು ಸಹಜವಾಗಿಯೇ ಅದ್ವಾನಿಯವರನ್ನು ತಮ್ಮ ನಾಯಕರನ್ನಾಗಿ ಚುನಾಯಿಸಿದ್ದರು. ಅದ್ವಾನಿಯವರೂ ಸಂಘಪರಿವಾರದ ವಿಶ್ವಾಸಕ್ಕೆ ದ್ರೋಹ ಬಗೆಯದೆ ಕೋಮುವಾದದ ವಿಷಜ್ವಾಲೆ ಹರಡಲು ಬೇಕಾದ ಎಲ್ಲ ಸೈದ್ಧಾಂತಿಕ, ರಾಜಕೀಯ ಪರಿಕರಗಳನ್ನೂ ಒದಗಿಸಿದ್ದರು. ಅದ್ವಾನಿ ಸೃಷ್ಟಿಸಿದ "ಅಲ್ಪಸಂಖ್ಯಾತರ ತುಷ್ಟೀಕರಣ" ಮತ್ತು "ಖೋಟ ಸೆಕ್ಯುಲರ್‌ವಾದ" ಎಂಬ ಘೋಷಣೆಗಳು ಅಮಾಯಕ ಹಿಂದೂ ಯುವಕರನ್ನು ಆಕರ್ಷಿಸಲು ನೆರವಾದವು. ರಾಮಮಂದಿರ ವಿವಾದ ಮಾತುಕತೆಗಳ ಮೂಲಕ-ಶಾಸನದ ಮೂಲಕ ಮಾತ್ರ ಪರಿಹಾರ ವಾಗಲು ಸಾಧ್ಯ ಎಂದು ಹೇಳುವ ಮೂಲಕ ಅದ್ವಾನಿಯವರು ರಾಮಮಂದಿರ ನಿರ್ಮಾಣಕ್ಕೆ ತಳಹದಿ ಒದಗಿಸಿದ್ದರು.

ಅದ್ವಾನಿ ನೇತೃತ್ವ ವಹಿಸಿಕೊಂಡ ನಂತರದಲ್ಲಿ ಕೆಲವೇ ಸಂಘಟನೆಗಳಿಗೆ ಸೀಮಿತವಾಗಿದ್ದ ರಾಮಜನ್ಮಭೂಮಿ-ಬಾಬ್ರಿಮಸೀದಿ ವಿವಾದ ಒಂದು ರಾಜಕೀಯ ಆಂದೋಲನದ ಸ್ವರೂಪ ಪಡೆದುಕೊಂಡಿತ್ತು. ಹಿಂದೂ ಮತ್ತು ಮುಸ್ಲಿಂ ಸಮುದಾಯಗಳ ನಡುವೆ ಕಂದರ ಸೃಷ್ಟಿಸಲು ಕಾಂಗ್ರೆಸ್ ಸರ್ಕಾರಗಳ ಮುಸ್ಲಿಂ ಪರ ಎನಿಸುವ ನೀತಿಗಳನ್ನೇ ಗುರಿಯಾಗಿಸಿ ಅದ್ವಾನಿ, ಹಿಂದೂಗಳಿಗೆ ಅನ್ಯಾಯವಾಗಿದೆ, ಮುಸ್ಲಿಂ ಸಮುದಾಯವನ್ನು ತುಷ್ಟೀಕರಿಸಲಾಗುತ್ತಿದೆ ಎಂಬ ಪ್ರಚಾರ ಕೈಗೊಂಡಿದ್ದು ದೇಶಾದ್ಯಂತ ಸಂಚಲನ ಮೂಡಿಸಿದ್ದೇ ಅಲ್ಲದೆ, ಸಾಮಾಜಿಕ ಸಮಸ್ಯೆಗಳಿಂದ ಬಳಲುತ್ತಿದ್ದ ಹಿಂದೂ ಯುವಜನತೆಯನ್ನು ಧೃವೀಕರಿಸುವುದರಲ್ಲೂ ಯಶಸ್ವಿಯಾಗಿತ್ತು. ಹಿಂದೂ-ಮುಸ್ಲಿಂ ಸಮುದಾಯಗಳ ಧೃವೀಕರಣ ಪ್ರಕ್ರಿಯೆ ಒಂದು ಸಾಂಘಿಕ ಸ್ವರೂಪ ಪಡೆದುಕೊಳ್ಳಲು ಹಲವಾರು ರೀತಿಯ ಪ್ರಚಾರಾಂದೋಲನಗಳನ್ನು ನಡೆಸಿದ ಸಂಘಪರಿವಾರ-ಭಾಜಪ ನಾಯಕರು ಜರ್ಮನಿಯ ಗೋಬಲ್ಸ್ ತಂತ್ರವನ್ನು ಪರಿಣಾಮಕಾರಿಯಾಗಿ ಉಪಯೋಗಿಸಿದ್ದರು.

ಈ ಹಂತದಿಂದಲೇ ರಾಮಜನ್ಮಭೂಮಿ-ಬಾಬ್ರಿ ಮಸೀದಿ ವಿವಾದ ತೀಕ್ಷ್ಣವಾದದ್ದೇ ಅಲ್ಲದೆ, ಅದ್ವಾನಿಯವರ ಮುಂಚೂಣಿ ನಾಯಕತ್ವದಲ್ಲಿ ನಿರ್ಣಾಯಕ ಹಂತ ತಲುಪಿತ್ತು. 1989ರಲ್ಲಿ ರಾಜೀವ್ ಗಾಂಧಿಯನ್ನು ಶಿಲಾನ್ಯಾಸಕ್ಕೆ ಒಪ್ಪುವಂತೆ ಮಾಡಿದ್ದು, ಜನತಾದಳದ ಬೆಂಬಲದೊಂದಿಗೆ ಸರ್ಕಾರಕ್ಕೆ ಬಾಹ್ಯ ಬೆಂಬಲ ನೀಡಿ ಭಾಜಪದ ರಾಜಕೀಯ ಪ್ರತಿಷ್ಠೆಯನ್ನು ಹೆಚ್ಚಿಸಿದ್ದು, ಸೋಮನಾಥ ರಥಯಾತ್ರೆಯ ಮೂಲಕ ದೇಶಾದ್ಯಂತ ಕೋಮುಜ್ವಾಲೆಯನ್ನು ವ್ಯವಸ್ಥಿತವಾಗಿ ಹರಡಿದ್ದು, ಪ್ರತಿಯೊಂದು ಸಾರ್ವಜನಿಕ ಸಭೆಯಲ್ಲೂ "ಮಂದಿರವನ್ನಲ್ಲೇ ಕಟ್ಟುವೆವು" ಎಂದು ಘೋಷಿಸುವ ಮೂಲಕ ಮತೀಯ ಉನ್ಮಾದವನ್ನು ಸೃಷ್ಟಿಸಿದ್ದು ಇವೆಲ್ಲವೂ ಲಾಲ್ ಕೃಷ್ಣ ಅದ್ವಾನಿಯವರ ಸಾಧನೆಗಳು! ತಮ್ಮ ಈ ಸಾಧನೆಯ ಮಾರ್ಗದಲ್ಲಿ ದೇಶದ ಜನತೆ ಅನುಭವಿಸಿದ ಸಾವು ನೋವುಗಳು ಭಾಜಪದ ರಾಜಕೀಯ ಮುನ್ನಡೆಗೆ ಮೆಟ್ಟಿಲುಗಳಾಗಿದ್ದು ಅಷ್ಟೇ ಸತ್ಯ.

ತದನಂತರದ ಇತಿಹಾಸ ತಿಳಿದೇ ಇದೆ. ಸೋಮನಾಥ ರಥಯಾತ್ರೆಯಿಂದ ಬಾಬ್ರಿ ಮಸೀದಿಯ ಧ್ವಂಸದವರೆಗೆ ಸಂಭವಿಸಿದ ಕೋಮು ಗಲಭೆಗಳು, ಬಲಿಯಾದ ಅಮಾಯಕ ಜೀವಗಳು, ನಾಶವಾದ ಸಾಮಾಜಿಕ ಸಾಮರಸ್ಯ, ಸೃಷ್ಟಿಯಾದ ಮತೀಯ ಪ್ರಜ್ಞೆ ಇವೆಲ್ಲವೂ ಐದು ರೂಗಳ ಇಟ್ಟಿಗೆಗಳ ರೂಪದಲ್ಲಿ ಒಂದು ಫ್ಯಾಸಿಸ್ಟ್ ಸಾಮ್ರಾಜ್ಯದ ಸ್ಥಾಪನೆಗೆ ಸಿದ್ಧವಾಗಿದ್ದವು. ಈ ಪ್ರಕ್ರಿಯೆಯ ಅಂತಿಮ ಹಂತವೇ ಬಾಬ್ರಿ ಮಸೀದಿಯ ಧ್ವಂಸ. ಮಸೀದಿಯ ಧ್ವಂಸ ಕಾರ್ಯಾಚರಣೆಗೆ ಅಗತ್ಯವಾಗಿದ್ದ ಸಿದ್ಧತೆಗಳು ಸಂಘಪರಿವಾರದ ನೇತೃತ್ವದಲ್ಲೇ ನಡೆದಿದ್ದರೂ, ಈ ಘಟನೆಯ ಬೀಜಾಂಕುರವಾದದ್ದು 1925ರಲ್ಲಿ ನಾಗಪುರದಲ್ಲಿ ಎಂಬ ಅಂಶವನ್ನು ಅಲಕ್ಷಿಸುವಂತಿಲ್ಲ. ಲಿಬರ್ಹಾನ್ ವರದಿ ಕಾನೂನು ಮತ್ತು ಸಂವಿಧಾನದ ಚೌಕಟ್ಟಿನಲ್ಲಿ ಸಿದ್ಧಪಡಿಸಿರುವ ದಸ್ತಾವೇಜು, ಹಾಗಾಗಿ ಈ ವರದಿಯಲ್ಲಿ ಘಟನಾವಳಿಗಳನ್ನು ಕಾಲಾನುಕ್ರಮವಾಗಿ ವಿಶ್ಲೇಷಿಸಿ ಘಟನೆಗಳ ಹಿಂದಿನ ರಾಜಕೀಯ ಹಿತಾಸಕ್ತಿಗಳನ್ನು ವಿಶ್ಲೇಷಣೆಗೊಳಪಡಿಸಲಾಗಿದೆಯೇ ಹೊರತು ಫ್ಯಾಸಿಸ್ಟ್ ಮನೋಭಾವದ ವಿಷಬೀಜಗಳ ಬಿತ್ತನೆ ಮತ್ತು ಡಿಸೆಂಬರ್ 6 1992ರಂದು ಪಡೆದ ಫಸಲಿನ ಚಿತ್ರಣ ದೊರೆಯುವುದು ಅಸಾಧ್ಯ. ಆದಾಗ್ಯೂ ಲಿಬರ್ಹಾನ್ ವರದಿ ಕುತೂಹಲ ಮೂಡಿಸಿದ್ದರೆ ಅದು ರಾಜಕೀಯ ವಿದ್ಯಮಾನಗಳನ್ನು ಕುರಿತ ಕುತೂಹಲ ಮಾತ್ರ.



ಸಾವಿರ ಪುಟಗಳ ಲಿಬರ್ಹಾನ್ ವರದಿಯ ಅಂತಿಮ ನಿರ್ಣಯದಲ್ಲಿ ಹೊಸತೇನೂ ಕಂಡುಬರುವುದಿಲ್ಲ. ಇಡೀ ದೇಶದ ಜನತೆಗೆ ತಿಳಿದಿದ್ದ ಸತ್ಯವನ್ನೇ ವರದಿಯಲ್ಲಿ ಪುನರುಚ್ಚರಿಸಲಾಗಿದೆಯಷ್ಟೆ. ಆಗ ಉತ್ತರ ಪ್ರದೇಶದಲ್ಲಿ ಅಧಿಕಾರದಲ್ಲಿದ್ದ ಕಲ್ಯಾಣ್ ಸಿಂಗ್ ನೇತೃತ್ವದ ಭಾಜಪ ಸರ್ಕಾರದ ಆಡಳಿತ ಯಂತ್ರ "ಪ್ರಜಾತಾಂತ್ರಿಕವಾಗಿ ಚುನಾಯಿತವಾದ ಸರ್ಕಾರಕ್ಕೆ ಶೋಭೆ ತರದ ರೀತಿಯಲ್ಲಿ ಸಂಘಪರಿವಾರದ ಕುಕೃತ್ಯಗಳಿಗೆ ಪರೋಕ್ಷವಾಗಿ ಮೋಸಗಾರಿಕೆಯಿಂದ ಬೆಂಬಲ ಪ್ರೋತ್ಸಾಹ ನೀಡಿದೆ" ಎಂದು ವರದಿಯಲ್ಲಿ ಆರೋಪಿಸಲಾಗಿದೆ. "ಧ್ವಂಸದ ಅಂತಿಮ ಕ್ಷಣಗಳಲ್ಲಿ ಅಲ್ಲಿ ನಿಯೋಜಿಸಲಾಗಿದ್ದ ಪೊಲೀಸ್ ಅಧಿಕಾರಿಗಳು, ಪುರಾತನ ವಿವಾದಿತ ಕಟ್ಟಡದ ಧ್ವಂಸಾಚರಣೆಗೆ ಯಾವುದೇ ರೀತಿಯಲ್ಲಿ ಅಡ್ಡಿ ಮಾಡದೆ ಸೇನೆ ಶಿಸ್ತನ್ನು ಪಾಲಿಸುವ ರೀತಿಯಲ್ಲಿ ಧ್ವಂಸ ಕಾರ್ಯ ಮುಂದುವರೆಯಲು ಅನುವು ಮಾಡಿಕೊಟ್ಟಿದ್ದರು.

ಲಿಬರ್ಹಾನ್ ವರದಿಯಲ್ಲೇನಿದೆ?

ಸಾವಿರ ಪುಟಗಳ ಲಿಬರ್ಹಾನ್ ವರದಿಯ ಅಂತಿಮ ನಿರ್ಣಯದಲ್ಲಿ ಹೊಸತೇನೂ ಕಂಡುಬರುವುದಿಲ್ಲ. ಇಡೀ ದೇಶದ ಜನತೆಗೆ ತಿಳಿದಿದ್ದ ಸತ್ಯವನ್ನೇ ವರದಿಯಲ್ಲಿ ಪುನರುಚ್ಚರಿಸಲಾಗಿದೆಯಷ್ಟೆ. ಆಗ ಉತ್ತರಪ್ರದೇಶದಲ್ಲಿ ಅಧಿಕಾರದಲ್ಲಿದ್ದ ಕಲ್ಯಾಣ್‌ಸಿಂಗ್ ನೇತೃತ್ವದ ಭಾಜಪ ಸರ್ಕಾರದ ಆಡಳಿತ ಯಂತ್ರ "ಪ್ರಜಾತಾಂತ್ರಿಕವಾಗಿ ಚುನಾಯಿತವಾದ ಸರ್ಕಾರಕ್ಕೆ ಶೋಭೆ ತರದ ರೀತಿಯಲ್ಲಿ ಸಂಘಪರಿವಾರದ ಕುಕೃತ್ಯಗಳಿಗೆ ಪರೋಕ್ಷವಾಗಿ ಮೋಸಗಾರಿಕೆಯಿಂದ ಬೆಂಬಲ ಪ್ರೋತ್ಸಾಹ ನೀಡಿದೆ" ಎಂದು ವರದಿಯಲ್ಲಿ ಆರೋಪಿಸಲಾಗಿದೆ. "ಧ್ವಂಸದ ಅಂತಿಮ ಕ್ಷಣಗಳಲ್ಲಿ ಅಲ್ಲಿ ನಿಯೋಜಿಸಲಾಗಿದ್ದ ಪೊಲೀಸ್ ಅಧಿಕಾರಿಗಳು, ಪುರಾತನ ವಿವಾದಿತ ಕಟ್ಟಡದ ಧ್ವಂಸಾಚರಣೆಗೆ ಯಾವುದೇ ರೀತಿಯಲ್ಲಿ ಅಡ್ಡಿ ಮಾಡದೆ ಸೇನೆ ಶಿಸ್ತನ್ನು ಪಾಲಿಸುವ ರೀತಿಯಲ್ಲಿ ಧ್ವಂಸ ಕಾರ್ಯ ಮುಂದುವರೆಯಲು ಅನುವು ಮಾಡಿಕೊಟ್ಟಿದ್ದರು. ಅಲ್ಲಿ ನೆರೆದಿದ್ದ ಧ್ವಂಸಾಚರಣೆಯ ಆಯೋಜಕರ ಮಾರ್ಗದರ್ಶನದಲ್ಲಿ ಕಾಲಾಳುಗಳು ವ್ಯವಸ್ಥಿತವಾಗಿ ತಮ್ಮ ಕೆಲಸವನ್ನು ನಿರ್ವಹಿಸಿದ್ದರು. ಪೊಲೀಸ್ ಪೇದೆಗಳು ತಮ್ಮ ಮೇಲಧಿಕಾರಿಗಳ ಆದೇಶದಂತೆ ಮೂಕ ಪ್ರೇಕ್ಷಕರಾಗಿದ್ದರು" ಎಂದು ವರದಿಯಲ್ಲಿ ಹೇಳಲಾಗಿದೆ.

"ಕರಸೇವಕರ ಮೇಲೆ ಯಾವುದೇ ಕ್ರಮ ಕೈಗೊಳ್ಳದಂತೆ ಪೊಲೀಸ್ ಅಧಿಕಾರಿಗಳಿಗೆ ಆದೇಶ ನೀಡಿದ್ದನ್ನು ಘಟನೆಗೆ ಮುನ್ನವೇ ಜನತೆಗೆ ಪರೋಕ್ಷವಾಗಿ ತಿಳಿಸಿದ್ದರಿಂದ ಕರಸೇವಕರು ನಿರ್ಭೀತಿಯಿಂದ ತಮ್ಮ ಕೈಂಕರ್ಯದಲ್ಲಿ ತೊಡಗಿದ್ದರು. ಅನ್ಯ ಪ್ರದೇಶಗಳಲ್ಲಿ ಉಂಟಾಗಬಹುದಾದ ಗಲಭೆಗಳನ್ನು ತಡೆಗಟ್ಟುವ ನೆಪದಲ್ಲಿ ಪರಿಸ್ಥಿತಿಯನ್ನು ಹತೋಟಿಯಲ್ಲಿರಿಸಲು ನಿಯೋಜಿಸಲಾಗಿದ್ದ ಕೇಂದ್ರ ಸೇನಾ ಪಡೆಗಳನ್ನೂ ವ್ಯವಸ್ಥಿತವಾಗಿ ಹಿಂದೆಗೆದುಕೊಳ್ಳಲಾಗಿತ್ತು" ಎಂದು ವರದಿಯಲ್ಲಿ ಹೇಳಿರುವುದು ಕಲ್ಯಾಣ್ ಸಿಂಗ್ ಅವರನ್ನು ನೇರವಾಗಿ ಅಪರಾಧಿ ಸ್ಥಾನದಲ್ಲಿ ನಿಲ್ಲಿಸುತ್ತದೆ. ದೇಶದಲ್ಲಿ ಕೋಮು ಸಂಘರ್ಷವನ್ನು ಉಂಟುಮಾಡಿದವರೆಂದು 68 ಆರೋಪಿಗಳ ಪಟ್ಟಿಯನ್ನು ವರದಿಯಲ್ಲಿ ನೀಡಲಾಗಿದ್ದು ಈ ಪಟ್ಟಿಯಲ್ಲಿ ವಾಜಪೇಯಿ, ಅದ್ವಾನಿ, ಮುರಳಿ ಮನೋಹರ ಜೋಷಿ, ಕಲ್ಯಾಣ್ ಸಿಂಗ್ ಮುಂತಾದವರೂ ಸೇರಿದ್ದಾರೆ.

ಸಂಘಪರಿವಾರದ ಈ ನೇತಾರರನ್ನು ಕೋಟಾ ಉದಾರವಾದಿಗಳೆಂದು ಕರೆದಿರುವ ನ್ಯಾಯಮೂರ್ತಿಗಳು ಅಶೋಕ್ ಸಿಂಘಲ್, ಪ್ರವೀಣ್ ತೊಗಾಡಿಯಾ, ಸುದರ್ಶನ್ ಅವರ ಕೂಟ ಹಿಂದುತ್ವ ಚಳುವಳಿಯ ನೇತಾರರಾದ ಅದ್ವಾನಿ, ಜೋಷಿ, ವಾಜಪೇಯಿಯವರನ್ನು

ನಿಯಂತ್ರಿಸುತ್ತಿತ್ತು ಎಂದು ಆರೋಪಿಸುತ್ತಾರೆ. ಮಸೀದಿಯ ಧ್ವಂಸಕ್ಕೆ ಸಂಘಪರಿವಾರವೇ ಕಾರಣ ಎಂಬ ವರದಿಯ ತೀರ್ಪು ಒಪ್ಪುವಂತಹುದೇ ಆದರೂ ವರದಿಯಲ್ಲಿ ನರಸಿಂಹರಾವ್ ಸರ್ಕಾರವನ್ನು ಅಪರಾಧಿ ಎಂದು ಪರಿಗಣಿಸದಿರುವುದು, ವಾಜಪೇಯಿಯವರನ್ನು ಅಪರಾಧಿಗಳ ಪಟ್ಟಿಯಲ್ಲಿ ಸೇರಿಸಿರುವುದು ವಿವಾದಾಸ್ಪದವಾಗಿದೆ.

ಲಿಬರ್ಹಾನ್ ಸಮಿತಿಯ ಸಲಹೆಗಾರರಾಗಿದ್ದ ಅನುಪಮ್ ಗುಪ್ತಾ ಲಿಬರ್ಹಾನ್ ಅವರೊಡನೆ ಭಿನ್ನಾಭಿಪ್ರಾಯದಿಂದ 2007ರಲ್ಲಿ ರಾಜೀನಾಮೆ ನೀಡಿದ್ದರು. ವಾಜಪೇಯಿಯವರನ್ನು ಸಂಭವನೀಯ ಅಪರಾಧಿ ಎಂದು ಪರಿಗಣಿಸಿರುವುದನ್ನು ಗುಪ್ತಾ ವಿರೋಧಿಸುತ್ತಾರೆ. ವಾಜಪೇಯಿಯವರು ಈ ಘಟನೆಯಲ್ಲಿ ಯಾವುದೇ ರೀತಿಯಲ್ಲಿ ಪ್ರತ್ಯಕ್ಷವಾಗಿ ಭಾಗವಹಿಸಿಲ್ಲ ಎಂಬ ಕಾರಣಕ್ಕೆ 2003ರ ಜುಲೈ 22ರಂದು ಸಮಿತಿಯು ಅವರನ್ನು ಸಾಕ್ಷಿಯಾಗಿ ಕರೆಯಲು ನಿರಾಕರಿಸಿತ್ತು ಹಾಗಾಗಿ ಅವರನ್ನು ಸಂಭವನೀಯ ಅಪರಾಧಿ ಎಂದು ಪರಿಗಣಿಸಲಾಗುವುದಿಲ್ಲ ಎಂದು ಗುಪ್ತಾ ವಾದಿಸುತ್ತಾರೆ. ಲಿಬರ್ಹಾನ್ ವರದಿಯಲ್ಲಿ ಅಪರಾಧಿಗಳನ್ನು ಮೂರು ಗುಂಪುಗಳನ್ನಾಗಿ ವಿಂಗಡಿಸಲಾಗಿದೆ. ಆರೆಸ್ಸೆಸ್. ಭಜರಂಗದಳ, ವಿಹಿಂಪ ಮತ್ತು ಶಿವಸೇನೆಯ ನಾಯಕತ್ವವನ್ನು ಪ್ರಾಥಮಿಕ ಗುಂಪಿನಲ್ಲಿ ಸೇರಿಸಲಾಗಿದ್ದು ಬಾಬ್ರಿ ಮಸೀದಿಯ ಧ್ವಂಸಕ್ಕೆ ಮೂಲಕಾರಣಕರ್ತರೆಂದು ಗುರುತಿಸಲಾಗಿದೆ.

ದ್ವಿತೀಯ ಗುಂಪಿಗೆ ಸೇರಿಸಲಾಗಿರುವ ಕೋಟಾ ಉದಾರವಾದಿಗಳಲ್ಲಿ ಪ್ರಮುಖವಾಗಿ ವಾಜಪೇಯಿ, ಅದ್ವಾನಿ, ಜೋಷಿ ಮುಂತಾದ ಭಾಜಪ ನಾಯಕರನ್ನು ಸೇರಿಸಲಾಗಿದ್ದು, ಈ ನಾಯಕರು ತಮಗೇನೂ ತಿಳಿದೇ ಇಲ್ಲವೆಂದು ನಟಿಸುತ್ತಲೇ ಮಸೀದಿಯ ಧ್ವಂಸಕ್ಕೆ ಪ್ರೋತ್ಸಾಹ ನೀಡಿರುವುದನ್ನು ಉಲ್ಲೇಖಿಸಲಾಗಿದೆ. ರಾಜ್ಯ ಸರ್ಕಾರ ಮತ್ತು ಆಡಳಿತ ಯಂತ್ರವನ್ನು ಮೂರನೆಯ ಗುಂಪಿಗೆ ಸೇರಿಸಲಾಗಿದೆ. ಸಾರ್ವಜನಿಕವಾಗಿ ಒಂದು ರಾಜಕೀಯ ಪಕ್ಷದ ಮುಖವಾಣಿಗಳಂತಿದ್ದ ವಾಜಪೇಯಿ, ಅದ್ವಾನಿ ಮತ್ತು ಜೋಷಿಯವರುಗಳು ಸಂಘಪರಿವಾರದ ಸೂತ್ರದ ಗೊಂಬೆಗಳಾಗಿದ್ದು, ಪರಿವಾರದ ರಾಜಕೀಯ ನಿರ್ಣಯಗಳನ್ನು ಸಾಕಾರಗೊಳಿಸುವ ನೇತಾರರೆಂದು ವರದಿಯಲ್ಲಿ ಬಣ್ಣಿಸಲಾಗಿದೆ.

ಆದಾಗ್ಯೂ ಲಿಬರ್ಹಾನ್ ವರದಿಯಲ್ಲಿ ಈ ತಪ್ಪಿತಸ್ಥರ ವಿರುದ್ಧ ಯಾವುದೇ ಕ್ರಮ ಕೈಗೊಳ್ಳುವಂತೆ ಶಿಫಾರಸ್ಸು ಮಾಡದಿರುವುದು ಅಚ್ಚರಿ ಮೂಡಿಸುತ್ತದೆ. ವರದಿಯಲ್ಲಿ ಒಟ್ಟಾರೆ 65 ಶಿಫಾರಸುಗಳನ್ನು ಮಾಡಲಾಗಿದ್ದು ಬಹುಪಾಲು ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡುವ ನಿಟ್ಟಿನಲ್ಲಿ ಮಾತ್ರ ಪರಿಣಾಮಕಾರಿಯಾಗಿವೆ. ಬಹುತೇಕ ಶಿಫಾರಸುಗಳು ಕೇವಲ ನ್ಯಾಯಮೂರ್ತಿಗಳ ಅಭಿಪ್ರಾಯಗಳಾಗಿ ಕಂಡುಬರುತ್ತವೆ. ನಾಗರಿಕ ಸೇವೆಯ ನೇಮಕಾತಿ, ಕೋಮುಸಂಘರ್ಷಗಳ ನಿಯಂತ್ರಣ, ಬೇಹುಗಾರಿಕೆ ವ್ಯವಸ್ಥೆ, ಪೊಲೀಸ್ ಇಲಾಖೆಯ ನಿರ್ವಹಣೆ, ಕೇಂದ್ರ-ರಾಜ್ಯ ಸಂಬಂಧಗಳು, ಧಾರ್ಮಿಕ ಮತ್ತು ಸಾಂಸ್ಕೃತಿಕ ವಿದ್ಯಮಾನಗಳು ಹೀಗೆ ಹಲವು ವಿಷಯಗಳಲ್ಲಿ ಸಮಿತಿ ತನ್ನ ಶಿಫಾರಸುಗಳನ್ನು ಪ್ರಸ್ತುತಪಡಿಸುತ್ತದೆ. ದೇಶದ ಜನತೆಗೆ ಪ್ರಸ್ತುತ ವ್ಯವಸ್ಥೆಯಲ್ಲಿ ವಿಶ್ವಾಸ ಕುಂದುತ್ತಿದೆ ಎಂಬ ಸಮಿತಿಯ ಅಭಿಪ್ರಾಯ ಕ್ಲೀಷೆ ಎನಿಸದಿರುವುದಿಲ್ಲ. ಹಾಗೆಯೇ ರಾಜಕಾರಣಿಗಳು ಹಾಗು ಅಧಿಕಾರಿಗಳ ನಡುವಿನ ಮೈತ್ರಿ, ಜನತೆಗೆ ಕಾನೂನಿನಲ್ಲಿ ವಿಶ್ವಾಸ ಕುಂದುತ್ತಿರು

> **ಲಿಬರ್ಹಾನ್ ವರದಿ ಎರಡು ಮುಖ್ಯ ಆರೋಪಗಳನ್ನು ಎದುರಿಸುತ್ತದೆ. ಮೊದಲನೆಯದು ಕಣ್ಣೆದುರು ಕಂಡ ಸತ್ಯವನ್ನು ನಿರೂಪಿಸಲು 17 ವರ್ಷಗಳ ಕಾಲಾವಧಿ ತೆಗೆದುಕೊಂಡಿದ್ದು. ಎರಡನೆಯದು ಘಟನೆಯ ಮುನ್ನ ಮತ್ತು ನಂತರ ಬಹುಪಾಲು ನಿಷ್ಕ್ರಿಯವಾಗಿದ್ದ ನರಸಿಂಹ ರಾವ್ ಸರ್ಕಾರಕ್ಕೆ ನಿರ್ದೋಷಿ ಪಟ್ಟ ನೀಡಿದ್ದು. ಈ ಎರಡೂ ಕಾಳಜಿಗಳನ್ನು ಕುರಿತು ವರದಿಯಲ್ಲಿ ಉಲ್ಲೇಖಿಸಲಾಗಿದ್ದರೂ ನೀಡಿರುವ ಕಾರಣಗಳು ಮಾತ್ರ ಸ್ವೀಕಾರಾರ್ಹವಲ್ಲ. ಆರು ತಿಂಗಳ ಅವಧಿಗೆ ನಿಯೋಜಿಸಲ್ಪಟ್ಟ ಸಮಿತಿಯ ಮುಂದಿದ್ದ ಪ್ರಶ್ನೆಗಳೆಂದರೆ ಬಾಬ್ರಿ ಮಸೀದಿಯ ಧ್ವಂಸಕ್ಕೆ ಕಾರಣವಾದ ವಿವಿಧ ಘಟನಾವಳಿಗಳ ಹಿಂದಿನ ವಿದ್ಯಮಾನಗಳು ಮತ್ತು ಸತ್ಯಾಸತ್ಯತೆಗಳನ್ನು ಶೋಧಿಸುವುದು ಹಾಗು ಈ ಘಟನೆಗೆ ಕಾರಣಕರ್ತರಾದವರನ್ನು ಗುರುತಿಸುವುದು. ಭದ್ರತಾ ಪಡೆಗಳ ವೈಫಲ್ಯಗಳನ್ನು, ಅಧಿಕಾರಶಾಹಿಯ ನಿರ್ಲಕ್ಷ್ಯವನ್ನು ಪರಿಶೋಧಿಸುವುದು.**

ವುದೂ ವರದಿಯಲ್ಲಿ ಉಲ್ಲೇಖಿಸಲಾಗಿದೆ.

ನರಸಿಂಹರಾವ್ ಸರ್ಕಾರವನ್ನು ದೋಷಿಯನ್ನಾಗಿ ಪರಿಗಣಿಸದ ನ್ಯಾಯಮೂರ್ತಿಗಳು ಮುಸ್ಲಿಂ ಸಂಘಟನೆಗಳನ್ನು ಪರೋಕ್ಷ ಅಪರಾಧಿಗಳಂತೆ ಬಿಂಬಿಸಿರುವುದು ಅಚ್ಚರಿ ಮೂಡಿಸುತ್ತದೆ. ಕೆಲವೇ ಕೋಮುವಾದಿ ಮುಸ್ಲಿಂ ಸಂಘಟನೆಗಳೆಡೆ ಬೆಟ್ಟು ಮಾಡಿ ತೋರಿಸುವ ಸಮಿತಿ ಇಡೀ ಪ್ರಕರಣದಲ್ಲಿ ಈ ಸಂಘಟನೆಗಳು ಮೌನ ಪ್ರೇಕ್ಷಕರಂತಿದ್ದುದನ್ನು ಆಕ್ಷೇಪಿಸುತ್ತದೆ. "ಬಾಬ್ರಿ ಮಸೀದಿ ಕ್ರಿಯಾ ಸಮಿತಿಯು ವಿವಾದಿತ ಸ್ಥಳದ ಬಗ್ಗೆ ತಮ್ಮ ಹಕ್ಕನ್ನು ಪ್ರತಿಪಾದಿಸಲೇ ಇಲ್ಲ. ಬದಲಾಗಿ ಸಂಘಪರಿವಾರದ ಆಗ್ರಹವನ್ನು ನಿರಾಕರಿಸುವುದರಲ್ಲೇ ತೊಡಗಿದ್ದವು" ಎಂದು ಹೇಳುವ ನ್ಯಾಯಮೂರ್ತಿಗಳು ಹಿಂದೂ ಸಂಘಟನೆಗಳು ಜನರ ಮನಗಳಲ್ಲಿ ದ್ವೇಷದ ಬೀಜ ಬಿತ್ತಲು ಮುಸ್ಲಿಂ ಸಂಘಟನೆಗಳು ವಿಪುಲ ಅವಕಾಶ ಮಾಡಿಕೊಟ್ಟವು ಎಂದು ಹೇಳುವುದರ ಮೂಲಕ ದ್ವಂದ್ವಾತ್ಮಕ ನಿಲುವು ತಾಳುತ್ತಾರೆ. ತತ್ಪರಿಣಾಮವಾಗಿ ಲಿಬರ್ಹಾನ್ ವರದಿಯ ಶಿಫಾರಸುಗಳು ಎಲ್ಲಾ ರೀತಿಯ ರಾಜಕೀಯ ಪಕ್ಷಗಳಿಗೂ ತಮ್ಮದೇ ಆದ ನಿಲುವು ತಾಳುವ ಅವಕಾಶ ನೀಡಿದೆ. ಕಾಂಗ್ರೆಸ್ ಭಾಜಪವನ್ನು ದೂಷಿಸುತ್ತದೆ, ಇತರ ಪಕ್ಷಗಳು ಕಾಂಗ್ರೆಸ್-ಭಾಜಪ ಪಕ್ಷಗಳನ್ನು ದೂಷಿಸುತ್ತವೆ, ಭಾಜಪ ನಿರಪರಾಧಿಯಂತೆ ಕಾಂಗ್ರೆಸ್ ಪಕ್ಷವನ್ನೇ ದೂಷಿಸುತ್ತದೆ. ಆದರೆ ದೇಶದ ಸಾಮಾನ್ಯ ನಾಗರಿಕರಲ್ಲಿ ಮೂಡುವ ಪ್ರಶ್ನೆಗಳು ಪ್ರಶ್ನೆಗಳಾಗಿಯೇ ಉಳಿಯುತ್ತವೆ.

ಲಿಬರ್ಹಾನ್ ಸಮಿತಿಯ ಇತಿಮಿತಿಗಳು

ಲಿಬರ್ಹಾನ್ ವರದಿ ಎರಡು ಮುಖ್ಯ ಆರೋಪಗಳನ್ನು ಎದುರಿಸುತ್ತದೆ. ಮೊದಲನೆಯದು ಕಣ್ಣೆದುರು ಕಂಡ ಸತ್ಯವನ್ನು ನಿರೂಪಿಸಲು 17 ವರ್ಷಗಳ ಕಾಲಾವಧಿ ತೆಗೆದುಕೊಂಡಿದ್ದು. ಎರಡನೆಯದು ಘಟನೆಯ ಮುನ್ನ ಮತ್ತು ನಂತರ ಬಹುಪಾಲು ನಿಷ್ಕ್ರಿಯವಾಗಿದ್ದ ನರಸಿಂಹ ರಾವ್ ಸರ್ಕಾರಕ್ಕೆ ನಿರ್ದೋಷಿ ಪಟ್ಟ ನೀಡಿದ್ದು. ಈ ಎರಡೂ ಕಾಳಜಿಗಳನ್ನು ಕುರಿತು ವರದಿಯಲ್ಲಿ ಉಲ್ಲೇಖಿಸಲಾಗಿದ್ದರೂ ನೀಡಿರುವ ಕಾರಣಗಳು ಮಾತ್ರ ಸ್ವೀಕಾರಾರ್ಹವಲ್ಲ. ಆರು ತಿಂಗಳ ಅವಧಿಗೆ ನಿಯೋಜಿಸಲ್ಪಟ್ಟ ಸಮಿತಿಯ ಮುಂದಿದ್ದ ಪ್ರಶ್ನೆಗಳೆಂದರೆ ಬಾಬ್ರಿ ಮಸೀದಿಯ ಧ್ವಂಸಕ್ಕೆ ಕಾರಣವಾದ ವಿವಿಧ ಘಟನಾವಳಿಗಳ ಹಿಂದಿನ ವಿದ್ಯಮಾನಗಳು ಮತ್ತು ಸತ್ಯಾಸತ್ಯತೆಗಳನ್ನು ಶೋಧಿಸುವುದು ಹಾಗು ಈ ಘಟನೆಗೆ ಕಾರಣಕರ್ತರಾದವರನ್ನು ಗುರುತಿಸುವುದು. ಭದ್ರತಾ ಪಡೆಗಳ ವೈಫಲ್ಯಗಳನ್ನು, ಅಧಿಕಾರಶಾಹಿಯ ನಿರ್ಲಕ್ಷ್ಯವನ್ನು ಪರಿಶೋಧಿಸುವುದು. ಉತ್ತರ ಪ್ರದೇಶ ಸರ್ಕಾರದ ನಿಷ್ಕ್ರಿಯತೆ ಮತ್ತು ಸಾಂಧರ್ಭಿಕ ಮೌನ, ಡಿಸೆಂಬರ್ 6ರಂದು ಪತ್ರಕರ್ತರ ಮೇಲೆ ನಡೆದ ವ್ಯವಸ್ಥಿತ ದಾಳಿಯ ಹಿನ್ನೆಲೆಯನ್ನು ಗುರುತಿಸುವುದು. ಈ ಹಲವು ಅಂಶಗಳನ್ನು ಪರಿಶೀಲಿಸಿ ವರದಿ ನೀಡಲು 17 ವರ್ಷಗಳು ಅಗತ್ಯವಾಗಿತ್ತೇ ?

ವಿಳಂಬವಾದುದಕ್ಕೆ ನ್ಯಾಯಮೂರ್ತಿಗಳು ಅನೇಕ ಕಾರಣಗಳನ್ನು ನೀಡುತ್ತಾರೆ. ಪ್ರಾರಂಭದಲ್ಲಿ ತಾವು ಸೇವೆಯಲ್ಲಿದ್ದುದರಿಂದ ಪಂಜಾಬ್-ಹರಿಯಾಣಾ ನ್ಯಾಯಾಲಯದ ಸಿಬ್ಬಂದಿಯನ್ನೇ ಅವಲಂಬಿಸಿದ್ದು, ಸಮಿತಿಗೆ ಪ್ರತ್ಯೇಕ ಕಛೇರಿಯಾಗಲೀ, ಸಿಬ್ಬಂದಿ ವರ್ಗವಾಗಲೀ ಇಲ್ಲದಿದ್ದುದು, ಅಧಿಕಾರಶಾಹಿಗಳ ನಿರ್ಲಕ್ಷ್ಯ ಮನೋಭಾವ ಇತ್ಯಾದಿ. ಏತನ್ಮಧ್ಯೆ ಪಂಜಾಬ್ ನ್ಯಾಯಾಲಯದ ಸಿಬ್ಬಂದಿಯನ್ನು ಹಿಂದೆಗೆಯಲಾಯಿತು. ಇದರಿಂದ ಸಿಬ್ಬಂದಿಗಳಲ್ಲೂ ಉತ್ಸಾಹ ಕುಂದಿತು. ಈ ಎಲ್ಲಾ ಸಮಸ್ಯೆಗಳಿಂದ ಸಮಿತಿಯ ಕಾಲಾವಧಿಯನ್ನು 48 ಬಾರಿ ವಿಸ್ತರಿಸಲಾಗಿತ್ತು. ಕೇಂದ್ರ ಸರ್ಕಾರದ ಬದ್ಧತೆಗೆ ಈ ವಿಸ್ತರಣೆಗಳೇ ಪ್ರತ್ಯಕ್ಷ ಸಾಕ್ಷಿಯಾಗಿದೆ. ಮತ್ತೊಂದೆಡೆ ಸಮಿತಿಯ ಕಾರ್ಯದರ್ಶಿಗಳನ್ನು ಹಲವಾರುಬಾರಿ ವರ್ಗಾವಣೆ ಮಾಡಲಾಗಿತ್ತು. ಪ್ರತಿಯೊಬ್ಬ ಹೊಸ ಕಾರ್ಯದರ್ಶಿಯೂ ಕಛೇರಿಯ ಕಡತಗಳನ್ನು ಪರಿಶೀಲಿಸಲು ಸಾಕಷ್ಟು ಸಮಯ ಬೇಕಾಗುತ್ತಿತ್ತು.

ಸಮಿತಿಯ ತನಿಖೆಗೆ ಅಗತ್ಯವಾದ ಪುರಾವೆಗಳನ್ನು, ವಿಷಯಗಳನ್ನು ಒದಗಿಸಲು ನಾಗರಿಕರಾಗಲೀ, ಸರ್ಕಾರಿ ಅಧಿಕಾರಿಗಳಾಗಲೀ ಮುಂದೆ ಬರಲಿಲ್ಲ ಎನ್ನುತ್ತಾರೆ ಲಿಬರ್ಹಾನ್. ಹಾಗಾಗಿ ಬಾಬ್ರಿ ಮಸೀದಿ ವಿವಾದದಲ್ಲಿ ಭಾಗಿಯಾಗಿದ್ದ ರಾಜಕೀಯ ಪಕ್ಷಗಳು, ಸಂಘಟನೆಗಳು, ರಾಜಕಾರಣಿಗಳು ಮತ್ತು ಸಾರ್ವಜನಿಕ ವ್ಯಕ್ತಿಗಳಿಗೆ ಸಮಿತಿ ನೋಟೀಸು ನೀಡಿ ಕರೆಸಿಕೊಂಡಿತ್ತು. ಇವರಲ್ಲಿ ಹಲವರು ನ್ಯಾಯಾಲಯಗಳಿಂದ ತಡೆಯಾಜ್ಞೆ ತರುವುದರ ಮೂಲಕ ತಪ್ಪಿಸಿಕೊಂಡಿದ್ದರು. ದೆಹಲಿ ಉಚ್ಚ ನ್ಯಾಯಾಲಯವು ತಡೆಯಾಜ್ಞೆಯನ್ನು ತೆರವುಗೊಳಿಸಿದರೂ, ಅಲಹಾಬಾದ್ ನ್ಯಾಯಾಲಯದ ತಡೆಯಾಜ್ಞೆಗಳು ಇಂದಿಗೂ ಜಾರಿಯಲ್ಲಿರುವುದು ವಿಶೇಷ! ಕೆಲವೇ ಪ್ರತ್ಯಕ್ಷ ಸಾಕ್ಷಿಗಳ ವಿಚಾರಣೆ ನಡೆಸಲು ಕೇಂದ್ರ ಸರ್ಕಾರ ವರ್ಷಗಟ್ಟಲೆ ವಿಳಂಬ ಮಾಡಿದ್ದನ್ನು ವರದಿಯಲ್ಲಿ ಉಲ್ಲೇಖಿಸಲಾಗಿದೆ. ಧ್ವಂಸ ಕಾರ್ಯಾಚರಣೆಯ ಹಿಂದಿನ ಪಿತೂರಿಯನ್ನು ಕಂಡುಹಿಡಿಯಲು

ಕೇಂದ್ರ ಸರ್ಕಾರ ಯಾವುದೇ ಕಮ ಕೈಗೊಳ್ಳದಿರುವುದನ್ನೂ ವರದಿ ಆಕ್ಷೇಪಿಸುತ್ತದೆ. ಕಲ್ಯಾಣ್ ಸಿಂಗ್, ಮುಲಾಯಂ ಸಿಂಗ್ ಮುಂತಾದವರು ಮಾಧ್ಯಮಗಳ ಮುಂದೆ ತಮಗೆ ಬಾಬ್ರಿ ಮಸೀದಿ ಧ್ವಂಸದ ಹಿಂದಿನ ಪಿತೂರಿ ತಿಳಿದಿತ್ತು ಎಂದು ಹೇಳಿದ್ದರೂ, ಸಮಿತಿಯ ಮುಂದೆ ನಿರಾಕರಿಸಿದ್ದನ್ನು ಲಿಬರ್ಹಾನ್ ಉಲ್ಲೇಖಿಸುತ್ತಾರೆ. ಇದೇ ರೀತಿ ಹಲವಾರು ಸಾಕ್ಷಿಗಳು ಹೊಣೆಗಾರಿಕೆಯಿಂದ ನುಣುಚಿಕೊಂಡಿದ್ದಾರೆ ಎಂದು ನ್ಯಾಯಮೂರ್ತಿಗಳು ಹೇಳುತ್ತಾರೆ.

ಪರಿಶೋಧನಾ ಸಮಿತಿಗಳ ಕಾಯ್ದೆಯ ಕಲಂ 8ಬಿ ಅನ್ವಯ ಯಾವುದೇ ವ್ಯಕ್ತಿಯನ್ನು ವಿಚಾರಣೆಗೆ ಒಳಪಡಿಸುವ ಅಗತ್ಯತೆಯನ್ನು ಸಮಿತಿ ಕಂಡುಕೊಂಡ ಸಂದರ್ಭದಲ್ಲಿ ಅಥವಾ ಈ ರೀತಿ ವಿಚಾರಣೆಯಿಂದ ಆ ವ್ಯಕ್ತಿಯ ಘನತೆಗೆ ಕುಂದುಬರುವಂತಹ ಸಂದರ್ಭದಲ್ಲಿ, ಅಂತಹ ವ್ಯಕ್ತಿಯು ಸಂಭಾವ್ಯ ಘಟನೆಗೆ ಸಂಬಂಧಿಸಿದ್ದ ಪಕ್ಷದಲ್ಲಿಯೂ, ಆತನನ್ನು ಸಮಿತಿಯ ವಿಚಾರಣೆಗೆ ಒಳಪಡಿಸಬೇಕೆಂದೂ ತನ್ನನ್ನು ಸಮರ್ಥಿಸಿಕೊಳ್ಳಲು ತನ್ನ ನಿಲುವನ್ನು ವ್ಯಕ್ತಪಡಿಸಲು ಸೂಕ್ತ ಅವಕಾಶ ನೀಡಬೇಕು ಎಂದು ಹೇಳಲಾಗಿದೆ. ಹಾಗಾಗಿ 28 ಜುಲೈ 2003ರಂದು ನಡೆದ ವಿಚಾರಣೆಯಲ್ಲಿ ಪ್ರಧಾನಿ ವಾಜಪೇಯಿಯವರನ್ನು ವಿಚಾರಣೆಗೆ ಗುರಿಪಡಿಸುವ ಅಗತ್ಯವಿಲ್ಲ ಎಂದು ಹೇಳಿದ್ದ ಸಮಿತಿ, ತನ್ನ ಅಂತಿಮ ವರದಿಯಲ್ಲಿ ವಾಜಪೇಯಿಯವರನ್ನು ದೋಷಿಗಳ ಪಟ್ಟಿಯಲ್ಲಿ ಸೇರಿಸಿರುವುದು ಚರ್ಚೆಗೆ ಗ್ರಾಸವಾಗಿದೆ.

ನರಸಿಂಹರಾವ್ ನೇತೃತ್ವದ ಕೇಂದ್ರ ಸರ್ಕಾರ ಡಿಸೆಂಬರ್ 5ರಂದೇ ಉತ್ತರ ಪ್ರದೇಶದಲ್ಲಿ ರಾಜ್ಯಪತಿ ಆಳ್ವಿಕೆ ಜಾರಿಗೊಳಿಸಬೇಕಿತ್ತು ಎಂದು ವರದಿಯಲ್ಲಿ ಸ್ಪಷ್ಟವಾಗಿ ಹೇಳಿದ್ದರೂ ಕೇಂದ್ರ ಸರ್ಕಾರವು ಸಂವಿಧಾನಿಕ ಇತಿಮಿತಿಗಳಿಂದ ಬಾಧಿತವಾಗಿತ್ತು, ರಾಜ್ಯ ಸರ್ಕಾರವು ಈ ನ್ಯೂನತೆಯನ್ನು ತನ್ನ ಅನುಕೂಲಕ್ಕೆ ಉಪಯೋಗಿಸಿಕೊಂಡಿತ್ತು ಎಂದು ಹೇಳುವುದು ಚರ್ಚಾಸ್ಪದವಾಗಿದೆ. ಇಷ್ಟೆಲ್ಲಾ ನ್ಯೂನತೆಗಳ ನಡುವೆ, ಇತಿಮಿತಿಗಳ ನಡುವೆ ಕಾರ್ಯ ನಿರ್ವಹಿಸಿ, ಐದು ಸರ್ಕಾರಗಳ ಆಡಳಿತದಲ್ಲಿ ತನ್ನ ಕಾರ್ಯನಿರ್ವಹಿಸಿದ ಲಿಬರ್ಹಾನ್ ಸಮಿತಿ ಒಂದು ವಸ್ತುನಿಷ್ಠ ವರದಿಯನ್ನಾಗಲೀ, ಸ್ಪಷ್ಟ ಅಭಿಪ್ರಾಯವನ್ನಾಗಲೀ ದೇಶದ ಜನತೆಯ ಮುಂದಿರಿಸುವುದು ಸಾಧ್ಯವೇ?

ಐತಿಹಾಸಿಕ ಸತ್ಯಗಳು

17 ವರ್ಷಗಳ ಸತತ ಪ್ರಯತ್ನದ ನಂತರ ಪ್ರಸ್ತುತ ಪಡಿಸಲಾಗಿರುವ ಲಿಬರ್ಹಾನ್ ವರದಿ ಬಾಬ್ರಿ ಮಸೀದಿ ವಿವಾದದ ಮೂಲ ಅಂಶಗಳನ್ನು ಪರಿಗಣಿಸಿಯೇ ಇಲ್ಲ ಎನ್ನುತ್ತಾರೆ ಇತಿಹಾಸಕಾರ ದ್ವಿಜೇಂದ್ರ ನಾರಾಯಣ್ ಝಾ. ಮೂಲ ವಿವಾದ ಇಂದಿಗೂ ನ್ಯಾಯಾಲಯದಲ್ಲೇ ಇದೆ. ಈ ವರದಿಯಲ್ಲಿ ಮಸೀದಿಯ ಧ್ವಂಸದ ಹಿಂದಿನ ಘಟನಾವಳಿಗಳನ್ನೂ ಮಾತ್ರ ಪರಿಶೋಧಿಸಲಾಗಿದೆ. ಇಂದಿನ ತುರ್ತು ಅಗತ್ಯತೆ ಎಂದರೆ ಮಸೀದಿಯ ಧ್ವಂಸಕ್ಕೆ ಕಾರಣರಾದ ಎಲ್ಲ ಸಂಘಟನೆ ಮತ್ತು ವ್ಯಕ್ತಿಗಳನ್ನು ನ್ಯಾಯಾಲಯದ ಕಟಕಟೆಯಲ್ಲಿ ನಿಲ್ಲಿಸಿ, ವಿವಾದಕ್ಕೆ ಇತಿಶ್ರೀ ಹಾಡುವುದೇ ಆಗಿದೆ. ಆದರೆ ಲಿಬರ್ಹಾನ್ ವರದಿಯನ್ನಾಧರಿಸಿ ಕೇಂದ್ರ ಸರ್ಕಾರ ಸಲ್ಲಿಸಿರುವ ಕೈಗೊಳ್ಳಬೇಕಾದ ಕ್ರಮಗಳ ವರದಿಯನ್ನು ನೋಡಿದರೆ ಇದು ಸಂಭವನೀಯ ಎನಿಸುವುದಿಲ್ಲ. ಕೇಂದ್ರ ಸರ್ಕಾರ ಕೈಗೊಳ್ಳಲಿಚ್ಚಿಸುವ ಕ್ರಮಗಳು ಕೋಮು ಸಂಘರ್ಷ-ಸಾಮಾಜಿಕ ಸಾಮರಸ್ಯದ ಸುತ್ತ ಗಿರಕಿ ಹೊಡೆಯುತ್ತದೆಯೇ ಹೊರತು, ಅಪರಾಧಿಗಳನ್ನು ಶಿಕ್ಷಿಸುವತ್ತ ಗಮನಹರಿಸುವುದಿಲ್ಲ.

ಇತಿಹಾಸದಲ್ಲಿ ಇಣುಕಿ ನೋಡಿದಾಗ ಕಂಡುಬರುವ ಸತ್ಯವೆಂದರೆ ಬಾಬ್ರಿ ಮಸೀದಿಯನ್ನು 1528-29ರಲ್ಲಿ ಮೊಘಲ್ ದೊರೆ ಬಾಬರನ ಸೇನಾಧಿಕಾರಿಯಾಗಿದ್ದ ಮೀರ್ ಬಾಖಿ ನಿರ್ಮಿಸಿದ್ದ. ಈ ಸ್ಥಳದಲ್ಲಿ ರಾಮಮಂದಿರ ಇತ್ತು ಅದನ್ನು ಧ್ವಂಸ ಮಾಡಿ ಮಸೀದಿಯನ್ನು ನಿರ್ಮಿಸಲಾಯಿತು ಎಂದು ಸಂಘಪರಿವಾರ ಪ್ರತಿಪಾದಿಸುತ್ತದೆ. ಆದರೆ 1948-49ರವರೆಗೆ ಈ ಸ್ಥಳದಲ್ಲಿ ಯಾವುದೇ ದೇವರ ವಿಗ್ರಹಗಳೇ ಇರಲಿಲ್ಲ. 1949ರಲ್ಲಿ ರಾತ್ರೋರಾತ್ರಿ ರಾಮನ ವಿಗ್ರಹಗಳು ಪ್ರತ್ಯಕ್ಷವಾದ ನಂತರ 1975ರವರೆಗೂ ಈ ಸಂಬಂಧದಲ್ಲಿ ಯಾವುದೇ ವಿವಾದವೂ ಇರಲಿಲ್ಲ. 1980ರ ದಶಕದಲ್ಲಿ ವಿಹಿಂದ ಸ್ಥಾಪಿತವಾದ ನಂತರವೇ ರಾಮಜನ್ಮಭೂಮಿಯ ವಿವಾದ ಸೃಷ್ಟಿಯಾಗಿತ್ತು. 1992ರಲ್ಲಿ "ಮಂದಿರವನ್ನಲ್ಲೇ ಕಟ್ಟುವೆವು" "ರಾಮಜನ್ಮಭೂಮಿ" ಮುಂತಾದ ಘೋಷಣೆಗಳನ್ನು ಸೃಷ್ಟಿಸಲಾಯಿತಾದರೂ ಯಾವುದೇ ಇತಿಹಾಸದ ಪುಟಗಳಲ್ಲಿ ಈ ಪದಗಳ ಉಲ್ಲೇಖ ಕಂಡುಬರುವುದಿಲ್ಲ.

ಉದಾಹರಣೆಗೆ ಅಯೋಧ್ಯಾ ಮಹಾತ್ಮ ರಾಮನನ್ನು ಕುರಿತು ರಚಿಸಲಾಗಿರುವ ಸ್ಕಂದ ಪುರಾಣದಲ್ಲಿ ಶ್ರೀರಾಮನು ಸ್ವರ್ಗಪಯಣ ನಡೆಸುವುದನ್ನು 100 ಸಾಲುಗಳಲ್ಲಿ ವರ್ಣಿಸಲಾಗಿದೆ. ಘಗ್ಗರ್ ಮತ್ತು ಸರಯೂ ನದಿಗಳ ಸಂಗಮವಾಗುವ ಸ್ವರ್ಗದ್ವಾರ ಎಂಬ ಸ್ಥಳದಿಂದ ರಾಮನು ಸ್ವರ್ಗಕ್ಕೆ ಹೋಗುವುದನ್ನು ಇಲ್ಲಿ ವರ್ಣಿಸಲಾಗಿದೆ. ಈಗಲೂ ಈ ಸ್ಥಳವನ್ನು ಕಾಣಬಹುದು. ಹಾಗಾಗಿ ರಾಮನ ಜನ್ಮಸ್ಥಳಕ್ಕಿಂತಲೂ ಶ್ರೀರಾಮ ಸ್ವರ್ಗಕ್ಕೆ ಪಯಣಿಸಿದ ಸ್ಥಳವನ್ನು ಪವಿತ್ರವೆಂದು ಪರಿಗಣಿಸಲಾಗಿದೆ. 11ನೆಯ ಶತಮಾನದ ಭಟ್ಟ ಲಕ್ಷ್ಮಿಧರ ರಚಿಸಿದ ತತ್ವಚಿಂತಾಮಣಿಯಲ್ಲಿ ಅಸಂಖ್ಯಾತ ಯಾತ್ರಾಸ್ಥಳಗಳನ್ನು ಉಲ್ಲೇಖಿಸಲಾಗಿದೆ. ಈ ಕೃತಿಯಲ್ಲೂ ಅಯೋಧ್ಯೆಯನ್ನು ಯಾತ್ರಾಸ್ಥಳವೆಂದು ಉಲ್ಲೇಖಿಸಲಾಗಿಲ್ಲ. ಹಾಗೆಯೇ ತುಳಸಿ ದಾಸರ ರಾಮಚರಿತ ಮಾನಸದಲ್ಲಿ ರಾಮ ಮತ್ತು ಅಯೋಧ್ಯೆಯ ಉಲ್ಲೇಖವಿರುವುದಾದರೂ, ರಾಮಮಂದಿರದ ಧ್ವಂಸವನ್ನು ಕುರಿತು ಏನನ್ನೂ ಹೇಳಲಾಗಿಲ್ಲ.

> **17 ವರ್ಷಗಳ ಸತತ ಪ್ರಯತ್ನದ ನಂತರ ಪ್ರಸ್ತುತ ಪಡಿಸಲಾಗಿರುವ ಲಿಬರ್ಹಾನ್ ವರದಿ ಬಾಬ್ರಿ ಮಸೀದಿ ವಿವಾದದ ಮೂಲ ಅಂಶಗಳನ್ನು ಪರಿಗಣಿಸಿಯೇ ಇಲ್ಲ ಎನ್ನುತ್ತಾರೆ ಇತಿಹಾಸಕಾರ ದ್ವಿಜೇಂದ್ರ ನಾರಾಯಣ್ ಝಾ. ಮೂಲ ವಿವಾದ ಇಂದಿಗೂ ನ್ಯಾಯಾಲಯದಲ್ಲೇ ಇದೆ. ಈ ವರದಿಯಲ್ಲಿ ಮಸೀದಿಯ ಧ್ವಂಸದ ಹಿಂದಿನ ಘಟನಾವಳಿಗಳನ್ನೂ ಮಾತ್ರ ಪರಿಶೋಧಿಸಲಾಗಿದೆ. ಇಂದಿನ ತುರ್ತು ಅಗತ್ಯತೆ ಎಂದರೆ ಮಸೀದಿಯ ಧ್ವಂಸಕ್ಕೆ ಕಾರಣರಾದ ಎಲ್ಲ ಸಂಘಟನೆ ಮತ್ತು ವ್ಯಕ್ತಿಗಳನ್ನು ನ್ಯಾಯಾಲಯದ ಕಟಕಟೆಯಲ್ಲಿ ನಿಲ್ಲಿಸಿ, ವಿವಾದಕ್ಕೆ ಇತಿಶ್ರೀ ಹಾಡುವುದೇ ಆಗಿದೆ. ಆದರೆ ಲಿಬರ್ಹಾನ್ ವರದಿಯನ್ನಾಧರಿಸಿ ಕೇಂದ್ರ ಸರ್ಕಾರ ಸಲ್ಲಿಸಿರುವ ಕೈಗೊಳ್ಳಬೇಕಾದ ಕ್ರಮಗಳ ವರದಿಯನ್ನು ನೋಡಿದರೆ ಇದು ಸಂಭವನೀಯ ಎನಿಸುವುದಿಲ್ಲ.**

ಇತಿಹಾಸದ ಇತರ ಪುರಾತತ್ವ ಸಂಶೋಧನೆ ಮತ್ತು ದಾಖಲೆಗಳಲ್ಲೂ 17-18ನೆಯ ಶತಮಾನದವರೆಗೂ ಇಡೀ ಉತ್ತರ ಭಾರತದಲ್ಲಿ ಶ್ರೀರಾಮನಿಗೇ ಮೀಸಲಾದ ದೇವಾಲಯದ ಉಲ್ಲೇಖ ಇರುವುದಿಲ್ಲ. ಆದರೆ ದಕ್ಷಿಣ ಭಾರತದಲ್ಲಿ ಚೋಳರ ಕಾಲದಲ್ಲೇ (10-12ನೆಯ ಶತಮಾನ) ರಾಮನ ದೇವಾಲಯಗಳಿರುವುದು ಸಾಬೀತಾಗಿದೆ. 12ನೆಯ ಶತಮಾನಕ್ಕೆ ಸೇರಿದ ಒಂದೆರಡು ರಾಮನ ದೇವಾಲಯಗಳು ಮಧ್ಯಪ್ರದೇಶದಲ್ಲಿ ಕಂಡುಬರುತ್ತವೆ. ಆದರೆ ಉತ್ತರ ಪ್ರದೇಶ, ಬಿಹಾರ, ಒರಿಸ್ಸಾಗಳಲ್ಲಿ ಅಲ್ಲ. ಐತಿಹಾಸಿಕವಾಗಿ ನೋಡಿದರೆ ಅಯೋಧ್ಯೆ ಜೈನ ಮತ್ತು ಬೌದ್ಧ ಧರ್ಮಗಳ ದೃಷ್ಟಿಯಲ್ಲಿ ಮಹತ್ವ ಪಡೆಯುತ್ತದೆ. ಕ್ರಿಶ 630ರಲ್ಲಿ ಭರತಖಂಡದ ಪಯಣ ಮಾಡಿದ್ದ ಚೀನಾದ ಯಾತ್ರಿ ಹುವಾನ್ ಯಂಗ್ ಅಯೋಧ್ಯೆಯಲ್ಲಿ 100ಕ್ಕೂ ಹೆಚ್ಚು ಬೌದ್ಧ ವಿಹಾರಗಳಿರುವುದನ್ನು, ಕೇವಲ 10 ಹಿಂದೂ ದೇವಾಲಯಗಳಿರುವುದನ್ನೂ ಉಲ್ಲೇಖಿಸುತ್ತಾನೆ. ವಿಷ್ಣು ಸ್ಮೃತಿಯಲ್ಲಿ 3-4ನೆಯ ಶತಮಾನದ 85 ಯಾತ್ರಾಸ್ಥಳಗಳ ಉಲ್ಲೇಖವಿದ್ದರೂ ಅದರಲ್ಲಿ ಅಯೋಧ್ಯೆಯ ಪ್ರಸ್ತಾಪ ಇರುವುದಿಲ್ಲ.

ಸಂಘಪರಿವಾರದ ಇತಿಹಾಸಕಾರರಾದ ಬಿ.ಬಿ. ಲಾಲ್ ಮುಂತಾದವರು ತಮ್ಮ ಮೊದಲ ವರದಿಯಲ್ಲಿ ಯಾವುದೇ ದೇವಾಲಯದ ಪ್ರಸ್ತಾಪ ಮಾಡುವುದಿಲ್ಲ. ಆದರೆ 1985-86ರಲ್ಲಿ ಸೇವೆಯಿಂದ ನಿವೃತ್ತಿಯಾದ ನಂತರ ತಮ್ಮ ನಿಲುವನ್ನು ಬದಲಾಯಿಸಿದ ಬಿ.ಬಿ. ಲಾಲ್ ಅಯೋಧ್ಯೆಯಲ್ಲಿ ದೊರೆತ ಸ್ತಂಭಗಳು ರಾಮಜನ್ಮಭೂಮಿ ವಿವಾದಿದ ಸ್ಥಳದಲ್ಲಿ ಮಂದಿರವಿದ್ದುದನ್ನು ಸಾಬೀತುಪಡಿಸುತ್ತವೆ ಎಂದು ಹೇಳಲಾರಂಭಿಸಿದ್ದರು. ಸಂಘಪರಿವಾರದ ಅಧಿಕೃತ ಇತಿಹಾಸಕಾರರಾಗಿ ನಿಯೋಜಿಸಲ್ಪಟ್ಟ ನಂತರದಲ್ಲಿ ರಾಮಜನ್ಮಭೂಮಿಯ ವಿವಾದ ಪರಿಹರಿಸಲು ಮಸೀದಿಯನ್ನು ಧ್ವಂಸ ಮಾಡುವುದು ಅನಿವಾರ್ಯ ಎಂದು ಪ್ರತಿಪಾದಿಸಿದ ಲಾಲ್ ಮತ್ತವರ ಸಹವರ್ತಿಗಳು ತಮ್ಮದೇ ಆದ ಇತಿಹಾಸವನ್ನು ಸೃಷ್ಟಿಸುವುದರಲ್ಲಿ ತೊಡಗಿದ್ದು ಆರೆಸ್ಸೆಸ್‌ಗೆ ಪ್ರೋತ್ಸಾಹಕರವಾಗಿತ್ತು. ವಿವಾದಿತ ಸ್ಥಳದಲ್ಲಿ ದೊರೆತಿರುವ ಸ್ತಂಭಗಳು 1.70 ಮೀಟರ್ ಎತ್ತರವಿದ್ದು ಈ ಸ್ತಂಭಗಳು ಕಟ್ಟಡದ ಭಾರವನ್ನು ತಡೆಯುವಷ್ಟು ಗಟ್ಟಿಯಾಗಿರಲಾರದು ಎಂದು ಇತಿಹಾಸಕಾರರು ವಾದಿಸುತ್ತಾರೆ. ಜನ್ಮ ಭೂಮಿ ಎಂಬ ಪದವನ್ನೂ ಸಹ ಕ್ರಿ.ಶ. 14ರಿಂದ 18ನೆಯ ಶತಮಾನದ ಅವಧಿಯಲ್ಲಿ ವಿವಿಧ ಕಾಲಘಟ್ಟಗಳಲ್ಲಿ ರಚಿತವಾದ ಸ್ಕಂಧಪುರಾಣದ ಕೊನೆಯ ಹಂತದಲ್ಲಿ ಮಾತ್ರ ಕಾಣಬಹುದಾಗಿದೆ. ಹಾಗಾಗಿ ಹತ್ತೊಂಬತ್ತನೆಯ ಶತಮಾನದ ಅಂತ್ಯದಲ್ಲಿ ಮಾತ್ರ ಜನ್ಮಸ್ಥಾನದ ಪರಿಕಲ್ಪನೆಯ ಬೀಜಾಂಕುರವಾದದ್ದು ಸ್ಪಷ್ಟವಾಗುತ್ತದೆ.

ಲಿಬರ್ಹಾನ್ ಸಮಿತಿಯ ವರದಿಯಲ್ಲಿ ಮಂದಿರ-ಮಸೀದಿ ವಿವಾದದವನ್ನು ಪರಿಹರಿಸಲು ರಾಷ್ಟ್ರೀಯ ಸಮಿತಿ ಸ್ಥಾಪಿಸಲು ಸೂಚಿಸಲಾಗಿದೆ. ಆದರೆ ಕೇಂದ್ರ ಸರ್ಕಾರ ಈ ಶಿಫಾರಸನ್ನು ನಿರ್ಲಕ್ಷಿಸಿದೆ. ಪುರಾತತ್ವ

ಶೋಧನಾ ಇಲಾಖೆಯೇ ಈ ಕೆಲಸವನ್ನು ನಿರ್ವಹಿಸುತ್ತದೆ ಎಂಬ ಸರ್ಕಾರದ ವಾದ ಹುರುಳಿಲ್ಲದ್ದಾಗಿದೆ. ಆದರೆ ಬಾಬ್ರಿ ಮಸೀದಿಯ ಧ್ವಂಸದ ಸಮಯದಲ್ಲಾಗಲೀ, ನಂತರದ ಚರ್ಚೆಗಳಲ್ಲಾಗಲೀ ಪುರಾತತ್ವ ಇಲಾಖೆ ತಟಸ್ಥ ನಿಲುವು ತಾಳುವ ಮೂಲಕ ನಿಷ್ಕ್ರಿಯತೆಯನ್ನು ತೋರಿದೆ. ಈ ಸಂದರ್ಭದಲ್ಲಿ ಇತಿಹಾಸಕಾರರು ತಮ್ಮ ವೈಜ್ಞಾನಿಕ ಪರಿಶೋಧನೆಗಳ ಮೂಲಕ ಸತ್ಯಾಂಶವನ್ನು ಜನತೆಗೆ ತಿಳಿಸಬೇಕಾಗಿದೆ. ವಿವಾದಿದ ಸ್ಥಳವನ್ನು ಕುರಿತಂತೆ ಇತಿಹಾಸಕಾರರ ಪ್ರತಿಪಾದನೆಗಳನ್ನು ಸರ್ಕಾರ ಮನ್ನಿಸುವುದೂ ಅತ್ಯಗತ್ಯವಾಗಿದೆ. ಆದರೆ ಲಿಬರ್ಹಾನ್ ಸಮಿತಿಯ ವರದಿಯಲ್ಲಿ ಈ ಕುರಿತ ಯಾವುದೇ ಸ್ಪಷ್ಟ ಅಭಿಪ್ರಾಯಗಳು ವ್ಯಕ್ತವಾಗದಿರುವುದು ಅಚ್ಚರಿ ಮೂಡಿಸುತ್ತದೆ.

ಸ್ಥಾವರವಲ್ಲ ಜಂಗಮ

ಡಿಸೆಂಬರ್ 6 1992ರಂದು ಫ್ಯಾಸಿಸ್ಟ್ ಶಕ್ತಿಗಳ ಆಕ್ರಮಣಕ್ಕೊಳಗಾಗಿ ಧ್ವಂಸವಾದದ್ದು 400 ವರ್ಷಗಳ ಹಳೆಯ ಪುರಾತನ ಕಟ್ಟಡ ಎನ್ನುವುದು ವಾಸ್ತವ ಅಂಶ. ಐತಿಹಾಸಿಕವಾಗಿ ಈ ಕಟ್ಟಡ ದೇವಾಲಯವೋ ಮಸೀದಿಯೋ ಎನ್ನುವ ಜಿಜ್ಞಾಸೆ ಶಾಶ್ವತವಾಗಿ ಉಳಿಯುತ್ತದೆ. ಲಿಬರ್ಹಾನ್ ವರದಿಯಾಗಲೀ, ದೇಶದ ಸರ್ವೋಚ್ಚ ನ್ಯಾಯಾಲಯದ ಅಂತಿಮ ನಿರ್ಣಯವಾಗಲೀ ಈ ಅಂಶಗಳ ಬಗ್ಗೆ ಸಮಕಾಲೀನ ಸಂದರ್ಭಕ್ಕನುಗುಣವಾಗಿ ಅಪ್ರಾಯಮಾನವಾಗಬಹುದು. ಅಥವಾ ಕೆಲವರಿಗೆ ನುಂಗಲಾರದ ಸತ್ಯವಾಗಲೂಬಹುದು. ಬಾಬ್ರಿ ಮಸೀದಿಯ ನಿರ್ಮಾಣ ಅಥವಾ ನಿರ್ನಾಮ ಎರಡೂ ನಡೆದದ್ದು ರಾಜಕೀಯ ಅಸ್ಮಿತೆಗಳ ಸ್ಥಾಪನೆಗಾಗಿ, ಧಾರ್ಮಿಕ ನಂಬಿಕೆಗಳ ಧೃವೀಕರಣಕ್ಕಾಗಿ, ಒಂದು ನಿರ್ದಿಷ್ಟ ಧರ್ಮದ ಅಸ್ತಿತ್ವಕ್ಕಾಗಿ, ಪ್ರಭುತ್ವವನ್ನು ನಿಗ್ರಹಿಸುವ ಶಕ್ತಿಗಳ ಪ್ರಾಬಲ್ಯಕ್ಕಾಗಿ.

ಲಿಬರ್ಹಾನ್ ಸಮಿತಿಯ ವರದಿಯಲ್ಲಿ ಅಪರಾಧಿಗಳೆಂದು ಪರಿಗಣಿಸಲಾಗಿರುವವರಿಗೆ ಯಾವುದೇ ರೀತಿಯ ಶಿಕ್ಷೆಯನ್ನು ಸೂಚಿಸಲಾಗಿಲ್ಲ. ಕೇಂದ್ರ ಸರ್ಕಾರದ ಕ್ರಿಯಾ ಯೋಜನೆಯಲ್ಲೂ ಈ ಕುರಿತ ಪ್ರಸ್ತಾವನೆ ಕಂಡುಬರುವುದಿಲ್ಲ. ಆದರೆ ಭಾರತೀಯ ಜನಸಾಮಾನ್ಯರಿಗೆ ಅಪರಾಧಿಗಳು ಯಾರೆಂಬ ಗ್ರಹಿಕೆ ಸ್ಪಷ್ಟವಾಗಿ ಇರುವುದನ್ನು ಪ್ರಭುತ್ವ ಗ್ರಹಿಸಬೇಕಾಗಿದೆ. ಸಂಘಪರಿವಾರ-ಭಾಜಪ ನಾಯಕರು

ನಿರುದ್ಯೋಗ, ಬಡತನ, ದಾರಿದ್ರ್ಯತೆ, ಅಭದ್ರತೆಯನ್ನೆದುರಿಸುತ್ತಿದ್ದ ದೇಶದ ಯುವಜನತೆಯ ಭವಿಷ್ಯವನ್ನೇ ಹಾಳು ಮಾಡಿ ಸಂಗ್ರಹಿಸಲಾದ ಪವಿತ್ರ ಇಟ್ಟಿಗೆಗಳು ರಾಮಮಂದಿರವನ್ನು ನಿರ್ಮಿಸದಿದ್ದರೂ, ಭಾಜಪದ ರಾಜಕೀಯ ಅಧಿಕಾರದ ಭವನವನ್ನು ಸುಸ್ಥಿರಗೊಳಿಸಿದ್ದಂತೂ ಸತ್ಯ. 1991ರಲ್ಲಿ ಬರ್ಲಿನ್ ಗೋಡೆಯನ್ನು ಉರುಳಿಸಿ ಸಂಭ್ರಮಿಸಿದ ಶಕ್ತಿಗಳೇ 1992ರಲ್ಲಿ ಶ್ರೀರಾಮನ ಹೆಸರನ್ನು ಹೊತ್ತ ಇಟ್ಟಿಗೆಗಳಿಂದ ಜನಸಮುದಾಯಗಳನ್ನೇ ಬೇರ್ಪಡಿಸುವ ಗೋಡೆಗಳನ್ನು ನಿರ್ಮಿಸಿದ್ದು ಐತಿಹಾಸಿಕ ಸತ್ಯ. ಈ ಗೋಡೆಗಳನ್ನು ಕೆಡವಲು ಸತ್ಯ ಶೋಧನೆಯ ಅಗತ್ಯವಿಲ್ಲ. ಸತ್ಯ ಕಣ್ಣ ಮುಂದಿದೆ.

ಹೇಳುವಂತೆ ಮಸೀದಿಯ ಧ್ವಂಸವಾದದ್ದು ಏಕಾಏಕಿ ಸಂಭವಿಸಿದ ಅವಘಡದಿಂದಲ್ಲ. ಇದು ಹಠಾತ್ತನೆ ಭುಗಿಲೆದ್ದ ಜನರ ಆಕ್ರೋಶದ ಪರಿಣಾಮವಲ್ಲ. ಬೆಳ್ಳಿ ರಥವನ್ನೇರಿ ದೇಶಾದ್ಯಂತ ಸಂಚರಿಸಿ, ಜನಗಳ ಮನದಲ್ಲಿ ಅನ್ಯತೆಯ ವಿಷಬೀಜವನ್ನು ಬಿತ್ತುವುದೇ ಅಲ್ಲದೆ, ಅಸಹನೆ, ದ್ವೇಷ, ಅಸೂಯೆ, ಮತ್ಸರಗಳ ಮಹಾಪೂರವನ್ನೇ ಹರಿಸಿದ್ದ ಸೋಮನಾಥ ರಥಯಾತ್ರೆಯ ನೆನಪುಗಳು ಇನ್ನೂ ಮಾಸಿಲ್ಲ. ಸಾಧ್ವಿ ರೀತಾಂಬರ, ಪ್ರವೀಣ್ ತೊಗಾಡಿಯ, ಅಶೋಕ್ ಸಿಂಘಲ್, ಉಮಾಭಾರತಿ ಮುಂತಾದ ನೇತಾರರ ದ್ವೇಷಭರಿತ ಘೋಷಣೆಗಳ ಪರಂಪರೆ ಇಂದಿಗೂ ಜೀವಂತವಾಗಿಯೇ ಇದೆ. ಗುಜರಾತಿನಲ್ಲಿ, ಮಂಗಳೂರಿನಲ್ಲಿ, ಮೈಸೂರಿನಲ್ಲಿ, ಕಂಧಮಾಲಿನಲ್ಲಿ ಈ ದನಿಗಳು ಮೊಳಗುತ್ತಲೇ ಇವೆ.

ಡಿಸೆಂಬರ್ 6 1992ರಂದು ಧ್ವಂಸವಾದದ್ದು ಒಂದು ವಿವಾದಿತ ಐತಿಹಾಸಿಕ ಸ್ಥಾವರವೇ ಆದರೂ ವಿನಾಶವಾದದ್ದು ಸಹಬಾಳ್ವೆ, ಸಹಿಷ್ಣುತೆ, ಸಾಮರಸ್ಯ, ಸ್ನೇಹಭಾವಗಳೆಂಬ ಜಂಗಮ ಎಂಬ ಸತ್ಯವನ್ನು ನಿರೂಪಿಸಲು ಯಾವುದೇ ಲಿಬರ್ಹಾನ್ ಸಮಿತಿಯ ಅಗತ್ಯತೆಯಿಲ್ಲ. ಬಾಬ್ರಿ ಮಸೀದಿಯ ಧ್ವಂಸದ ನಂತರ ಭವ್ಯ ಉಜ್ವಲ ರಾಮಮಂದಿರ ನಿರ್ಮಾಣಕ್ಕಾಗಿ ಸಂಗ್ರಹಿಸಿದ ಇಟ್ಟಿಗೆಗಳಿಂದ ನಿರ್ಮಿತವಾದ ದ್ವೇಷ ಸೌಧಗಳಿಗೆ ಬಲಿಯಾದ ಜೀವಗಳು ಅಸಂಖ್ಯ, ಅಗಣಿತ. ಈ ಭವನಗಳಿಂದ ಉದ್ಭವಿಸಿದ ವಿಷಜಂತುಗಳು ಸೃಷ್ಟಿಸಿದ ಸಂಘರ್ಷಮಯ ವಾತಾವರಣಕ್ಕೆ ಬಲಿಯಾಗಿದ್ದ ಭಾರತದ ಅಮಾಯಕ ಪ್ರಜೆಗಳು. ಮುಂಬೈ, ಸೂರತ್, ಅಹಮದಾಬಾದ್, ಗೋಧ್ರಾ, ಗುಜರಾತ್, ಹೈದರಾಬಾದ್, ವಾರಣಾಸಿ, ದೆಹಲಿ ಮತ್ತು ಅಂತಿಮವಾಗಿ ಮುಂಬೈನಲ್ಲಿ, ಮೈಸೂರು, ಮಂಗಳೂರು, ಕಂಧಮಾಲ್‌ಗಳಲ್ಲಿ ಈ ಇಟ್ಟಿಗೆಗಳ ರಾಶಿ ಇಂದಿಗೂ ಕಂಡುಬರುತ್ತಿದೆ.

ನಿರುದ್ಯೋಗ, ಬಡತನ, ದಾರಿದ್ರ್ಯತೆ, ಅಭದ್ರತೆಯನ್ನೆದುರಿಸುತ್ತಿದ್ದ ದೇಶದ ಯುವಜನತೆಯ ಭವಿಷ್ಯವನ್ನೇ ಹಾಳುಮಾಡಿ ಸಂಗ್ರಹಿಸಲಾದ ಪವಿತ್ರ(?) ಇಟ್ಟಿಗೆಗಳು ರಾಮಮಂದಿರವನ್ನು ನಿರ್ಮಿಸದಿದ್ದರೂ, ಭಾಜಪದ ರಾಜಕೀಯ ಅಧಿಕಾರದ ಭವನವನ್ನು ಸುಸ್ಥಿರಗೊಳಿಸಿದ್ದಂತೂ ಸತ್ಯ. 1991ರಲ್ಲಿ ಬರ್ಲಿನ್ ಗೋಡೆಯನ್ನು ಉರುಳಿಸಿ ಸಂಭ್ರಮಿಸಿದ ಶಕ್ತಿಗಳೇ 1992ರಲ್ಲಿ ಶ್ರೀರಾಮನ ಹೆಸರನ್ನು ಹೊತ್ತ ಇಟ್ಟಿಗೆಗಳಿಂದ ಜನಸಮುದಾಯಗಳನ್ನೇ ಬೇರ್ಪಡಿಸುವ ಗೋಡೆಗಳನ್ನು ನಿರ್ಮಿಸಿದ್ದು ಐತಿಹಾಸಿಕ ಸತ್ಯ. ಈ ಗೋಡೆಗಳನ್ನು ಕೆಡವಲು ಸತ್ಯ ಶೋಧನೆಯ ಅಗತ್ಯವಿಲ್ಲ. ಸತ್ಯ ಕಣ್ಣ ಮುಂದಿದೆ. ಸತ್ಯವನ್ನು ಗ್ರಹಿಸುವ ಮುನ್ನೋಟ ಬೇಕಿದೆ ಅಷ್ಟೆ. ಭಾರತೀಯ ಜನತೆ ಈಗಾಗಲೇ ಈ ಮುನ್ನೋಟವನ್ನು ಪ್ರದರ್ಶಿಸಿದ್ದಾರೆ. ಮಸೀದಿಯ ಧ್ವಂಸದ ನಂತರವೂ, ಅಪರಾಧಿಗಳೊಡನೆ ಕೈಜೋಡಿಸಿ ಅಧಿಕಾರದ ರುಚಿ ಅನುಭವಿಸಿದ ರಾಜಕೀಯ ಪಕ್ಷಗಳು, ಸಂಘಟನೆಗಳು, ರಾಜಕೀಯ ಮುತ್ಸದ್ದಿಗಳು(!) ಈ ಸತ್ಯವನ್ನು ಗ್ರಹಿಸುವ ಅಗತ್ಯತೆ ಹೆಚ್ಚಾಗಿದೆ.

ಒಂದು ಫ್ಯಾಸಿಸ್ಟ್ ಸಾಮ್ರಾಜ್ಯದ ಸ್ಥಾಪನೆಯ ಶಿಲಾನ್ಯಾಸ ಪ್ರಕ್ರಿಯೆಯನ್ನು ಮತ್ತು ಅದರ ಹಿಂದಿನ ವಿಧ್ವಂಸಕ ಪ್ರೇರಣೆಯನ್ನು ದೇಶದ ಜನತೆಗೆ ತಿಳಿಸಲು ಈ ನ್ಯಾಯಮೂರ್ತಿ ಲಿಬರ್ಹಾನ್ 1000 ಪುಟಗಳ ವರದಿ ತಯಾರಿಸಿದ್ದಾರೆ. ಇತಿಹಾಸವನ್ನು ಕಾಲಚಕ್ರದ ವಿವಿಧ ಸಮಯಗಳ ಸಂಭಾವ್ಯ ಘಟನೆಗಳಾಗಿ ಚಿತ್ರಿಸುವ ಪರಂಪರೆಯನ್ನೇ ಲಿಬರ್ಹಾನ್ ವರದಿಯಲ್ಲೂ ಕಾಣಬಹುದು. ಆದರೆ ಈ ಘಟನೆಗಳ ಹಿಂದಿನ ಮನೋಭಾವಗಳನ್ನು ಚಿತ್ರಿಸುವ ಪ್ರಯತ್ನ ನ್ಯಾಯಮೂರ್ತಿಗಳ ಕಾರ್ಯವ್ಯಾಪ್ತಿಗೆ ಹೊರತಾದದ್ದಾದರೂ, ಸಮಾಜ ಶಾಸ್ತ್ರಜ್ಞರು ಅಗತ್ಯವಾಗಿ ಮಾಡಬೇಕಾಗಿದೆ. ಲಿಬರ್ಹಾನ್ ಸಮಿತಿಯ ವರದಿ ಕೆಲವು ವರ್ಷಗಳ ನಂತರ ಇತಿಹಾಸದ ಕಸದ ಬುಟ್ಟಿ ಸೇರಬಹುದು, ಅಪರಾಧಿಗಳು ದರ್ಪದಿಂದ ತಲೆ ಎತ್ತಿ ತಿರುಗಾಡಬಹುದು, ಈ ದೇಶವನ್ನು ಆಳಲೂ ಬಹುದು. ಆದರೆ ಡಿಸೆಂಬರ್ 6 1992ರಂದು ಧ್ವಂಸವಾದ ಜನಸಾಮಾನ್ಯರ ಸಾಂಸ್ಕೃತಿಕ ಚಿಂತನೆಗಳು ಮತ್ತು ನಾಶವಾದ ಬಾಂಧವ್ಯಗಳು ಶಾಶ್ವತವಾಗಿ ಕಾಡುತ್ತಿರುತ್ತವೆ. ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ ಎಂಬ ವಚನ ಎಷ್ಟು ಸತ್ಯ! ☐

ಕರಾವಳಿ ಕರ್ನಾಟಕ ಮರಾಟಿ ಜನಾಂಗದ ಗೋಂದೋಳು ಪೂಜೆ : ಸ್ವರೂಪ ಮತ್ತು ಉದ್ದೇಶಗಳು

ಡಾ. ಕೆ. ಸುಂದರ ನಾಯಕ್, ಭಾ.ಅ.ಸೇ.,

1 ಪೀಠಿಕೆ:

ಮಹಾರಾಷ್ಟ್ರದಿಂದ ವಲಸೆ ಬಂದು ಕರಾವಳಿ ಪ್ರದೇಶಗಳಲ್ಲಿ ವಾಸಿಸುತ್ತಿರುವ ಮರಾಟಿಗರ ಜೀವನದಲ್ಲಿ ದೈವ, ದೇವರು ಮತ್ತು ದೇವತೆಗಳು ಪ್ರಭಾವ ಬೀರಿವೆ. ಈ ಸಮುದಾಯವು ತೌಳವ ಸಂಸ್ಕೃತಿಯೊಂದಿಗೂ ಬೆರತು ಜೀವನ ನಡೆಸುತ್ತಿದ್ದಾರೆ. ಭೂತಾರಾಧನೆಯ ತಾತ್ವಿಕ ಉದ್ದೇಶವನ್ನು ಮರಾಟಿಗರ ಗೋಂದೋಳು ಪೂಜೆಯಲ್ಲಿಯೂ ಕಾಣಬಹುದು. ಮರಾಟಿ ಸಮುದಾಯದ ಭಾವನೆಗಳನ್ನು ಗೋಂದೋಳು ಪೂಜೆಯು ಸಮರ್ಥವಾಗಿ ಬಿಂಬಿಸುತ್ತದೆ. ಗೋಂದೋಳು ಪೂಜೆಯ ಆಚರಣೆಗಳ ರೀತಿ, ವಿಧಾನಗಳಲ್ಲಿ ಮರಾಟಿಗರಿಗೆ ಇರುವ ಅಗೋಚರ ಶಕ್ತಿಗಳ ಮೇಲಿನ ನಂಬಿಕೆಯು ವ್ಯಕ್ತವಾಗುತ್ತದೆ. ಇಂದಿಗೂ ಕೂಡಾ ಮರಾಟಿಗರು ಈ ಆಚರಣೆಗಳನ್ನು ಭಯ ಭಕ್ತಿಯಿಂದ ನಡೆಸಿಕೊಂಡು ಬರುತ್ತಿದ್ದು ಅದು ಜೀವಂತವಾಗಿ ಉಳಿದು ಬಂದಿದೆ.

ನಿಸರ್ಗದಲ್ಲಿರುವ ಅವ್ಯಕ್ತ ಶಕ್ತಿಯನ್ನು ಗುರುತಿಸಿಕೊಂಡ ಮಾನವನು ಅನಾದಿಕಾಲದಿಂದಲೂ ಪ್ರಕೃತಿಯ ಆರಾಧಕನಾಗಿ ಜೀವಿಸುತ್ತಿದ್ದಾನೆ. ನೆಲ-ಜಲ, ಗಿಡ-ಮರ, ಪಶು-ಪಕ್ಷಿ, ಗಾಳಿ-ಬೆಂಕಿ ಮೊದಲುಗೊಂಡು, ಸೂರ್ಯ ಚಂದ್ರ, ನಕ್ಷತ್ರಗಳೆಲ್ಲ ಮನುಷ್ಯನಿಗೆ ಪೂಜನೀಯವೆನ್ನಿಸಿವೆ. "ಪ್ರಕೃತಿ ಒಲಿದರೆ ಬದುಕು, ಅದು ಮುನಿದರೆ ಮೃತ್ಯು" ಎಂಬುದನ್ನು ತನ್ನ ದೀರ್ಘವಾದ ಜೀವನಾನುಭವದಿಂದ ಕಂಡುಕೊಂಡ ಮಾನವ ಪ್ರಕೃತಿಯ ಒಲುಮೆಗಾಗಿ ಹಂಬಲಿಸುತ್ತಾನೆ. ಸಂದರ್ಭಕ್ಕೆ ಅನುಗುಣವಾಗಿ ವಿಭಿನ್ನ ರೀತಿಯಿಂದ ಪ್ರಕೃತಿಯನ್ನು ಪೂಜಿಸುತ್ತಾ ಹರಕೆ, ಬಲಿ ಸಮರ್ಪಣೆ ಇತ್ಯಾದಿಗಳಿಂದ ಪ್ರಕೃತಿಯನ್ನು ಪ್ರಸನ್ನಗೊಳಿಸಲು ಪ್ರಯತ್ನಿಸುತ್ತ ಬಂದಿದ್ದಾನೆ. ಮನುಷ್ಯನ ಭಯಮೂಲದಿಂದ ವ್ಯಕ್ತವಾದ ಭಕ್ತಿಯು ಮಾನವ ಮತ್ತು ದೇವರ ನಡುವೆ ಆತ್ಮೀಯ ಸಂಬಂಧಕ್ಕೆ ಎಡೆ ಮಾಡಿ ಕೊಟ್ಟಿತಲ್ಲದೆ ಧರ್ಮ ಮತ್ತು ದೇವರ ಕಲ್ಪನೆ, ಧಾರ್ಮಿಕ ಆಚರಣೆ ಮತ್ತು ಆರಾಧನೆಗಳಿಗೆ ಪ್ರೇರಣೆಯನಿಸಿತು. ಧಾರ್ಮಿಕ ಕ್ಷೇತ್ರದಲ್ಲಿ ಹೆಚ್ಚಿನ ನಂಬಿಕೆಯುಳ್ಳ ಮರಾಟಿಗರು ವಲಸೆ ಬಂದ ಕಾಲದಿಂದಲೂ ವಿವಿಧ ದೈವ ದೇವರುಗಳ ಆರಾಧನೆಯನ್ನು ನಡೆಸುತ್ತಾ ಬಂದಿದ್ದಾರೆ. ತಮ್ಮ ಧಾರ್ಮಿಕ ಚಟುವಟಿಕೆಗಳ ಅಂಗವಾಗಿ ಗುಡಿ, ಗೋಪುರ, ದೇವಸ್ಥಾನ ಮತ್ತು ಪೂಜಾ ಮಂದಿರಗಳನ್ನು ನಿರ್ಮಿಸಿ ಪೂಜೆ ಪುರಸ್ಕಾರಗಳನ್ನು ಮಾಡುತ್ತಾ ಬರುತ್ತಿದ್ದಾರೆ.

ಮರಾಟಿಗರು ತಾವೇ ಸ್ವತಃ ದೈವ ದೇವರ ಆರಾಧಕರಾಗಿ, ಧರ್ಮದ ಅನುಯಾಯಿಗಳಾಗಿ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಧಾರ್ಮಿಕ ರಂಗಕ್ಕೆ ಸಾಕಷ್ಟು ಕೊಡುಗೆಗಳನ್ನು ನೀಡಿರುತ್ತಾರೆ. ದೇವಸ್ಥಾನ, ಭೂತಸ್ಥಾನ, ಗದ್ದುಗೆಯ ಗುಡಿಗಳನ್ನು ನಿರ್ಮಿಸಿ ಧಾರ್ಮಿಕ ಕಾರ್ಯಗಳಲ್ಲಿ ತಮಗಿರುವ ಶ್ರದ್ಧಾಭಕ್ತಿಗಳನ್ನು ಪ್ರಕಟಪಡಿಸಿರುತ್ತಾರೆ. ಅಲೌಕಿಕ ಶಕ್ತಿಗಳ ಮೇಲಿನ ಭಕ್ತಿಯ ಸಂಕೇತವಾಗಿ ತಾವು ನಂಬಿಕೊಂಡು ಬರುತ್ತಿರುವ ಶ್ರೀ ಆದಿಶಕ್ತಿ ಮಹಾಮ್ಮಾಯಿ, ಮನೆ ದೈವ ದೇವರು, ತಮ್ಮ ಊರಿನ ದೇವರು, ಭೂತಗಳಿಗೆ ಹರಕೆ ಹಾಗೂ ಅಗೆಲು ಹಾಕುವ ರೂಪದಲ್ಲಿ ಧಾರ್ಮಿಕ ಚಟುವಟಿಕೆಗಳನ್ನು ನಿರ್ವಹಿಸುತ್ತಾ ಬಂದಿದ್ದಾರೆ. ಶ್ರೀ ಆದಿಶಕ್ತಿ ಮಹಾಮ್ಮಾಯಿ ದೇವಿಯ ಪ್ರಭಾವ ಮರಾಟಿಗರ ಸಾಮಾಜಿಕ ಜೀವನದಲ್ಲಿ ಹೆಚ್ಚಿನ ಪರಿಣಾಮ ಬೀರಿರುವುದು ಸ್ಪಷ್ಟವಾಗಿದೆ. ಮರಾಟಿಗರು ಇತರ ಜನಾಂಗದ ಜನರ ಸಹಭಾಗಿತ್ವದಲ್ಲಿ ಗೋಂದೋಳು ಪೂಜೆಯಂತಹ ಆಚರಣೆಗಳನ್ನು ಸಾಮುದಾಯಿಕ ನೆಲೆಯಲ್ಲಿ ನಡೆಸುತ್ತಾ ಬರುತ್ತಿದ್ದಾರೆ.

2 ಧಾರ್ಮಿಕ ಆಚರಣೆಗಳು

ಕರಾವಳಿ ಕರ್ನಾಟಕದ ಧಾರ್ಮಿಕ ಮತ್ತು ಸಾಂಸ್ಕೃತಿಕ ಆಚರಣೆಗಳಲ್ಲಿ ವಿಶೇಷವಾಗಿ ಯಕ್ಷಗಾನ, ಭೂತಾರಾಧನೆ, ನಾಗಾರಾಧನೆ ಮತ್ತು

ಮರಾಟಿಗರು ತಾವೇ ಸ್ವತಃ ದೈವ ದೇವರ ಆರಾಧಕರಾಗಿ, ಧರ್ಮದ ಅನುಯಾಯಿಗಳಾಗಿ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಧಾರ್ಮಿಕ ರಂಗಕ್ಕೆ ಸಾಕಷ್ಟು ಕೊಡುಗೆಗಳನ್ನು ನೀಡಿರುತ್ತಾರೆ. ದೇವಸ್ಥಾನ, ಗದ್ದುಗೆಯ ಗುಡಿಗಳನ್ನು ನಿರ್ಮಿಸಿ ಧಾರ್ಮಿಕ ಕಾರ್ಯಗಳಲ್ಲಿ ತಮಗಿರುವ ಶ್ರದ್ಧಾ ಭಕ್ತಿಗಳನ್ನು ಪ್ರಕಟಪಡಿಸಿರುತ್ತಾರೆ. ಅಲೌಕಿಕ ಶಕ್ತಿಗಳ ಮೇಲಿನ ಭಕ್ತಿಯ ಸಂಕೇತವಾಗಿ ತಾವು ನಂಬಿಕೊಂಡು ಬರುತ್ತಿರುವ ಶ್ರೀ ಆದಿಶಕ್ತಿ ಮಹಾಮ್ಮಾಯಿ, ಮನೆ ದೈವ ದೇವರು, ತಮ್ಮ ಊರಿನ ದೇವರು, ಭೂತಗಳಿಗೆ ಹರಕೆ - ಅಗೆಲು ಹಾಕುವ ರೂಪದಲ್ಲಿ ಧಾರ್ಮಿಕ ಚಟುವಟಿಕೆಗಳನ್ನು ನಿರ್ವಹಿಸುತ್ತಾ ಬಂದಿದ್ದಾರೆ. ಶ್ರೀ ಆದಿಶಕ್ತಿ ಮಹಾಮ್ಮಾಯಿ ದೇವಿಯ ಪ್ರಭಾವ ಮರಾಟಿಗರ ಸಾಮಾಜಿಕ ಜೀವನದಲ್ಲಿ ಹೆಚ್ಚಿನ ಪರಿಣಾಮ ಬೀರಿರುವುದು ಸ್ಪಷ್ಟವಾಗಿದೆ.

ಸಿರಿಯಾರಾಧನೆ ಇವು ಪ್ರಮುಖವಾಗಿವೆ. ದೇವಿಯ ಹೆಸರಿನಲ್ಲಿ ನಡೆಯುವ ಪ್ರಮುಖ ಧಾರ್ಮಿಕ ಆಚರಣೆಗಳಲ್ಲಿ ಮರಾಟಿಗರು ನಡೆಸುವ "ಗೋಂದೋಳು" ಪೂಜೆಯು ಅನನ್ಯವಾಗಿದೆ. ಈ ಪೂಜೆಯು ವಿಶಿಷ್ಟ ರೀತಿಯ ಮತ್ತು ವೈವಿಧ್ಯಮಯ ಆಚರಣೆಯಾಗಿ ಪ್ರಸಿದ್ಧಿ ಪಡೆದು ಇಂದಿಗೂ ತುಳುನಾಡಿನಲ್ಲಿ ಧಾರ್ಮಿಕವಾಗಿ ಆಚರಣೆಗೊಳ್ಳುತ್ತಾ ಬರುತ್ತಿದೆ. ನಂಬಿಕೆ, ಆಚರಣೆ ಮತ್ತು ಸಂಪ್ರದಾಯಗಳು ಜನಪದ ಸಂಸ್ಕೃತಿಯನ್ನು ಪೋಷಿಸಿ, ರೂಪಿಸುವಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತಾ ಬಂದಿವೆ. ವಿವಿಧ ರೀತಿಯ ಆಚರಣೆಗಳು ಅನಾದಿಕಾಲದಿಂದಲೂ ಬೆಳೆದು ಬಂದಿವೆ.

ಅಗೋಚರ ಹಾಗೂ ಅಲೌಕಿಕ ಶಕ್ತಿಗಳನ್ನು ಸಂತುಷ್ಟಿಗೊಳಿಸಿ ಅವುಗಳ ಕೃಪೆಗೆ ಪಾತ್ರರಾಗಬೇಕೆಂಬ ಉದ್ದೇಶದಿಂದ ಆಚರಣೆಗಳನ್ನು ನಡೆಸುತ್ತಾರೆ. ಜನಪದರಿಗೆ ಇಂತಹ ಅಲೌಕಿಕ ಶಕ್ತಿಯ ಬಗ್ಗೆ ಇರುವ ನಂಬಿಕೆ, ಭಯ, ಭಕ್ತಿ ಹಾಗೂ ಗೌರವಗಳಿಂದಾಗಿ ಇಂದಿಗೂ ಸಹಾ ಈ ಆಚರಣೆಗಳು ಜೀವಂತವಾಗಿ ಉಳಿದುಕೊಂಡಿವೆ. ದೇವಿಯ ಆರಾಧನೆಗೆ ಸಂಬಂಧಪಟ್ಟ ಕೆಲವು ಆಚರಣೆಗಳಲ್ಲಿ ಮರಾಟಿಗರ ಧಾರ್ಮಿಕ ಶ್ರದ್ಧೆಯನ್ನು ಗುರುತಿಸಬಹುದು, ಕಾಣಬಹುದು. ಕರಾವಳಿಯ ವಾರ್ಷಿಕಾವರ್ತನಗಳಲ್ಲಿ ಸುಗ್ಗಿಯ ತಿಂಗಳನ್ನು ಸಮೃದ್ಧಿಯ ಕಾಲವೆಂದು ಭಾವಿಸಲಾಗಿದೆ. ಈ ಅವಧಿಯಲ್ಲಿ ಮುಖ್ಯವಾಗಿ ಭೂತದ ಕುಣಿತ, ಸಿದ್ಧವೇಷದ ಕುಣಿತ, ನಾಗಮಂಡಲದ ಕುಣಿತ, ಗೋಂದೋಳು ಕುಣಿತ ಮುಂತಾದುವುಗಳು ಜರುಗುತ್ತವೆ. ಬೇಸಾಯ ಮುಗಿಸಿ ಬೆಳೆ ಬೆಳೆದು ಫಸಲು ನೀಡುವ ವಿರಾಮದ ಸಮಯದಲ್ಲಿ ಜನಪದ ಆಚರಣೆ, ದೈವಾರಾಧನೆ, ಮುಂತಾದ ಹತ್ತು ಹಲವು ಧಾರ್ಮಿಕ ಹಾಗೂ ಮನೋರಂಜನೆಯ ಕಾರ್ಯಕ್ರಮಗಳಲ್ಲಿ ಜನಪದರು ತೊಡಗಿಸಿಕೊಳ್ಳುತ್ತಾರೆ. ಈ ಆಚರಣೆ ಮತ್ತು ಸಂಪ್ರದಾಯಗಳು ಕರಾವಳಿ ಪ್ರದೇಶಕ್ಕೆ ಅನುಗುಣವಾಗಿ ವಿಶಿಷ್ಟವಾದ ಪರಂಪರೆಯನ್ನು ಪಡೆದುಕೊಂಡಿವೆ.

3 ಗೋಂದೋಳು ಪೂಜೆ – ಹಿನ್ನೆಲೆ ಮತ್ತು ಸ್ವರೂಪ:

ಗೋಂದೋಳು ಪೂಜೆಯ ಆಚರಣೆಗಳು ಧಾರ್ಮಿಕ ಮತ್ತು ಸಾಂಸ್ಕೃತಿಕವಾದ ಜಾನಪದೀಯ ಸಂಪ್ರದಾಯಗಳ ಆಯಾಮವನ್ನು ಪಡೆದುಕೊಂಡಿವೆ. 'ಗೋಂದೋಳು' ಕುಣಿತ ಮತ್ತು ಆಚರಣೆಗಳನ್ನು ನೋಡಿದರೆ ಇದು ಜಾನಪದೀಯವಾದ ಆರಾಧನಾ ರಂಗಭೂಮಿ ಸಂಪ್ರದಾಯವಾಗಿರುವುದು ಸ್ಪಷ್ಟ. 'ಗೋಂದೋಳು' ಪೂಜೆಯೆಂದೇ ಜನಪ್ರಿಯವಾಗಿರುವ ಈ ಆರಾಧನಾ ಪದ್ಧತಿಯು ಮರಾಟಿ ಜನಾಂಗದ ಧಾರ್ಮಿಕ ಅನನ್ಯತೆಯನ್ನು ಬಿಂಬಿಸುವ ಆಚರಣೆಯಾಗಿದೆ. ತುಳುನಾಡಿನ ಹಲವೆಡೆ ಇಂದಿಗೂ 'ಗೋಂದೋಳು' ಪೂಜೆಯು ಅದರ ಎಲ್ಲಾ ವಿಧಿ ವಿಧಾನಗಳೊಂದಿಗೆ ನಡೆಯುತ್ತಿದೆ.

ಗೋಂದೋಳು ಪೂಜೆಯನ್ನು ನಡೆಸುವ ಪ್ರಮುಖ ಜನಾಂಗವೆಂದರೆ ಮೂಲತಃ ಮಹಾರಾಷ್ಟ್ರ ಮತ್ತು ಗೋವಾ ಪ್ರಾಂತ್ಯಗಳಿಂದ ವಲಸೆ ಬಂದ ಮರಾಟಿಗರು. ಮರಾಟಿಗರ ಧಾರ್ಮಿಕ ಆಚರಣೆಗಳಲ್ಲಿ ಗೋಂದೋಳು ಪೂಜೆ, ಹೋಳಿ ಹಬ್ಬ ಮತ್ತು ಬಾಳ್‌ಸಾಂತು ಇವು ಮೂರು ಮುಖ್ಯವಾದವುಗಳು. ಪ್ರಾಣಿಬಲಿಯಿಂದ ಕೂಡಿದ ವಿಶೇಷ ಪೂಜೆಗಳಲ್ಲಿ ಕರಾವಳಿ ಮರಾಟಿಗರ ಗೋಂದೋಳು ಪೂಜೆಯು ಪ್ರಮುಖವಾದುದು. ಗೋಂದೋಳು ಪೂಜೆಯನ್ನು ಸ್ಥಳೀಯ ಭಾಷೆಗಳಲ್ಲಿ 'ಶ್ರೀ ಮಹಾಮ್ಮಾಯಿ ಪೂಜೆ', 'ಶ್ರೀ ದೇವಿಯ ಪೂಜೆ', 'ಗೋಂದೋಳು ಪೂಜೆ', 'ಅಮ್ನೋರ ಪೂಜೆ', 'ಗೋಂದಲ ಪೂಜೆ' ಎಂಬ ಹೆಸರುಗಳಿಂದ ಕರೆಯಲಾಗಿದೆ. ಉಡುಪಿ ಜಿಲ್ಲೆಯಲ್ಲಿ ಊರಿನ ಜನರು ಸೇರಿಕೊಂಡು ವಿಶೇಷವಾಗಿ 'ಮಾರಿ ಗೋಂದೋಳು' ಎಂಬುದಾಗಿ ಗೋಂದೋಳು ಪೂಜೆಯನ್ನು ಆಚರಿಸುತ್ತಾರೆ.

ಆಧುನಿಕ ಸಮಾಜದಲ್ಲಿ ವಿವಿಧ ರೀತಿಯ ಬದಲಾವಣೆಗಳನ್ನು ಕಾಣುತ್ತಿದ್ದೇವೆ. ಜಾ!ಗತೀಕರಣ, ಖಾಸಗೀಕರಣ, ಉದಾರೀಕರಣ ಇತ್ಯಾದಿ ಪ್ರಕ್ರಿಯೆಗಳಿಂದಾಗಿ ಒಟ್ಟಾರೆಯಾಗಿ ಆಧುನಿಕ ಸಮಾಜ ಮತ್ತು ನಿರ್ದಿಷ್ಟವಾಗಿ ಮರಾಟಿ ಜನಾಂಗ ಪರಿವರ್ತನೆಯ ಹಾದಿಯಲ್ಲಿದೆ. ಈ ಪರಿಸ್ಥಿತಿಯಲ್ಲಿ ಮರಾಟಿಗರ ಆಚರಣೆಗಳು, ಅವುಗಳ ಸ್ವರೂಪ ಮತ್ತು ಉದ್ದೇಶಗಳಲ್ಲಿ ಬದಲಾವಣೆಗಳಾಗಿವೆ. ದೈವಿಕ ಆರಾಧನೆಗಳು ಮರಾಟಿಗರ ಬದುಕಿನಲ್ಲಿ ಮಾನಸಿಕ ದೃಢತೆಯನ್ನು ಹೆಚ್ಚಿಸಿವೆ. ದಿನವೆಲ್ಲಾ ದುಡಿದು ಕಾಲ ಕಳೆಯುವ ಮರಾಟಿಗರಿಗೆ ದೇವರ ಆಸರೆ ಅಗತ್ಯವಾಗಿದೆ.

ಇದು ಮಹಾಮ್ಮಾಯಿ ದೇವತೆಗೆ ಸಂಬಂಧಿಸಿದ ಪೂಜೆಯಾದುದರಿಂದ ಇದನ್ನು 'ಅಮ್ಮನವರ ಪೂಜೆ' ಎಂಬ ಹೆಸರಿನಿಂದಲೂ ಕರೆಯುತ್ತಾರೆ. ಶಕ್ತಿಯ ಆರಾಧನೆಯಾದುದರಿಂದ ಹೆಚ್ಚಾಗಿ ಮಂಗಳವಾರದಂದೇ ಈ ಪೂಜೆಯನ್ನು ನಡೆಸುತ್ತಾರೆ. ಈ ಪೂಜೆಯಲ್ಲಿ ಮುಖ್ಯವಾಗಿ ಹಂದಿಯನ್ನು ಬಲಿಯಾಗಿ ಅರ್ಪಿಸುವುದರಿಂದ ಇದನ್ನು ತುಳುವಿನಲ್ಲಿ 'ಪಂಜಿದ ಪೂಜೆ' ಎಂದೂ ಕರೆಯುತ್ತಾರೆ. ಕೋಳಿಯನ್ನು ಬಲಿಯಾಗಿ ಅರ್ಪಿಸಿ ಈ ಪೂಜೆಯನ್ನು ನಡೆಸಿದರೆ ಅದನ್ನು ತುಳುವಿನಲ್ಲಿ "ಅಂಗಾರೆ ಪೂಜೆ" (ಮಂಗಳವಾರ ಪೂಜೆ) ಎಂದು ಕರೆಯುತ್ತಾರೆ. ಪ್ರಾದೇಶಿಕ ಮತ್ತು ವಿಶಿಷ್ಟ ವಿಧಿವಿಧಾನಗಳ ಹಿನ್ನೆಲೆಯಲ್ಲಿ ಗೋಂದೋಳು ಪೂಜೆಯನ್ನು ಬೇರೆ ಬೇರೆ ಹೆಸರುಗಳಿಂದ ಕರೆಯುತ್ತಾರೆ. ಕರಾವಳಿ ಕರ್ನಾಟಕದಲ್ಲಿ ಗಿರಿಜನರೆಂದು ಗುರುತಿಸಿಕೊಂಡ ಈ ಮರಾಟಿ ಜನಾಂಗದವರು ಗೋಂದೋಳು ಪೂಜೆಯನ್ನು ಮಾಡುವುದು ಮಾತ್ರವಲ್ಲದೆ ಇದರಿಂದ ಪ್ರಭಾವಿತರಾದ ವೈದಿಕೇತರ ಜನಾಂಗದವರು ಕೂಡಾ ಮರಾಟಿಗರಿಂದಲೇ ಈ ಪೂಜೆಯನ್ನು ಮಾಡಿಸುತ್ತಾರೆ.

ವಲಸೆ ಬಂದ ಈ ಮರಾಟಿ ಜನಾಂಗದವರ ಗೋಂದೋಳು ಪೂಜೆಯು ಸ್ಥಳೀಯ ತುಳು ಸಂಸ್ಕೃತಿಯ ಒಂದು ಅಂಗ ಎಂಬಷ್ಟು ಜನಪ್ರಿಯವಾಗಿದೆ. ತುಳು ಸಂಸ್ಕೃತಿಯೊಂದಿಗೆ ಸೇರಿ ಹೋಗಿದೆ. ತುಳಜಾಪುರದ ತುಳಜಾಭವಾನಿ, ಕೊಲ್ಲಾಪುರದ ಅಂಬಾಭವಾನಿಯು ಗೊಂದಲಿಗರ ಆರಾಧ್ಯ ದೇವತೆಯರು. ಈ ದೇವಿಯರ ಹೆಸರಿನಲ್ಲಿ ಗೊಂದಲವನ್ನು ಹಾಕುತ್ತಾರೆ. ಮರಾಟಿಗರು ಗುಂಪುಗೂಡಿ ಆಚರಿಸುವ ಈ ಪೂಜೆಯೇ ಗೊಂದಲ ಪೂಜೆಯಾಗಿದೆ. ಕುಲ ಧರ್ಮ ಪಾಲನೆ, ವಿವಾಹ, ಗೃಹ ಪ್ರವೇಶ ಮೊದಲಾದ ಸಂದರ್ಭಗಳಲ್ಲಿ ಶುಭಕಾಮನೆಯ ಸಂಕೇತವಾಗಿ ಹರಕೆಯ ರೂಪದಲ್ಲಿ ತಮ್ಮ ಮನೆಗಳಲ್ಲಿ ಭಕ್ತಿ ಶ್ರದ್ಧೆಗಳಿಂದ ಧಾರ್ಮಿಕ ವಾತಾವರಣದಲ್ಲಿ ಆಹ್ವಾನಿತ ಗೊಂದಲಿಗರಿಂದ 'ಗೊಂದಲ' ಏರ್ಪಡಿಸಿಕೊಳ್ಳುತ್ತಾರೆ.

ಮರಾಟಿಗರು ಆಚರಿಸುವ ಈ ಗೋಂದೋಳು ಪೂಜೆಗೆ ವಿಶಿಷ್ಟವಾದ ಪರಂಪರೆಯಿದ್ದು ಇದರ ಮೂಲದ ಆಚರಣೆಯಲ್ಲಿ ಕಂಡುಬರುವ ಎಲ್ಲಾ ವಿಧಿವಿಧಾನಗಳು ಇಂದಿಗೂ ಉಳಿದುಕೊಂಡು ಬಂದಿರುವುದು ಗಮನಾರ್ಹವಾಗಿದೆ. ಪ್ರತಿಯೊಂದು ಆಚರಣೆಯ ಅಸ್ತಿತ್ವದ ಹಿಂದೆ ಸಂಪ್ರದಾಯಗಳಿರುತ್ತವೆ. ನಿರೂಪಕರು ಮತ್ತು ಪ್ರದರ್ಶನಕಾರರು ಇಂತಹ ಆಚರಣೆಗಳ 'ಅಧಿಕೃತ ಒಡೆಯ'ರಾಗಿರುತ್ತಾರೆ. ಇವರು ಆಚರಣೆಗಳ ಮುಂದುವರಿಕೆಗೆ ಕಾರಣಕರ್ತರೂ ಆಗಿರುತ್ತಾರೆ.

ಈ ಪ್ರದೇಶದ ಆರಾಧನೆಗಳ ಹಿಂದೆ ಪ್ರಾಕೃತಿಕ ಸಂಗತಿಗಳು ಪ್ರೇರಕ ಶಕ್ತಿಗಳಾಗಿ ಕೆಲಸ ಮಾಡಿವೆ. ಗೋಂದೋಳು ಪೂಜೆಯ ಸ್ವರೂಪವನ್ನು ಮರಾಟಿಗರ ಭಾಷೆ, ವೃತ್ತಿ, ಕುಲಕಸುಬು, ಆರ್ಥಿಕ, ಸಾಮಾಜಿಕ ಮತ್ತು ಧಾರ್ಮಿಕ ಪರಂಪರೆಗಳು ಪ್ರಭಾವಿಸಿವೆ. ಮರಾಟಿ ಸಮುದಾಯವು ಹೊಂದಿರುವ ಸಂಸ್ಕೃತಿಯ ಜೊತೆಗಿನ ಒಡನಾಟ ಮತ್ತು ಸಂಬಂಧವನ್ನು ಗೋಂದೋಳು ಪೂಜೆಯಲ್ಲಿ ಕಾಣಬಹುದು.

ಆಧುನಿಕ ಸಮಾಜದಲ್ಲಿ ವಿವಿಧ ರೀತಿಯ ಬದಲಾವಣೆಗಳನ್ನು ಕಾಣುತ್ತಿದ್ದೇವೆ. ಜಾಗತೀಕರಣ, ಖಾಸಗೀಕರಣ, ಉದಾರೀಕರಣ ಇತ್ಯಾದಿ ಪ್ರಕ್ರಿಯೆಗಳಿಂದಾಗಿ ಒಟ್ಟಾರೆಯಾಗಿ ಆಧುನಿಕ ಸಮಾಜ ಮತ್ತು ನಿರ್ದಿಷ್ಟವಾಗಿ ಮರಾಟಿ ಜನಾಂಗ ಪರಿವರ್ತನೆಯ ಹಾದಿಯಲ್ಲಿದೆ. ಈ ಪರಿಸ್ಥಿತಿಯಲ್ಲಿ ಮರಾಟಿಗರ ಆಚರಣೆಗಳು, ಅವುಗಳ ಸ್ವರೂಪ ಮತ್ತು ಉದ್ದೇಶಗಳಲ್ಲಿ ಬದಲಾವಣೆಗಳಾಗಿವೆ. ದೈವಿಕ ಆರಾಧನೆಗಳು ಮರಾಟಿಗರ ಬದುಕಿನಲ್ಲಿ ಮಾನಸಿಕ ದೃಢತೆಯನ್ನು ಹೆಚ್ಚಿಸಿವೆ. ದಿನವೆಲ್ಲಾ ದುಡಿದು ಕಾಲಕಳೆಯುವ ಮರಾಟಿಗರಿಗೆ ದೇವರ ಆಸರೆ ಅಗತ್ಯವಾಗಿದೆ. ದುಡಿಮೆಯ ಒತ್ತಡದಿಂದ ಬಿಡುಗಡೆಯನ್ನು ಹೊಂದಿ ಮಾನಸಿಕ ನೆಮ್ಮದಿಯನ್ನು ಪಡೆಯಲು ಧಾರ್ಮಿಕ ಆಚರಣೆಗಳು ಸಹಾಯಕವಾಗಿವೆ. ಅಲ್ಲದೆ ಮರಾಟಿಗರು ಬದುಕಿನಲ್ಲಿ ಧರ್ಮ, ಮನೋರಂಜನೆ, ಕಲೆಗಳಲ್ಲಿ ತಮ್ಮನ್ನು ಪೂರ್ಣ ಪ್ರಮಾಣದಲ್ಲಿ ತೊಡಗಿಸಿಕೊಳ್ಳುತ್ತಾರೆ. ಜೊತೆಗೆ ತಮ್ಮ ಬದುಕಿನ ಕಷ್ಟ ಕೋಟಲೆಗಳ ನಿವಾರಣೆಗೆ ಗೋಂದೋಳು ಪೂಜೆಯ ಮೊರೆ ಹೋಗುತ್ತಾರೆ.

4 ಗೋಂದೋಳು ಚಾರಿತ್ರಿಕತೆ:

ಕ್ರಿ.ಶ.ಆರನೇ ಮತ್ತು ಏಳನೇ ಶತಮಾನದಲ್ಲಿದ್ದ ಕದಂಬರು ತುಳಜಾಪುರದ ಅಂಬಾ ಭವಾನಿಯ ಭಕ್ತರಾಗಿದ್ದು ಈ ಗೊಂದಲ ಪೂಜೆಯನ್ನು ನಡೆಸುತ್ತಿದ್ದ ಬಗ್ಗೆ ಉಲ್ಲೇಖಗಳಿವೆ. ಜ್ಞಾನೇಶ್ವರ, ನಾಮದೇವ, ದತ್ತೋಪಂತರ 'ಅಭಂಗ'ಗಳಲ್ಲಿ ಮತ್ತು ಸಂತ ಏಕನಾಥರ 'ಬಾರೋಢ'ಗಳಲ್ಲಿ ಗೊಂದಲ ಆಚರಣೆಯ ಆಧ್ಯಾತ್ಮಿಕ ಆಯಾಮಗಳನ್ನು ಗುರುತಿಸಬಹುದು. ನಾಥ ಮಹಾರಾಜರುಗಳು ಮಿಠಾಯಿ ರೂಪದಲ್ಲಿ ಜಗದಂಬಿಯ ಗೊಂದಲ ಹಾಕಿಸುತ್ತಿದ್ದರೆಂಬ ಉಲ್ಲೇಖಗಳಿವೆ. ಸಮರ್ಥ ರಾಮದಾಸರು ಮತ್ತು ಸಂತ ತುಕಾರಾಮರು ಗೊಂದಲವನ್ನು ಗೌರವಿಸುತ್ತಿದ್ದರು. ಪೇಶ್ವೆಯರ ಕಾಲದಲ್ಲಿ ಗೊಂದಲಿಗರಿಗೆ ರಾಜಾಶ್ರಯವಿತ್ತೆಂದು ಹೇಳಲಾಗಿದೆ.

(ಕರ್ನಾಟಕ ಜಾನಪದ ಕಲೆಗಳ ಕೋಶ, 1996, ಪುಟ 82-83)ಶಿವಾಜಿ ಮಹಾರಾಜನು ಗೋಂದಲಿ ಆಚರಣೆಗೆ ಹೆಚ್ಚಿನ ಪ್ರಾಮುಖ್ಯವನ್ನು ಕಲ್ಪಿಸಿಕೊಟ್ಟಿದ್ದಾನೆ. ದಿಗ್ವಿಜಯ ಕೈಗೊಂಡು ಜಯಶಾಲಿಯಾಗಿ ಬಂದಾಗ ಅಂಬಾ ಭವಾನಿಗೆ ಹರಕೆಯ ರೂಪದಲ್ಲಿ ಈ ಪೂಜೆಯನ್ನು ನೆರವೇರಿಸುತ್ತಿದ್ದನು. ತನ್ನ ಮದುವೆಯ ಸಂದರ್ಭದಲ್ಲೂ ಆತನು ಈ ಗೋಂದೋಳು ಪೂಜೆಯನ್ನು ಮಾಡಿಸಿರುವುದಕ್ಕೆ ಇತಿಹಾಸದಲ್ಲಿ ಉಲ್ಲೇಖಗಳಿವೆ. ತನ್ನ ಗೂಢಚಾರಿಕೆಯನ್ನು ಗೊಂದಲಿಗರ ಮೂಲಕ ನಡೆಸುತ್ತಿದ್ದು ತನ್ನ ವಂಶ ಮತ್ತು ರಾಜ್ಯಕ್ಕೆ ಆಪತ್ತು ಬಂದೊದಗಿದಾಗ ಗೊಂದಲಿ ಪೂಜೆಯನ್ನು ಏರ್ಪಡಿಸುತ್ತಿದ್ದನೆಂಬ ಬಗ್ಗೆ ಐತಿಹ್ಯಗಳಿವೆ. ತುಳಜಾಭವಾನಿಯ ಪರಮ ಭಕ್ತನಾದ ಛತ್ರಪತಿ ಶಿವಾಜಿ ಮಹಾರಾಜನ ಸಾಮ್ರಾಜ್ಯ ಸ್ಥಾಪನಾ ಕಾರ್ಯದಲ್ಲಿ ಗೊಂದಲಿಗರು ತುಂಬಾ ನೆರವಾಗಿದ್ದರು. ಆವರಿಂದ 'ಗೊಂದಲ' ಹಾಕಿಸಿಯೇ ಶಿವಾಜಿಯು ಸಿಂಹಗಢವನ್ನು ವಶಪಡಿಸಿಕೊಳ್ಳಲು ಹೋದ ಬಗ್ಗೆ ಉಲ್ಲೇಖಗಳಿವೆ. ಗೋಂದೋಳು ಪೂಜಾಚರಣೆಯು ಮಹಾರಾಷ್ಟ್ರ ಮೂಲವಾಗಿದ್ದು ಇದಕ್ಕೆ ಸುಮಾರು 1500 ವರ್ಷಗಳ ಇತಿಹಾಸವಿದೆ.

ಮರಾಟಿಗರು ವಲಸೆ ಬರುವಾಗ ತಮ್ಮೊಂದಿಗೆ ಬಳುವಳಿಯಾಗಿ ತಂದ ಸಾಂಪ್ರದಾಯಿಕ ಕಲೆ ಇದಾಗಿದೆ. ಶಿವಾಜಿ ಕಾಲದಿಂದ ಇಂದಿನ ತನಕ ಈ ಪೂಜೆಯು ವೈವಿಧ್ಯಮಯವಾಗಿ ಆರಾಧನೆಗೊಳ್ಳುತ್ತಾ ಬಂದಿದೆ. ಮಹಾರಾಷ್ಟ್ರದಲ್ಲಿ ಇಂದಿಗೂ ಇದು ಒಂದು ಪ್ರಮುಖ ಆರಾಧನಾ ಕಲೆಯಾಗಿ ಪ್ರಸಿದ್ಧಿ ಪಡೆದಿದೆ. ಗೋಂದೋಳು ಆಚರಣೆಯ ಐತಿಹಾಸಕ್ಕೆ ಸಂಬಂಧಪಟ್ಟಂತೆ ಮಹಾರಾಷ್ಟ್ರ ಮತ್ತು ಕರ್ನಾಟಕಗಳಲ್ಲಿ ಗೋಂದೋಳುವಿಗೆ ಸಂಬಂಧಿಸಿದ ದಾಖಲೆಗಳು ಸಿಗುತ್ತವೆ. ಮಹಾರಾಷ್ಟ್ರದಲ್ಲಿ ಗೋಂದೋಳು ಜಾನಪದ ಆಚರಣೆಯಾಗಿ, ಉತ್ತರ ಕರ್ನಾಟಕದಲ್ಲಿ ವೃತ್ತಿಗಾಯಕ ಪರಂಪರೆಯಾಗಿ ಹಾಗೂ ಕರಾವಳಿ ಕರ್ನಾಟಕದಲ್ಲಿ ಧಾರ್ಮಿಕ ರಂಗಭೂಮಿಯಾಗಿ ಪ್ರಚಾರದಲ್ಲಿದೆ.

'ಗೋಂದೋಳು' ಪದವು 'ಗೊಂದಲ' ಎನ್ನುವ ಪದದಿಂದ ಹುಟ್ಟಿತೆಂಬುದು ಕೆಲವು ವಿದ್ವಾಂಸರ ಅಭಿಪ್ರಾಯವಾಗಿದೆ. ಇದಕ್ಕೆ ಶಾರ್ಙ್ಗದೇವನ ಅಭಿಮತವೂ ಪೂರಕವಾಗಿದೆ. ಶಂಬಾ ಜೋಶಿಯವರು, ಕರ್ನಾಟಕ ಮತ್ತು ಮಹಾರಾಷ್ಟ್ರಗಳೆರಡೂ ಹಿಂದೆ ಒಂದೇ ರಾಜ್ಯವಾಗಿದ್ದು ಈಗಿನ ಕರ್ನಾಟಕವೂ ಮಹಾರಾಷ್ಟ್ರದವರೆಗೂ ವ್ಯಾಪಿಸಿತ್ತು ಎನ್ನುತ್ತಾರೆ. ಪರಶುರಾಮನು ತನ್ನ ತಂದೆಯನ್ನು ಕೊಂದ ಕಾರ್ತವೀರ್ಯಾರ್ಜುನನನ್ನು ಕೊಂದು ಅವನ ದೇಹದ ಅವಯವಗಳಿಂದ ಚೌಡಿಕೆಯನ್ನು ನಿರ್ಮಿಸಿ ಕುಣಿಯಲು ಪ್ರಾರಂಭಿಸಿದಂದಿನಿಂದ ಗೋಂದಲಿಯು ಪ್ರಾರಂಭವಾಯಿತೆಂಬ ನಂಬಿಕೆ ಜನಪದರಲ್ಲಿದೆ. ಅದೇ ರೀತಿ ಪರಶುರಾಮನು ಬೇತಾಸುರನೆಂಬ ದೈತ್ಯನ ಶಿರತಂದು ಅವನ ದೇಹದಿಂದ ಚೌಡಿಕೆ ನಿರ್ಮಿಸಿಕೊಂಡು ಹಾಡುತ್ತಾ ರೇಣುಕೆಯಲ್ಲಿಗೆ ಬಂದು ತಾಯಿಯನ್ನು ಸಮಧಾನಪಡಿಸಿರುವನೆಂಬ ಐತಿಹ್ಯಗಳಿವೆ.

5 ಗೋಂದಲ್-ಗೊಂದಲ:

ಮಹಾರಾಷ್ಟ್ರದ ಕೊಲ್ಹಾಪುರದ ಕರಾಡ ಬ್ರಾಹ್ಮಣರು ಅಂಬಾ ಭವಾನಿಯ ಹೆಸರಿನಲ್ಲಿ 'ಗೋಂದಾಲ್' ಎಂಬ ಪೂಜೆ ಮಾಡುತ್ತಾರೆ. ಇವರ ಅನೇಕ ಕುಟುಂಬಗಳು ಕೊಲ್ಹಾಪುರದಿಂದ ವಲಸೆ ಬಂದು ತುಳುನಾಡಿನ ಅವಿಭಜಿತ ದಕ್ಷಿಣ ಕನ್ನಡ ಹಾಗೂ ಕಾಸರಗೋಡು ಜಿಲ್ಲೆಗಳ ಕೆಲವೊಂದು ಪ್ರದೇಶಗಳಲ್ಲಿ ನೆಲೆಸಿರುತ್ತಾರೆ. ಇವರು ಮಹಾಮ್ಮಾಯಿ ಮೂರ್ತಿಯ ಸುತ್ತ ಶ್ರೀದೇವಿಯನ್ನು ಸ್ತುತಿಸುತ್ತಾ, ಹೊಗಳಿಕೆಯ ಹಾಡನ್ನು ಹಾಡುತ್ತಾ ಕುಣಿಯುವುದರ ಮೂಲಕ ಗೋಂದಲ್ ಪೂಜೆಯನ್ನು ಆಚರಿಸುತ್ತಾರೆ. ಕಾಸರಗೋಡಿನಲ್ಲಿ ವಲಸೆ ಬಂದು ನೆಲೆಸಿದ ಕರಾಡ ಬ್ರಾಹ್ಮಣರು ವೈದಿಕ ರೀತಿಯಲ್ಲಿ ಗೋಂದಾಲ್ ಎಂಬ ಕುಣಿತವಿರುವ ಪೂಜೆಯನ್ನು ನಡೆಸುತ್ತಾರೆ. (ಕೃಷ್ಣ ಭಟ್, ಪೆರ್ಲ, 1990, ಪುಟ 360).

6 ಆಚರಣೆಯ ಉದ್ದೇಶ ಮತ್ತು ಆಶಯ:

ಗೋಂದೋಳು ಪೂಜೆಯಲ್ಲಿ ನಾವು ಪ್ರಧಾನವಾಗಿ ದೇವಿಯ ಉಪಾಸನೆಯನ್ನು ಕಾಣುತ್ತೇವೆ. ದೇವಿಯನ್ನು 'ಶಕ್ತಿ'ಯಾಗಿ ಆರಾಧಿಸುವ ಪರಂಪರೆಯು ಇದಾಗಿದೆ. ಕರ್ನಾಟಕದಲ್ಲಿ ವೈಷ್ಣವ, ಶೈವ, ಗಾಣಪತ್ಯ ಮತ್ತು ಶಕ್ತ್ಯಾರಾಧನೆಗಳೆಂಬ ಪ್ರಮುಖ ಆರಾಧನಾ ಪರಂಪರೆಗಳಿವೆ. ಈ ಆರಾಧನಾ ಪರಂಪರೆಗಳಿಗೆ ಸಂಬಂಧಪಟ್ಟಂತೆ ಪುರಾಣ ಸಂಹಿತೆಗಳಿವೆ. ದೇವಿಗೆ ಸಂಬಂಧಪಟ್ಟಂತೆ ಶ್ರೀದೇವಿ ಮಹಾತ್ಮ್ಯಗಳಿವೆ. ದೇವಿಯ ಅವತಾರ ಮತ್ತು ಅದರ ಉದ್ದೇಶಗಳನ್ನು ಪುರಾಣಗಳಲ್ಲಿ ವಿವರಿಸಲಾಗಿದೆ. ದುಷ್ಟ ರಾಕ್ಷಸರ ಸಂಹಾರವೇ ಅವಳ ಅವತಾರದ ಉದ್ದೇಶ. ಇಂತಹ ದೇವಿಯನ್ನು ಅಂಬಾ ಭವಾನಿ ಎಂದು ಕರೆದು ಮರಾಟಿಗರು ದೇಸೀ ಸಂಪ್ರದಾಯದಲ್ಲಿ ಆರಾಧಿಸುತ್ತಾ ಬಂದಿದ್ದಾರೆ.

'ಗೋಂದೋಳು' ಪದವು 'ಗೊಂದಲ' ಎನ್ನುವ ಪದದಿಂದ ಹುಟ್ಟಿತೆಂಬುದು ಕೆಲವು ವಿದ್ವಾಂಸರ ಅಭಿಪ್ರಾಯವಾಗಿದೆ. ಇದಕ್ಕೆ ಶಾರ್ಙ್ಗದೇವನ ಅಭಿಮತವೂ ಪೂರಕವಾಗಿದೆ. ಶಂಬಾ ಜೋಶಿಯವರು, ಕರ್ನಾಟಕ-ಮಹಾರಾಷ್ಟ್ರಗಳೆರಡೂ ಹಿಂದೆ ಒಂದೇ ರಾಜ್ಯವಾಗಿದ್ದು ಈಗಿನ ಕರ್ನಾಟಕವೂ ಮಹಾರಾಷ್ಟ್ರದವರೆಗೂ ವ್ಯಾಪಿಸಿತ್ತು ಎನ್ನುತ್ತಾರೆ. ಪರಶುರಾಮನು ತನ್ನ ತಂದೆಯನ್ನು ಕೊಂದ ಕಾರ್ತವೀರ್ಯಾರ್ಜುನನನ್ನು ಕೊಂದು ಅವನ ದೇಹದ ಅವಯವಗಳಿಂದ ಚೌಡಿಕೆಯನ್ನು ನಿರ್ಮಿಸಿ ಕುಣಿಯಲು ಪ್ರಾರಂಭಿಸಿದಂದಿನಿಂದ ಗೋಂದಲಿಯು ಪ್ರಾರಂಭವಾಯಿತೆಂಬ ನಂಬಿಕೆ ಜನಪದರಲ್ಲಿದೆ. ಅದೇ ರೀತಿ ಪರಶುರಾಮನು ಬೇತಾಸುರನೆಂಬ ದೈತ್ಯನ ಶಿರ ತಂದು ಅವನ ದೇಹದಿಂದ ಚೌಡಿಕೆ ನಿರ್ಮಿಸಿಕೊಂಡು ಹಾಡುತ್ತಾ ರೇಣುಕೆಯಲ್ಲಿಗೆ ಬಂದು ತಾಯಿಯನ್ನು ಸಮಧಾನ ಪಡಿಸಿರುವನೆಂಬ ಐತಿಹ್ಯಗಳಿವೆ.

ಪ್ರತಿಯೊಂದು ವಿಚಾರಕ್ಕೂ ದೈವತ್ವವನ್ನು ಆರೋಪಿಸುವುದು ಮರಾಟಿಗರ ಮುಗ್ಧ ಮನಸ್ಸಿನ ಪ್ರತೀಕವಾಗಿದೆ. ತಮಗೆ ಬರುವ ಎಲ್ಲಾ ಕಷ್ಟಕಾರ್ಪಣ್ಯಗಳು ದೇವಿಯಿಂದಲೇ ಬರುತ್ತಿವೆ ಎಂಬ ನಂಬಿಕೆ ಅವರಲ್ಲಿದೆ. "ಮೊದಲು ದೇವಿಯು ಸಿರಿಸಂಪತ್ತನ್ನು ಇಟ್ಟು ನೋಡಿ ನಂತರ ಕೊಟ್ಟು ನೋಡುತ್ತಾಳೆ; ಹೀಗಿದ್ದಾಗಲೂ ತನ್ನನ್ನು ನೆನೆಯದಿದ್ದರೆ ಕಾಡಲು ಪ್ರಾರಂಭಿಸುತ್ತಾಳೆ" ಎಂಬ ನಂಬಿಕೆ ಮರಾಟಿಗರಲ್ಲಿದೆ. ಸಂದಿಗ್ಧ ಪರಿಸ್ಥಿತಿಯಲ್ಲಿ ಸಿಲುಕಿಕೊಂಡಾಗ ದುರ್ಬಲ ಮನಸ್ಸಿಗೆ ಧೈರ್ಯವನ್ನು ತಂದುಕೊಳ್ಳುವ ಉದ್ದೇಶದಿಂದ ಮತ್ತು ಇಷ್ಟಾರ್ಥಗಳ ಸಿದ್ಧಿಗಾಗಿ ಹರಕೆಯ ರೂಪದಲ್ಲಿ ಮರಾಟಿಗರು ಗೋಂದೋಳು ಪೂಜೆಯನ್ನು ಆಚರಿಸುತ್ತಾರೆ. ಈ ಗೋಂದೋಳು ಪೂಜೆಯನ್ನು ಶ್ರೀ ಮಹಾಮ್ಮಾಯಿ ಅಥವಾ ಶ್ರೀ ದುರ್ಗೆಯ ಹೆಸರಿನಲ್ಲಿ ನಡೆಸುತ್ತಾರೆ.

ಮರಾಟಿ ಜನಾಂಗದವರು ಶ್ರಮ ಜೀವಿಗಳು. ನಂಬಿಕೆಗೆ ಅರ್ಹರು. ವಲಸೆ ಬಂದ ಮರಾಟಿಗರು ಕೌಟುಂಬಿಕ ಕ್ಷೇಮಕ್ಕಾಗಿ ಈ ಪೂಜೆಯನ್ನುಸಲ್ಲಿಸುತ್ತಾ ಬಂದಿದ್ದಾರೆ. ಕೃಷಿ ಸಂಸ್ಕೃತಿಯಲ್ಲಿ ತೊಡಗಿಕೊಂಡ ಮೇಲೆ ಫಲವಂತಿಕೆಗಾಗಿ ಮತ್ತು ಜಾನುವಾರುಗಳ ಸಂರಕ್ಷಣೆಗಾಗಿ ಮಹಾಮಾತೆಯ ಉಪಾಸನೆಯನ್ನು ಕೈಗೊಂಡಿರಬೇಕು. ಗೋಂದೋಳು ಪೂಜೆಯಲ್ಲಿ ಭೈರವನು ಜಾನುವಾರುಗಳ ಮುಖ್ಯ ರಕ್ಷಕನಾಗಿ ಕಾಣುತ್ತಾನೆ. ಲೌಕಿಕ ಬದುಕಿನ ನೆಮ್ಮದಿಗಾಗಿ ಮರಾಟಿಗರು ಈ ಆರಾಧನಾ ಸಂಪ್ರದಾಯವನ್ನು ಮುನ್ನಡೆಸಿಕೊಂಡು ಬಂದಿದ್ದಾರೆ. ಶ್ರೀದೇವಿಯನ್ನು ಆರಾಧನೆಯ ಮುಖಾಂತರ ಸಂತೃಪ್ತಿಪಡಿಸಿ ತಾವು ತೃಪ್ತರಾಗುವುದು ಈ ಜನಪದ ಆಚರಣೆಯ ಆಶಯವಾಗಿದೆ.

ಗೋಂದೋಳು ಪೂಜೆಯನ್ನು ಸಾಮಾನ್ಯವಾಗಿ ಮಂಗಳವಾರ, ಶುಕ್ರವಾರ, ಆದಿತ್ಯವಾರದ ದಿನಗಳಲ್ಲಿ ಮಾಡಿಸುತ್ತಾರೆ. ಮರಾಟಿ ಜನಾಂಗದವರಲ್ಲಿ ಆದಾಯವುಳ್ಳವರು ವರ್ಷಂಪ್ರತಿ ಗೋಂದೋಳು ಪೂಜೆ ನಡೆಸುತ್ತಾರೆ. ಆರ್ಥಿಕವಾಗಿ ಮಧ್ಯಮ ವರ್ಗದ ಮರಾಟಿಗರು ಮೊದಲನೆಯ ವರ್ಷ 'ಮಂಗಳವಾರ ಪೂಜೆ'ಯನ್ನು ನೆರವೇರಿಸಿ ಮುಂದಿನ ವರ್ಷ ಗೋಂದೋಳು ಪೂಜೆಯನ್ನು ಆಚರಿಸುತ್ತಾರೆ. ಆರ್ಥಿಕವಾಗಿ ಹಿಂದುಳಿದ ಮರಾಟಿಗರು ಎರಡು ವರ್ಷಗಳಿಗೊಮ್ಮೆ ಅಥವಾ ಹರಕೆ ಪೂಜೆಯಾಗಿ ಶ್ರೀದೇವಿಯನ್ನು ಸಂತೃಪ್ತಿ ಪಡಿಸುತ್ತಾರೆ. ಈ ಪೂಜೆಯನ್ನು ನೆರವೇರಿಸಿ ಕುಟುಂಬದ ಯಜಮಾನ ಹಾಗೂ ಇಡೀ ಕುಟುಂಬದ ಜನರು ಮಾನಸಿಕ ನೆಮ್ಮದಿ ಮತ್ತು ಕೃತಜ್ಞತಾ ಭಾವನೆಯನ್ನು ತಾಳುತ್ತಾರೆ.

ಪರಾಮರ್ಶನ ಗ್ರಂಥಗಳು:

1. ಅಡ್ಯನಡ್ಕ ಕೃಷ್ಣಭಟ್, "ಸುದರ್ಶನ" ಡಾ.ತೋನ್ಸೆ ಮಾಧವ ಪೈ ಅಭಿನಂದನ ಗ್ರಂಥ, ವಿಜಯ ಕಾಲೇಜ್ ಟ್ರಸ್ಟ್, ಮುಲ್ಕಿ - 1997

2. ಕರ್ನಾಟಕ ಜನಪದ ಕತೆಗಳ ಕೋಶ, 196, ಪುಟ 82-83

3. ಎನ್.ಎಸ್.ಬ್ಯಾತನಾಳ, ಮರಾಠಿ ಲೋಕ ಸಾಹಿತ್ಯ, 1981, ಪುಟ 1-4,

4. ಕೃಷ್ಣಭಟ್ ಪೆರ್ಲ, 1990 ಪುಟ 360.

5. ಕೈಂತಜೆ ನರಸಿಂಹ ಭಟ್ಟ, 1977, ಪುಟ-168

6. ಡಾ.ಎಂ. ಚಿದಾನಂದ ಮೂರ್ತಿ, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, 2003, ಪುಟ-138. ☐

ಬೆಳಕಿನೊಂದಿಗೆ

ಬರುವುದಾದರೆ ಬಂದು ಬಿಡು ಬೇಗ
ಯಾಕೆ ನಿಂತಿರುವೆ ಲೆಕ್ಕ ಹಾಕುತ್ತ?
ಕಳೆದು ಕೂಡಿಸಿ
ಮೊತ್ತದ ಹುತ್ತ ಬೆಳೆಸುತ್ತ
ಪ್ರಶ್ನೆಗೆ ಪ್ರಶ್ನೆ ಉತ್ತರವಲ್ಲ.

ದಾಟು:
ನೋವಿನ ನದಿ ಸರೋವರ ಕಡಲ ಸಾಗರ
ದಃಖದ ನೂರೆಂಟು ಕಂದರ
ದಾಟು: ದಾರಿಯುದ್ದಕ್ಕೂ ಇದ್ದ ತಗ್ಗು ದಿನ್ನೆಗಳು
ಬಿದ್ದ ಕಲ್ಲುಬಂಡೆಗಳು, ಎದ್ದ ಮುಳ್ಳುಕಂಟಿಗಳು
ಮೆಟ್ಟಿ ಮೇಲೇರಿ ಬಾ
ಮೆಟ್ಟಿಲು ಮಾಡಿ ಅಡೆತಡೆಗಳನ್ನು

ಅಲ್ಲೇ ನಿಂತರೆ ಹೇಗೆ?
ಹತ್ತು ಒಂದೆರಡು ಮೆಟ್ಟಲು ಮೇಲೆ
ಕಾಯಬೇಡ
ಯಾರಾದರು ಬಂದು ಮೇಲೆತ್ತಬಹುದೆಂದು

ಉತ್ತರ ಹುಡುಕಿದರೆ ಸಿಗದು
ಕಂಡು ಕೊಳ್ಳಬೇಕು
ತನಗೆ ತಾನೆ ಬೆಳಕು ಮೂಡದು
ಹಚ್ಚಬೇಕು ದೀಪ
ಕಂಡ ದೇವರಿಗೆ ಕೈಮುಗಿದರು
ಗಂಡಬೇಕು ಮಕ್ಕಳ ಹಡೆಯಲು

ತವಕಿಸಬೇಕು ತಡವರಿಸಬೇಕು
ತಲ್ಲಣಿಸಬೇಕು
ಕೈಕಟ್ಟಿ ಕುಳಿತರೆ
ಬಾಯಿಗೆ ಬರದು ಕೈಗೆ ಬಂದ ತುತ್ತು.

ಏಸು ದಿನ ನಿಲ್ಲುತ್ತಿ ಅಲ್ಲೆ?
ಪುರಾಣ ಕೇಳಿದರೆ ಪುಣ್ಯ ಬರದು
ಪೂಜೆ ಮಾಡಿದರೆ ಬಂಜೆ ಬಸುರಾಗಳು



ತಡೆದು ನಿಲ್ಲಿಸಿದ ನೀರು ಒಸರಬೇಕು
ಕೈಕೆಸರಾಗಬೇಕು
ಬುದ್ಧಿ ಬಸುರಾಗಬೇಕು.

ನರಸತ್ತವರಿಗೆ ದೇವರು ವರಕೊಡಲಾರ
ಹರಕೆ ಕೈಗೂಡದು ಗೊರಕೆ ಹೊಡೆವ
ಸೋಮಾರಿಗೆ

ಬೆಳಕಿಗಾಗಿ ಕಾಯಬೇಡ
ಕತ್ತಲಿದ್ದರೂ ಚಿಂತಿಸಬೇಡ
ಹಿಡಿ ಚಿಕ್ಕ ಕಂದೀಲು
ಒಂದೊಂದೆ ಹೆಜ್ಜೆಯಿಡು ಮುಂದಿನ ದಾರಿಗೆ
ಬೆಳಕೂ ಬರುವುದು ನಿನ್ನೊಂದಿಗೆ.

○ ಪ್ರಭು ಖಾನಾಪುರೆ

ಜಾತಿ ವರ್ಚಸ್ವೀಕರಣದೊಂದಿಗೆ ಬಸವ ತತ್ವದ ಹೋರಾಟ

ಜಿ. ಎಸ್. ದಸ್ತಾಪೂರ

ಜಾತಿ ಅಸ್ಮಿತೆ ಮತ್ತು ವರ್ಚಸ್ವಿಕರಣದಲ್ಲಿ ಗೌಣವಾಗುತ್ತಿರುವ ಬಸವ ತತ್ವದ ಇತಿಹಾಸವನ್ನು ಅವಲೋಕಿಸುವ ಮತ್ತು ಪ್ರಸ್ತುತ ಸಂದರ್ಭದಲ್ಲಿ ಅದರ ಮಹತ್ವವನ್ನು ತಿಳಿಯುವುದು ತೀರಾ ಅವಶ್ಯಕವಾಗಿದೆ. ರಾಜ್ಯ, ಅಗ್ರಹಾರ, ಊಳಿಗ ಮಾನ್ಯ, ನೌಕರಶಾಹಿ ಮತ್ತು ವ್ಯಾಪಾರಿಗಳಿಂದ ಶೋಷಣೆಗೊಳಗಾದ ಕೆಳಜಾತಿಯ ಆಯಗಾರ ಮತ್ತು ಶೂದ್ರ ಕುಶಲಕರ್ಮಿಗಳ ನೇತೃತ್ವದಲ್ಲಿ ಯಜಮಾನಿಕೆ ವ್ಯವಸ್ಥೆಯ ವಿರುದ್ಧದ ಬಂಡಾಯವೆ ಬಸವ ಧರ್ಮ ಅಥವಾ ಲಿಂಗಾಯತ ಧರ್ಮ. ನಿಜ ಅರ್ಥದಲ್ಲಿ ಅದು ಧರ್ಮ-ಜಾತಿ ಎನ್ನುವುದೆ ತಪ್ಪು. ವಚನಕಾರರ ಚಳುವಳಿ ವೈಚಾರಿಕ ನೆಲೆಯಿಂದ ವೈದಿಕರ ಢಾಂಬಿಕತನ, ಬ್ರಾಹ್ಮಣರ ಅಧಿಪತ್ಯ, ತರ್ಕರಹಿತ ಮತ್ತು ಶೋಷಣೆಯ ಮೂಲ ಸಾಧನವಾದ ವರ್ಣಾಶ್ರಮವನ್ನು ಪ್ರಶ್ನಿಸಿತ್ತು.

"If there is anything that cannot bear free thought, let it crack"

-Windell Phillips

ಸತ್ಯ, ಸದಾಚಾರ, ವೈಚಾರಿಕತೆ ಮತ್ತು ಸಮಾನತೆಯ ತಳಹದಿಯ ಮೇಲೆ ಜಾತಿ ಮತ್ತು ವರ್ಗರಹಿತ ಸಮಾಜವನ್ನು ಕಟ್ಟ ಬಯಸಿದ ಬಸವಾದಿ ಪ್ರಮಥರ ಕರ್ಮಭೂಮಿ ಕರ್ನಾಟಕ ಇತ್ತೀಚಿನ ಕೆಲವು ವರ್ಷಗಳಿಂದ ವಿಶೇಷವಾಗಿ ಕೋಮುವಾದ, ಮೂಲಭೂತವಾದ ಮತ್ತು ದಲಿತ ವಿರೋಧಿ 'ವಿಚಾರ'ವಾದದ ಕಡೆಗೆ ಬಲವಾಗಿ ವಾಲುತ್ತಿರುವುದು ಆತಂಕದ ಬೆಳವಣಿಗೆಯಾಗಿದೆ. 1980 ರಿಂದೀಚೆಗೆ ಪ್ರಬಲ ಲಿಂಗಾಯತ ಮತ್ತು ವಕ್ಕಲಿಗ ಕೋಮುಗಳ ವರ್ಚಸ್ವಿಕರಣದಿಂದ ರಾಜಕೀಯ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಈ ಎರಡೂ ಕೋಮಿನ ಹಿಡಿತ ಬಲಗೊಳ್ಳುತ್ತಿದೆ. ಇದನ್ನು ಕಳೆದ ವಿಧಾನ ಸಭೆ ಚುನಾವಣೆ ಮತ್ತೊಮ್ಮೆ ಸ್ಪಷ್ಟಪಡಿಸಿದೆ. ಸ್ವಾತಂತ್ರ್ಯನಂತರದ ದಿನಗಳಿಂದಲೂ ಈ ಎರಡೂ ಕೋಮುಗಳು ಬ್ರಾಹ್ಮಣರ ವರ್ಚಸ್ಸನ್ನು ಹತ್ತಿಕ್ಕುತ್ತಾ ಬಂದಿವೆ. ಮೂಲತಃ ಶೂದ್ರ ಸಮುದಾಯಗಳಾದ ಲಿಂಗಾಯತ-ವಕ್ಕಲಿಗರು ಸಮಾಜದ ದುರ್ಬಲ-ಹಿಂದುಳಿದ ಜಾತಿಗಳನ್ನು ನಿರ್ಲಕ್ಷಿಸಿರುವುದು ಖಂಡನಿಯ. ಇಡೀ ಲಿಂಗಾಯತ ಕೋಮನ್ನು ಪ್ರತಿನಿಧಿಸುವಂತೆ ಬಿಂಬಿಸಿಕೊಳ್ಳುವ ಮಹಾಸಭೆಗಳು, ಸಮಿತಿಗಳು ಮತ್ತು ಸಂಘಟನೆಗಳು 'ಕಲ್ಯಾಣ ಕ್ರಾಂತಿ'ಯ ಹರಿಕಾರ ಬಸವಣ್ಣನ್ನು ಪೇಟೆಂಟಗೊಳಿಸಿಕೊಂಡಿರುವಂತೆ ವರ್ತಿಸುತ್ತಿವೆ. ಭವಿಷ್ಯವಿಲ್ಲದ ಎಡಬಿಡಂಗಿ ರಾಜಕಾರಣಿಗಳಿಗೆ ಇವು ಆಶ್ರಯ ತಾಣಗಳಾಗಿ ಮಾರ್ಪಡುತ್ತಿವೆ. ಈ ಸಂಘಟನೆಗಳು ಬಸವನ ಮತ್ತು ಇತರೆ ಶರಣರ ಜಾತ್ಯಾತೀತ ಮೌಲ್ಯಗಳನ್ನು ಕಾರ್ಯ ರೂಪಕ್ಕೆ ತರುವುದರ ಬಗ್ಗೆ ಕಾಳಜಿ ವಹಿಸದೆ ಬಸವಣ್ಣನ್ನನ್ನು ಲಿಂಗಾಯತ ಜಾತಿ ನಾಯಕನನ್ನಾಗಿ ಮಾರ್ಪಡಿಸುತ್ತಿರುವುದು ಆತಂಕದ ಬೆಳವಣಿಗೆ. ಹೊಲಗೇರಿ ರಹಿತ ನಾಡು ಕಟ್ಟಲು ಪ್ರಯತ್ನಿಸಿದ ಬಸವನ

'ಲಿಂಗವ ಪೂಜಿಸಿ ಫಲವೇನಯ್ಯ
ಸಮರತಿ, ಸಮಕಳೆ, ಸಮಸುಖವರಿಯದನ್ನಕ್ಕ?

ವಚನದ ಕುರಿತು ಆತ್ಮವಿಮರ್ಶೆ ಮಾಡಿಕೊಳ್ಳಬೇಕಾದ ಈ ಸಮಯದಲ್ಲಿ ಸಾಮಾನ್ಯ ಪ್ರಶ್ನೆಯೊಂದಕ್ಕೆ ಉತ್ತರಿಸುವ ಅಗತ್ಯವಿದೆ. ತಥಾಕಥಿತ ಲಿಂಗಾಯತ ಸಂಘಟನೆಗಳು ನಿಜಕ್ಕೂ ಅಂಥದೊಂದು ಜಾತಿರಹಿತ ನಾಡು ಕಟ್ಟುವಲ್ಲಿ ಶ್ರಮಿಸುತ್ತಿವೆಯೆ? ದಲಿತರನ್ನು ಜೀವಂತ ಸುಟ್ಟಾಗ, ಮಹಿಳೆಯರ ಮೇಲೆ ಅತ್ಯಾಚಾರವಾದಾಗ, ಅಮಾನವಿಯವಾಗಿ ನಗ್ನಗೊಳಿಸಿ ಮೆರೆಸುವಾಗ, ಅಮಾಯಕ ಆದಿವಾಸಿಗಳ ಹಕ್ಕು ಚ್ಯುತಿಯಾದಾಗ ಮತ್ತು ಅಲ್ಪಸಂಖ್ಯಾತರ ಮೇಲೆ ದಾಳಿಯಾದಾಗ ಈ ಸಂಘಟನೆಗಳು ಹೋರಾಡುವುದಂತು ದೂರ, ಕನಿಷ್ಠ ಖಂಡಿಸಿರುವ ಉದಾಹರಣೆಗಳಾದರು ಇವೆಯೇ? ಇಂಥದೊಂದು ನಿರ್ಲಕ್ಷ ಅಥವಾ ಹೋಣೆಗೇಡಿತನಕ್ಕೆ ಕಾರಣರಾರು? ಈ ಸಂಘಟನೆಗಳನ್ನು ಪ್ರತಿನಿಧಿಸುವವರೊ? ಇಲ್ಲ ಇವರು ಹೊಂದಿರುವ ಗುಪ್ತ ಪ್ರಣಾಳಿಕೆಯೊ? ಸಮಾನತೆಗಾಗಿ ಹೋರಾಡದಿದ್ದರು ಚಿಂತೆಯಿಲ್ಲ: ಆದರೆ ಇವರು ಹೋರಾಡುವುದು ಮಾತ್ರ ತಮ್ಮ ಜಾತಿಯವರಿಗೆ ಚುನಾವಣೆ ಟಿಕೆಟ್ಟಗಾಗಿ, ಮಂತ್ರಿಗಿರಿಗಾಗಿ, ಸಂಪುಟದಲ್ಲಿ ಉತ್ತಮ ಖಾತೆಗಾಗಿ ಅಂತು ನಿಜ. ಈ ರೀತಿಯ ಗಲಾಟೆಗಳಲ್ಲಿ ಯುವಕರು ಪಾಲ್ಗೋಳ್ಳುವಂತೆ ಪ್ರೇರೇಪಿಸುತ್ತಿರುವುದು ದಾರಿ ತಪ್ಪಿಸುವ ಕೆಲಸವೆ ಸರಿ. ಈ ರೀತಿಯ ವರ್ತನೆಗಳು ಬಸವ ತತ್ವಕ್ಕೆ ಅಪಚಾರವಲ್ಲವೆ?

ಜಾತಿ ಅಸ್ಮಿತೆ ಮತ್ತು ವರ್ಚಸ್ವಿಕರಣದಲ್ಲಿ ಗೌಣವಾಗುತ್ತಿರುವ ಬಸವ ತತ್ವದ ಇತಿಹಾಸವನ್ನು ಅವಲೋಕಿಸುವ ಮತ್ತು ಪ್ರಸ್ತುತ ಸಂದರ್ಭದಲ್ಲಿ ಅದರ ಮಹತ್ವವನ್ನು ತಿಳಿಯುವುದು ತೀರಾ ಅವಶ್ಯಕವಾಗಿದೆ. ರಾಜ್ಯ, ಅಗ್ರಹಾರ, ಊಳಿಗಮಾನ್ಯ, ನೌಕರಶಾಹಿ ಮತ್ತು ವ್ಯಾಪಾರಿಗಳಿಂದ ಶೋಷಣೆಗೊಳಗಾದ ಕೆಳಜಾತಿಯ ಆಯಗಾರ ಮತ್ತು ಶೂದ್ರ ಕುಶಲ ಕರ್ಮಿಗಳ ನೇತೃತ್ವದಲ್ಲಿ ಯಜಮಾನಿಕೆ ವ್ಯವಸ್ಥೆಯ ವಿರುದ್ಧದ ಬಂಡಾಯವೆ ಬಸವ ಧರ್ಮ ಅಥವಾ ಲಿಂಗಾಯತ ಧರ್ಮ. ನಿಜ ಅರ್ಥದಲ್ಲಿ ಅದು ಧರ್ಮ-ಜಾತಿ ಎನ್ನುವುದೆ ತಪ್ಪು. ವಚನಕಾರರ ಚಳುವಳಿ ವೈಚಾರಿಕ ನೆಲೆಯಿಂದ ವೈದಿಕರ ಢಾಂಬಿಕತನ, ಬ್ರಾಹ್ಮಣರ ಅಧಿಪತ್ಯ, ತರ್ಕರಹಿತ ಮತ್ತು ಶೋಷಣೆಯ ಮೂಲ ಸಾಧನವಾದ ವರ್ಣಾಶ್ರಮವನ್ನು ಪ್ರಶ್ನಿಸಿತ್ತು. ಉತ್ಪಾದನಾ ಚಟುವಟಿಕೆಗಳಲ್ಲಿ ಪಾಲ್ಗೊಂಡ ಆಯಗಾರರ ಚಳುವಳಿ ಊಳಿಗಮಾನ್ಯ ವಿರೋಧಿ ಪ್ರಜಾಸತ್ತಾತ್ಮಕ ಪ್ರಜ್ಞೆಯ ನೆಲೆಯಿಂದ ಬಂದುದೆ ಹೊರತು ಧರ್ಮ-ಜಾತಿಯ ಮೂಲದಿಂದಲ್ಲ. ಆಯಗಾರರ ಚಳುವಳಿ ಜಾತಿ ಮತ್ತು ಧರ್ಮದ ರೂಪ ಪಡೆದುದು ಐತಿಹಾಸಿಕ ದುರಂತ. ಜಾರ್ಜ ಥಾಮಸ್ ಹೇಳುವ ಹಾಗೆ, 'ಹಳೆ ಧರ್ಮದ ಸ್ಥಾನ ಹೊಸ ಧರ್ಮ ಪಡೆದುಕೊಂಡಾಗ ರಾಜ್ಯದಿಂದ ಗುರುತಿಸಲ್ಪಟ್ಟ ಧರ್ಮ ರಿಚುವಲಿಸ್ಟಿಕ ಆಗಿ ಬಿಡುತ್ತದೆ. ಬಸವ ಧರ್ಮ(ತತ್ವ)ದೊಂದಿಗೆ ಆಗಿದ್ದು ಇದೇ.

ಜಂಗಮಕ್ಕಳಿವುಂಟು ಸ್ಥಾವರಕ್ಕಳಿವಿಲ್ಲ?:

ಬಡವರ ಮೇಲೆ ಅನಾವಶ್ಯಕ ಖರ್ಚುಗಳನ್ನು ಹೇರುವ ಮತ್ತು ಶೋಷಣೆಯ ಸಾಧನಗಳಾದ ಹೋಮ, ಯಜ್ಞ,

ಸ್ಥಾವರ ಪೂಜೆಗಳನ್ನು ಖಂಡಿಸಿ ಎಲ್ಲವನ್ನು ಸರಳೀಕರಿಸಿದರು ಕಲ್ಯಾಣದ ವಚನಕಾರರು. ಅಗ್ರಹಾರದ ಸುಂಕಗಳನ್ನು, ಊಳಿಗಮಾನ್ಯ ವ್ಯವಸ್ಥೆಯ ಶೋಷಣೆ ಮತ್ತು ಅದನ್ನು ಪೋಷಿಸುವ ಉಳ್ಳವರ ರಾಜ್ಯದ ವಿರುದ್ಧದ ಬಸವಣ್ಣನ ಹೋರಾಟ ಭಾರತ ಇತಿಹಾಸದಲ್ಲಿ ವಿಶೇಷ ಮತ್ತು ಪ್ರಥಮ. 'ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ' ಎಂದು ಸಮಾಜವನ್ನು ತಾತ್ವಿಕ ನೆಲೆಯಲ್ಲಿ ಕಟ್ಟ ಬಯಸಿದ ಬಸವನನ್ನೆ ಇಂದು ಲಿಂಗಾಯತರು ಸ್ಥಾವರವನ್ನಾಗಿ ಮಾಡಿ ಮಠ-ಮಂದಿರಗಳನ್ನು ಕಟ್ಟಿ ಜಾತ್ರೆ ಮಾಡುತ್ತಿರುವುದು ವಿಡಂಬನೆಯೇ ಸರಿ. ಹದಿಮೂರನೆ ಶತಮಾನದ ಮಧ್ಯಭಾಗದಿಂದಲೂ ಬಸವ ತತ್ವಕ್ಕೆ ವಿರುದ್ಧವಾಗಿ ರಾಜಾಶ್ರಯ, ಯಜಮಾನಿ ವ್ಯವಸ್ಥೆಯ ಕೊಡುಗೆಗಳನ್ನು ಪಡೆದು ಕೆಳವರ್ಗದ ಶೋಷಣೆಯ ಮೂಲ ತಾಣಗಳಾದ ಮಠ-ಮಂದಿರಗಳ ನಿರ್ಮಾಣದಲ್ಲಿ ಲಿಂಗಾಯತರು ತೊಡಗಿದ್ದಾರೆ. ರಾಜ್ಯದ ಪ್ರಸ್ತುತ ಸರಕಾರದಿಂದಂತೂ ಮಠಗಳಿಗೆ ಹಣದ ಹೊಳೆಯೆ ಹರಿಯುತ್ತಿದೆ.

'ಬಸವೇಶ್ವರ ಜಯಂತಿ' ನೆಪದಲ್ಲಿ ಲಿಂಗಾಯತ ಸಂಘಟನೆಗಳು ಮತ್ತು ಮಠಾಧೀಶರು ಬಸವ ಉತ್ಸವ, ಬಸವ ಪ್ರತಿಮೆಯ ಮೆರವಣಿಗೆಗಳ ಮೇಲೆ ಕೋಟ್ಯಾಂತರ ರೂಪಾಯಿಗಳನ್ನು ಖರ್ಚುಮಾಡುವುದು ಯಾವ ಫಲಕ್ಕಾಗಿ? ಯಾವ ಶೋಷಕ ವರ್ಗದ ವಿರುದ್ಧ ಬಸವ ಹೋರಾಡಿದನೊ ಆ ವರ್ಗ ಮತ್ತು ಉಳ್ಳವರ ರಾಜ್ಯದಿಂದಲೆ ವಂತಿಗೆ ಪಡೆದು ಇವರು ಹೊರಡಿಸುವ ವಿಜೃಂಭಣೆಯ ಮೆರವಣಿಗೆಯಿಂದ ಸಾಧಿಸಿದ್ದಾದರು ಏನು? ಇದು ತತ್ವಗಳಿಗೆ ತಿಲಾಂಜಲಿಯಿಟ್ಟು 'ಬಸವೇಶ್ವರ' ಪೂಜೆಯಲ್ಲಿಯೇ 'ಕೈಲಾಸ' ಕಾಣುವಂತಿದೆ. ವಿಶೇಷವೇನೆಂದರೆ 'ಚೆನ್ನಾಗಿ ಓದಿಕೊಂಡವರೇ(?) ಮುಂದೆಯಲ್ಲಿ ಮುಂದಿರುವುದು. ಢಾಂಬಿಕತೆಯಲ್ಲಿ ನಾವೇನು ಕಮ್ಮಿ ಎಂದು ಪ್ರಶ್ನಿಸಿಕೊಂಡ 'ಅಕ್ಕಂದಿರು' ಇದೇ ದಾರಿಯಲ್ಲಿ ಸಾಗುತ್ತಿದ್ದಾರೆ. ಗ್ರಾಮೀಣ ಎಲಿಟ್ ಲಿಂಗಾಯತ ಕುಟುಂಬಗಳ ಹೆಣ್ಣುಮಕ್ಕಳ ನೇತೃತ್ವದಲ್ಲಿರುವ ಅಕ್ಕನ ಬಳಗಗಳ ಮುಖ್ಯ 'ಕಾಯಕ' ಲೇವಾ ದೇವಿ. ಅತ್ಯಂತ ಹೆಚ್ಚಿನ ಬಡ್ಡಿದರ ವಿಧಿಸಿ ಕೆಳವರ್ಗದ ಹೆಣ್ಣುಮಕ್ಕಳನ್ನು ಶೋಷಣೆ ಮಾಡಿ 'ಸಬಲೀಕರಣ'ವನ್ನು ಸಾಧಿಸುತ್ತಿರುವುದು ಮಹಾದೇವಿಯಕ್ಕನ ನಾಮಕ್ಕೆ ಶೋಭೆತರಿಸುವಂತಹುದೆ.

ಮೇಲೆ ಹೇಳಿದಂತೆ, ಬಸವನ ಹೆಸರಿನಲ್ಲಿಯೆ ಕಟ್ಟಲಾಗುತ್ತಿರುವ ಗುಡಿ ಮತ್ತು ಮಠಗಳ ಸಂಖ್ಯೆ ಭಾರತದ ಜಿಡಿಪಿ ಬೆಳವಣಿಗೆ ದರಕ್ಕಿಂತ ತೀವ್ರವಾಗಿ ಬೆಳೆಯುತ್ತಿರುವುದು ಕಳವಳಕಾರಿ ಅಂಶ. ಕಾಯಕದ ಪರಿಕಲ್ಪನೆ ವಚನಕಾರ ಚಳುವಳಿಯ ಮೂಲಾಂಶ. ಇದನ್ನು ಪ್ರಜ್ಞಾಪೂರ್ವಕವಾಗಿ ಕಡೆಗಣಿಸಿ ಕಾಯಕ ಮಾಡದೆ ಲಿಂಗವ ಮಾರಿ ಉದರವ ಹೊರೆಯುತ್ತಿರುವ ಮಠಾಧೀಶರು ಸಾಮಾಜಿಕ ಸಮಾನತೆಗಾಗಿ, ದಲಿತ-ಹಿಂದುಳಿದ, ಕೂಲಿಕಾರ್ಮಿಕರಿಗಾಗಿ ಕಾಯಕ ಮಾಡಿದ್ದು ಇಲ್ಲವೆ ಇಲ್ಲ. ಧಾರ್ಮಿಕರು ಎಂದು ಹೇಳಿಕೊಳ್ಳುವ ಈ ಮಠಾಧೀಶರು ದೇವರ ಧ್ಯಾನಕ್ಕಿಂತ ರಾಜಕೀಯ ನಾಯಕರ ಮತ್ತು ಬಂಡವಾಳಗಾರರ ಧ್ಯಾನದಲ್ಲೆ ಮುಳುಗಿರುತ್ತಾರೆ.

ಇಂದು ಮಠಗಳು ರಾಜಕೀಯ ಕೇಂದ್ರಶಕ್ತಿ ಮತ್ತು ವ್ಯವಹಾರ ಕುದುರಿಸುವ ಸ್ಥಳಗಳಾಗಿರುವುದು ತಿಳಿಯದ ವಿಷಯವೇನಲ್ಲ. ಮಠಾಧೀಶರು ಆಯೋಜಿಸುವ ಕಾರ್ಯಕ್ರಮಗಳಿಗೆ ರಾಜಕೀಯ ನಾಯಕರು ಉದ್ಘಾಟಕರಾದರೆ, ಭ್ರಷ್ಟ ನೌಕರಶಾಹಿಗಳು ಮುಖ್ಯ ಅತಿಥಿಗಳು. ದುಡಿಯುವ ವರ್ಗದ ರಕ್ತಹೀರುವ ಭೂ ಒಡೆಯರು, ಬುರ್ಜ್ವಾ ಬಂಡವಾಳಗಾರರು, ವ್ಯಾಪಾರಿಗಳು(ಪೆಟ್ಟಿ ಬುರ್ಜ್ವಾ ವರ್ಗ) ಈ ಕ್ರಿಯಾಹೀನ ಕಾರ್ಯಕ್ರಮಗಳ ಆಯೋಜಕರು. ಅದೇ ರೀತಿ ರಾಜಕೀಯ ಪಕ್ಷಗಳ ಕಾರ್ಯಕ್ರಮ, ಸರಕಾರದ ಯೋಜನೆಗಳ ಅರ್ಪಣೆ, ಶಿಕ್ಷಣ ಸಂಸ್ಥೆಗಳ ಕಾರ್ಯಕ್ರಮ, ರೈತರ ಭೂಮಿ ಕಸಿದುಕೊಂಡು ನಿರ್ಮಾಣವಾದ ಬಂಗಲೆಗಳ ಉದ್ಘಾಟನೆ, ಹೀಗೆ ಅನೇಕ ಕಾರ್ಯಕ್ರಮಗಳಲ್ಲಿ 'ಸರ್ವಸಂಗ ಪರಿತ್ಯಾಗಿ' ಸ್ವಾಮಿಗಳ ಸಾನಿಧ್ಯವಿರಲೇ ಬೇಕು. ಲಿಂಗಾಯತ ಮಠಾಧೀಶರು ಮತ್ತು ಸಂಘಟನೆಗಳು ಬಸವ ವಿರೋಧಿಸಿದ ಶೋಷಕ ವರ್ಗದ ಆಪ್ತರಾಗಿರುವುದು ಎಂಥ ವಿಪರ್ಯಾಸ, ಇಂಥ ಮಠಾಧೀಶರನ್ನು ಮತ್ತು ಅವರ ಅನುಯಾಯಿಗಳನ್ನು ಖಂಡಿಸಿ ದಾಸಿಮಯ್ಯ ಈ ರೀತಿ ಹೇಳುತ್ತಾರೆ.

ಜಂಗಮ ಎನ್ನುವುದಕ್ಕೆ ತಮ್ಮದೇ ಆದ ಜಾತಿ ಆಧಾರಿತ ಸಂಕುಚಿತ ವ್ಯಾಖೆ ನೀಡಿ, ಅದನ್ನು ಪ್ರತಿಪಾದಿಸುತ್ತಾ ಇಂದು ಜಾತಿ ಜಂಗಮರಾಗಿರುವರು ಕೆಳ ಜಾತಿಕರಣದ ವಿರೋಧಿಗಳಾದ ಬ್ರಾಹ್ಮಣ-ಪುರೋಹಿತರಿಗಿಂತ ತಾವೇನು ಕಡಿಮೆ ಎಂದುಕೊಳ್ಳುತ್ತಾ ಲಿಂಗಾಯತ ಕೋಮಿನಲ್ಲಷ್ಟೆಯಲ್ಲದೆ ಇಡೀ ಸಮಾಜದಲ್ಲಿ ತಮ್ಮದೇ ಆದ ವರ್ಚಸ್ಸನ್ನು ಸ್ಥಾಪಿಸಿದ್ದಾರೆ. ಇವತ್ತಿಗೂ ವೀರಶೈವ-ಲಿಂಗಾಯತ ಮಠಗಳಲ್ಲಿ ಮಠಾಧೀಶನಾಗಬಯಸುವ ಅಭ್ಯರ್ಥಿಯ ಮೂಲ ಅರ್ಹತೆ- ಆತ ಜಾತಿ ಜಂಗಮನಾಗಿರಸಬೇಕು. ಇಪ್ಪತ್ತೊಂದನೇಯ ಶತಮಾನದ ವಿಜ್ಞಾನ-ತಂತ್ರಜ್ಞಾನದ ಯುಗದಲ್ಲೂ ಕೂಡ, ಲಿಂಗಾಯತರು ಮತ್ತು ಇತರೆ ಜಾತಿಯವರು ಹಬ್ಬ ಹರಿದಿನಗಳಲ್ಲಿ ಜಾತಿ ಜಂಗಮರನ್ನು ಮನೆಗೆ ಆಹ್ವಾನಿಸುತ್ತಾರೆ.

ವೇಷವ ಹೊತ್ತ ಹಿರಿಯರು
ಈಶ್ವರ ಧ್ಯಾನದಲ್ಲಿರಬೇಕು
ವೇಷವ ತೋರಿ ಗ್ರಾಸಕ್ಕಾಗಿ ಆಸೆ ಮಾಡಿ
ಲೋಗರ ಮನೆ ಕಾದು
ಗ್ರಾಸವು ಪಡೆದು ಉದರವ ಹೊರೆವ
ವೇಷವು ವೇಶಿಯಿಂದ ಕರಕಷ್ಟ
ಕಾಣಾ! ರಾಮನಾಥ.

ಜಾತಿ ಜಂಗಮರ ವರ್ಚಸ್ಸು :

ಜಂಗಮ ಎನ್ನುವುದಕ್ಕೆ ತಮ್ಮದೇ ಆದ ಜಾತಿ ಆಧಾರಿತ ಸಂಕುಚಿತ ವ್ಯಾಖೆ ನೀಡಿ, ಅದನ್ನು ಪ್ರತಿಪಾದಿಸುತ್ತಾ ಇಂದು ಜಾತಿ ಜಂಗಮರಾಗಿರುವರು ಕೆಳಜಾತಿಕರಣದ ವಿರೋಧಿಗಳಾದ ಬ್ರಾಹ್ಮಣ-ಪುರೋಹಿತರಿಗಿಂತ ತಾವೇನು ಕಡಿಮೆ ಎಂದುಕೊಳ್ಳುತ್ತಾ ಲಿಂಗಾಯತ ಕೋಮಿನಲ್ಲಷ್ಟೆಯಲ್ಲದೆ ಇಡೀ ಸಮಾಜದಲ್ಲಿ ತಮ್ಮದೇ ಆದ ವರ್ಚಸ್ಸನ್ನು ಸ್ಥಾಪಿಸಿದ್ದಾರೆ. ಇವತ್ತಿಗೂ ವೀರಶೈವ-ಲಿಂಗಾಯತ ಮಠಗಳಲ್ಲಿ ಮಠಾಧೀಶನಾಗಬಯಸುವ ಅಭ್ಯರ್ಥಿಯ ಮೂಲ ಅರ್ಹತೆ- ಆತ ಜಾತಿ ಜಂಗಮನಾಗಿರಬೇಕು.

ಇಪ್ಪತ್ತೊಂದನೇಯ ಶತಮಾನದ ವಿಜ್ಞಾನ-ತಂತ್ರಜ್ಞಾನದ ಯುಗದಲ್ಲೂ ಕೂಡ, ಲಿಂಗಾಯತರು ಮತ್ತು ಇತರೆ ಜಾತಿಯವರು ಹಬ್ಬ ಹರಿದಿನಗಳಲ್ಲಿ ಜಾತಿ ಜಂಗಮರನ್ನು ಮನೆಗೆ ಆಹ್ವಾನಿಸುತ್ತಾರೆ. ಮುಗ್ಧ ಹಾಗೂ 'ಅಜ್ಞಾನ' ಜನರಿಂದ ತಮ್ಮ ಪಾದ ಪೂಜೆ ಮಾಡಿಸಿಕೊಳ್ಳುವ ಜಂಗಮರ ಈ ಆಚರಣೆಯು ಅವರ ನೈತಿಕತೆ ಮತ್ತು ಮಾನವಿಯತೆಯ ವಿನಾಶವನ್ನು ಪ್ರತಿಬಿಂಬಿಸುತ್ತದೆ. ಇವತ್ತಿಗೂ ಜಂಗಮರು, ಸ್ವಾಮಿಗಳು ಮತ್ತು ಮಠಾಧೀಶರು ಪಾದ ಪೂಜೆ ಮಾಡಿಸಿಕೊಂಡು ಭಕ್ತರು ಪಾದ ತೊಳೆದ ನೀರನ್ನು ಸೇವಿಸುವ ಅಮಾನವಿಯ ಆಚರಣೆಗಳು ನಾಗರೀಕ ಸಮಾಜದ ಅಸ್ತಿತ್ವವನ್ನು ಪ್ರಶ್ನಿಸುವಂತಿವೆ. ಕೆಲವೊಮ್ಮೆ 'ಪಂಚಪೀಠ 'ಪಂಚಪೀಠ' ಎಂದು ಕೂಗಾಡುವ ಜಾತಿ ಜಂಗಮರು ಕೇವಲ ಲಿಂಗಾಯತರ ಮನೆಯಲ್ಲಷ್ಟೆ ಪ್ರಸಾದ ಸ್ವೀಕರಿಸುತ್ತಾರೆ. ಇತರೆ ಜಾತಿಯವರ ಮನೆಗಳಲ್ಲಿ ಪಾದ ತೊಳೆಸಿಕೊಳ್ಳುತಾರೆಯೇ ಹೊರತು ಕೈ ತೊಳೆಯುವುದಿಲ್ಲ. ದಲಿತರ ಮನೆ ಪ್ರವೇಶಿಸುವುದನ್ನು ಕನಸಿನಲ್ಲಿಯೂ ಯೋಚಿಸದವರು ದಲಿತರಿಂದ ದವಸ ಧಾನ್ಯ, ಹಾಲು, ಆಕಳು, ಹಣ ಸ್ವೀಕರಿಸದಿರಲಾರರು. ಜಾತಿ ಜಂಗಮರ ಈ ದ್ವಿಮುಖತೆ ವೈದಿಕರಿಗಿಂತ ಭಿನ್ನವಾಗಿಲ್ಲ. ಕಾಯಕ ಮಾಡದೆ, ಈ ರೀತಿಯ ಆಚರಣೆಗಳನ್ನು ಜಾರಿಯಲ್ಲಿಡಬಯಸುವ ಕುರಿತು ದಾಸಿಮಯ್ಯ ಹೀಗೆ ಹೇಳುತ್ತಾರೆ:

ನೆರೆದರೆ ಗಣಂಗಳು
ಹರದರೆ ಕಂಚುಗಾರರು
ಲಿಂಗವ ಮಾರಿ ಉಂಬ ಭಂಗಾರರು
ತಮ್ಮ ತಳಿಗೆಯ ಕೊಂಡು
ಅನ್ಯರ ಮನೆಯಲುಂಬ
ಕುನ್ನಿಗಳೆನೆಂಬೆ? ರಾಮನಾಥ.

ಹಾಗೆಯೆ, ವೈದಿಕರ ದ್ವಿಮುಖತೆಯನ್ನು ಬಸವ ಈ ರೀತಿಯಾಗಿ ಪ್ರಶ್ನಿಸುತ್ತಾನೆ –

ಏನಯ್ಯ ವಿಪ್ರರು ನುಡಿದಂತೆ ನಡೆಯರು,
ಇದೆಂತಯ್ಯಾ?
ತಮಗೊಂದು ಬಟ್ಟೆ, ಶಾಸ್ತ್ರಕೊಂದು ಬಟ್ಟೆ!'

ಬಸವನ ಕಾಯಕ ತತ್ವವನ್ನು ಪಾಲಿಸದ ಜಾತಿ ಜಂಗಮರಿಗೆ ಮತ್ತು ಜಾತಿ ವರ್ಚಸ್ವಿಕರಣದಲ್ಲಿ ತೊಡಗಿಸಿಕೊಂಡಿರುವರಿಗೆ ಎಷ್ಟು ಸೂಕ್ತವಾಗಿ ಅನ್ವಯಿಸುತ್ತದೆ.

ಇರುವ ಒಂದು ಜಗತ್ತಿಗೆ ಎಷ್ಟು ಜಗದ್ಗುರುಗಳು?

ಜಗದ್ಗುರುಗಳ ಸಂಖ್ಯೆ ದಿನೆ ದಿನೆ ಕರ್ನಾಟಕದಲ್ಲಿ ಮಾತ್ರವಲ್ಲ ಇಡೀ ದೇಶದಲ್ಲಿಯೆ ನಾಗಲೋಟದಿಂದ ಬೆಳೆಯುತ್ತಿರುವುದು ಯಾವುದರ ಸೂಚನೆಯೊ ತಿಳಿಯುತ್ತಿಲ್ಲ. ಇಂದು ಜಾತಿಗೊಬ್ಬರಂತೆ ಜಗದ್ಗುರುಗಳಿದ್ದಾರೆ. ವಿಶೇಷವಾಗಿ ಉತ್ತರ ಕರ್ನಾಟಕದಲ್ಲಿ ಪ್ರಚಾರದಲ್ಲಿರುವ ಪಂಚಪೀಠಾಧಿಪತಿಗಳ ಶೋಷಣೆಗೆ ಕೊನೆಯೆಂದು? ಉತ್ತರವಿಲ್ಲ. ಸರ್ವಸಂಗ ಪರಿತ್ಯಾಗಿ ಲಿಂಗಾಯತ ಪಂಚಪೀಠ ಜಗದ್ಗುರುಗಳಿಗೆ ಚಿನ್ನದ ಕಿರೀಟ, ಹತ್ತೂ ಬೆರಳುಗಳಿಗೆ ಚಿನ್ನದ ಉಂಗುರುಗಳು, ಬೆಳ್ಳಿಯ ಸಿಂಹಾಸನ, ಸುವಾಸನೆ ಭರಿತ ದ್ರವ್ಯ, 'ಸೇವಕರು'- ಇವೆಲ್ಲ ವೈರಾಗ್ಯದ ಸಂಕೇತಗಳು! ಶಿವಲಿಂಗದಿಂದ ಹುಟ್ಟಿದೇವೆಂದು ಅವೈಜ್ಞಾನಿಕವಾಗಿ

ಹೇಳಿಕೊಳ್ಳುವ ಈ ಮಹಾಸ್ವಾಮಿಗಳೆಲ್ಲರು ಮುಗ್ಧ ಮತ್ತು ಮೂರ್ಖ ಭಕ್ತರಿಂದ ಅಡ್ಡ ಪಲ್ಲಕ್ಕಿ ಉತ್ಸವ ಮಾಡಿಸಿಕೊಳ್ಳುವುದು ಇಡೀ ನಾಗರೀಕ ಸಮಾಜ ತಲೆ ತಗ್ಗಿಸುವಂತೆ ಮಾಡಿದೆ. ಈ ರೀತಿಯ ಅಮಾನವಿಯ ಅಡ್ಡ ಪಲ್ಲಕ್ಕಿ ಉತ್ಸವಗಳಿಗೆ, ಇವರ ಮೌಢ್ಯ ಪ್ರವಚನಗಳಿಗೆ, ಕ್ರಿಯಾಹೀನ ಆಚರಣೆಗಳಿಗೆ– ಒಟ್ಟಾರೆ ಇವರ ಜಡಸಂಸ್ಕೃತಿಗೆ ಪ್ರಚಾರಕೊಡುವ ಮಾಧ್ಯಮಗಳ ಧ್ಯೇಯ ಅರ್ಥವಾಗುತ್ತಿಲ್ಲ.

ಜಾತಿವಾದ, ಮೂಲಭೂತವಾದ ಮತ್ತು ಬೌದ್ಧಿಕ ಸ್ವಾತಂತ್ರ್ಯ:

ಹನ್ನೆರಡನೆ ಶತಮಾನದ ಅನುಭವ ಮಂಟಪ ಮುಕ್ತ ಚರ್ಚೆಗೆ ಅವಕಾಶ ಒದಗಿಸಿತ್ತೆಂದು ನಮಗೆಲ್ಲ ತಿಳಿದಿದೆ. ಆದುದರಿಂದ ಅನುಭವ ಮಂಟಪ, ಶೋಷಕ ಸಾಮಂತ ವ್ಯವಸ್ಥೆಯ ವಿರುದ್ಧದ ಸಾಂಸ್ಕೃತಿಕ ಚಳುವಳಿಯನ್ನು ಸ್ಪಷ್ಟ ಸಿದ್ಧಾಂತ ಮತ್ತು ವೈಚಾರಿಕತೆಯ ತಳಹದಿಯ ಮೇಲೆ ನಿರೂಪಿಸಲು ಸಾಧ್ಯವಾಯಿತು. ಕಲ್ಯಾಣದ ಅಂದಿನ ಅನುಭವ ಮಂಟಪ ಎಲ್ಲಾ ಜಾತಿವರ್ಗಗಳ ಜನರಿಂದ ಕೂಡಿತ್ತು ಎಂಬುವುದು ಈಗ ಇತಿಹಾಸ ಮಾತ್ರ. ಅತ್ಯಂತ ವಿನಾಶಕಾರಿ ಬೆಳವಣಿಗೆಯೆಂದರೆ ವಿವಿಧ ಜಾತಿಯವರು ಶರಣರ ಹೆಸರಿನಲ್ಲಿ ಜಾತಿ ಸಂಘಟನೆಗಳನ್ನು ಕಟ್ಟಿಕೊಂಡು ಜಾತಿ ಅಸ್ಮಿತತೆಯನ್ನು ವಿಜೃಂಭಣೆಗೊಳಿಸುತ್ತಿವೆ. ಈ ಬೆಳವಣಿಗೆ ಕಲ್ಯಾಣ ಕ್ರಾಂತಿಯ ಮೂಲ ಆಶಯಕ್ಕೆ ಮತ್ತೊಂದು ಕೊಡಲಿ ಪೆಟ್ಟು ಎಂದೇ ಹೇಳಬೇಕು.

12ನೇ ಶತಮಾನದ ಅಪೂರ್ಣ ಕ್ರಾಂತಿ ನಡೆದು 21ನೆ ಶತಮಾನಕ್ಕೆ ಕಾಲಿಟ್ಟರು ದಲಿತರು ಇನ್ನೂ ಊರೊಳಗೆ ಕಾಲಿಡಲು ಸಾಧ್ಯವಾಗಿಲ್ಲ. ಇವತ್ತಿಗೂ ಬಹಳಷ್ಟು ಹಳ್ಳಿಗಳಲ್ಲಿ ದಲಿತರಿಗೆ ಊರೊಳಗಿನ ಬಾವಿ, ಗುಡಿ, ಹೋಟೆಲಗಳಿಗೆ ಪ್ರವೇಶವಿಲ್ಲ. ಆಗಾಗ ದಲಿತ ಕುಟುಂಬಗಳಗಳನ್ನು ಬಹಿಷ್ಕರಿಸುವಂತಹ ಘಟನೆಗಳು ಮರುಕಳಿಸುತ್ತಿವೆ. ಸರ್ಕಾರ ಕೂಡ ಅಂಗನವಾಡಿ ಶಾಲೆಗಳನ್ನು ದಲಿತರಿಗಾಗಿಯೆ ಬೇರೆ ಎನ್ನುವಂತೆ ಊರಹೊರಗೆ ತೆರೆದಿದೆ. ಇದಕ್ಕೆ ಕಾರಣಗಳೇನೆ ಇರಬಹುದು; ಆದರೆ ದಲಿತರನ್ನು ದೂರವಿಡುವ ಕುತಂತ್ರವನ್ನು ಅಲ್ಲಗಳೆಯಲಸಾಧ್ಯ. ದಲಿತ ಸಮುದಾಯಕ್ಕೆ ಸೇರಿದ ವಿದ್ಯಾವಂತರು, ಸಂಶೋಧನಾರ್ಥಿಗಳು, ಪ್ರಾಧ್ಯಾಪಕರು ಪ್ರಬಲ ಕೋಮಿನ ಲಿಂಗಾಯತರನ್ನು ಬಹುವಚನದಲ್ಲೆ ಮಾತನಾಡಿಸುತ್ತಾರೆ. ಆದರೆ ತಥಾಕಥಿತ ಮೇಲ್ಜಾತಿಯವರು ಒಂದಕ್ಷರದ ಜ್ಞಾನವಿರದಿದ್ದರೂ, ಕನಿಷ್ಠ ವಯಸ್ಸು/ವಿದ್ಯೆಗೆ ಮರ್ಯಾದೆ ಕೊಡದೆ, ಇಂದಿಗೂ ದಲಿತರನ್ನು ಏಕ ವಚನದಲ್ಲೆ ಸಂಬೋಧಿಸುವುದನ್ನು ಕಾಣಬಹುದು. ನಗರ ಮತ್ತು ಪಟ್ಟಣಗಳಲ್ಲಿ ದಲಿತರಿಗೆ ಲಿಂಗವಂತರು ಮನೆ ಬಾಡಿಗೆ ಕೊಡುವುದು ವಿರಳ. ಈ ಧೋರಣೆಗಳಲ್ಲಿ ಬದಲಾವಣೆ ತರಲು 'ಬಸವನುಯಾಯಿಗಳು, ಲಿಂಗಾಯತ ಸಂಘಟನೆಗಳು ಮತ್ತು ಮಠಾಧೀಶರು ಪ್ರಯತ್ನಿಸುತ್ತಿದ್ದಾರೋ ಬಸವಣ್ಣನೆ ಬಲ್ಲ.

ಕರ್ನಾಟಕಲ್ಲಿ ಇತ್ತೀಚಿನ ವರ್ಷಗಳಲ್ಲಿ ನಡೆದ ಘಟನೆಗಳು ವಯಕ್ತಿಕ ಬೌದ್ಧಿಕ ಸ್ವಾತಂತ್ಯದ ಅಸ್ತಿತ್ವವನ್ನು ಹುಡುಕುವಂತಾಗಿಸಿವೆ. 12ನೇ ಶತಮಾನದ ಅನುಭವ ಮಂಟಪ ಬೌದ್ಧಿಕ ಸ್ವಾತಂತ್ರ್ಯದ ಪರಮೋಚ್ಚ ಸ್ಥಿತಿಯನ್ನೂ ಮುಟ್ಟಿತ್ತು ಎನ್ನುವುದು ಈಗ ಇತಿಹಾಸ. ಅಣ್ಣ, ಅಲ್ಲಮ, ಅಕ್ಕ, ಅಥವಾ ಮತ್ತಾವುದೆ ವಚನಕಾರರು ವರ್ಚಸ್ಸನ್ನು ಸ್ಥಾಪಿಸುವ ಹಾಗೂ ಬೇರೆಯವರ ಬೌದ್ಧಿಕ ಸ್ವಾತಂತ್ರ್ಯವನ್ನು ನಿಷೇಧಿಸುವಂತಹ ಹೀನ ಕೆಲಸ ಮಾಡಿದ್ದಿಲ್ಲ. ಬಸವನ ವಚನಗಳಿಗೆ ತದ್ವಿರುದ್ಧ ಅಭಿಪ್ರಾಯವುಳ್ಳ ವಚನಗಳನ್ನು ಇತರರು ರಚಿಸಿದ್ದಿದೆ. ಅವುಗಳನ್ನು ಬಸವ ತಲೆಬಾಗಿ ಒಪ್ಪಿಕೊಂಡಿದ್ದು ಇದೆ. ಅಂದು ಸಾಧಿಸಲಾದ ಉದಾರ ಮತ್ತು ಪ್ರಜಾಸಸ್ತಾತ್ಮಕ ಪರಿಧಿಯನ್ನು ಪ್ರಜಾಪ್ರಭುತ್ವದಡಿಯಲ್ಲಿ ಇಲ್ಲವಾಗಿರುವುದು ವಿಷಾದನಿಯ.

ಸಂವಿಧಾನ ಕೊಟ್ಟಿರುವ ಮತ್ತು ಪ್ರಜಾಸತ್ತಾತ್ಮಕ ವ್ಯವಸ್ಥೆಯ ಮೂಲ ತತ್ವಗಳಾದ ವಾಕ್ ಸ್ವಾತಂತ್ರ್ಯದ ಮೇಲೆ ಬುರ್ಜ್ವಾ ರಾಜ್ಯದ ನಿಷೇಧ ಮುಂದುವರೆದಿದೆ. ಶಿವಾಜಿ ಕುರಿತ ಪುಸ್ತಕದ ಮೇಲೆ ಮಹಾರಾಷ್ಟ್ರ ಸರಕಾರದ ನಿರ್ಬಂದನೆ, ತಸ್ಲಿಮಾ ನಸ್ರಿನ್‌ಗೆ ಭಾರತ ಬಿಡಲು ಕಾರಣವಾದ ತಥಾಕಥಿತ 'ಜಾತ್ಯಾತೀತ' ಸರಕಾರಗಳು, ಕಲಾವಿದರ ಕೃತಿಗಳ ಮೇಲಿನ ಹಲ್ಲೆಗಳು, ನಾಚಿಕಗೇಡು ಸರಕಾರಗಳ ಅವಕಾಶವಾದಿತನ ಮತ್ತು ಇಬ್ಬದಿತನವನ್ನು ತೋರಿಸುತ್ತದೆ. ಕರ್ನಾಟಕ ಘನ ಸರ್ಕಾರ ಇದರಿಂದ ಹೊರತಾಗಿಲ್ಲ. ಆದುದರಿಂದಲೆ ರಾಜ್ಯದಲ್ಲಿ ಪಠ್ಯದಿಂದ ಲೇಖಕರ ಪುಸ್ತಕಗಳನ್ನು ತೆಗೆಸಿಹಾಕುವ, ಲೇಖಕರ ಮೇಲಿನ ಹಲ್ಲೆ, ಅವರ ಕೃತಿಗಳನ್ನು ಮುಟ್ಟಗೋಲು ಹಾಕುವಂತಹ ಘಟನೆಗಳು ಮರುಕಳಿಸುತ್ತಿವೆ.

ಬಸವಣ್ಣನ ಜಾತಿ ಮೂಲ ಕುರಿತ ಪುಸ್ತಕದ ವಿರುದ್ಧ ಮಠಾಧೀಶರು ಮತ್ತು ಕೆಲವು ಸಂಘ ಟನೆಗಳು ಬೀದಿಗಿಳಿದು ಮಾಡಿದ ಗಲಾಟೆಗೆ ಮಣಿದ ಘನ ಸರ್ಕಾರ ಪುಸ್ತಕದ ಮೇಲೆ ನಿಷೇಧ ಹೇರಿ ಸರಕಾರ ಪ್ರತಿ ನಿಧಿಸುವುದು ಮೂಲಭೂತವಾದಿಗಳನ್ನೆ ಹೊರತು ಜನ ಸಾಮಾನ್ಯರನಲ್ಲ ಎಂಬುದು ಗೊತ್ತಾಗುತ್ತದೆ. ಇದು ಪ್ರಜಾ ಪ್ರಭುತ್ವ ವ್ಯವಸ್ಥೆಗೆ ಕಪ್ಪು ಚುಕ್ಕೆ. ಧರ್ಮಕಾರಣ, ಮಹಾ ಚೈತ್ರದಿಂದ ಆನುದೇವ...ದ ವರೆಗೆ ಜಾತಿ ಮೂಲಭೂತ ವಾದಿಗಳು ಮಾಡಿರುವುದೆಲ್ಲವು ಬಸವ ತತ್ವಕ್ಕೆ ಅಪಚಾರ. ಬಸವನನ್ನು ಬಂಡವಾಳವಾಗಿಸಿಕೊಂಡು ಸದಾ ಜಾತಿ ವರ್ಚಸ್ವಿಕರಣದ ಲಾಭಕ್ಕಾಗಿ ಹಾತೊರೆಯುವ ಸಂಘಟನೆಗಳ ನಿಲುವು ಸಮರ್ಥನಿಯವಲ್ಲ.

> **ಬದಲಾಗುತ್ತಿರುವ ಆರ್ಥಿಕ ಸಂಬಂಧಗಳ ಪರಿಣಾಮವಾಗಿ ಮೇಲ್ವರ್ಗದ ಲಿಂಗಾಯತರು ಕೆಳವರ್ಗದ ಲಿಂಗಾಯತರನ್ನು ಶೋಷಿಸುವುದು ಗೊತ್ತಿರುವ ವಿಷಯ. ಗ್ರಾಮೀಣ ಎಲಿಟ, ನಗರ ಮೂಲದ ಮೇಲ್ವರ್ಗ ಮತ್ತು ವಿಷೇಶವಾಗಿ ನವ ಮಧ್ಯಮ ವರ್ಗ ಜಾತಿಯನ್ನು ಮುಂದಿಟ್ಟುಕೊಂಡು ಕೆಳವರ್ಗದ ಜನ ಎಚ್ಚೆತ್ತುಕೊಳ್ಳದಂತೆ ಮಾಡಲು ಮತೀಯ ಸಂಘಟನೆಗಳನ್ನು ಮತ್ತು ಮಠಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಹುಟ್ಟು ಹಾಕುತ್ತಿವೆ. ಬಡ ನಿರುದ್ಯೋಗಿ ಯುವಕರನ್ನು ಜಾತಿ ಅಸ್ಮಿತೆಯ ನೆಪದಲ್ಲಿ ತಮ್ಮ ವರ್ಗ ಹಿತಾಸಕ್ತಿಗಳಿಗಾಗಿ ಬಳಸಿಕೊಳ್ಳುತ್ತಿವೆ. ಕೆಳವರ್ಗದ ಲಿಂಗಾಯತರು ತಮ್ಮ ಜಾತಿಯವರಿಂದಲು ಶೋಷಿತರಾಗುತ್ತಿದ್ದರು ತಿಳಿಯದೆ ಜಾತಿ ಅಂಧಕಾರದಲ್ಲಿ ತಮ್ಮನ್ನು ಶೋಷಿತ ವರ್ಗಗಳಾದ ಕೂಲಿ–ಕಾರ್ಮಿಕ ಮತ್ತು ದಲಿತ ಸಮುದಾಯದೊಂದಿಗೆ ಗುರುತಿಸಿಕೊಳ್ಳದೆ ಜಾತಿ ಅಸ್ಮಿತೆಯೊಂದಿಗೆ ಗುರುತಿಕೊಳ್ಳುತ್ತಿದ್ದಾರೆ.**

ಬಸವನ ತತ್ವಗಳು ಮುಖ್ಯವೆ ಹೊರತು ಆತನ ಜಾತಿಯಲ್ಲ ಎಂಬುದು ತಿಳಿದುಕೊಳ್ಳುವುದು ಅತಿ ಮುಖ್ಯ ಆಯಗಾರರನ್ನು ಸಮರ್ಥಿಸಿಕೊಂಡಿ ದಷ್ಟಯಲ್ಲದೆ ತಾನು ಕೆಳ ಜಾತಿ ಮತ್ತು ಕೆಳ ವರ್ಗದ ಸ್ತ್ರಿ ಪುರುಷರ ಸಂಗಕ್ಕೆ ಹುಟ್ಟಿದವನೆಂದು ಸ್ವತಃ ಬಸವನೆ ತನ್ನ ಈ ವಚನದಲ್ಲಿ ಹೇಳಿಕೊಂಡಿದ್ದಾನೆ:

ಚೆನ್ನಯ್ಯನ ಮನೆಯ ದಾಸನ ಮಗನು
ಕಕ್ಕಯ್ಯನ ಮನೆಯ ದಾಸಿಯ ಮಗಳು
ಇವರಿಬ್ಬರು ಹೊಲದಲು ಬೆರಣಿಗೆ ಹೋಗಿ
ಸಂಗವ ಮಾಡಿದರು
ಇವರಿಬ್ಬರಿಗೆ ಹುಟ್ಟಿದ ಮಗನಾನು
ಕೂಡಲ ಸಂಗಮ ದೇವರ ಸಾಕ್ಷಿಯಾಗಿ

ಈ ವಚನದ ಕುರಿತು ಜಾಣ ಕುರುಡು–ಕಿವುಡು ಯಾಕೆ? ಬಸವ ಮೇಲ್ಜಾತಿಯವನೆಂದು ಪ್ರೋಜೆಕ್ಟ ಮಾಡುವುದು ಸಲ್ಲದು. ಅವನ ಮೇಲ್ಜಾತಿ ಬಗ್ಗೆ ಯಾವುದೆ ಬಲವಾದ ಐತಿಹಾಸಿಕ ಪುರಾವೆಗಳಿಲ್ಲ. 'ಉತ್ತಮ ಕುಲದಲ್ಲಿ ಹುಟ್ಟಿದವನೆಂಬ ಕಷ್ಟತನದ ಹೊರೆಯ ಹೊರಿಸದಿರಯ್ಯ' ಎಂದು ಸ್ವತಃ ಬಸವನೆ ಹೇಳಿರಬೇಕಾದರೆ ಅವನಿಗೆ ಬೇಕಾಗದ ಹೊರೆಯನ್ನು ಹೊರೆಸಲು ಗಲಾಟೆ ಮಾಡಿದ್ದರ ಉದ್ದೇಶ ಮತ್ತು ಮಾನಸಿಕತೆ ಹೀನವಲ್ಲವೆ? ಇಂಥ ಲಿಂಗಾಯತ ಜಾತಿ ಮೂಲಭೂತವಾದಿಗಳು ಕೋಮು ಸಂಘಟನೆಗಳೊಂದಿಗೆ ಸೇರಿ ಬಸವ ತತ್ವದ ಕೇಸರಿಕರಣದ ಕಾರ್ಯದಲ್ಲಿ ತೊಡಗಿದ್ದಾರೆ. ಕೋಮುವಾದಿಗಳು ಈಗಾಗಲೆ ಸ್ವಾಮಿ ವಿವೇಕಾನಂದ, ಶಿವಾಜಿ, ರಾಣಾ ಪ್ರತಾಪರನ್ನು ಕೇಸರಿಕರಣಗೊಳಿಸಿವೆ. ಭಗತ ಸಿಂಗ ವಿಷಯದಲ್ಲಿ ಅವರು ಸಂಪೂರ್ಣ ಯಶಸ್ವಿ ಸಾಧಿಸದಿರುವುದು ಕೊಂಚ ನೆಮ್ಮದಿಯ ವಿಷಯ. ಪ್ರಸ್ತುತ ಬೆಳವಣಿಗೆ ಮತ್ತು ಲಿಂಗಾಯತ ಸಂಘಟನೆ ಮತ್ತು ಮಠಾಧೀಶರ ಬ್ರಾಹ್ಮಣ ಮನಸ್ಥಿತಿಯ ವರ್ತನೆ ಬಸವ ತತ್ವವನ್ನು ಕೇಸರಿಕರಣಗೊಳಿಸಿ ಬಸವನ್ನು ಹನ್ನೆರಡನೆ ಅವತಾರಕ್ಕೇರಿಸುವ ದಿನಗಳು ದೂರವಿಲ್ಲ.

ಬಸವಾದಿಗಳು ಎಂದು ಪ್ರಚಾರದಲ್ಲಿರುವ ಕೆಲವು ಕೇಂದ್ರಗಳು ಮೂಢನಂಬಿಕೆ, ಮೂರ್ತಿಪೂಜೆ, ಕಂದಾಚಾರಗಳ ಕುರಿತು ಜನರಲ್ಲಿ ಜಾಗೃತಿ ಮೂಡಿಸುತ್ತಿರುವುದು ಸ್ವಾಗತಾರ್ಹ. ಆದರೆ ಈ ಕೆಂದ್ರಗಳು ಜಾತಿ ಅಸಮಾನತೆಯ ಬಗ್ಗೆ ಗಂಭೀರ ಮೌನ ತಾಳಿವೆ. ಬಸವನ ವೈಭವೀಕರಣ, ಲಿಂಗಧಾರಣೆ, ವಿಭೂತಿ, ದಾರ ರುದ್ರಾಕ್ಷಿ ಮತ್ತು ತಮ್ಮ ಅನುಕೂಲಕ್ಕೆ ತಕ್ಕ ವಚನ ಹಾಗು ಅವುಗಳ ವ್ಯಾಖ್ಯಾನ ಪ್ರಚಾಪಡಿಸುವ ಬಸವ ಕೇಂದ್ರಗಳು ಲಿಂಗ ಪೂಜೆಗಿಂತ ಸಮಬಾಳ್ವೆಯ, ಮೇಲ್ಜಾತಿ–ಮೇಲ್ವರ್ಗಗಳ ಟೊಳ್ಳುತನ ಬಿಚ್ಚಿಡುವ ವಚನಗಳ ಕುರಿತು ಮಾತನಾಡದಿರುವುದು ಯಾಕೆಂದು ಅರ್ಥವಾಗದಿರದು.

ಜಾಗತೀಕರಣ ಮತ್ತು ಮತೀಯವಾದ:

ದ್ವಿಮುಖತೆ ಮತ್ತು ಮತೀಯವಾದದ ನಿಲುವುಗಳನ್ನು ತಳೆಯುವ ಸಂಘಟನೆಗಳು ಮತ್ತು ಮಠಾಧೀಶರುಗಳ ಪ್ರಾಬಲ್ಯ ಇತ್ತೀಚಿನ ದಿನಗಳಲ್ಲಿ ಹೆಚ್ಚಾಗಲು ಬಹಳಷ್ಟು

ಕಾರಣಗಳಿವೆ. ಇಲ್ಲಿ ಜಾಗತೀಕರಣ ಮತ್ತು ಜಾತಿ ವರ್ಚಸ್ಸಿನ ಕಾರಣಗಳನ್ನು ಸಂಕ್ಷಿಪ್ತವಾಗಿ ವಿಶೇಷಿಸಲಾಗಿದೆ. 1980 ರಿಂದೀಚೆಗೆ ಜಾಗತೀಕರಣದ ಅಲೆಗಳು ದೇಶವನ್ನು ಬಡೆಯ ಹತ್ತಿದವು. ಅದೇ ಸಂದರ್ಭದಲ್ಲಿ ಕಾವು ಕಳೆದುಕೊಂಡ ದಲಿತ ಚಳುವಳಿಯ ಸ್ಥಾನವನ್ನು ಕೋಮುಸಂಘಟನೆಗಳು-ಪ್ರಬಲ ಕೋಮುಗಳು(ಇತರೆ ಹಿಂದುಳಿದ ಜಾತಿಗಳು ಒಳಗೊಂಡು)ಆಕ್ರಮಿಸಿಕೊಂಡು ತಮ್ಮ ಸ್ಥಾನಗಳನ್ನು ಭದ್ರಪಡಿಸಿಕೊಂಡವು. ಜಾಗತೀಕರಣದ ಪರಿಣಾಮವಾಗಿ ತಂತ್ರಜ್ಞಾನದೊಂದಿಗೆ ಹೊಸ ವ್ಯಾಪಾರ ಮತ್ತು ಉದ್ಯೋಗವಕಾಶಗಳು(ಅಲ್ಪಾವಧಿಯಲ್ಲಿ ಇದು ಸಾಧ್ಯ) ಒದಗಿಬಂದವು. ಶೂದ್ರ ಸಮುದಾಯಾಗಳಾದ ಲಿಂಗಾಯತ - ವಕ್ಕಲಿಗರಲ್ಲಿ ಯಜಮಾನಿಕೆವುಳ್ಳವರು ಈಗಾಗಲೆ ಉನ್ನತ ವಿದ್ಯಾಭ್ಯಾಸ ಹೊಂಧಿದರ ಪರಿಣಾಮ ಹೊಸ ಆರ್ಥಿಕ ಅವಕಾಶಗಳನ್ನು ಬಳಸಿಕೊಳ್ಳಲು ಸಮರ್ಥರಾಗಿದ್ದಾಗಿದ್ದರು. ತತ್ಪರಿಣಾಮವಾಗಿ ನಗರ ಪ್ರದೇಶದಲ್ಲಿ ನವ ಬುಜ್ವಾ-ಮಧ್ಯಮವರ್ಗ ಹೊರಹೊಮ್ಮುತ್ತಿದೆ. ಸಹಜವಾಗಿಯೆ ಈ ವರ್ಗ ಜಾಗತೀಕರಣವನ್ನು ಸಮರ್ಥಿಸಿಕೊಳ್ಳುತ್ತದೆ.

ಸಾರ್ವಜನಿಕ ಕ್ಷೇತ್ರಗಳಲ್ಲಿ ಮೆಲ್ಪದರಿನ ಹುದ್ದೆಗಳು ಬ್ರಾಹ್ಮಣರ ಪಾಲಾದರೆ ಮಧ್ಯಮ ಪದರಿನವುಗಳಯಲ್ಲಿ ಪ್ರಬಲ ಕೋಮುಗಳು ಹಂಚಿಕೊಳ್ಳುತ್ತಿವೆ. ಖಾಸಗಿ ಕ್ಷೇತ್ರದಲ್ಲಿಯು ಇದೇ ಸ್ಥಿತಿ. ನಗರದಲ್ಲಿ ವಾಸಿಸುತ್ತಿರುವ ಲಿಂಗಾಯತ ಮೇಲ್ವರ್ಗ ಮತ್ತು ನವ ಮಧ್ಯಮ ವರ್ಗ ತನ್ನ ವರ್ಗ ಹಿತಾಸಕ್ತಿಗಾಗಿ 'ಮೀಸಲಾತಿಯಿಂದಾಗಿ ಉದ್ಯೋಗಳು ದಲಿತ ಮತ್ತು ಇತರೆ ಹಿಂದುಳಿದವರ ಪಾಲಾಗುತ್ತಿವೆ. ನಮ್ಮ ಜಾತಿಯವರಿಗೆ ಯಾವುದೆ ಅವಕಾಶಗಳಿಲ್ಲ' ಎನ್ನುವ ಮಿಥ್ಯೆಯನ್ನು ಕೆಳವರ್ಗದ ಲಿಂಗಾಯತರಲ್ಲಿ ಬಿತ್ತಿ ಅವರನ್ನು ಮೀಸಲಾತಿ ವಿರೋಧಿಗಳನ್ನಾಗಿ ಮಾಡುವ ಸಂಚು ಎನ್ನುವುದು ಗೊತ್ತಾಗುತ್ತದೆ. ಮೇಲ್ವರ್ಣಗಳ ಹಿಡಿತದಲ್ಲಿರುವ ರಾಜಕೀಯ, ಆರ್ಥಿಕ, ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಹೆಚ್ಚಿನ ಪಾಲು ಪಡೆದು ತನ್ನ ಹಿತಾಸಕ್ತಿಗಳನ್ನು ರಕ್ಷಿಸಿಕೊಳ್ಳಲು ಶೂದ್ರ ಅಸ್ಮಿತೆಯನ್ನು ನವ ಮಧ್ಯಮ ಮತ್ತು ಮೇಲ್ವರ್ಗ ಬಳಸಿಕೊಳ್ಳುತ್ತಿದೆ. ತಾವು ಕೂಡಾ ಬ್ರಾಹ್ಮಣಶಾಹಿ ವ್ಯವಸ್ಥೆಯಿಂದ ಶೋಷಣೆಗೆ ಒಳಗಾದವರೆಂದು ಹೇಳಿಕೊಳ್ಳುವ ಈ ವರ್ಗ ದಲಿತರ ವಿಷಯ ಬಂದಾಗ ಮೇಲ್ಜಾತಿಯವರಾಗಿ ಬಿಡುತ್ತಾರೆ.

ಬದಲಾಗುತ್ತಿರುವ ಆರ್ಥಿಕ ಸಂಬಂಧಗಳ ಪರಿಣಾಮವಾಗಿ ಮೇಲ್ವರ್ಗದ ಲಿಂಗಾಯತರು ಕೆಳವರ್ಗದ ಲಿಂಗಾಯತರನ್ನು ಶೋಷಿಸುವುದು ಗೊತ್ತಿರುವ ವಿಷಯ. ಗ್ರಾಮೀಣ ಎಲಿಟ, ನಗರ ಮೂಲದ ಮೇಲ್ವರ್ಗ ಮತ್ತು ವಿಶೇಶವಾಗಿ ನವ ಮಧ್ಯಮ ವರ್ಗ ಜಾತಿಯನ್ನು ಮುಂದಿಟ್ಟುಕೊಂಡು ಕೆಳವರ್ಗದ ಜನ ಎಚ್ಚೆತ್ತುಕೊಳ್ಳದಂತೆ ಮಾಡಲು ಮತೀಯ ಸಂಘಟನೆಗಳನ್ನು ಮತ್ತು ಮಠಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಹುಟ್ಟು ಹಾಕುತ್ತಿವೆ. ಬಡ ನಿರುದ್ಯೋಗಿ ಯುವಕರನ್ನು ಜಾತಿ ಅಸ್ಮಿತೆಯ ನೆಪದಲ್ಲಿ ತಮ್ಮ ವರ್ಗ ಹಿತಾಸಕ್ತಿಗಳಿಗಾಗಿ ಬಳಸಿಕೊಳ್ಳುತ್ತಿವೆ. ಕೆಳವರ್ಗದ ಲಿಂಗಾಯತರು ತಮ್ಮ ಜಾತಿಯವರಿಂದಲು ಶೋಷಿತರಾಗುತ್ತಿದ್ದರು ತಿಳಿಯದೆ ಜಾತಿ ಅಂಧಕಾರದಲ್ಲಿ ತಮ್ಮನ್ನು ಶೋಷಿತ ವರ್ಗಗಳಾದ ಕೂಲಿ-ಕಾರ್ಮಿಕ ಮತ್ತು ದಲಿತ ಸಮುದಾಯದೊಂದಿಗೆ ಗುರುತಿಸಿಕೊಳ್ಳದೆ ಜಾತಿ ಅಸ್ಮಿತೆಯೊಂದಿಗೆ ಗುರುತಿಕೊಳ್ಳುತ್ತಿದ್ದಾರೆ. ಈ ರೀತಿಯಾಗಿ ಮೇಲ್ವರ್ಗದ ಹಿತಾಸಕ್ತಿ, ಜಾತಿ ಅಸ್ಮಿತತೆ ಮತ್ತು ವರ್ಚಸ್ವಿಕರ್ಣದಲ್ಲಿ ಬಸವ ಸಂಕೇತವಾಗಿ ಪ್ರಬಲ ವರ್ಗ ತನ್ನ ಹಿತಾಸಕ್ತಿಗಳ ರಕ್ಷಣೆಯ ಸಾಧನವಾಗಿಸಿಕೊಂಡಿದೆ. ತತ್ವಗಳು ಇಲ್ಲಿ ಗೌಣ.

> **ಹನ್ನೆರಡನೆ ಶತಮಾನದ ಅನುಭವ ಮಂಟಪ ಮುಕ್ತ ಚರ್ಚೆಗೆ ಅವಕಾಶ ಒದಗಿಸಿತ್ತೆಂದು ನಮಗೆಲ್ಲ ತಿಳಿದಿದೆ. ಆದುದರಿಂದ ಅನುಭವ ಮಂಟಪ, ಶೋಷಕ ಸಾಮಂತ ವ್ಯವಸ್ಥೆಯ ವಿರುದ್ಧದ ಸಾಂಸ್ಕೃತಿಕ ಚಳುವಳಿಯನ್ನು ಸಿದ್ಧಾಂತ-ವೈಚಾರಿಕತೆಯ ತಳಹದಿಯ ಮೇಲೆ ನಿರೂಪಿಸಲು ಸಾಧ್ಯವಾಯಿತು. ಕಲ್ಯಾಣದ ಅಂದಿನ ಅನುಭವ ಮಂಟಪ ಎಲ್ಲಾ ಜಾತಿ ವರ್ಗಗಳ ಜನರಿಂದ ಕೂಡಿತ್ತು ಎಂಬುವುದು ಈಗ ಇತಿಹಾಸ ಮಾತ್ರ ಅತ್ಯಂತ ವಿನಾಶಕಾರಿ ಬೆಳವಣಿಗೆಯೆಂದರೆ ವಿವಿಧ ಜಾತಿಯುವರು ಶರಣರ ಹೆಸರಿನಲ್ಲಿ ಜಾತಿ ಸಂಘಟನೆಗಳನ್ನು ಕಟ್ಟಿಕೊಂಡು ಜಾತಿ ಅಸ್ಮಿತತೆಯನ್ನು ವಿಜೃಂಭಣೆಗೊಳಿಸುತ್ತಿವೆ.**

ದಲಿತರ ಹೊಸ ಹೆಜ್ಜೆಯೊಂದಿಗೆ.....

ಲಿಂಗಾಯತ ಮತ್ತು ವಕ್ಕಲಿಗ ಸಮುದಾಯಗಳು ರಾಜಕೀಯ, ಆರ್ಥಿಕ ಮತ್ತು ಸಾಂಸ್ಕೃತಿಕ ಕ್ಷೇತ್ರದ ಮೇಲೆ ಹಿಡಿತ ಸಾಧಿಸುತ್ತಿವೆ. ಮನುಸಂಸ್ಕೃತಿಯ ಪ್ರಮುಖ ಏಜೆಂಟರಾದ ಬ್ರಾಹ್ಮಣ್ಯ, ಈ ಎರಡು ಸಮುದಾಯಗಳು ಮತ್ತು ದಲಿತರ ನಡುವಿನ ಘರ್ಷಣೆಯಲ್ಲಿ ಸಮಾಜದ ಮೇಲಿನ ತನ್ನ ಹಿಡಿತ ಬಿಗಿಗೊಳಿಸುವ ದಾರಿ ಹುಡುಕುತ್ತಿರುವ ಈ ಸಂದರ್ಭದಲ್ಲಿ ದಲಿತ ಸಂಘಟನೆಗಳು ಬಹು ಮುಖ್ಯ ಪಾತ್ರ ಪಡೆದುಕೊಂಡಿವೆ. ಆದರೆ ದಲಿತ ಚಳುವಳಿ ದಿಕ್ಕು ತಪ್ಪಿರುವ ಈ ದಿನಗಳಲ್ಲಿ ಈ ಪಾತ್ರ ಯಾರು ವಹಿಸಬೇಕು? ಜಾಗತೀಕರಣ ತೀವ್ರವಾಗಿ ಹರಡುತ್ತಿರುವ ಈ ಸಮಯದಲ್ಲಿ ದಲಿತ ಸಂಘಟನೆಗಳು ತಮ್ಮ ಭಿನ್ನಾಭಿಪ್ರಾಯಗಳನ್ನು ಬದಿಗೊತ್ತಿ ಎಚ್ಚೆತ್ತುಕೊಳ್ಳದಿದ್ದರೆ ಜಾಗತೀಕರಣದ ಲಾಭಗಳು ಮೇಲ್ವರ್ಗ-ಮೇಲ್ಜಾತಿಯ ಪಾಲಾಗಿ ಅದರ ದುಷ್ಪರಿಣಾಮಕ್ಕೆ ಪ್ರಥಮ ಬಲಿಪಶುಗಳಾಗುವುದು ದಲಿತರು. ದಲಿತ ಚಳುವಳಿ ಇಂದು ಮೀಸಲಾತಿ, ವಸತಿ ನಿಲಯ, ಶಿಷ್ಯವೇತನ ಮತ್ತು ಕೆಳದರ್ಜೆಯ ಕೆಲ ನೌಕರಿಗಳಿಗೆ ಸೀಮಿತವಾಗುತ್ತಿದೆ.

ಮೀಸಲಾತಿ ದಲಿತ ಚಳುವಳಿ ಪ್ರಮುಖ ಅಂಶವೆ ಹೊರತು ಅದೇ ಚಳುವಳಿಯಲ್ಲ. ಭೂಮಿ ಉತ್ಪಾದಕತೆ ಮೌಲ್ಯದಿಂದ ವಿನಿಮಯ ಮೌಲ್ಯವಾಗಿ ಮಾರ್ಪಾಡಾಗುತ್ತಿದೆ. ಆದುದರಿಂದ ಭೂಮಿಗಾಗಿ ಹೋರಾಟ ಹಿಂದೆಂದಿಗಿಂತಲೂ ಇಂದು ಪ್ರಮುಖವಾಗಿದೆ. ಜಾಗತೀಕರಣದ ಪರಿಣಾಮವಾಗಿ ಉಳುವ ಭೂಮಿ ವಿಶೇಷ ಆರ್ಥಿಕ ವಲಯ ಮತ್ತು ಕೈಗಾರಿಕೆ ನೆಪದಲ್ಲಿ ಬಂಡವಾಳಶಾಹಿಗಳ ಪಾಲಾಗುತ್ತಿದೆ. ಭೂಸುಧಾರಣೆಗಳು ಅಪ್ರಸ್ತುತ ಎನ್ನುವವಾದ ಬಲಗೊಳ್ಳುತ್ತಿದೆ. ಪಂಚವಾರ್ಷಿಕ ಯೋಜನೆಗಳು ಈ ಕುರಿತು ಮೌನ ವಹಿಸಿವೆ. ಇಂಥ ಸಂದರ್ಭದಲ್ಲಿ ದಲಿತರಿಗಾಗಿ ಭೂಮಿ ಹೋರಾಟವನ್ನು ದಲಿತ ಸಂಘಟನೆಗಳು ಮರೆತಂತಿವೆ. ಮೀಸಲಾತಿಯನ್ನು ಸಂಪೂರ್ಣ ಕಾರ್ಯರೂಪದಲ್ಲಿ ತರುವುದು, ಹೆಚ್ಚಿನ ಉದ್ಯೋಗವಕಾಶಗಳು, ಉನ್ನತ ಶಿಕ್ಷಣ, ಸಾಮಾಜಿಕ ಸಮಾನತೆ ಮತ್ತು ಮಾನವ ಹಕ್ಕುಗಳ ರಕ್ಷಣೆ, ಮತ್ತು ರಾಜಕೀಯ ಸ್ವಾತಂತ್ರ್ಯ ದಲಿತ ಚಳುವಳಿಯ ಪ್ರಮುಖ ಅಂಶಗಳಾಗಬೇಕೆಂಬುದು ಒಂದು ಆಶಯ.

ಮೇಲ್ಜಾತಿ-ಮೇಲ್ವರ್ಗದ ಶೋಷಣೆಯ ಸಾಧನವಾದ ಬುರ್ಜ್ವಾ ರಾಜ್ಯದ ವಿರುದ್ಧದ ಹೋರಾಟ ಅತ್ಯಂತ ಕಠಿಣ. ದಲಿತ ಚಳುವಳಿ ಈ ಹಾದಿಯನ್ನು ತುಳಿದು ಪ್ರಬಲರ ಪಾಬಲ್ಯದ ಹುಟ್ಟಡಗಿಸಿ ತಮ್ಮ ಜನ್ಮಸಿದ್ಧ ಹಕ್ಕುಗಳನ್ನು ಪಡೆಯುವ ಕಾಲ ಬಂದೊಗಿದೆ. ಹರಳಯ್ಯ - ಚೆನ್ನಯ್ಯ ನೇತೃತ್ವದಲ್ಲಿ ಹನ್ನೇರಡನೆ ಶತಮಾನದ ಕಲ್ಯಾಣದ ಸಾಂಸ್ಕೃತಿಕ ಚಳುವಳಿ ರಾಜಕೀಯ ಚಳುವಳಿಯಾಗಿ ಪರಿವರ್ತನೆಗೊಳ್ಳುವಲ್ಲಿ ವಿಫಲವಾಯಿತು. ಅದನ್ನು ಪೂರ್ಣಗೊಳಿಸುವ ಜವಾಬ್ದಾರಿ ದಲಿತ ಸಂಘಟನೆಗಳ ಮೇಲಿದೆ. ಬಸವನ ಸಮಯದಲ್ಲಿ ನಗರ ವಾಸಿ ದಲಿತರಿಗೆ ಆ ಕ್ರಾಂತಿ ಸೀಮಿತವಾಗಿತ್ತು. ಹೊಸ ದಲಿತ ಚಳುವಳಿ ಹಳ್ಳಿಯಲ್ಲಿರುವ ಶೋಷಿತರನ್ನು ತಲುಪಿ ಅವರನ್ನು ಮುಖ್ಯವಾಹಿನಿಗೆ ತಂದು ಚಳುವಳಿಯನ್ನು ಕ್ರಾಂತಿಯನ್ನಾಗಿಬೇಕಾಗಿದೆ.

ದಲಿತ ಮುಖಂಡತ್ವದಲ್ಲಿ ಪ್ರಾರಂಭವಾಗುವ ನವ ಚಳುವಳಿಯಲ್ಲಿ ಲಿಂಗಾಯತ ಸಂಘಟನೆಗಳು ರಚನಾತ್ಮಕವಾಗಿ ಕೆಲಸ ಮಾಡಲು ಸಾಧ್ಯವಿದೆ. ಅಲ್ಲದೆ ಬಸವ ಕೇಂದ್ರಗಳು, ಮಠಾಧೀಶರು ನಿಜವಾಗಿ ಬಸವ ತತ್ವದಲ್ಲಿ ನಂಬಿಕೆಯಿದ್ದರೆ ತಮ್ಮ ಸಂಘಟನೆಗಳಲ್ಲಿ ಎಲ್ಲಾಜಾತಿ-ವರ್ಗಗಳ ಜನರನ್ನು ಸೇರಿಸಿ ನೇತೃತ್ವವನ್ನು ದಲಿತರಿಗೆ ವಹಿಸಲಿ. ಮಠಾಧೀಶರು ದಲಿತ ಮತ್ತು ಹಿಂದುಳಿದ ಸಮುದಾಯಗಳಿಂದ ತಮ್ಮ ಉತ್ತಾಧಿಕಾರಿಗಳನ್ನು ಆಯ್ಕೆಮಾಡುವುದು ಅವಶ್ಯಕ. ದಲಿತ-ಶೋಷಿತ ವರ್ಗ ಮತ್ತು ಪ್ರಭುತ್ವಗಳ ನಡುವಿನ ಹೋರಾಟದಲ್ಲಿ ಮಂತ್ರಿಪದವಿ ಅಡ್ಡಬಂದಾಗ ರಾಜ್ಯದ ಪರ ವಹಿಸದ ಬಸವ, ಪದವಿ ತ್ಯಜಿಸಿ ಶೋಷಿತರ ಪರ ನಿಂತ.

ಲಿಂಗಾಯತ ಮಠಾಧೀಶರಿಗ ಕನಿಷ್ಠ ಕನ್ಸೈನ್ಸ ಇದ್ದರೆ ಕರ್ನಾಟಕ ಸರ್ಕಾರ, ಬಂಡವಾಳ ಶಾಹಿಗಳು ಮತ್ತು ಇತರೆ ಶೋಷಕ ವರ್ಗ ಕೊಡುವ ದೇಣಿಗೆಗಾಗಿ ಭಿಕ್ಷೆ ಪಾತ್ರೆ ಹಿಡಿಯದೆ ಕಾಯಕ ತತ್ವ ಪಾಲಿಸಿದರೆ ಉತ್ತಮ. ಅದೇ ರೀತಿ ಜಾತಿ ಜಂಗಮರನ್ನು ವಿಶೇಷವಾಗಿ ಸತ್ಕರಿಸುವುದು ಬಿಟ್ಟು ಎಲ್ಲರನ್ನು ಸಮಾನರನ್ನಾಗಿ ಕಾಣಬೇಕು. ಆಗ ಮಾತ್ರ ಇವರು ನಿಜವಾಗಿಯು ಮಾದಾರ ಚೆನ್ನಯ್ಯನ ಮಗನ ಅನುಯಾಯಿಗಳೆಂದು ಒಪ್ಪಬಹುದು.

ರಾಜ್ಯದಲ್ಲಿ ಬಹುಸಂಖ್ಯಾತರಾಗಿರುವ ಲಿಂಗಾಯತರು ಬ್ರಾಹ್ಮಣ ಮಾನಸಿಕತೆಯಿಂದ ಹೊರಬಂದು ದಲಿತರ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಹೋರಾಟದ ಹೆಜ್ಜೆಯೊಂದಿಗೆ ಹೆಜ್ಜೆ ಹಾಕಿ ಜಾತಿ, ವರ್ಗ, ಲಿಂಗ ಭೇದರಹಿತ ನಾಡು ಕಟ್ಟುವಲ್ಲಿ ರಚನಾತ್ಮಕವಾಗಿ ಶ್ರಮಿಸಬೇಕು. ಮತೀಯವಾದಿಗಳಾಗದೆ ಪ್ರಜಾಸತ್ತಾತ್ಮಕ ಸಮಾಜವಾದಿ ಹೋರಾಟಕ್ಕೆ ಸಿದ್ಧಗೊಳ್ಳಬೇಕಿದೆ. ನವ ದಲಿತ ಚಳುವಳಿಯಲ್ಲಿ ಎಲ್ಲರು ಪಾಲ್ಗೊಂಡು ಪ್ರಜಾಸತ್ತಾತ್ಮಕ ಸಮಾಜವಾದಿ ಕ್ರಾಂತಿಗೆಯೊಂದಿಗೆ ಸಮಾನತೆಯ ನಾಡೊಂದು ಕಟ್ಟಲು ಮತ್ತು ಶರಣರು ಮಾಡಿದ ಸಾಮಾಜಿಕ ಕ್ರಾಂತಿಯನ್ನು ಪೂರ್ಣಗೊಳಿಸಲು ದುಡಿಯಬೇಕಿದೆ. □

ಬುಲ್ಡೋಸರ್ ಕುಟುಕಿದ ಮೊತ್ತಿ

ದೇವು ಹನೆಹಳ್ಳಿ

ಗೋಳಿಯಂಗಡಿ ಮತ್ತು ಕೊಕ್ಕರ್ಣೆಗಳು ಕೇಂದ್ರವಾಗಿರುವ ಎರಡು ಸಾಧಾರಣ ವಿಸ್ತಾರದ ಪ್ರದೇಶಗಳು ಗಮನೀಯವಾಗಿ ಶಾಂತ - ಸಮರಸ ದಿಂದಿರಲು ಒಂದು ಮುಖ್ಯ ಕಾರಣವೆಂದರೆ ಕುಡುಬಿಯರ ಸಂಖ್ಯಾ ಬಾಹುಳ್ಯ. ಕುಡುಬಿ ಪದವು, ಮಿಜಾರು, ಕೋಣಾಜೆ ಇತ್ಯಾದಿ ತೆಂಕಿನ ಊರುಗಳ ಲ್ಲಿಯೂ ಪರಿಸ್ಥಿತಿ ಅಂತೆಯೇ ಇದ್ದಿರಬ ಹುದು ಎಂಬುದು ನನ್ನ ವಿಶ್ವಾಸ. ಇದು ಉತ್ಪ್ರೇ ಕ್ಷೆಯ ಮಾತಲ್ಲ. ಜನಾಂಗಕ್ಕೆ ಜನಾಂಗವೇ ಈ ರೀತಿ ಅಮಾಯಕರಾ ಗಿರಲು, ಮುಗ್ಧರಾಗಿ ರಲು ಸಾಧ್ಯವೇ ಎಂದು ನಾವು ಅಚ್ಚರಿಪಟ್ಟ ದ್ದುಂಟು. ಮುಗ್ಧತೆ, ಪೆದ್ದುತನ ಮತ್ತು ಅಮಾ ಯಕತೆಗಳಿಗೆ 'ಕುಡುಬಿ' ಎಂಬ ಪದ ಸಮಾನಾರ್ಥಕ ಎಂಬ ಹತ್ತಾರು ರೀತಿಯ ಐತಿಹ್ಯಗಳು, ಜೋಕು ಗಳಂತಹ ಹೇಳಿಕೆಗಳು ಕುಂದಗನ್ನಡ ವಲಯ ದಲ್ಲಿ ಪ್ರಚಲಿತವಿವೆ.

ಮುತ್ತಿನಂತ ಒಡುಪಿ ಹಿತ್ತಿಲೀಗೆ ಬೀಂಜ ಮಾಡಿ
ಮುತ್ತೆ ಮುತ್ತಿದವು ಅರಗಿಣಿ ಕೋಲೆ/
//ಕೋಲು ಕೋಲೆನ್ನ(ನ್ನಿ), ಹೂಗಿನ ಕೋಲು ಕೋಲೇ//
ಮುತ್ತೇ ಮುತ್ತಿದವು ಅರಗಿಣಿ ಗಿಣಿರಾಮ
ಏನೇ ಹೊಳಪೀಗೂ ಎರಗಿದೋ ಕೋಲೆ/
//ಕೋಲು ಕೋಲೆನ್ನ(ನ್ನಿ), ಹೂಗಿನ ಕೋಲು ಕೋಲೇ//
ಏನೇ ಹೊಳಪೀಗೂ ಎರಗಿದೋ ಗಿಣಿರಾಮ
ವಾಲೇ ಹೊಳಪೀಗೂ ಎರಗಿದೋ ಕೋಲೇ/
//ಕೋಲು ಕೋಲೆನ್ನ(ನ್ನಿ), ಹೂಗಿನ ಕೋಲು ಕೋಲೇ//
ವಾಲೇ ಹೊಳಪೀಗೂ ಎರಗಿದೋ ಗಿಣಿರಾಮ
ಕನ್ನಡ ಹೇಳಿ ತುಳು ಹೇಳೀ ಕೋಲೇ/
//ಕೋಲು ಕೋಲೆನ್ನ(ನ್ನಿ), ಹೂಗಿನ ಕೋಲು ಕೋಲೆ//*1

ಒಬ್ಬ ರೈತಾಪಿ ಮಹಿಳೆ ಕೃಷಿಕಾರ್ಯದಲ್ಲಿ ತೊಡಗಿದ್ದಾಗ ಆಕೆಯ ಸೌಂದರ್ಯವನ್ನು ಇನ್ನೊಬ್ಬ ಮಹಿಳೆ ವರ್ಣಿಸುವ ಸರಳ ದ್ವಿಪದಿಗಳ ಹಾಡೊಂದರ ತುಣುಕಿದು. ಈ ಸರಳ ಸಾಲುಗಳಿಗೆ ಅಷ್ಟೇನೂ ಸರಳವ ಲ್ಲದ, ರೋಚಕವಾದ ಹಿನ್ನೆಲೆಯಿದೆ. ತನಗೇ ತಿಳಿದ ತನ್ನ ಅನುಪಮ ಸೌಂದರ್ಯವನ್ನು ಹೊಮ್ಮಿಸಿದವಳು ಓರ್ವ ಹತಭಾಗ್ಯ ನಿರಾಶ್ರಿತ ಮಹಿಳೆ; ಸೌಂದರ್ಯವನ್ನು ವರ್ಣಿಸಿದವಳು ನಿಂತ ನೆಲದಲ್ಲಿಯೇ ನಿರ್ಗತಿಕಳಾಗಿ, 'ಅಸ್ಪೃಶ್ಯ' ಎನ್ನಿಸಿಕೊಂಡವಳು. ಇದು ಈ ನೆಲದ ಔದಾ ರ್ಯವನ್ನು ರೂಪಿಸಿದ ಪ್ರಜ್ಞೆ ಎನ್ನಲಡ್ಡಿಯಿಲ್ಲ. ಔದಾರ್ಯವೆಂಬುದು ಉಳ್ಳವರ ಮರ್ಜಿಯಲ್ಲ; ಅದು ಎಲ್ಲವನ್ನೂ ಕಳೆದುಕೊಂಡವರ ನೋವಿನ ಅರಿವು.

ಭೂಮಾಲಕರಲ್ಲದ, ಹತ್ತಾರು ಕಸುಬು-ಉಪಕಸುಬುಗಳೇ ಜಾತಿ ವಾಚಕಗಳಾಗಿರುವ ಜನವರ್ಗದವರು ತಮಗೆ ಸಲ್ಲತಕ್ಕ ಕಾಳುಕಡ್ಡಿಗಳನ್ನು ಸುಗ್ಗಿಸಮಯದಲ್ಲಿ ಭೂಮಾಲಕರಾದ ಉಚ್ಚಜನರ್ಗದವರಿಂದ ಪಡೆಯು ತ್ತಿದ್ದುದು ಭಾರತದಾದ್ಯಂತ ಪ್ರಚಲಿತವಿದ್ದ ಪದ್ಧತಿ. ಇದೊಂದು ಸಾಂಪ್ರ ದಾಯಿಕ ಹಕ್ಕು. ತಮ್ಮ ಸಲುವಳಿಗಳನ್ನು ಪಡೆವಾಗಲೂ 'ಭಿಕ್ಷೆಯಂತಾಗ ಬಾರದು' ಎಂದು ತಿಳಿದ ಆ ಸ್ವಾಭಿಮಾನಿ ಜನರು ಉಳ್ಳವರ ಮನೆಬಾಗಿ ಲಿಗೆ ತೆರಳುವಾಗ ಅದಕ್ಕೊಂದು ಕಲಾತ್ಮಕ ಆಚರಣೆಯ ಸ್ವರೂಪವನ್ನು ಕೊಡುತ್ತಿದ್ದರು. ಮೊನ್ನೆಮೊನ್ನೆಯ ತನಕ ಕುಂದನಾಡಿನಲ್ಲಿ ಪ್ರಚಲಿತವಿದ್ದ ಅಂತಹ ಒಂದು ಆಚರಣೆಯೆಂದರೆ ಕೂಸಾಳ*2(ಉಪ್ಪಾರಸೆಟ್ಟಿ) ಜನಾಂಗದ ಮಹಿಳೆಯರು 'ಪ್ರದರ್ಶಿಸುತ್ತಿದ್ದ' ಕೋಲು ಹೊಯ್ಯುವ ಪದಗಳು. ತಾವು ಹೋಗುವ ಮನೆ ಯಾವ ಜಾತಿಗೆ ಸೇರಿದೆಯೋ ಆ ಜಾತಿಯವರು ಪಾಲಿಸಬೇಕಾದ ರೀತಿರಿವಾಜುಗಳನ್ನು, ಅವನ್ನು ಪಾಲಿಸ ದಿದ್ದರೆ ಆಗುವ ಅನಾಹುತಗಳನ್ನು ಹಾಡುಗಳ ಮೂಲಕ ಅರುಹುತ್ತಾರೆ. (ಉಚ್ಚಜಾತಿಯ, ಮುಖ್ಯವಾಗಿ ಬ್ರಾಹ್ಮಣ ಮತ್ತು ಬಂಟ, ಮನೆತನಗಳು ಹಾದರದಿಂದ ಹಾಳಾದ ದ್ವಿಪದಿಗಳನ್ನು ಹಾಡುವಲ್ಲಿ ಪ್ರತಿರೋಧದ ದನಿಯೂ ಇದೆ.) ಹಾಡುಗಳಿಗೆ ಬಾಗಳ(ರಂಜೆ) ಕೋಲುಗಳ ತಾಕಲಾ ಟದ (ಹೊಯ್ಯುವುದು) ತಾಳ. ಮೇಲಿನ ಸಾಲುಗಳನ್ನು ಹಾಡುವುದು ಕುಡುಬಿಯರ ಮನೆಯಂಗಳದಲ್ಲಿ! ಇದು ಪರಮಾದ್ಭುತವಾದದ್ದು. ಗೋಮಾಂತಕದಲ್ಲಿ ಪೋರ್ಚುಗೀಸ್-ಕ್ರೈಸ್ತ ಮತಾಂಧರ ಪೈಶಾಚಿಕ ದಾಳಿಗೆ ತುತ್ತಾಗಿ ನಂಬಿಕೆ-ನಡಾವಳಿ-ಮಾನ-ಪ್ರಾಣ ಉಳಿಸಿಕೊಳ್ಳುವ ಸಲುವಾಗಿ ಓಡಿ ಬಂದು ಕನ್ನಡ-ತುಳು-ಕರಾವಳಿಯ ಗುಡ್ಡಗಾಡುಗ ಳಲ್ಲಿ 'ಅವಿತು' ನೆಲೆನಿಂತ ನಿರಾಶ್ರಿತರಿಗೆ ಇಂತಹ ಆತ್ಮವಿಶ್ವಾಸವನ್ನು ತುಂಬುವವರು ಯಾರು?! ನಿಂತ ನೆಲದಲ್ಲಿಯೇ ನಿರ್ಗತಿಕರಾಗಿ, ಅಸ್ಪೃ ಶ್ಯರೆನ್ನಿಸಿಕೊಂಡ ನಿಷ್ಪಾಪಿಗಳು! ಔದಾರ್ಯವೆಂಬುದು ನಿಷ್ಕರುಣಿಗಳಾದ ಉಳ್ಳವರ ಸೊತ್ತಲ್ಲ, ಅದು ಎಲ್ಲವನ್ನೂ ಕಳೆದುಕೊಂಡ ಮಾನವಂತರ ಮಾನದಂಡ.

ನಿರಾಶ್ರಿತರಾಗಿ ಬಂದವರನ್ನು ಇಷ್ಟು ಆತ್ಮೀಯತೆಯಿಂದ, ಸಹಜ ಅನುಕಂಪದಿಂದ ನೋಡಿ ಅಪ್ಪಿ-ಒಪ್ಪಿಕೊಂಡ ಮತ್ತು ನಿರಾಶ್ರಿತರಾಗಿ ಬಂದು ಸ್ಥಳೀಯರೊಂದಿಗೆ ಇಷ್ಟೊಂದು ಸಾಮರಸ್ಯದಿಂದ ಹೊಂದಿ ಕೊಂಡು ಸಹಬಾಳ್ವೆ ನಡೆಸಿದ, ಪರಸ್ಪರ ಅನನ್ಯತೆಯನ್ನು ತುಳಿಯುವ ಯತ್ನ ಮಾಡದೆ, ಗೌರವಿಸಿ ಬಾಳಿದ ಇಂತಹ ಉದಾಹರಣೆಯನ್ನು ಜಗತ್ತಿನ ಬೇರೆಲ್ಲೂ ಕಾಣೆವೇನೋ?!

ಗೋಳಿಯಂಗಡಿ ಮತ್ತು ಕೊಕ್ಕರ್ಣೆಗಳು ಕೇಂದ್ರವಾಗಿರುವ ಎರಡು ಸಾಧಾರಣ ವಿಸ್ತಾರದ ಪ್ರದೇಶಗಳು ಗಮನೀಯವಾಗಿ ಶಾಂತ



-ಸಮರಸದಿಂದಿರಲು ಒಂದು ಮುಖ್ಯ ಕಾರಣವೆಂದರೆ ಕುಡುಬಿಯರ ಸಂಖ್ಯಾಬಾಹುಳ್ಯ. ಕುಡುಬಿಪದವು(ಬಜ್ಪೆ), ಮಿಜಾರು, ಕೋಣಾಜೆ ಇತ್ಯಾದಿ ತೆಂಕಿನ ಊರುಗಳಲ್ಲಿಯೂ ಪರಿಸ್ಥಿತಿ ಅಂತೆಯೇ ಇದ್ದಿರಬಹುದು ಎಂಬುದು ನನ್ನ ವಿಶ್ವಾಸ. ಇದು ಉತ್ಪ್ರೇಕ್ಷೆಯ ಮಾತಲ್ಲ. ಜನಾಂಗಕ್ಕೆ ಜನಾಂಗವೇ ಈ ರೀತಿ ಅಮಾಯಕರಾಗಿರಲು, ಮುಗ್ಧರಾಗಿರಲು ಸಾಧ್ಯವೇ ಎಂದು ನಾವು ಅಚ್ಚರಿಪಟ್ಟದ್ದುಂಟು. ಮುಗ್ಧತೆ, ಪೆದ್ದುತನ ಮತ್ತು ಅಮಾಯಕತೆಗಳಿಗೆ 'ಕುಡುಬಿ' ಎಂಬ ಪದಸಮಾನಾರ್ಥಕ ಎಂಬ ಹತ್ತಾರು ರೀತಿಯ ಐತಿಹ್ಯಗಳು, ಜೋಕುಗಳಂತಹ ಹೇಳಿಕೆಗಳು ಕುಂದಗನ್ನಡ ವಲಯದಲ್ಲಿ ಪ್ರಚಲಿತವಿವೆ.

ಮೀಸಲಾತಿ ಸವಲತ್ತಿನಲ್ಲಿ ಅವರಿಗೆ ತೀರಾ ಅನ್ಯಾಯವಾದರೂ ಅದಕ್ಕಾಗಿ ದೊಂಬಿಯಿರಲಿ, ಗೋಣಗಾಟವನ್ನೂ ಮಾಡಲಾರದಷ್ಟು ಅಮಾಯಕರು ಅವರು. *3 ವೈಯಕ್ತಿಕವಾಗಿ ನಾನು ಅದನ್ನು ಅನುಭವಿಸಿ ಬಲ್ಲವನು. ಅಲ್ತಾರು, ಬೆಳ್ವೆ, ನಿಂಜೂರುಬೆಟ್ಟು, ಅಲ್ಬಾಡಿ, ತೋಣ್ಸಾಸೆ ಕೂಡುಕಟ್ಟುಗಳ ಹಲವು ಮನೆಗಳ ಸದಸ್ಯ ನಾನು. ಅಂದು ಚಿಕ್ಕ ಬಾಲಕನಾಗಿದ್ದಾಗ ಎತ್ತಿ ಆಡಿಸಿ, ಕೋಣ- ಹೋರಿಗಳ ಸವಾರಿ ಮಾಡಿಸಿದ ಮಿಂಚುಬಿಳುಪಿನ ತಲೆಗೂದಲು ಮತ್ತು ಬಾಗುಪೊದೆಮೀಸೆಯ ಎಳ್ಳಂತೂರು ಮಲ್ಲುನಾಯ್ಕರು, ಸೀತಾನದಿಗೆ ಮಳಿವೆ ಹೆಕ್ಕಲು ಅಲ್ತಾರು, ನಡೂರು ಮುಂತಾದೆಡೆಗಳಿಂದ ಅವತರಿಸುತ್ತಿದ್ದ ಗೇಂಟಿ-ಮಣಿಸರಕುಗಳ ಅಪ್ಸರೆಯರಿಂದ ತೊಡಗಿ ಇಂದು ನನ್ನೆಲ್ಲ ಸುಖಕಷ್ಟಗಳಲ್ಲಿ ಪಾಗಿಯಾಗುವ ಅಲ್ಬಾಡಿ ಬಾಬಣ್ಣ ನಾಯ್ಕರು, ತೋಣ್ಸಾಸೆ ಪ್ರಭಾಕರ ನಾಯ್ಕರು, ನಿಂಜೂರು ಬೆಟ್ಟು ಸೀನನಾಯ್ಕರು... ತನಕ ಎಲ್ಲರಿಗೂ ನಾನು ಆಭಾರಿಯಾಗಿದ್ದೇನೆ.

ಏನಾಗಿಹೋಯಿತು?! ಉಪ್ಪಾರಸೆಟ್ಟಿಮಹಿಳೆಯರು ಈಗ ಮನೆಮನೆಗೆ ತೆರಳಿ ಎಚ್ಚರಿಸದ ಕಾರಣದಿಂದಲೋ ಎಂಬಂತೆ ಆ ಮಾತು ಬಂದುಬಿಟ್ಟಿತು! 'ಕುಡುಬಿಗಳು*4 ಕಳ್ಳರು' ಎಂದು ಬಿಟ್ಟರು! ಯಾರು? MSEZಗಾಗಿ ಬಜ್ಪೆ ಪರಿಸರದಲ್ಲಿ ಜನರನ್ನು ಒಕ್ಕಲೆಬ್ಬಿಸುತ್ತಿರುವ 'ಸರಕಾರ' ಈ ಮಾತನ್ನು ಹೇಳುತ್ತಿದ್ದರೆ ಅದನ್ನು ಎದುರಿಸುವುದು ಕಷ್ಟವಿರಲಿಲ್ಲ. ಮನೆಮಠಗಳನ್ನು ಒಡೆದು ಕೆಡವಲು ಬುಲ್ಡೋಸರ್, ಜೆಸಿಬಿಗಳನ್ನು ತರುವ ಗುತ್ತಿಗೆದಾರ ಈ ಮಾತನ್ನು ಅಂದಿದ್ದರೆ ಅದನ್ನು ಎದುರಿಸುವುದು ಕಷ್ಟವಿರಲಿಲ್ಲ. ಆದರೆ ಈ ಮಾತನ್ನು ಹೇಳುತ್ತಿರುವವರು ಕೇವಲ 15 ಕಿಲೋಮೀಟರ್ ದೂರದಲ್ಲಿರುವ ಕುಡುಬಿಪದವನ್ನು ಎಂದೂ ನೋಡದೆ, ಆ ಕುಡುಬಿಯರು ಬೆಳೆದ ತರಕಾರಿ, ಹಣ್ಣುಹಂಪಲುಗಳನ್ನೆ ತಿಂದುಂಡು ಸುಖವಾಗಿರುವ ಮಂಗಳೂರಿನ ಅನಾಮಧೇಯ ನಾಗರಿಕರೋರ್ವರು. MSEZ ಕಾರ್ಯಚಟುವಟಿಕೆ, ಬಲವಂತದ ಭೂಸ್ವಾಧೀನ ಇತ್ಯಾದಿಗಳ ವಿರುದ್ಧ ಕಾನೂನುರೀತ್ಯಾ, ಮಾನವೀಯನೀತಿರೀತ್ಯಾ ಹೋರಾಡುತ್ತಿರುವ ಓರ್ವ ಖ್ಯಾತ ಸಾಮಾಜಿಕನೆದುರು ಮಂಗಳೂರಿನಲ್ಲಿ ಓರ್ವ ತೌಳವ ಗಣ್ಯರು ಹೇಳಿದ ಮಾತಿದು. ಇದನ್ನು ಎದುರಿಸುವುದು ಕಷ್ಟ.

ಮೇಲ್ಕಾಣಿಸಿದ ದ್ವಿಪದಿಗಳ ಕೊನೆಯಲ್ಲಿ ಇನ್ನೊಂದು ಚಾರಿತ್ರಿಕ ದುರಂತವಿದೆ. ಅದೆಂದರೆ ತುಳುನಾಡಿನ ಉತ್ತರಭಾಗ ಕುಂದನಾಡಾಗಿ ಬದಲಾಗುತ್ತಿದ್ದುದು. 'ಕನ್ನಡ ಹೇಳೇ ತುಳು ಹೇಳೇ' ಎಂದೆನ್ನುತ್ತಿದ್ದಾಳೆ ಹಾಡುಗಾರ್ತಿ. ಹೇಳುತ್ತಿರುವ ಹೊತ್ತಿನಲ್ಲಿ ಆಕೆಯ ಮಾತೃಭಾಷೆ ತುಳು. ಕನ್ನಡ ಬಂದಿದೆ. ಪಾಪ, ಇನ್ನು ಕೆಲವೇ ದಿನಗಳಲ್ಲಿ

ಅಕ್ರಮವಾಗಿ ಕದ್ದು ಬರುವ ಬಾಂಗ್ಲಾದೇಶಿಯರು ಖಾಲಿ ಕೈಯಲ್ಲಿ ಬರುವುದಿಲ್ಲ, ನಮ್ಮನ್ನು ಕೊಲ್ಲಲು ಬಾಂಬ್ ಹಿಡಿದೇ ಬರುತ್ತಾರೆ! ಅವರ ಬಗ್ಗೆ ನಮಗೆ-ನಿಮಗೆ ಬಿಡಿ, ಈ ದೇಶದ ಪ್ರಧಾನಮಂತ್ರಿಗಳಿಗೇ ದನಿಯೆತ್ತುವ ಧೈರ್ಯವಿಲ್ಲ. ತಮ್ಮ ನೆಲದಲ್ಲಿ ತಾವು ನೆಮ್ಮದಿಯಿಂದ, ನಿರುಪದ್ರವಿಗಳಾಗಿ ಬದುಕುತ್ತಿರುವ ಕುಡುಬಿಯರನ್ನು ಕಳ್ಳರೆಂದು ಕರೆದು ಓಡಿಸುವ ಸರ್ವಶಕ್ತ ರಾಜಕೀಯ ಪಕ್ಷಗಳು ವಿನಯದಿಂದ ಬಾಗಿ 'ಕುಂಯಿ' ಗುಡುತ್ತಾ ನಮ್ಮ ತುತ್ತು, ನಮ್ಮ ನೆಲೆ, ನಮ್ಮ ಪ್ರಾಣ ಕಸಿಯಲು ನುಗ್ಗಿ ಬರುತ್ತಿರುವ ಬಾಂಗ್ಲಾದೇಶಿಯರಿಗೆ ಪಡಿತರ ಚೀಟಿ ವಿತರಿಸುತ್ತವೆ. ಅಕ್ರಮ ನಿರ್ಮಾಣದ ತೆರವಿಗೆ ಆದೇಶ ಹಿಡಿದು ಬಂದ ಜಿಲ್ಲಾಧಿಕಾರಿ ಅದನ್ನು ಅಪರಾಧಿಗೆ ಹಸ್ತಾಂತರಿಸುವ ಮುನ್ನವೇ ತನ್ನ ವರ್ಗಾವಣೆ ಆದೇಶವನ್ನು ಪಡೆದ ನಿದರ್ಶನಗಳಿವೆ.

ಆ ಕನ್ನಡ ತನ್ನ ತುಳುವನ್ನು ನುಂಗಿಬಿಡುವುದು ಆಕೆಗೆ ತಿಳಿದಿಲ್ಲ. ಈಗ ಉಪ್ಪಾರಸೆಟ್ಟರ ಮಾತೃಭಾಷೆ ತುಳುವಲ್ಲ, ಕನ್ನಡ.(ಕೊರಗರು ಮತ್ತು ಬೆರಳೆಣಿಕೆಯಲ್ಲಿರುವ ಪಾಣ ಸಂಸಾರಗಳು ತುಳುವನ್ನೇ ಮಾತೃಭಾಷೆಯನ್ನಾಗಿ ಉಳಿಸಿಕೊಂಡಿದ್ದಾರೆ.) ದಕ್ಷಿಣದಲ್ಲಿ ರಾಜಧಾನಿ ಬಾರಕೂರಿನ ಸರಹದ್ದು ಸುವರ್ಣಾನದಿಯಿಂದ ತೊಡಗಿ ಉತ್ತರದಲ್ಲಿ ಸಂಗೀತಪುರದ ಸರಹದ್ದು ಸಂಕದಗುಂಡಿಹೊಳೆಯ ತನಕ ತುಳುನಾಡಿನ ಉತ್ತರಭಾಗ ಕನ್ನಡಕ್ಕೆ ಸಂದುಹೋಗಿದೆ. ತೀರ ಇತ್ತೀಚಿನ ಇತಿಹಾಸದಲ್ಲಿ ನಾಮಕರಣಗೊಂಡು ಅದೀಗ ಕುಂದಗನ್ನಡ. ಈ ನಷ್ಟಕ್ಕೆ ತುಳುವರು ಪರಿತಾಪಪಡಬೇಕು ನಿಜ, ಆದರೆ ನಾಚಿಕೆಪಡಬೇಕಾಗಿಲ್ಲ. ಏಕೆಂದರೆ ಅದು ಸೈನಿಕ ಶಕ್ತಿಯಲ್ಲಿ ಕಮರಿದ್ದು; ದೊಡ್ಡ ಸಂಖ್ಯೆಯಲ್ಲಿ ತುಳುಜನರು ಆಳರಸರ ಜತೆಗಿರಲು ಭಾಷಾಂತರಗೊಂಡದ್ದರಿಂದ ಘಟಿಸಿದ್ದು. (ನಾವಿಂದು ಕನ್ನಡ ಇತ್ಯಾದಿಗಳನ್ನೆಲ್ಲ ಕೊಡವಿಕೊಂಡು ಇಂಗ್ಲಿಷ್‌ಗೆ ತರ್ಜುಮೆಗೊಂಡಂತೆ!)

ಮುತ್ತಿನಂತಹ ಬೀಜಗಳನ್ನು ಹಿತ್ತಿಲಿಗೆ ಎರಚಿದ್ದಾಳೆ ಆ ಕುಡುಬಿ ಸುಂದರಿ. ಆಕೆಯ ಕಿವಿಯ ಓಲೆಯ ಹೊಳಪಿಗೆ, ಮೊತ್ತಿಯ(ಮೂಗುತಿ) ಹೊಳಪಿಗೆ ಆಕರ್ಷಿತಗೊಂಡ ಗಿಳಿವಿಂಡು ಅದೇನೋ ತಿನ್ನುವ ಬೀಜವೆಂದು ಬಗೆದು ಆ ಬೆಡಗಿಯತ್ತ ಎರಗಿದೆ! ಈ ನೆಲದಲ್ಲಿ ಮುತ್ತು ಬಿತ್ತಿದಾಕೆ ಕಳ್ಳಿಯೆನಿಸಿಕೊಂಡಳೇ?! ಈ ಕ್ಷುದ್ರ ಮಾತನ್ನು ಸಹಿಸುವುದು ಕಷ್ಟ. ಪ್ರಭುತ್ವವೆಂಬುದು ಇಷ್ಟು ನಿರ್ಲಜ್ಜವಾದರೆ ಪ್ರಜೆಗಳು ಬದುಕುವುದು ಕಷ್ಟ. (ನಾವು ಕಟ್ಟಿದ ಪ್ರಭುತ್ವ ನಮ್ಮಷ್ಟೇ ನಿರ್ಲಜ್ಜ, ನಿರ್ವೀರ್ಯವಾಗಿರುವುದು ಸಹಜವಲ್ಲವೇ?!) ಯಾವುದೇ ನಿರ್ದಿಷ್ಟ ಆದೇಶ, ಸೂಕ್ತ ಪರಿಹಾರ, ಅನುನಯ-ಯಾಚನಾದನಿಯ ಕೋರಿಕೆಯಿಲ್ಲದೆ ಅಮಾಯಕರನ್ನು ಒಕ್ಕಲೆಬ್ಬಿಸಿ ಓಡಿಸುವ ಸರಕಾರ ಅತಿಕ್ರಮಿಗಳ ವಿರುದ್ಧ ಎಂದಾದರೂ ಕ್ರಮ ಕೈಗೊಂಡಿದೆಯೇ? ಕುಡುಬಿಯರನ್ನು ಗೋವಾದಿಂದ ಓಡಿಸಿದ ಮತಾಂಧರು ಇನ್ನೊಂದೇ ರೂಪದಲ್ಲಿ, ಇನ್ನೊಂದೇ ದಿಕ್ಕಿನಿಂದ ಬಂದು ಈ ಇಡೀ ಸಹ್ಯಾದ್ರಿ ತಪ್ಪಲನ್ನು ಬೋಳಿಸಿ ಗಾಂಜಾ, ಶುಂಠಿ, ಸಿಂಟನೆಲ್ಲಾ ಬೆಳೆಸುತ್ತಿರುವಾಗ ನಮ್ಮ ಸರಕಾರಗಳಿಗೆ 'ಕಮಕ್-ಕಿಮಕ್' ಎನ್ನುವ ಧೈರ್ಯವಿಲ್ಲ. ಅಷ್ಟೊಂದು ರಕ್ತಪಾತವಾಗಿಲ್ಲ ಎಂಬುದೊಂದನ್ನು ಬಿಟ್ಟರೆ ದಕ್ಷಿಣ ಅಮೇರಿಕಾವನ್ನು ಆಪೋಶನಗೈದ ಸ್ಪಾನಿಷ್ ಅತಿಕ್ರಮಣಕ್ಕಿಂತ ಇದು ಏನೇನೂ ಭಿನ್ನವಲ್ಲ.

ಅಕ್ರಮವಾಗಿ ಕದ್ದು ಬರುವ ಬಾಂಗ್ಲಾದೇಶಿಯರು ಖಾಲಿ ಕೈಯಲ್ಲಿ ಬರುವುದಿಲ್ಲ, ನಮ್ಮನ್ನು ಕೊಲ್ಲಲು ಬಾಂಬ್ ಹಿಡಿದೇ ಬರುತ್ತಾರೆ! ಅವರ ಬಗ್ಗೆ ನಮಗೆ-ನಿಮಗೆ ಬಿಡಿ, ಈ ದೇಶದ ಪ್ರಧಾನಮಂತ್ರಿಗಳಿಗೇ ದನಿಯೆತ್ತುವ ಧೈರ್ಯವಿಲ್ಲ. ತಮ್ಮ ನೆಲದಲ್ಲಿ ತಾವು ನೆಮ್ಮದಿಯಿಂದ, ನಿರುಪದ್ರವಿಗಳಾಗಿ ಬದುಕುತ್ತಿರುವ ಕುಡುಬಿಯರನ್ನು ಕಳ್ಳರೆಂದು ಕರೆದು ಓಡಿಸುವ ಸರ್ವಶಕ್ತ ರಾಜಕೀಯ ಪಕ್ಷಗಳು ವಿನಯದಿಂದ ಬಾಗಿ 'ಕುಂಯಿ' ಗುಡುತ್ತಾ ನಮ್ಮ ತುತ್ತು, ನಮ್ಮ ನೆಲೆ, ನಮ್ಮ ಪ್ರಾಣ ಕಸಿಯಲು ನುಗ್ಗಿ ಬರುತ್ತಿರುವ ಬಾಂಗ್ಲಾದೇಶಿಯರಿಗೆ ಪಡಿತರಚೀಟಿ ವಿತರಿಸುತ್ತವೆ. ಅಕ್ರಮ ನಿರ್ಮಾಣದ ತೆರವಿಗೆ ಆದೇಶ ಹಿಡಿದು ಬಂದ ಜಿಲ್ಲಾಧಿಕಾರಿ ಅದನ್ನು ಅಪರಾಧಿಗೆ ಹಸ್ತಾಂತರಿಸುವ ಮುನ್ನವೇ ತನ್ನ ವರ್ಗಾವಣೆ ಆದೇಶವನ್ನು ಪಡೆದ ನಿದರ್ಶನಗಳಿವೆ. ಪ್ರಭುತ್ವ ಯಾರಿಗೆ ಅಂಜುತ್ತದೆ ಎಂದು ತಿಳಿಯಿತಲ್ಲ?!

ಈ ನೆಲದ ಔದಾರ್ಯವನ್ನು, ನಾವಿದು ಹಾಡಿ ಹೊಗಳುವ(ದೇಶವಿದೇಶಗಳಲ್ಲಿ ಮಾರಿ ಹಣ- ಕೀರ್ತಿಗಳಿಸುವ) ಸಂಸ್ಕೃತಿಯನ್ನು ರೂಪಿಸಿದವರ ಸ್ಥಿತಿ ಹೇಗಿದೆ? ಔದಾರ್ಯ ಬಿಡಿ, ಅವರ ಮೂಲಭೂತ ಹಕ್ಕನ್ನು ಗೌರವಿಸಿ ಬಾಳುವ ಅವಕಾಶವನ್ನು ಕೊಡಲಿಲ್ಲ. ಕಾಲಾನುಕಾಲಕ್ಕೆ ಅಸ್ಪೃಶ್ಯ, ಹರಿಜನ, ಪರಿಶಿಷ್ಟ, ದಲಿತ ಎಂದೆಲ್ಲ ಎನ್ನಿಸಿಕೊಂಡ ಉಪ್ಪಾರಸೆಟ್ಟಿ, ಕೊರಗ, ಪಾಣ, ಮೇರ ಇತ್ಯಾದಿ ಸಮುದಾಯದವರಿಗೆ ಕನಿಷ್ಠ ಅವಶ್ಯಕತೆಯ ಜಾಗವಿಲ್ಲ. ದೊಂಡೇರಂಗಡಿಯ ಸಮೀಪ ನಾಲ್ಕಾರು ಪಾನ ಮನೆತನಗಳು ನೊರಜುಕಲ್ಲು ಬಂಡೆಯ ಮೇಲೆಯೇ ಮನೆಯೆಂಬ ಮಾಡನ್ನು ಕಟ್ಟಿಕೊಂಡು ಬದುಕುತ್ತಿರುವ ದಾರುಣ್ಯದೃಶ್ಯ ಯಾರಿಗೂ ಏನೂ ಅನ್ನಿಸಲಿಲ್ಲ. ನೆಲವನ್ನೇ ಸಿಗಿಸಿಗಿದು ಹುಡಿಮಾಡಿ ವಿದೇಶಗಳಿಗೆ ಮಾರುವ, ನಿಂತ ನೆಲವನ್ನೇ ವಿಭಾಗಿಸಿ SEZಗಳೆಂಬ ವಿದೇಶಗಳನ್ನು ನಿರ್ಮಿಸುವ, ಕಳ್ಳ- ಅತಿಕ್ರಮಿಗಳಿಗೂ ಸಾವಿರಾರು ಎಕರೆ ನೆಲ ದಾನಮಾಡುವ (ಅಕ್ರಮ-ಸಕ್ರಮ!) ಸರಕಾರಗಳಿಗೆ ಈ ಉಪೇಕ್ಷೆ ನಾಚಿಕೆ ತರಲಿಲ್ಲ.

ನಿರಾಶ್ರಿತರಿಗೆ ಅನ್ನ-ನೀರು-ಆಶ್ರಯ ನೀಡಿದ, ಅಭಯ-ಪ್ರೀತಿ ತೋರಿದ ಔದಾರ್ಯದ ಜಾಗದಲ್ಲಿ ನಿರ್ವೀರ್ಯತನವನ್ನು, ಲಾಭಕೋರತನವನ್ನು ಸ್ಥಾಪಿಸಿದೆವಲ್ಲ, ಅದಕ್ಕೆ ನಾಚಿಕೆಪಡಬೇಕು. ತುಳುನಾಡಿನ ಲಕ್ಷಾಂತರ ಎಕರೆ ಅರಣ್ಯ, ಕೃಷಿಭೂಮಿ ಅತಿಕ್ರಮಿಗಳ ಪಾಲಾಗಿದೆ. ನಾವು ಆ ಅತಿಕ್ರಮಿಗಳ ಮನೆಬಾಗಿಲಿಗೆ ಕೂಲಿಗಳಾಗಿ ಹೋಗಿ 'ಜೀಯಾ' ಎನ್ನಬೇಕು. ನಮ್ಮ ರಾಜಕೀಯ ಪಕ್ಷಗಳ ಮೇಜವಾನಿಗೆ ಅವರು ಪಡಿ ನೀಡಬೇಕು. ಇದೇ ಅತಿಕ್ರಮಿಗಳು ಶಿಶಿಲದ ಹೊಳೆಗೆ ವಿಷವಿಕ್ಕಿದಾಗ ನಾವು ದಂಡೆಯಲ್ಲಿ ನಿಂತು 'ಲಬೋ' 'ಲಬೋ' ಎಂದದ್ದು ಬಿಟ್ಟರೆ

[illegible] ಮಾನಗಳಿಲ್ಲ. ನೈತಿಕ ಪ್ರಾಮಾಣಿಕತೆ, ಅಭಿವ್ಯಕ್ತಿ ಸ್ವಾತಂತ್ರ್ಯ ಇತ್ಯಾದಿಗಳ ಪದಮುಂಜಗಳ ಊರುಗೋಲಿನಲ್ಲಿ ನಾವು ತೋರಿದ್ದು ನಿರ್ವೀರ್ಯತನವನ್ನು, ನಿರ್ಲಜ್ಜೆಯನ್ನು. ಗುಟ್ಟಿನಲ್ಲಿ ಬಂದು, ಬದುಕಿ, ಮಾಯವಾಗಿ ಹೋದ ಈ ಸ್ಕರಿಯ ಯಾರು? ಖ್ಯಾತ ಚಲನಚಿತ್ರ ನಿರ್ದೇಶಕ ಆಡೂರು ಗೋಪಾಲಕೃಷ್ಣನ್ನರ ವಿಧೇಯನ್ ಚಲನಚಿತ್ರಕ್ಕೆ ಹಣಪ್ರಶಸ್ತಿ ಇತ್ಯಾದಿ ನೀಡಿದವರು ಯಾರು? ನಮ್ಮ ಈ ತುಳುನಾಡಿನ ನೆಲ-ಜಲ ಪರಭಾರೆಯಾಗುತ್ತಿದೆ ಎಂಬುದನ್ನು ಮೊತ್ತ ಮೊದಲು ಕಂಡುಕೊಂಡು ದನಿ ಎತ್ತಿದವರು ಡಾ.ಕೋಟ ಶಿವರಾಮ ಕಾರಂತರು ಮತ್ತು ಶಿರಾಡಿ ಶೇಖರ ಗೌಡರು.

ನಮ್ಮವನೇ ಒಬ್ಬಾತ ಈ ಅಪಾಯವನ್ನು ಎತ್ತಿ ಹೇಳಿ ಎಚ್ಚರಿಸಿದಾಗ ನಾವು ಎಚ್ಚರಗೊಳ್ಳಲಿಲ್ಲ. (ಎಲ್ಲ ಅವಕಾಶ, ಶಕ್ತಿಯಿದ್ದೂ ಒಂದು ಹೆಜ್ಜೆ ಭೂಮಿಯನ್ನು ಅವರು ಒತ್ತುವರಿ ಮಾಡಿಕೊಳ್ಳಲಿಲ್ಲ.) ಸಿಡಿದೆದ್ದ ಆ ಹತಾಶ-ಉಚ್ಛೃಂಖಲ ಶೇಖರಗೌಡರನ್ನು ದುಷ್ಟ ಎಂದು ಚಿತ್ರಿಸಿದ, ಅವರ ಬಾಳನ್ನು, ಸಾವನ್ನು ತಿರುಚಿ ಚಿತ್ರಿಸಿದ ಹುನ್ನಾರವನ್ನು ಮಹಾನ್ ಸಾಹಿತ್ಯ ಮೌಲ್ಯ, ಮಹಾನ್ ಕಲಾಭಿವ್ಯಕ್ತಿಯೆಂದು ಬಣ್ಣಿಸಿದೆವು. ಚಿತ್ರೀಕರಣದ ಸಲಕರಣೆಗಳನ್ನು ಗುಲಾಮರಿಗಿಂತ ಕಡೆಯಾಗಿ ನಾವೇ ಹೊತ್ತೆವು. ಪತಿ ಶ್ರೀ ಶೇಖರ ಗೌಡರು ತೀರಿದ ಬಳಿಕ ಅವರ ಪತ್ನಿ ಮತ್ತು ಮಕ್ಕಳು ಹೊದ್ದ ಮೌನದಲ್ಲಿ ಗುಲಾಮರಿಗಿಂತ ಕಡೆಯಾಗಿ ಹೋದ ಆ ತುಳು ಕಲಾಭಿಮಾನಿಗಳ ಬಗ್ಗೆ ಅದೆಂತಹ ಅಸಹ್ಯವಿದೆಯೋ?

ಈ ನಿರ್ವೀರ್ಯತನಕ್ಕೆ ಕ್ಷಮೆಯಿಲ್ಲ. 'ನಾವು ಜಾರ್ಖಂಡದವರು', 'ನಾವು ಬಿಹಾರದವರು, ಒರಿಸ್ಸಾದವರು' ಎಂದು ಸುಳ್ಳುಸುಳ್ಳೇ ಹೇಳಿ ಕರೆನಾಡಿನಲ್ಲಿ ವಸತಿ ಹೂಡಿದವರಲ್ಲಿ ಹೆಚ್ಚಿನವರು ಬಾಂಗ್ಲಾದ ದುರಾಕ್ರಮಿಗಳೆಂಬುದು ನಮಗೂ ಗೊತ್ತು, ನಮ್ಮನ್ನಾಳುವ ಪುಡಾರಿಗಳಿಗೂ ಗೊತ್ತು, ನಮ್ಮನ್ನು ಕಾಪಾಡುವ ಪೋಲಿಸರಿಗೂ ಗೊತ್ತು. ಅವರು ನಿರಾಂತಕವಾಗಿ ಕೊಲೆಸುಲಿಗೆ- ಕಳ್ಳತನ ದರೋಡೆಗಳಲ್ಲಿ ನಿರತರಾಗಿರುವುದೂ ನಮಗೆಲ್ಲ ಗೊತ್ತು. ಆದರೂ ನಾವು ಧೈರ್ಯದಿಂದ ಬಾಳುತ್ತಿದ್ದೇವೆ!

ನಮ್ಮ ಪೂರ್ವಜರು ತೋರಿದ ಔದಾರ್ಯದ ಫಲಾನುಭವಿಗಳನ್ನು ತುಚ್ಛೀಕರಿಸುವುದಿದೆಯಲ್ಲ, ಅದು ಹೇಯವಾದದ್ದು. ಮಂಗಳೂರಿನ ಕೊಡಿಯಾಲ ಗದ್ದೆಯಲ್ಲಿ(ಈಗದು ತನ್ನ ಮೇಲೊಂದು ಕಟ್ಟಡ ಮೇಲೇಳುವುದನ್ನು ನಿರೀಕ್ಷಿಸುತ್ತಿದೆ.) ಈಗ್ಗೆ ಎರಡು ವರ್ಷಗಳ ಹಿಂದೆ ಟಿಬೇಟಿಯಲ್ ನಿರಾಶ್ರಿತರು ಚೀನಾ ದೇಶದ ವಿರುದ್ಧ ಒಂದು ದಿನದ ಮೌನ ಪ್ರತಿಭಟನೆಯನ್ನು ಹಮ್ಮಿಕೊಂಡಿದ್ದರು. ಸ್ವಾತಂತ್ರ್ಯ, ಅಭಿವ್ಯಕ್ತಿ ಸ್ವಾತಂತ್ರ್ಯ ಇತ್ಯಾದಿಗಳನ್ನು ಪ್ರತಿಪಾದಿಸುವ ಅಸಂಖ್ಯ ಬುದ್ಧಿಜೀವಿಗಳನ್ನು ಹೊತ್ತು ನಲುಗುತ್ತಿರುವ ಈ ಮಂಗಳೂರಿನಲ್ಲಿ ಆ ನಿರಾಶ್ರಿತರ ಪ್ರತಿಭಟನೆಯ ತಾತ್ಕಾಲಿಕ ಚಪ್ಪರದಲ್ಲಿದ್ದ ಏಕೈಕ ಭಾರತೀಯ ಈ ಲೇಖಕ! (ಕೈಹಿಡಿದು ಕಣ್ಣೀರಿಟ್ಟು ಸ್ವಾಗತಿಸಿ ಕುಳ್ಳಿರಿಸಿದ್ದರು.)

'ಸತ್ಯಮೇವ ಜಯತೇ ನ ಅನೃತಂ' ಎಂದು ಹಾಡುತ್ತೇವೆ, ನಾಣ್ಯದಲ್ಲಿ ಕೆತ್ತಿ ಉರುಳಿಸುತ್ತೇವೆ. 'ಸತ್ಯವೇ ನಮ್ಮ ತಂದೆ ತಾಯಿ, ಸತ್ಯವೇ ನಮ್ಮ ಬಂದು ಬಳಗ' ಎಂದು ಕಸಾಯಿಖಾನೆಯಲ್ಲಿ ಒಡ್ಡೋಲಗ ಕೊಡುತ್ತೇವೆ. ಆದರೆ ಸತ್ಯಕ್ಕಿಂತ ನಾಣ್ಯ ದೊಡ್ಡದು, ಸತ್ಯಕ್ಕಿಂತ ಲಾಭ ದೊಡ್ಡದು. ನಮ್ಮವರೇ ನಮ್ಮ ನೆಲದಲ್ಲಿ ಕಟ್ಟಿದ ಶಾಲಾ ಕಾಲೇಜುಗಳಲ್ಲಿ ನಮ್ಮವರಿಗೆ ಜಾಗವಿಲ್ಲ. ಸಾವಿರಸಾವಿರ ಸಂಖ್ಯೆಯಲ್ಲಿ ಕೇರಳ, ಗುಜರಾತ್ ಮತ್ತಿತರ ರಾಜ್ಯಗಳಿಂದ ವಿದ್ಯಾರ್ಥಿಗಳು ಬರುತ್ತಾರೆ. ಒಮ್ಮೆ ಹಗ್ಗ ಹರಿದುಕೊಂಡ ಕರುವಿನಂತೆ ಹುಚ್ಚುಹುಚ್ಚಾಗಿ ವರ್ತಿಸುತ್ತಾರೆ. ಅವರ ತವರೂರಿನಲ್ಲಿ ಇಲ್ಲದ ಉದಾರ ವಾತಾವರಣವನ್ನು ಇಲ್ಲಿ ಕಾಣುತ್ತಾರೆ. (ಕರಾವಳಿಯ ಮೀನುಗಾರ ಮಹಿಳೆ ನಿರಾತಂಕವಾಗಿ ರಾತ್ರಿ ಹನ್ನೆರಡಕ್ಕೆ ಮನೆ ತಲುಪುತ್ತಾಳೆ, ನಸುಕು ನಾಲ್ಕಕ್ಕೆ ಮತ್ತೆ ಬುಟ್ಟಿ ಹಿಡಿದು ಹೊರಡುತ್ತಾಳೆ! ಪ್ರಪಂಚದಲ್ಲಿ ಮತ್ತೆಲ್ಲಿಯೂ ಇರದ ಉದಾರಮನೋಭಾವವನ್ನು ತೋರುವ ನಮ್ಮನ್ನೇ 'ಅಸಹಿಷ್ಣು'ಗಳೆಂದು ಜರೆಯುತ್ತಾರೆ. ಇದೊಂದು ಅದ್ಭುತ ರೂಪಕವಾಗಿ ಮೂಡಿಬಂದದ್ದು ಈಗ್ಗೆ ಮೂರ್ನಾಲ್ಕು ವರ್ಷಗಳ ಹಿಂದೆ, ನಗರ ಕೇಂದ್ರದ ಲಾಲ್‌ಬಾಗ್‌ನಲ್ಲಿರುವ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಶಾಖೆಯಲ್ಲಿ. ನಗರದ ಒಂದು ನರ್ಸಿಂಗ್ ಕಾಲೇಜಿನಲ್ಲಿ ಕಲಿಯುತ್ತಿದ್ದ ಉತ್ತರಭಾರತದ ವಿದ್ಯಾರ್ಥಿಯೊಬ್ಬ ಮಧ್ಯಾಹ್ನ 11.30ಕ್ಕೆ ಬ್ಯಾಂಕಿನ ಬಾಗಿಲಿನಲ್ಲಿಯೇ ಮೂತ್ರಿಸಿದ್ದ. (ಆ ಕಟ್ಟಡದ ಎರಡನೆಯ ಮಹಡಿಯಲ್ಲಿರುವ ಕಛೇರಿಯದು!) ಪ್ರಶ್ನಿಸಿದ ಓರ್ವ ಖ್ಯಾತ ವೈದ್ಯರನ್ನು, ಬ್ಯಾಂಕ್ ನೌಕರರನ್ನು ಆತ 'So what?' ಎಂದು ಗುಟುರು ಹಾಕಿ ಹೆದರಿಸಿದ ಪರಿ ಇದೆಯಲ್ಲಾ!

ಸತ್ಯಕ್ಕಿಂತ ನಾಣ್ಯ ದೊಡ್ಡದು, ಸತ್ಯಕ್ಕಿಂತ ಲಾಭ ದೊಡ್ಡದು. ಕರಾವಳಿಯ ಕಾಡುಗುಡ್ಡ- ತೋಟಗಳನ್ನು ತರಿದೆಸೆದು, ಬಯಲುಗದ್ದೆಗಳಿಗೆ ಕೆಸರು ತುಂಬಿಸಿ ಶಿಕ್ಷಣ ಸಂಸ್ಥೆಗಳೆಂಬ ಮಾರಿಬಲೆಗಳನ್ನು ನೇಯ್ದು ಹರಡಿ ಕೂತು 'ಬಾ ನೊಣವೆ, ಬಾ ನೊಣವೆ' ಎಂದು ಪಾಡ್ದನ ಹಾಡುತ್ತ ಕುಳಿತ ತುಳುವೀರರ ಪರಿಯ ನಾನೆಂತು ಪೇಳ್ವೆನು! ಕರೆಯುವುದು ಪರವೂರ ನೊಣಗಳನ್ನು! ನಮ್ಮೂರ ನೊಣಗಳ ಜೇಬಿನಲ್ಲಿ ಮಾಂಸ ಕಡಿಮೆ! ಟೆಲಿಫೋನ್ ಬೂತ್, ಜೆರಾಕ್ಸ್ ಅಂಗಡಿಗಳಿಗಿಂತ ಜಾಸ್ತಿ ಮೆಡಿಕಲ್ ಕಾಲೇಜುಗಳು, ಇಂಜಿನಿಯರಿಂಗ್, ಇತ್ಯಾದಿ ಇತ್ಯಾದಿ ಇತ್ಯಾದಿ ಕಾಲೇಜುಗಳಿರುವ ಮಂಗಳೂರಿನಲ್ಲಿ ಈ ವರ್ಷ ಉತ್ತಮ ರ್‍ಯಾಂಕ್‌ನಲ್ಲಿ ಸಿಇಟಿ ಪಾಸಾದ ಕಾವ್ಯಾ ಜೆ.ಎಸ್ ಎಂಬಾಕೆಗೆ ಸೀಟು ಸಿಗಲಿಲ್ಲ. ಆಕೆಯನ್ನು ಅಟ್ಟಾಡಿಸಿ, ಅವಮಾನಿಸಿ ಆಕೆಯೆದುರೇ ಪರನಾಡಿನ ಗಿರಾಕಿಗಳಿಗೆ ಸೀಟು ಮಾರಿ ವಿದ್ಯಾಮಾತೆಗೆ ಆರತಿ ಬೆಳಗಿದರು, 'ತುಳುವಪ್ಪೆ, ತುಳುವಪ್ಪೆ' ಎಂದು ಪ್ರಾರ್ಥಿಸಿದರು, ಆರತಿತಟ್ಟೆ ತುಂಬಿಸಿಕೊಂಡರು; ದೇವರು, ಸತ್ಯ, ಶಾಂತಿ, ಪ್ರತಿಭೆ ಇತ್ಯಾದಿಗಳ ಹೆಸರಲ್ಲಿ ಪುನಃ ಪ್ರತಿಜ್ಞೆಗೈದರು. ಕೋರ್ಟ್‌ಗಳು, ಲೋಕಾಯುಕ್ತರು ಯಾರೂ ಆಕೆಯ ಸಹಾಯಕ್ಕೆ ಬರಲಿಲ್ಲ. ಈಗ ನಮ್ಮ ಲೋಕಾಯುಕ್ತರು ಕೂಡಾ ತುಳುವರೇ. ತುಳುನಾಡಿನ ಪ್ರತಿಷ್ಠಿತ ದೇವಾಲಯಗಳು, ಆಸ್ಪತ್ರೆಗಳು ಹಾಡುವ ಪಾಡ್ದನವೂ ಅದೇ. ಆಧುನಿಕ, ಸ್ಪರ್ಧಾತ್ಮಕ, ಮುಕ್ತ ಜಗತ್ತಿನಲ್ಲಿ 'ಇದೆಲ್ಲಾ ಅನಿವಾರ್ಯ' ಎಂಬ ಮಾತೆಂಬ ಜ್ಯೋತಿರ್ಲಿಂಗಕ್ಕೆ ವಂದಿಸಿಬಿಟ್ಟರೆ ಸಕಲ ಪಾಪಗಳೂ ನಿವಾರಣೆಯಾಗುತ್ತವೆ.

'ಸತ್ಯಮೇವ ಜಯತೇ ನ ಅನೃತಂ' ಎಂದು ಹಾಡುತ್ತೇವೆ, ನಾಣ್ಯದಲ್ಲಿ ಕೆತ್ತಿ ಉರುಳಿಸುತ್ತೇವೆ. 'ಸತ್ಯವೇ ನಮ್ಮ ತಂದೆ ತಾಯಿ, ಸತ್ಯವೇ ನಮ್ಮ ಬಂದು ಬಳಗ' ಎಂದು ಕಸಾಯಿಖಾನೆಯಲ್ಲಿ ಒಡ್ಡೋಲಗ ಕೊಡುತ್ತೇವೆ. ಆದರೆ ಸತ್ಯಕ್ಕಿಂತ ನಾಣ್ಯ ದೊಡ್ಡದು, ಸತ್ಯಕ್ಕಿಂತ ಲಾಭ ದೊಡ್ಡದು. ನಮ್ಮವರೇ ನಮ್ಮ ನೆಲದಲ್ಲಿ ಕಟ್ಟಿದ ಶಾಲಾ ಕಾಲೇಜುಗಳಲ್ಲಿ ನಮ್ಮವರಿಗೆ ಜಾಗವಿಲ್ಲ. ಸಾವಿರಸಾವಿರ ಸಂಖ್ಯೆಯಲ್ಲಿ ಕೇರಳ, ಗುಜರಾತ್ ಮತ್ತಿತರ ರಾಜ್ಯಗಳಿಂದ ವಿದ್ಯಾರ್ಥಿಗಳು ಬರುತ್ತಾರೆ. ಒಮ್ಮೆ ಹಗ್ಗ ಹರಿದುಕೊಂಡ ಕರುವಿನಂತೆ ಹುಚ್ಚುಹುಚ್ಚಾಗಿ ವರ್ತಿಸುತ್ತಾರೆ. ಅವರ ತವರೂರಿನಲ್ಲಿ ಇಲ್ಲದ ಉದಾರ ವಾತಾವರಣವನ್ನು ಇಲ್ಲಿ ಕಾಣುತ್ತಾರೆ.

ದೈವಭೂತಗಳ ಅಧ್ಯಯನ, ಸಾಂಸ್ಕೃತಿಕ ಅಧ್ಯಯನ ಎಂಬ ಹೆಸರಿನಲ್ಲಿ ಹೆಚ್ಚಿನ ಬಾರಿ ನಡೆದದ್ದು ಗುತ್ತಿನಮನೆಗಳ ಪಾಳೇಗಾರಿಕೆಯ ವೈಭವೀಕರಣ ಮತ್ತು ಪುನರ್ನಿರ್ಮಾಣದ ಯಶಸ್ವೀ ಯತ್ನಗಳು. ದೈವ-ದೇವರುಗಳೆಲ್ಲ ನಂಬಿಕೆವಿಶ್ವಾಸಗಳ ಆಧಾರವಾಗುಳಿಯದೆ ಹೊಟ್ಟೆಪಾಡಿನ ಹೇಯ ಮಾರ್ಗಗಳಾಗಿ ಬದಲಾದವು. ಕಳೆದೊಂದು ಶತಮಾನದಲ್ಲಿ 'ದುರ್ಗಾಪರಮೇಶ್ವರಿ'ಯಾಗಿ ರೂಪಾಂತರಗೊಂಡು ಬ್ರಾಹ್ಮಣ ಅರ್ಚಕರ ಮಡಿಗಂಟಿಗೆ ಸೇರಿಹೋದ ಲೆಕ್ಕೆಸಿರಿ, ಯಕ್ಷಿ, ಧೂಮಾವತಿ ಮುಂತಾದ ದೈವಗಳ ಸಂಖ್ಯೆ ದಿಗಿಲುಹುಟ್ಟಿಸುವಷ್ಟಿದೆ. (ಕೇವಲ ನಾಲ್ಕಾರು ವರ್ಷಗಳ ಹಿಂದೆ ಅರೆಹೊಳೆಯ ಸರಕಾರದಿಂದ Best man, ಮೊಕ್ತೇಸರ, ಧರ್ಮದರ್ಶಿ ಎಂಬಿತ್ಯಾದಿಯಾಗಿ ನೇಮಕಗೊಂಡು ಬಂಟಸಮುದಾಯದ ಯುವ ಪುಂಡಪುಡಾರಿಗಳಿಗೆ ಸಂದುಹೋಗಿ ಶರಾಬುಅಂಗಡಿ, 'ಕಲ್ಲಕ್ವಾರೆ' ಇತ್ಯಾದಿ 'ಕಂತ್ರಾಟು' ವ್ಯವಹಾರಗಳಂತಾಗಿಬಿಟ್ಟ ಕರಾವಳಿಯ ದೇವಾಲಯಗಳಿಗೆ ಲೆಕ್ಕವಿಲ್ಲ. (ಲಾಭಕ್ಕಾಗಿ ಇವರಿಬ್ಬರು ಯಾವ್ಯಾವ ಹೊತ್ತಿನಲ್ಲಿ ಒಂದಾಗುತ್ತಾರೆ, ಯಾವ್ಯಾಗ ಕಾದಾಡುತ್ತಾರೆ ಎಂಬುದು ಅಧ್ಯಯನಯೋಗ್ಯ ವಿಚಾರ.)

ಜನಪದ ಅಧ್ಯಯನಕ್ಕಾಗಿರುವ ಒಂದು ಅರೆಸರಕಾರಿ ಸಂಸ್ಥೆಯ ಜಿಲ್ಲಾ ಶಾಖೆಯೊಂದು ಇತ್ತೀಚೆಗೆ ಉಡುಪಿಯಲ್ಲಿ ಉದ್ಘಾಟನೆಗೊಂಡಿತ್ತು. ಅದಕ್ಕೆ ಒಂದ್ಹೆರಡು ದಿನಗಳಿಗೆ ಮೊದಲು ಬಂಟಸಮಾಜದ ಹಿರಿಯರೊಬ್ಬರು ಬೆಂಗಳೂರಿನಲ್ಲಿರುವ ಸಂಬಂಧಪಟ್ಟ ಅಧಿಕಾರಿಗಳಿಗೆ ಫೋನಾಯಿಸಿ "ಅದು ಹೇಗೆ 'ನಮ್ಮನ್ನು' ಬಿಟ್ಟು ಮಾಡಿಕೊಳ್ಳುತ್ತೀರಿ!?" ಎಂದು ದಬಾಯಿಸಿ ವೇದಿಕೆಯಲ್ಲಿ ಸ್ಥಾನವನ್ನು ವಶಪಡಿಸಿಕೊಂಡಿದ್ದರು. ಅವರು 'ನಮ್ಮನ್ನು' ಎಂದ ಬುದ್ಧಿಜೀವಿ-ಜನಪದತಜ್ಞರೆಲ್ಲ*5 ಸಡಗರದಿಂದ ಓಡಾಡಿಕೊಂಡಿದ್ದರು.

ಇನ್ನೊಂದೆಡೆಯಲ್ಲಿ ಕರಾವಳಿಯ ದೈವಗಳೆಲ್ಲ ವಿಶ್ವವಿದ್ಯಾನಿಲಯಗಳ ಜಾತಿರಾಜಕಾರಣದ ತೆಕ್ಕೆಗೆ ಸೇರಿಹೋಗಿ ಎಂಫಿಲ್, ಪಿಎಚ್‌ಡಿ ಸಂಪಾದನೆಗೆ, ಉದ್ಯೋಗ ಮುಂಬಡ್ತಿಗೆ ಎಂದೂ ಬತ್ತದ ಕಚ್ಚಾಸಾಮಗ್ರಿಗಳ ಉಗ್ರಾಣವಾಗಿಬಿಟ್ಟವು. (ದೈವಾರಾಧನೆಯೆಂಬುದು ಜಾತಿವ್ಯವಸ್ಥೆಯ ಚೌಕಟ್ಟಿನೊಳಗೆ ಇರುವಂತಾದ್ದು ನಿಜ; ಆದರೆ ಜಾತಿರಾಜಕಾರಣ ವಿಷಮರೀತಿಯಲ್ಲಿ ಗಟ್ಟಿಗೊಳ್ಳುವುದಕ್ಕೆ ಅವುಗಳು

ಆಟಿಕೆಗಳಾಗುತ್ತಿರುವುದು ಶೋಚನೀಯ.)

ಯಾರ್ಯಾರೋ ರಾಜಕಾರಣಿಗಳಿಗೆ, ಗುತ್ತಿಗೆದಾರರಿಗೆ ಮತ್ತು ಪುಂಡರಿಗೆ ಲಾಭ ತರುವ MSEZಗೆ ನಾವು ಬರಿದೇ ಮನಸೋತು ಆ ಕುಡುಬಿ ಮುತ್ತಿನಂತಹ ಬೀಜ ಬಿತ್ತಿ ಬೆಳೆದ ಸಾಮರಸ್ಯದ ಬೆಳೆಯನ್ನು ಹಾಳುಗೆಡವುತ್ತಿದ್ದೇವೆಯೇ? ಈ ಮಿಂಚುವ ಕಾಂಚಾಣದ ಮುಂದೆ ಆ ಮಹಿಳೆ ಬೆಳೆದ ಅಮೂರ್ತ ಬೆಳೆಯೆಲ್ಲ ಬಾಲಿಶ, ಕ್ಷುಲ್ಲಕ, ಚಿಲ್ಲರೆ ಎನ್ನಿಸಬಹುದು. ಆದರೆ ಅದನ್ನೆತ್ತಿ ಬಿಸಾಡುವ ಮುನ್ನ ಮಗದೊಮ್ಮೆ ನೋಡಿಬಿಡುವುದು ಲೇಸು. ಏಕೆಂದರೆ ಅಮೂರ್ತವಾದುದನ್ನು ಒಮ್ಮೆ ಬಿಸಾಡಿದರೆ ಮುಗಿಯಿತು, ಮತ್ತೆ ಸಿಗಲಾರದು; ಬಿಸಾಡಿದ, ಮರೆತ ಕಾಸನ್ನು ಎಂದೂ ಎತ್ತಿಕೊಳ್ಳಬಹುದು. ಬುದ್ಧಿವಂತರ ನಾಡಿಗೆ ಅಮಾಯಕತೆಯ ಎಳೆಯನ್ನು ನೇಯ್ದ ಕುಡುಬಿಯರಿಗೆ ಕೃತಘ್ನರಾದೆವೇ?

ಬಾಲ್ಯದಲ್ಲಿ ನಾವು ಕೇಳಿದೊಂದು ಅಜ್ಜಿ ಕತೆ. ರಾಜನೊಬ್ಬ ಅರಮನೆ ಕಟ್ಟಿಸಲು ಜಾಗ ಹುಡುಕುತ್ತಾನೆ. ಕೊನೆಗೊಂದು ಸುವಿಶಾಲವಾದ, ಉತ್ತಮ ಜಾಗ ಅವನ ದೃಷ್ಟಿಗೆ ಬೀಳುತ್ತದೆ. ಆದರೆ ಆ ಜಾಗದಲ್ಲಿ ಒಬ್ಬಾಕೆ ಮುದುಕಿಯ ಹರುಕು ಜೋಪಡಿಯಿತ್ತು. ಅರಸ ಆಕೆಯಲ್ಲಿ ಜೋಪಡಿಯನ್ನು ತೊರೆದುಹೋಗುವಂತೆ ಹೇಳುತ್ತಾನೆ. ಆಗ ಆಕೆ 'ನಿನ್ನ ಅರಮನೆ ನಿನಗೆ ಮನೆ, ನನ್ನ ಗುಡಿಸಲು ನನಗೆ ಮನೆ. ನಿನಗೆ ಭೂಷಣವೆಂದಾದರೆ ನನ್ನನ್ನು ಓಡಿಸು' ಎನ್ನುತ್ತಾಳೆ. ಅರಸನಿಗೆ ಜ್ಞಾನೋದಯವಾಗಿ ಅಜ್ಜಿಗೆ ವಂದಿಸಿ ಹಿಂದಿರುಗುತ್ತಾನೆ. ಪ್ರಭುತ್ವ ಇಷ್ಟು ನೀತಿಯುತವಾಗಿ ನಡೆದುಕೊಂಡ ನಿದರ್ಶನಗಳು ಎಂದೂ, ಎಲ್ಲಿಯೂ ಇದ್ದಿರಲಿಕ್ಕಿಲ್ಲ. ಆದರೆ ಪ್ರಭುತ್ವಕ್ಕೆ ಆದರ್ಶವನ್ನು ರೂಪಿಸಿಕೊಡಬೇಕಾದ ಜನಸಾಮಾನ್ಯರ ಪ್ರಜ್ಞೆ ಈ ಕತೆ. ಚರಿತ್ರೆಯಲ್ಲಿ ಸಂದುಹೋದ ಆ ಇಬ್ಬರು ಹತಭಾಗಿನಿಯರು ಕಟ್ಟಿದ ಪ್ರಜ್ಞೆಯನ್ನು, ಬಿತ್ತಿದ ಮುತ್ತಿನ ಬೀಜವನ್ನು ಕಮರಿಸಿಬಿಟ್ಟೆವಲ್ಲಾ?

ಬಾಲ್ಯದಲ್ಲಿ ನಾವು ಕೇಳಿದೊಂದು ಅಜ್ಜಿ ಕತೆ. ರಾಜನೊಬ್ಬ ಅರಮನೆ ಕಟ್ಟಿಸಲು ಜಾಗ ಹುಡುಕುತ್ತಾನೆ. ಕೊನೆಗೊಂದು ಸುವಿಶಾಲವಾದ, ಉತ್ತಮ ಜಾಗ ಅವನ ದೃಷ್ಟಿಗೆ ಬೀಳುತ್ತದೆ. ಆದರೆ ಆ ಜಾಗದಲ್ಲಿ ಒಬ್ಬಾಕೆ ಮುದುಕಿಯ ಹರುಕು ಜೋಪಡಿಯಿತ್ತು. ಅರಸ ಆಕೆಯಲ್ಲಿ ಜೋಪಡಿಯನ್ನು ತೊರೆದುಹೋಗುವಂತೆ ಹೇಳುತ್ತಾನೆ. ಆಗ ಆಕೆ 'ನಿನ್ನ ಅರಮನೆ ನಿನಗೆ ಮನೆ, ನನ್ನ ಗುಡಿಸಲು ನನಗೆ ಮನೆ. ನಿನಗೆ ಭೂಷಣವೆಂದಾದರೆ ನನ್ನನ್ನು ಓಡಿಸು' ಎನ್ನುತ್ತಾಳೆ. ಅರಸನಿಗೆ ಜ್ಞಾನೋದಯವಾಗಿ ಅಜ್ಜಿಗೆ ವಂದಿಸಿ ಹಿಂದಿರುಗುತ್ತಾನೆ. ಪ್ರಭುತ್ವ ಇಷ್ಟು ನೀತಿಯುತವಾಗಿ ನಡೆದುಕೊಂಡ ನಿದರ್ಶನಗಳು ಎಂದೂ, ಎಲ್ಲಿಯೂ ಇದ್ದಿರಲಿಕ್ಕಿಲ್ಲ. ಆದರೆ ಪ್ರಭುತ್ವಕ್ಕೆ ಆದರ್ಶವನ್ನು ರೂಪಿಸಿಕೊಡಬೇಕಾದ ಜನಸಾಮಾನ್ಯರ ಪ್ರಜ್ಞೆ ಈ ಕತೆ.

*   *   *   *   *

ಅಡಿಟಿಪ್ಪಣಿಗಳು:

1. ಸಂಗಡಿಗರಾದ ಶ್ರೀಮತಿ ಮಂಜಿ ಮತ್ತು ಶ್ರೀಮತಿ ಪಿಲ್ಲು ಅವರೊಂದಿಗೆ, ಇದನ್ನು ಬೆರಗುಹುಟ್ಟಿಸುವ ತಮ್ಮ ಇನಿದನಿಯಲ್ಲಿ ಹಾಡಿದವರು ಆವರ್ಸೆ ಕಿರಾಡಿ ರಾಯರಬೆಟ್ಟಿನ ಶ್ರೀಮತಿ ಚಣ್ಣು ಅವರು.

2. ಇತ್ತೀಚೆಗೆ ಈ ಜನವರ್ಗದ ಯುವಕರು 'ಕೂಸಾಳ' ಎಂಬ ಪದ ನಿಂದನಾತ್ಮಕ ಎಂದು ಬಗೆದು 'ಅದನ್ನು ಉಪಯೋಗಿಸಬಾರದು' ಎಂಬ ಭಯಜನಕ ಅಭಿಯಾನದಲ್ಲಿ ತೊಡಗಿದ್ದಾರೆ ಮತ್ತು ಪರ್ಯಾಯವಾಗಿ 'ಉಪ್ಪಾರಸೆಟ್ಟಿ' ಎಂಬ ಹೊಸಪದವನ್ನು ಟಂಕಿಸಿದ್ದಾರೆ. 'ಸೆಟ್ಟಿ'ಯೆಂಬ ಪದ ತುಂಬಾ 'ಮೋಹಕ'ವಾದದ್ದು! ಈ ಜನಾಂಗಕ್ಕೆ ಸೇರಿದ, ಮಂಗಳೂರು ವಿಶ್ವವಿದ್ಯಾಲಯದ ಇತಿಹಾಸ ವಿಭಾಗದ ಮುಖ್ಯಸ್ಥರಾದ, ಡಾ. ಉದಯ ಬಾರಕೂರು ಅವರ ಪ್ರಕಾರ 'ಕೂಸಾಳ' ಎಂಬ ಪದ ನಿಂದನಾತ್ಮಕವಲ್ಲ. 'ಉಳ್ಳವರ ಮನೆಯಲ್ಲಿ ಮಕ್ಕಳನ್ನು (ಕೂಸುಗಳನ್ನು) ಪಾಲಿಸಿಕೊಂಡುಬಂದದ್ದರಿಂದ ಈ ಪದ ಹುಟ್ಟಿಕೊಂಡಿದೆ; ಆದರೆ ಕಾಲಾಂತರದಲ್ಲಿ ಅಸ್ಪೃಶ್ಯತೆ ಅಂಟಿಕೊಂಡಿತು' ಎನ್ನುತ್ತಾರೆ.

3. ಈಗೀಗ ಕುಡುಬಿ ಜನಾಂಗದ ಕೆಲ ಯುವಕರು ಸಭ್ಯ ಸಮಾಜದ ಹಲವು ಗುಣವಿಶೇಷಗಳಾದ ವಂಚನೆ, ಶ್ರೀಂತ್ರಿ, ಶರಾಬು, ವರದಕ್ಷಿಣೆ ಇತ್ಯಾದಿಗಳನ್ನು ಅಳವಡಿಸಿಕೊಳ್ಳುತ್ತಿದ್ದಾರೆ ಎಂಬುದು ಸಮಾಧಾನಕರ ಅಂಶ! ಇತ್ತೀಚಿನವರೆಗೂ ಪೋಲಿಸ್ ದಾಖಲೆಗಳಲ್ಲಿ ಆ ಜನಾಂಗಕ್ಕೆ ಸೇರಿದವರ ಹೆಸರು 'ಇಲ್ಲ' ಎಂಬಷ್ಟು ಕಡಿಮೆಯಾಗಿತ್ತು. ಈಗೀಗ ಆ ದಾಖಲೆವೀರರು ಹುಟ್ಟಿಕೊಳ್ಳುತ್ತಿದ್ದಾರೆ.

4. ಕುಡುಬಿಯರು ಕೂಡಾ ಅಲ್ಲ! ನಾಯಿಗಳು, ಬೆಕ್ಕುಗಳು ಎಂದಂತೆ ಕುಡುಬಿಗಳು! ಇದನ್ನು ಬೇರೆ ಯಾವುದಾದರೂ ಉಚ್ಚ ಕೋಮು-ಜಾತಿಯವರಿಗೆ ಹೇಳಿರಲಿ ನೋಡೋಣ, ದೊಂಬಿಯಾಗುತ್ತಿತ್ತು! ಹೌದು, ಒಪ್ಪೋಣ. ಇಕಾರಾಂತ ನಾಮಪದಗಳಿಗೆ 'ರು' 'ಯರು' ಮತ್ತು 'ಯವರು' ಪ್ರತ್ಯಯ ಸೇರಿಸುವುದು ಉಚ್ಚಾರಕ್ಕೆ ಅನುಕೂಲವಲ್ಲ. 'ಅನುಕೂಲವಲ್ಲ' ಎಂದುಕೊಂಡು ಮರ್ಯಾದೆ ಮೀರಬಾರದಲ್ಲ? ಅದಕ್ಕೆ ಕುಂದಗನ್ನಡದ ಜನರು ಮಾಡಿಕೊಂಡ ಬದಲಾವಣೆ ಸೊಗಸಾಗಿದೆ. ಅವರು ಕುಡ್ಬೇರು, ಮರಾಠರು... ಎನ್ನುತ್ತಾರೆ.

5. ನನ್ನೊಬ್ಬ ಮಿತ್ರರು ಸರಿಯಾಗಿ ಹೇಳುವಂತೆ ಇವರೆಲ್ಲಾ ತಮ್ಮ ಜಾತೀಯತೆಯನ್ನು ಮರೆಯಲ್ಲಿರಿಸಲು Secular ಪೋಷಾಕುತೊಟ್ಟವರು. ಮೇಲೆ ಉದ್ಧರಿಸಿದ ಹಾಡನ್ನು ಶ್ರೀಮತಿ ಚಣ್ಣು ಅವರು ಅದೇ ಸಭೆಯಲ್ಲಿ ಸನ್ಮಾನ ಸ್ವೀಕರಿಸಲು ಬಂದಿದ್ದರು. ಆ ಸಂದರ್ಭದಲ್ಲಿ ತಮ್ಮ ತಂಗಿಯೊಂದಿಗೆ ಸೇರಿ ಕೋಲುಹೊಯ್ಯುವ ಪದಗಳನ್ನು ಹಾಡಿದರು. ಇವರೆಲ್ಲಾ ಎಂತಹ ಜನಪದತಜ್ಞರೆಂದರೆ ಹಾಡಲು ನಿಂತಾಗ ಯಾರಿಗೆ ಮೈಕ್ ಹಿಡಿಯಬೇಕು ಎಂಬುದು ತಿಳಿಯದೆ ತಡಬಡಾಯಿಸಿದರು. ಅಂದರೆ ಕೋಲು ಹೊಯ್ಯುವ ಪದಗಳನ್ನು ಹಾಡುತ್ತಾರೆ, ಯಾರು ದನಿ ಸೇರಿಸುತ್ತಾರೆ, ಯಾರು ಕೋಲು ಹೊಯ್ಯುತ್ತಾರೆ, ತಂಡದಲ್ಲಿ ಎಷ್ಟು ಮಂದಿ ಇರುತ್ತಾರೆ ಎಂಬುದೇ ಅವರಿಗೆ ತಿಳಿದಿರಲಿಲ್ಲ. □



ಸೃಜನಾತ್ಮಕ ಹಾಗೂ ವೈಚಾರಿಕ ಸಾಹಿತ್ಯ ಕೃತಿಗಳನ್ನು ವಿಮರ್ಶೆಗಾಗಿ

ಸಂವಾದ

ಆಹ್ವಾನಿಸುತ್ತದೆ.



ಪ್ರಕಾಶಕರು / ಲೇಖಕರು ಪ್ರಕಟಿತ ಕೃತಿಯ ೨ ಪ್ರತಿಗಳನ್ನು ಕಳುಹಿಸಿಕೊಡಬೇಕಾಗಿ ಕೋರಲಾಗಿದೆ.

ವಿಳಾಸ:
ಸಂಪಾದಕರು 'ಸಂವಾದ' ಮಾಸಪತ್ರಿಕೆ,
ಸ್ಫೂರ್ತಿಧಾಮ, ಅಂಜನಾಗರ,
ವಿಶ್ವನೀಡಂ ಅಂಚೆ, ಬೆಂಗಳೂರು-೫೬೦ ೦೯೧
ದೂರವಾಣಿ : ೩೨೮ ೭೯೪೩/೯೪೪೮೦೪೮೩೦೬

ಮಾತೃಭಾಷೆ: ಹಾಗೆಂದರೇನು?

ಮೇಟಿ ಮಲ್ಲಿಕಾರ್ಜುನ

ತಾಯ್ನುಡಿ ಕುರಿತು ಸಾಕಷ್ಟು ನಂಬಿಕೆಗಳು ಹುಟ್ಟಿಕೊಂಡಿವೆ. ಅವುಗಳೆಂದರೆ, ತಾಯ್ನುಡಿ ಅದು ಜನಾಂಗಗಳ ಸ್ಮೃತಿಕೋಶವಾಗಿದೆ. ಅವರ ಲೋಕಗ್ರಹಿಕೆಯನ್ನು ರೂಪಿಸಿಕೊಳ್ಳುವ ಹಾಗೂ ಅವರ ಸಂವೇದನಾ ಪ್ರಕ್ರಿಯೆಯನ್ನು ಕಟ್ಟಿಕೊಳ್ಳುವ ಕ್ರಮ ಆ ತಾಯ್ನುಡಿಯಿಂದಲೇ ಸಾಧ್ಯ. ಜಗತ್ತಿನ ಎಲ್ಲ ಬಗೆಯ ತಿಳುವಳಿಕೆಯನ್ನು ಪಡೆಯುವ ಪ್ರಕ್ರಿಯೆಯಲ್ಲಿ ತಾಯ್ನುಡಿ ಬೆಳಕಿಂಡಿಯಾಗಿದೆ. ಇದು ಸಮುದಾಯದ ಅನುಭವವನ್ನು ಚಾರಿತ್ರಿಕವಾಗಿ, ಪಾರಂಪರಿಕವಾಗಿ ತನ್ನ ಸ್ಮೃತಿಕೋಶಗಳಲ್ಲಿ ಅಂತಸ್ಥಗೊಳಿಸಿರುತ್ತದೆ. ಆಯಾ ಸಂಸ್ಕೃತಿಯ ರಚನೆಗಳು ಆಯಾ ತಾಯ್ನುಡಿಯೊಂದಿಗೆ ಬೆಸೆದುಕೊಂಡಿರುತ್ತವೆ. ಸಾಂಸ್ಕೃತಿಕ ಹಾಗೂ ಸಂವಹನ ರಚನೆಗಳು ಏಕತ್ರಗೊಂಡಿರುತ್ತವೆ.

...Why not let me speak in
Any language I like? The language I speak
Becomes mine, its distortions, its queernesses
All mine, mine alone. It is half-English, half
Indian, funny perhaps, but it is honest,
It is as human as I am human, don't
You see?...

– Kamala Das

Language is the key to the heart of culture. (Edwards 1985:36)

Language embodies the world view of a culture and is unique to the culture that created it. It reflects values and concepts that are deemed to be the most important by culture. A language describes the culture it comes from. (Noam Chomsky, www.anacleta.homestead.com)

Globally, language is the dynamite of thought. If you kill or render impotent a people's language, you can as well kill the people, but if you effectively plan and develop a people's language, you are laying treasures that affect eternity and providing the people with tools of self identity, self actualization and self promotion. (Adegbija 1993:9)

ಮಾತೃಭಾಷೆ ಅಂದರೇನು ಎಂಬುದರ ವ್ಯಾಖ್ಯೆಗಳನ್ನು ಕೊಡುವುದು ನನ್ನ ಉದ್ದೇಶವಲ್ಲ. ಬದಲಿಗೆ, ಇಂತಹ ಪದಗಳು [ಪರಿಕಲ್ಪನೆ] ಹುಟ್ಟಿಸುವ ಸಾಂಸ್ಕೃತಿಕ ಬಿಕ್ಕಟ್ಟುಗಳ ಬಗ್ಗೆ ತಮ್ಮ ಗಮನ ಸೆಳೆಯಲು ಯತ್ನಿಸುತ್ತೇನೆ. ಜನಮಾನಸದಲ್ಲಿ 'ತಾಯ್ನುಡಿ'ಗೆ ಬದಲಾಗಿ 'ಮಾತೃಭಾಷೆ' ಎಂಬ ಪದವೇ ಹೆಚ್ಚು ಬಳಕೆಗೆ ಬಂದಿದೆ. ಆದಾಗ್ಯೂ ನಾನು ಈ ಟಿಪ್ಪಣೆಯಲ್ಲಿ ಇನ್ನೂ ಮುಂದೆ ಮಾತೃಭಾಷೆಗೆ ಬದಲಾಗಿ 'ತಾಯ್ನುಡಿ' ಎಂಬ ಪದವನ್ನು ಬಳಸುತ್ತೇನೆ. ಕಾರಣವೇನಂದರೆ ಕನ್ನಡದ ನುಡಿಗಟ್ಟುಗಳನ್ನೇ ಸಹಜವಾಗಿ ಬಳಕೆಗೆ ತರುವ ಹೆಬ್ಬಯಕೆ. ಈ ನಡೆ ಈಗಾಗಲೇ ಬಳಕೆಗೆ ಬಂದಿದೆ. ಈ ಲೇಖನವು ತನ್ನ ಚರ್ಚೆಯ ಮುಖ್ಯ ಭಿತ್ತಿಯನ್ನಾಗಿ ನಾಡು-ನುಡಿ-ಸಂಸ್ಕೃತಿಗಳ ನಡುವಣ ತಿಕ್ಕಾಟ ಹಾಗೂ ಸ್ವನುಡಿ-ಪರ ನುಡಿಗಳ ನಡುವಣ ಯಾಜಮಾನ್ಯ-ಅಧೀನ ಸಂಬಂಧಗಳನ್ನು ಆಯ್ದುಕೊಂಡಿದೆ. ನಾಗರಿಕತೆಯ ವಿಕಾಸ ಹಾಗೂ ಚರಿತ್ರೆಯ ಚಲನಶೀಲತೆ ಒದಗಿಸುವ ಕುರುಹುಗಳ ಆಧಾರದ ಮೇಲೆ, ತಾಯ್ನುಡಿ ಎನ್ನುವುದೇ ಒಂದು ಹುಸಿಕಲ್ಪನೆ [ಮಿಸ್‌ನಾಮರ್] ಎನ್ನುವ ತಿಳುವಳಿಕೆಯೂ ಮುಂಚೂಣೆಗೆ ಬಂದಿದೆ. ಬೇರೆ ಬೇರೆ ಸಂಸ್ಕೃತಿಗಳು ವಾಸಿಸುವ ಒಂದು ಸಮುದಾಯದಲ್ಲಿ 'ತಾಯ್ನುಡಿ'ಯನ್ನು ಗುರುತಿಸುವ ತಾತ್ವಿಕ ನೆಲೆಗಳಾವವು? ಅಂತಹದೊಂದು ಸನ್ನಿವೇಶವನ್ನು ಖಚಿತವಾಗಿ ವ್ಯಾಖ್ಯಾನಿಸಬಹುದಾ? ಹೌದಾದರೆ ಹೇಗೆ? ಸಾಹಿತ್ಯಿಕ-ಭಾಷಿಕ ಚರಿತ್ರೆಗಳನ್ನು ಪರಿಶೀಲಿಸಿ ನೋಡಿದರೆ, ಎಲ್ಲಿಯೂ ಕೂಡ ತಾಯ್ನುಡಿಯನ್ನು ಖಚಿತ ಹಾಗೂ ನಿರ್ದಿಷ್ಟವಾಗಿ ವ್ಯಾಖ್ಯಾನಿಸಿದ್ದು ಕಂಡು ಬಂದಿಲ್ಲ.

ಹಾಗಾದರೆ, ಇಂತಹ ಒಂದು ಸಾಂಸ್ಕೃತಿಕ-ಭಾಷಿಕ ಸನ್ನಿವೇಶವನ್ನು ವಿವರಿಸುವದು ಹೇಗೆ? ಇದಕ್ಕಿರುವ ತಾತ್ವಿಕ ಸಮರ್ಥನೆಗಳೇನು? ತಾಯ್ನುಡಿಗೆ ಬದಲಾಗಿ ನಾಡುನುಡಿ, ಪರಿಸರನುಡಿ, ಮೊದಲನುಡಿ ಮುಂತಾದ ಪರಿಕಲ್ಪನೆಗಳು ಬಳಕೆಯಲ್ಲಿವೆ. ಇಂತಹ ರೂಢಿಗಳನ್ನು ಗಮನಿಸಿದಾಗ ಸ್ಪಷ್ಟವಾಗುವುದೇನಂದರೆ, ಈ ಪರಿಕಲ್ಪನೆ ಆಕಸ್ಮಿಕವಾಗಿ ಜಾರಿಗೆ ಬಂದಿದೆ ಎಂದು ಅನ್ನಿಸುತ್ತದೆ. ಇತ್ತೀಚಿನ ರಾಷ್ಟ್ರ-ರಾಷ್ಟ್ರೀಯತೆಯ ಕಲ್ಪನೆಯೊಂದಿಗೆ ತಾಯ್ನುಡಿ - ತಾಯ್ನಾಡು ಎನ್ನುವಂತಹ ಮೌಲ್ಯಗಳು ಪ್ರಾಮುಖ್ಯತೆಯನ್ನು ಪಡಕೊಂಡಿರುವುದು ಗಮನಾರ್ಹ.

ರಾಷ್ಟ್ರೀಯತೆಯನ್ನು ಬೆಳಸುವ ಪ್ರಕ್ರಿಯೆಯಲ್ಲಿ ಭಾಷೆಯು ತನ್ನ ಮೂಲಭೂತ ಸ್ವರೂಪಕ್ಕಿಂತ ಬೇರೆಯೇ ರೂಪವನ್ನು ಪಡಕೊಂಡಿದೆ. ಧರ್ಮ, ಜಾತಿಗಳು ಸ್ವರೂಪವನ್ನೇ ಭಾಷೆಯೂ ಪಡಕೊಂಡಿದೆ [ಆರೋಪಿಸಲಾಗಿದೆ]. ಧರ್ಮ ಹಾಗೂ ಜಾತಿಯೊಂದಗಿನ ನಂಟು ಯಾವಾಗಲೂ ಅಂಧಾನುಕರುಣೆಯಿಂದ ಕೂಡಿರುತ್ತದೆ ಎನ್ನುವ ವಾದಗಳಿವೆ. ಭಾಷೆಗೂ ಇದೇ ಸ್ಥಿತಿ ಒದಗಿದೆ ಎನ್ನುವುದರಲ್ಲಿ ಸಂಶಯವೇ ಇಲ್ಲ. ಇದು ಹುಟ್ಟಿಸುವ ಸಾಂಸ್ಕೃತಿಕ ಅಪಾಯ ಯಾರನ್ನಾದರೂ ಘಾಸಿಗೊಳಿಸುತ್ತದೆ. ಹಾಗಾದರೆ ಭಾಷೆಯ ಮೂಲ ಸ್ವರೂಪವೇನು? ಅದು ಯಾಕೆ? ಧರ್ಮ, ಜಾತಿ ಹಾಗೂ ಪ್ರಾದೇಶಿಕತೆಯಂತಹ ಮೌಲ್ಯಗಳೊಂದಿಗೆ ಸಮೀಕರಣಗೊಂಡಿದೆ. ಇಂತಹ ಸನ್ನಿವೇಶದ ಹಿಂದಿನ ತಾತ್ವಿಕ ಒತ್ತಡಗಳೇನು? ಇಂತಹ ಹಲವು ಪ್ರಶ್ನೆಗಳು ಸೂಕ್ಷ್ಮಮತಿಗಳನ್ನು ಕಾಡದೆ ಇರಲಾರವು.

'ತಾಯ್ನುಡಿ' ಹಾಗೂ 'ತಾಯ್ನಾಡು' ಮುಂತಾದ ಮೌಲ್ಯಗಳ ಹೊರಚಾಚು ಏನು? ನಾಡು-ನುಡಿಗಳ ನಡುವೆ ನಂಟು ಬೆಸೆಯುವ ನೆಲೆಗಳಾವವು? ನಾವು ಭಾರತೀಯರು ಅನ್ನುವ ಭಾವನೆ ಹಿಂದಿನ ಪ್ರೇರಣೆಗಳೇನು? ಅದೇ ನಾವು ಕನ್ನಡಿಗರು ಅನ್ನುವ ಭಾವನೆಗಳ ನೆಲೆಗಳಾವವು? ನಾಡು-ನುಡಿ ಎರಡನ್ನೂ 'ತಾಯಿ'ಗೆ ಸಮೀಕರಸಿಕೊಂಡು ಆರಾಧಿಸುವ ಬಗೆಯೇ ಒಂದು ರಾಜಕೀಯ ಹುನ್ನಾರದಂತೆ ಕಾಣುತ್ತದೆ. ನಾವು ಭಾರತೀಯರು ಎನ್ನುವುದು ಕೇವಲ ರಾಜಕೀಯ ಒಗ್ಗಟ್ಟಿನ ನಂಬಿಕೆಯಾದರೆ, ಅದನ್ನು 'ತಾಯ್ನಾಡು' ಎಂದು ಕರೆಯುವ ಜರೂರು ಏನಿತ್ತು? ಇದು ಕೇವಲ ರಾಜಕೀಯ ಪ್ರೇರಿತ ಮೌಲ್ಯವಾದರೆ, ಇದಕ್ಕೆ ಜನಸಾಮನ್ಯರು ಇಷ್ಟೊಂದು ಗೌರವ ತೋರಿಸುವ ಅಗತ್ಯವಿರಲಿಲ್ಲ ಎಂದು ಕಾಣುತ್ತದೆ. ನಾಡು-ನುಡಿಗಳ ನಡುವೆ ಸಾಂಸ್ಕೃತಿಕ ಹೊಂದಾಣಿಕೆಯ ಕೊರತೆ ಇದ್ದೇ ಇರುತ್ತದೆ. ಇದಕ್ಕೆ ಸಾಕಷ್ಟು ನಿದರ್ಶನಗಳು ನಮ್ಮ ಚರಿತ್ರೆಯಲ್ಲಿಯೇ ಸಿಗುತ್ತವೆ.

ಕುತೂಹಲದ ಸಂಗತಿ ಏನಂದರೆ ನಾಡು ಬಹುತ್ವತೆಯ ಸಂಕೇತವಾದರೆ ನುಡಿ ಏಕತೆಯ ಸಂಕೇತವಾಗಿರುತ್ತದೆ. ವಾಸ್ತವದಲ್ಲಿ ನಾಡು-ನುಡಿಗಳ ನಡುವೆ ನಿರಂತರ ಗುದ್ದಾಟವಿರುತ್ತದೆ. ಇದು ದಿನವೂ ನಮ್ಮ ಕಣ್ಣಿಗೆ ರಾಚುವ ಸತ್ಯ

ಉದಾಹರಣೆಗೆ ಮಹಾರಾಷ್ಟ್ರ, ಕರ್ನಾಟಕ, ಗೋವಾ ಮುಂತಾದ ರಾಜ್ಯಗಳಲ್ಲಿ ನಡೆಯುವ ಬೆಳವಣಿಗೆಗಳನ್ನು ನೆನಪಿಸಿಕೊಳ್ಳಬಹುದು. ಈ ನಾಡು-ನುಡಿಗಳ ನಡುವೆ ಏಕತೆ ಬೆಸೆಯುವ ಕ್ರಮಗಳಲ್ಲೇ ದ್ವಂದ್ವವಿದೆ ಎಂದು ತೋರುತ್ತದೆ. ಕರ್ನಾಟಕ ಅಥವಾ ಮಹಾರಾಷ್ಟ್ರಗಳು ಒಂದೊಂದು ನಾಡಾದರೆ, ಆ ನಾಡುಗಳಲ್ಲಿ ವಾಸಿಸುವ ಎಲ್ಲ ಜನಸಮೂಹದ ತಾಯ್ನುಡಿ ಕನ್ನಡ/ಮರಾಠಿ ಮಾತ್ರವೇ ಅಲ್ಲ ಅನ್ನುವುದು ಗಮನಾರ್ಹ. ಅಂದರೆ ಕನ್ನಡಿಗ-ಕರ್ನಾಟಕ ಹಾಗೂ ಮರಾಠಿಗ- ಮಹಾರಾಷ್ಟ್ರ ಇವರ ನಡುವೆ ಸಾಮರಸ್ಯಕ್ಕಿಂತ ಸಂಘರ್ಷದ ಪರ್ಸಂಟೇಜ್‌ಯೇ ಜಾಸ್ತಿ ಇದೆ.

ತಾಯ್ನುಡಿ ಕುರಿತು ಸಾಕಷ್ಟು ನಂಬಿಕೆಗಳು ಹುಟ್ಟಿಕೊಂಡಿವೆ. ಅವುಗಳಂದರೆ, ತಾಯ್ನುಡಿ ಅದು ಜನಾಂಗಗಳ ಸ್ಮೃತಿಕೋಶವಾಗಿದೆ. ಅವರ ಲೋಕಗ್ರಹಿಕೆಯನ್ನು ರೂಪಿಸಿಕೊಳ್ಳುವ ಹಾಗೂ ಅವರ ಸಂವೇದನಾ ಪ್ರಕ್ರಿಯೆಯನ್ನು ಕಟ್ಟಿಕೊಳ್ಳುವ ಕ್ರಮ ಆ ತಾಯ್ನುಡಿಯಿಂದಲೇ ಸಾಧ್ಯ. ಜಗತ್ತಿನ ಎಲ್ಲ ಬಗೆಯ ತಿಳುವಳಿಕೆಯನ್ನು ಪಡೆಯುವ ಪ್ರಕ್ರಿಯೆಯಲ್ಲಿ ತಾಯ್ನುಡಿ ಬೆಳಕಿಂಡಿಯಾಗಿದೆ. [ಇಂಗ್ಲಿಷ್ ಹಾಗೂ ಸಂಸ್ಕೃತದಂತಹ ಅಧಿಕಾರಸ್ಥ ಭಾಷೆಗಳು ಮಾತ್ರ ಜ್ಞಾನದ ಬೆಳಕಿಂಡಿಗಳು ಎನ್ನುವ ನಂಬಿಕೆಗಳೇ ನೆಲೆಯೂರಿದ್ದವು. ಅಂತಹ ಸನ್ನಿವೇಶದಲ್ಲಿ ಕನ್ನಡದಂತಹ ದೇಶೀ ಭಾಷೆಗಳು ಗೋಡೆಯಾಗಿ ಪರಿಣಮಿಸಿದ್ದೇ ಹೆಚ್ಚು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು]. ಇದು ಸಮುದಾಯದ ಅನುಭವವನ್ನು ಚಾರಿತ್ರಿಕವಾಗಿ, ಪಾರಂಪರಿಕವಾಗಿ ತನ್ನ ಸ್ಮೃತಿಕೋಶಗಳಲ್ಲಿ ಅಂತಸ್ಥಗೊಳಿಸಿರುತ್ತದೆ. ಆಯಾ ಸಂಸ್ಕೃತಿಯ ರಚನೆಗಳು ಆಯಾ ತಾಯ್ನುಡಿಯೊಂದಿಗೆ ಬೆಸೆದುಕೊಂಡಿರುತ್ತವೆ.

ಸಾಂಸ್ಕೃತಿಕ ಹಾಗೂ ಸಂವಹನ ರಚನೆಗಳು ಏಕತ್ರಗೊಂಡಿರುತ್ತವೆ. ಭಾಷೆ ಪ್ರತಿಯೊಂದು ಸಮುದಾಯದ 'ಅನುಭವ'ವನ್ನು ಚಲನಶೀಲಗೊಳಿಸುತ್ತದೆ ಎನ್ನುವ ತಿಳುವಳಿಕೆ ಬಲವಾಗಿರು ವುದೇ ಈ ಎಲ್ಲ ನಂಬಿಕೆಗಳಿಗೆ ಕಾರಣ. ಇದೊಂದು ಹುಸಿ ನಂಬಿಕೆ ಎಂದು ನನ್ನ ವಾದವಲ್ಲ. ಏನಂದರೆ ಭಾಷೆ ಹಾಗೂ ಸಂಸ್ಕೃತಿಗಳ ನಡುವಣ ನಂಟು ಆಕಸ್ಮಿಕ ಮತ್ತು ಅನಕೂಲಾತ್ಮಕವಾದದ್ದು ಎನ್ನುವುದು ಕೂಡ ಸತ್ಯ. ಪ್ರತಿಯೊಂದು ಭಾಷೆಯು ಯಾವುದೇ ಆಶಯವನ್ನು ಕಟ್ಟಿಕೊಡುವ ಶಕ್ತಿಯನ್ನು ಹೊಂದಿರುತ್ತದೆ. ಯಾವುದು ಮನುಷ್ಯನ ಅನುಭವಕ್ಕೆ ಅಥವಾ ಗ್ರಹಿಕೆಗೆ ದಕ್ಕಲಾರದೋ ಅದು ಭಾಷೆಯಲ್ಲಿ ಪ್ರಕಟಗೊಳ್ಳಲಾರದು. ಇದು ಭಾಷೆಗಿರುವ ಮಿತಿಯಲ್ಲ. ಮನುಷ್ಯನ ಗ್ರಹಿಕೆಗಿರುವ ಮಿತಿಯೆನ್ನುವುದು ಗಮನಾರ್ಹ. ಸಾಮನ್ಯವಾಗಿ ಮನುಷ್ಯನ ಅಭಿವ್ಯಕ್ತಿಗೆ ದಕ್ಕದ ಅನುಭವವನ್ನು ಅವನಾಡುವ ಭಾಷೆಗಿರುವ ಮಿತಿಯೆಂದು ಆರೋಪಿಸಲಾಗಿದೆ. ಅದೇನಂದರೆ ಭಾಷೆ ಮನುಷ್ಯನ ಪ್ರತಿ ಅನುಭವವನ್ನು ವ್ಯಕ್ತಪಡಿಸಲಾರದು ಎಂಬ ಸರಳ ನಂಬಿಕೆವೊಂದು ಜಾರಿಯಲ್ಲಿದೆ.

ಮನುಷ್ಯ ತಾನು ಏನನ್ನು ತನ್ನ ಅನುಭವದ ಭಾಗವನ್ನಾಗಿ ಪಡೆದುಕೊಳ್ಳುತ್ತಾನೋ, ಅದು ಭಾಷೆಯ ಮುಖಾಂತರ ಅನುವಾದಗೊಂಡು ವ್ಯಕ್ತವಾಗುತ್ತದೆ. ಅಮೂರ್ತತೆ ಹಾಗೂ ಮೂರ್ತತೆ ಅನ್ನುವುದು ಭಾಷೆಗೆ ಇರುವ ಸಹಜ ಹಾಗೂ ಅಂತಸ್ಥ ಗುಣವಲ್ಲ. ಇದೊಂದು ಆರೋಪಿತ ಗುಣಮಾತ್ರ, ಒಂದು ಸಾಮಾಜಿಕ ಸನ್ನಿವೇಶದಲ್ಲಿ ಯಾವ ಭಾಷೆಯೊಂದಿಗೆ ಮಗು/ಮನುಷ್ಯ ತನ್ನ ಅನುಭವವನ್ನು ಒಡ್ಡಿಕೊಳ್ಳುತ್ತಾನೋ ಅದು ಅವಳ/ನ ಅನುಭವದ ಪ್ರತಿ ಆಶಯವನ್ನು ವ್ಯಕ್ತಪಡಿಸುವ ಅಭಿವ್ಯಕ್ತಿ ಮಾಧ್ಯಮವಾಗುತ್ತದೆ. ಇದೆಲ್ಲದಕ್ಕಿಂತಲೂ ಹೆಚ್ಚಾಗಿ ತಾಯ್ನುಡಿಯು ಅವಳ/ನ ಸಾಂಸ್ಕೃತಿಕ ಹಾಗೂ ಸೃಜನಶೀಲ ಸಂವೇದನೆಯನ್ನು ಪ್ರತಿನಿಧಿಸುವ ಮಾಧ್ಯಮವೂ ಆಗಿ ದಕ್ಕುತ್ತದೆ. ಹಾಗಾಗಿ ಭಾಷೆ ಮತ್ತು ಮಾನವ ಸಮುದಾಯಗಳ ನಡುವೆ ಒಂದು ಅವಿನಾಭಾವ ನಂಟು ಏರ್ಪಡುವುದೆಂದು ಅನ್ನಿಸುತ್ತದೆ. ಈ ಅನುಭವವು ಭಾಷೆ ಮತ್ತು ಸಮುದಾಯದ ನಿರಂತರ ಸಾತತ್ಯದ ಫಲವೂ ಆಗಿದೆ ಅನ್ನುವುದು ದಿಟ. ಇಂತಹ ವಾದಗಳು ಮಂಡಿಸುವ ಚಿಂತನೆಗಳಿಂದ ಯಾವ ಪ್ರಯೋಜನವು ಇಲ್ಲವೆಂದರೆ, ಇದು ಸಾಂಸ್ಕೃತಿಕ ಗಾಭರಿತನಕ್ಕೆ ಸಾಕಷ್ಟು ಅವಕಾಶ ನೀಡುತ್ತದೆ ಎನ್ನುವುದರಲ್ಲಿ ಸಂದೇಹವೇ ಇಲ್ಲ.

> **ಮನುಷ್ಯ ತಾನು ಏನನ್ನು ತನ್ನ ಅನುಭವದ ಭಾಗವನ್ನಾಗಿ ಪಡೆದುಕೊಳ್ಳುತ್ತಾನೋ, ಅದು ಭಾಷೆಯ ಮುಖಾಂತರ ಅನುವಾದಗೊಂಡು ವ್ಯಕ್ತವಾಗುತ್ತದೆ. ಅಮೂರ್ತತೆ-ಮೂರ್ತತೆ ಅನ್ನುವುದು ಭಾಷೆಗೆ ಇರುವ ಸಹಜ ಹಾಗೂ ಅಂತಸ್ಥ ಗುಣವಲ್ಲ. ಇದೊಂದು ಆರೋಪಿತ ಗುಣಮಾತ್ರ, ಒಂದು ಸಾಮಾಜಿಕ ಸನ್ನಿವೇಶದಲ್ಲಿ ಯಾವ ಭಾಷೆಯೊಂದಿಗೆ ಮಗು/ಮನುಷ್ಯ ತನ್ನ ಅನುಭವವನ್ನು ಒಡ್ಡಿಕೊಳ್ಳುತ್ತಾನೋ ಅದು ಅವಳ/ನ ಅನುಭವದ ಪ್ರತಿ ಆಶಯವನ್ನು ವ್ಯಕ್ತಪಡಿಸುವ ಅಭಿವ್ಯಕ್ತಿ ಮಾಧ್ಯಮವಾಗುತ್ತದೆ. ಇದೆಲ್ಲದಕ್ಕಿಂತಲೂ ಹೆಚ್ಚಾಗಿ ತಾಯ್ನುಡಿಯು ಅವಳ/ನ ಸಾಂಸ್ಕೃತಿಕ – ಸೃಜನಶೀಲ ಸಂವೇದನೆಯನ್ನು ಪ್ರತಿನಿಧಿಸುವ ಮಾಧ್ಯಮವೂ ಆಗಿ ದಕ್ಕುತ್ತದೆ.**

ಲಿಂಗಭೇದ, ವರ್ಗ-ವರ್ಣಭೇದ ಹಾಗೂ ಮುಂತಾದ ತರತಮ ಭೇದಗಳು ಸಾಮಾಜಿಕ ಕಾರಣಗಳಿಂದ ಭಾಷೆಯಲ್ಲಿ ಮಿಳಿತಗೊಂಡಿವೆ. ಭಾಷೆ ಇದೆಲ್ಲವನ್ನೂ ಪ್ರತಿನಿಧಿಸುವ ಕಾರಣ, ಭಾಷೆಗೆ ಇಂತಹದೊಂದು ಗುಣ ಇರುತ್ತದೆ ಎಂಬ ನಂಬಿಕೆ. ಈ ಕಾರಣಗಳಿಂದಲೇ ಸಪೀರ್-ವೂರ್ಫ್ ಅವರು ಮಂಡಿಸುವ "ಭಾಷೆ [ತಾಯ್ನುಡಿ] ಮತ್ತು ಸಂಸ್ಕೃತಿಗಳ ನಡುವೆ ಲೋಕಗ್ರಹಿಕೆ"ಯನ್ನು ರೂಪಿಸುವ ನಂಟಿರುತ್ತದೆ ಎನ್ನುವ ವಾದದಲ್ಲಿ ಮಿತಗಳಿವೆ ಎನ್ನುವುದು ದೃಢಪಟ್ಟಿದೆ. ಅನುಭಾವ ರೂಪಗೊಳ್ಳುವ ನೆಲೆಗಳು ಕೇವಲ ಭಾಷಿಕ ಸಂವೇದನೆಯಿಂದ ಕೂಡಿದವುಗಳಲ್ಲ. ಅವು ಸಾಮಾಜಿಕ-ಸಾಂಸ್ಕೃತಿಕ ನೆಲೆಗಟ್ಟಿನಲ್ಲಿ ಅಂತಸ್ಥವಾಗಿರುತ್ತವೆ. ಅದಕ್ಕಾಗಿ ಯಾವುದೇ ಭಾಷೆಯ ಸಾಹಿತ್ಯವು ಏಕೀಕೃತ ಅನುಭವದ ಮೊತ್ತವಾಗಿರಲಾರದು. ಅದು ಯಾವಗಲೂ ಬಹುತ್ವತೆಯ ಆಗರವಾಗಿರುತ್ತದೆ. ಅದಕ್ಕಾಗಿಯೇ ಕನ್ನಡ ಸಾಹಿತ್ಯದಲ್ಲಿ ಜೈನ್, ವೈದಿಕ, ಶೂದ್ರ-ದಲಿತ, ಮುಸ್ಲಿಮ್ ಮುಂತಾದ ಬಗೆಯಲ್ಲಿ ಸಂವೇದನೆಯನ್ನು ವಿಭಜಿಸಲಾಗಿದೆ ಎಂದು ತೋರುತ್ತದೆ.

ಇದು ಕೇವಲ ಅಧ್ಯಯನದ ಅನಕೂಲಕ್ಕಾಗಿ ಮಾತ್ರವಲ್ಲ ಅದುವೇ ವಾಸ್ತವವೆಂದು ನಂಬಲಾಗಿದೆ. ಆದರೆ ಈ ಎಲ್ಲ ಬಗೆಯ ಸಂವೇದನೆಯನ್ನು ಅಭಿವ್ಯಕ್ತಿಪಡಿಸುವ ಮಾಧ್ಯಮ ಮಾತ್ರ ಕನ್ನಡವಾಗಿದೆ. ಇಂಗ್ಲಿಷ್ ಭಾಷೆಯಲ್ಲಿ ಬೇರೆ ಸಂಸ್ಕೃತಿಗಳ ಮೂಲದಿಂದ ಬಂದಿರುವ ಸಾಹಿತ್ಯವನ್ನು ಗಮನಿಸಿದರೆ ಇದು ಸ್ಪಷ್ಟವಾಗುತ್ತದೆ. ಈ ಕಾರಣಗಳ ಪರಿಣಾಮವಾಗಿ, ಪ್ರತಿಯೊಂದು ಭಾಷೆಯಲ್ಲಿ ಭಿನ್ನತೆ, ವೈವಿಧ್ಯತೆ ಹಾಗೂ ಸಾಂಸ್ಕೃತಿಕನಿಷ್ಠ ಪ್ರಜ್ಞೆ ರೂಪಗೊಂಡಿರುತ್ತದೆ. ಒಂದು ಸಮುದಾಯದ ಎಲ್ಲ ಜನ, ಜನಾಂಗ, ವರ್ಗಗಳ ನಡುವೆ ಸಂವಹನ ತೊಡಕು ಉಂಟಾಗಬಾರದು ಎನ್ನುವ ಕಾರಣಕ್ಕೆ ಭಾಷೆಗೆ ಒಂದು ಸಾರ್ವತ್ರಿಕತೆಯನ್ನು ರೂಪಿಸಲಾಗಿದೆ. ಇದನ್ನೂ ಮೀರಿ ಭಾಷೆಯಲ್ಲಿ ತೊಡಕುಗಳು ಉಳಿದುಕೊಂಡಿರುತ್ತವೆ ಎನ್ನುವುದು ಕುತೂಹಲವನ್ನು ಹುಟ್ಟಿಸುತ್ತದೆ. ಭಾಷೆ ತನ್ನ ವೈವಿಧ್ಯತೆ-ಭಿನ್ನತೆಗಳ ನಡುವೆಯೂ ಸಾರ್ವತ್ರಿಕತೆಯನ್ನು ಕಾಪಾಡುವ- ಸಮನ್ವಯಗೊಳಿಸುವ ಗುದ್ದಾಟಗಳು ನಿರಂತರವಾಗಿರುತ್ತವೆ.

ಇಂತಹದೊಂದು ಬೆಳವಣಿಗೆಯೇ ವಿಚಿತ್ರವಾದದ್ದು. ಮತ -ಧರ್ಮಗಳ ಕುರಿತ ಅಂಧಾನುಕರುಣೆ ಸಮಾಜದ ಐಕ್ಯತೆಗೆ ಧಕ್ಕೆ ಉಂಟುಮಾಡಿದಂತೆ, ಭಾಷೆಯೂ ಸಮುದಾಯದ ಒಗ್ಗಟ್ಟಿಗೆ ತೊಡಕಾಗಿದೆ. ಇದಕ್ಕೆ ಸಾಕಷ್ಟು ಪುರಾವೆಗಳು ನಮ್ಮ ಚರಿತ್ರೆಯಲ್ಲಿಯೇ ಸಿಗುತ್ತವೆ. ಮನುಷ್ಯನ ಸಾಮಾಜಿಕ ಅಸ್ತಿತ್ವದ ಆಧಾರದ ಮೇಲೆ ಭಾಷೆಯ ಅಸ್ತಿತ್ವ ನಿರ್ಧಾರವಾಗುತ್ತದೆ. ಇಂತಹ ಭಾಷಿಕ-ಸಾಮಾಜಿಕ ಆಕೃತಿಗಳು ಸಮುದಾಯದ ಪ್ರಜ್ಞೆಗೆ ಇಂಬು ಕೊಡದೇ, ಸಮುದಾಯವನ್ನು ವಿಭಜಿಸುವುದಕ್ಕೆ ಪ್ರೇರಣೆಯನ್ನು ನೀಡಿವೆ. ಈ ಬೆಳವಣಿಗೆಗಳು ಕನ್ನಡದಂತಹ ಭಾಷೆಯ ಚಹರೆಗಳೂ ಕೂಡ ಅಂಚಿಗೆ ಸರಿಯುತ್ತವೆ ಎಂಬ ಆತಂಕಕ್ಕೆ ಎಡೆಮಾಡಿ ಕೊಟ್ಟಿವೆ. ಇಂತಹ ಆತಂಕಗಳಿಗೆ ಯಾವುದೇ ವೈಜ್ಞಾನಿಕ ಕಾರಣಗಳಿಲ್ಲ ಎನ್ನುವುದು ದಿಟ. ಆದರೆ, ಇದು ಕೇವಲ ರಾಜಕೀಯ ಪ್ರೇರಿತ ಸಂಘಟನೆಗಳು ಹುಟ್ಟುಹಾಕುವ ಹುನ್ನಾರ ಮಾತ್ರ.

ಇಂತಹ ಭಾಷಾ ರಾಜಕಾರಣದ ಹಿಂದಿನ ಒತ್ತಡ, ಪ್ರೇರಣೆಗಳನ್ನು ತಾತ್ವಿಕವಾಗಿ ವಿಶ್ಲೇಷಿಸಬೇಕಿದೆ. ಜನಸಾಮಾನ್ಯರು ಭಾಷೆಯನ್ನು ಒಂದು ಸಾಂಸ್ಕೃತಿ-ಸಾಮಾಜಿಕ ಮೌಲ್ಯವಾಗಿ ಪರಿಗಣಿಸಿದ್ದೇ ಇಂತಹ ಭಾಷಿಕ ಬಿಕ್ಕಟ್ಟುಗಳಿಗೆ ಕಾರಣ. ಭಾಷಿಕ ಅಗತ್ಯಗಳು ಕಾಲ-ದೇಶಕ್ಕೆ ಅನುಗುಣವಾಗಿ ಬೇರೆಯಾಗಿರುವುದರಿಂದ, ಕೆಲವು ಆಸಕ್ತ ವರ್ಗಗಳು ತಮಗೆ ಪೂರಕವಾಗುವ ಆಶಯಗಳನ್ನು ತಾಯ್ನುಡಿ, ದೇವನುಡಿ, ರಾಷ್ಟ್ರನುಡಿ ಎಂಬ ಅಭಿಮಾನವನ್ನು ಮೂಡಿಸಲು ಹವಣಿಸುತ್ತವೆ. ಇಂತಹ ಪ್ರಯತ್ನಗಳಿಗೆ ಸಾಂಸ್ಥಿಕ ಬೆಂಬಲ ದೊರೆಯುವುದರಿಂದ, ನಾಡು-ನುಡಿಯ ಕುರಿತ ಅತಿರೇಕದ ಧೋರಣೆಗಳು ಕೂಡ ಸಮುದಾಯ ಹಾಗೂ ಸಂವಿಧಾನದ ಮನ್ನಣೆಯನ್ನು ಪಡೆದುಕೊಳ್ಳುತ್ತವೆ. ಈ ಬಗೆಯ ಭಾಷಿಕ ಆಕೃತಿಗಳು ಪಟ್ಟಭದ್ರ ಹಿತಾಸಕ್ತಿ ಹಾಗೂ ಶಕ್ತಿ ರಾಜಕಾರಣದ ಗುಂಪುಗಳನ್ನು ಕೂಡ ಮೌಲ್ಯೀಕರಣಗೊಳಿಸುತ್ತವೆ.

ವಿಪರ್ಯಾಸ ಏನಂದರೆ ಇಂತಹ ರಾಜಕೀಯ ಪ್ರೇರಿತ ಧೋರಣೆಗಳು ಅನುಭಾವದ ನೆಲೆಗಳನ್ನೂ ಪಡೆದುಕೊಳ್ಳುತ್ತವೆ. ಮುಂದೊಂದು ದಿನ ಇವೇ ಚಿಂತನೆಗಳು ಭಾಷಿಕ ಕ್ರಾಂತಿ ಅಥವಾ ರಾಷ್ಟ್ರೀಯತೆಯ ಚಿಂತನೆಗಳ ಸ್ವರೂಪವನ್ನು ಪಡೆಯುತ್ತವೆ. ನಾಡು-ನುಡಿ ಕುರಿತ ಚಿಂತ

ಗಳು ತೋರಿಕೆಯ ರಾಷ್ಟ್ರೀಯತೆಯನ್ನು ನಟಿಸುತ್ತವೆ ಎಂದು ಕಾಣುತ್ತದೆ. ಈ ತೋರಿಕೆಯ ಭಾಷಾಭಿಮಾನವು ಬೇರೆ ಭಾಷೆಗಳನ್ನು ಅಸಡ್ಡೆಯಿಂದ ಹಾಗೂ ಉಪೇಕ್ಷೆಯಿಂದ ಕಾಣುತ್ತವೆ. ಇದು ಭಾಷಿಕ-ಸಾಂಸ್ಕೃತಿಕ ಅಸಹನೆಗೆ ಕಾರಣವಾಗುತ್ತದೆ. ಇದು ಎಂತಹ ಸಾಂಸ್ಕೃತಿಕ ಅಪಾಯವನ್ನು ಹುಟ್ಟು ಹಾಕಬಹುದೆಂದು ಯಾರಿಗಾದರೂ ಅಚ್ಚರಿಯಾಗುತ್ತದೆ.

ದ್ರಾವಿಡ ನುಡಿಗಳು ಒಂದೇ ಕುಲಕ್ಕೆ ಸೇರಿದವುಗಳಾದರೂ -ಈ ಕುಲದ ಬೇರೆ ಬೇರೆ ನುಡಿಗಳ ನಡುವೆ ಯಾಕೆ? ತರತಮ ಭಾವನೆಯನ್ನು ಹುಟ್ಟಿಸಿಕೊಂಡು, ದಾಯಾದಿ ಮತ್ಸರವನ್ನು ಬೆಳಸುತ್ತಾರೆ. ದಾಯಾದಿ ಮತ್ಸರ ಕೇವಲ ಆಸ್ತಿ ಹಂಚಿಕೆಯ ಕುರಿತದ್ದು ಮಾತ್ರವಲ್ಲ. ಅದು ಅಸ್ತಿತ್ವದ ಪ್ರಶ್ನೆಯೂ ಆಗಿರುತ್ತದೆ. ತಮ್ಮ ತಮ್ಮ ಗುರುತುಗಳನ್ನು ಹೆಚ್ಚು ಹೆಚ್ಚು ಗಟ್ಟಿಗೊಳಿಸುವ ಹಂಬಲದಲ್ಲಿರುತ್ತವೆ ಎನ್ನುವುದು ವಿಶೇಷ. ಇಂತಹ ಸ್ಪರ್ಧಾತ್ಮಕ ಧೋರಣೆಯು ಸಂಘರ್ಷಕ್ಕೆ ಎಡೆಮಾಡಿಕೊಡುತ್ತದೆ. ಈ ಬೆಳವಣಿಗೆಗಳು ತಮ್ಮ ತಮ್ಮ ಕುಲ ಸಂಬಂಧದ ನೆನಪುಗಳನ್ನು ಕೂಡ ಕಮರಿಸುತ್ತವೆ. ಈ ಬಗೆಯ ಭಾಷಿಕ ಹುನ್ನಾರ ನಿರಂತರವಾಗಿ ದ್ರಾವಿಡ ನುಡಿ ಸಮುದಾಯದಲ್ಲಿ ನಡದಿವೆ. ಇದು ಹೆಚ್ಚು ಕನ್ನಡ ಮತ್ತು ತಮಿಳು ನುಡಿಗಳ ನಡುವೆ ನಡದಿದೆ ಎಂದು ಹೇಳಬಹುದು. ಇವು ಕಲ್ಪಿತ ಗಡಿಗಳ ನಿರ್ಮಾಣಕ್ಕೂ ಕುಮ್ಮಕ್ಕು ನಿಡುತ್ತವೆ. ವಿಚಿತ್ರವೆನಂದರೆ, ಬೇರೆ ಕುಲಕ್ಕೆ ಸೇರಿದ ಭಾಷೆಯನ್ನು ಕನ್ನಡ ತನ್ನ ತಲೆಯ ಮೇಲೆ ಹೊತ್ತುಕೊಂಡು ಪೂಜಿಸಿದ ನಿದರ್ಶನಗಳಿಗೇನು ಕೊರತೆಯಿಲ್ಲ.

ಇದಕ್ಕೆ ಕುಮ್ಮಕ್ಕು ನೀಡಿದ ಶಕ್ತಿಗಳು, ತಮ್ಮ ಭಾಷೆಯನ್ನು ದೈವಭಾಷೆ, ಧರ್ಮಭಾಷೆ ಎಂಬ ಮುಂತಾದ ಭ್ರಮೆಗಳನ್ನುಟ್ಟಿಸಿ ತಮ್ಮ ಪ್ರಾಬಲ್ಯವನ್ನು ಮೆರದಿವೆ. ಹಾಗಾಗಿ ದ್ರಾವಿಡ ಕುಲದ ನುಡಿಗಳು ತಮ್ಮ ದಾಯಾದಿ ಮತ್ಸರದಿಂದ ಸಂಸ್ಕೃತದಂತಹ ಭಾಷೆಗಳನ್ನು ಪೂಜ್ಯಭಾವದಿಂದ ಕಾಣುವ ದಾಸ್ಯಕ್ಕೆ ಶರಣಾಗಿರುವುದು ಚಾರಿತ್ರಿಕ ವಿಪರ್ಯಾಸವೇ ಸರಿ. ಮುಖ್ಯವಾಗಿ ಅಂದಿನ ಅಗತ್ಯದ ಪ್ರಶ್ನೆ ಸಂಸ್ಕೃತವನ್ನು ಜನಪ್ರಿಯಗೊಳಿಸುವದಾಗಿತ್ತು. ಸಂಸ್ಕೃತ ಅದನ್ನು ಆಡುವ ಜನಾಂಗವಿಲ್ಲದ್ದರಿಂದ, ಇದೊಂದು 'ಮೃತ ಭಾಷೆ' ಎಂದೆನಿಸಿಕೊಂಡಿದೆ. ಆದಾಗ್ಯೂ ಸಂಸ್ಕೃತ ಭಾಷೆಯನ್ನು ಎಂದೆಂದಿಗೂ ನಮ್ಮ ದೇಶೀ ಭಾಷೆ ಸಂಸ್ಕೃತಿಗಳಿಗೆ ಉಪಯುಕ್ತವಾದ ಉಪಕಾರಿಯಾದ ಭಾಷೆಯನ್ನಾಗಿ ಬಿಂಬಿಸುವ ಹುನ್ನಾರ ನಡೆಯುತ್ತಲೇ ಬಂದಿದೆ.

ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿಯ ಉದ್ಧಾರಕ್ಕೆ ಶ್ರಮಿಸಿದ ಕೆಲ ಧರ್ಮಗಳು ಈಗ ಚರಿತ್ರೆಯ ನೆನಪು ಮಾತ್ರ. ಸಂಸ್ಕೃತ ಭಾಷೆಯು ಕನ್ನಡದಂತಹ ಪ್ರಾದೇಶಿಕ ಭಾಷೆಗಳಿಗೆ ಸಾಹಿತ್ಯಿಕ ಹಾಗೂ ಸಾಂಸ್ಕೃತಿಕ ಸಾಮರ್ಥ್ಯವನ್ನು ಸಿದ್ಧಿಸಿದೆ ಎನ್ನುವ ದೃಢ ನಂಬಿಕೆಗಳು ಬೇರು ಬಿಟ್ಟಿವೆ. ಇಂತಹ ನಂಬಿಕೆಗಳನ್ನು ಸಾಭೀತುಪಡಿಸುವ ಅಧ್ಯಯನಗಳು ಶಲ್ಡನ್ ಪೊಲಾಕ್‌ರಂತಹ 'ಪರ'ದೇಶಿ ವಿದ್ವಾಂಸರಿಂದ ನಡದಿವೆ. ವಿಶೇಷವೇನೆಂದರೆ, ಈ ಅಧ್ಯಯನಗಳು ಸಂಸ್ಕೃತ ಭಾಷೆಯು "ಕನ್ನಡ ನುಡಿಗೆ ವಿಶ್ವಾತ್ಮಕ ಚಹರೆಯನ್ನು ತಂದು ಕೊಟ್ಟಿದೆ" ಇದಕ್ಕಾಗಿಯೇ ಸಂಸ್ಕೃತವು ಸ್ಥಳೀಕರಣಗೊಂಡಿದೆ ಎಂಬ ವಾದಗಳನ್ನು ಮಂಡಿಸುತ್ತವೆ. ಇಂತಹ ವಿಧೇಯಕ ಮಾತುಗಳ ಹಿಂದಿನ ಮರ್ಮವೇನಂದರೆ ಸಂಸ್ಕೃತ ತಾನೊಂದು ಪರೋಪಕಾರಿ ಭಾಷೆಯೆಂದು ಗುರುತಿಸಿಕೊಳ್ಳುವ ಭಾಷಾ ರಾಜಕಾರಣವೆಂದೇ ಹೇಳಬೇಕು. ಜಾಗತೀಕರಣ ಸಂದರ್ಭದಲ್ಲಿ ಸಂಸ್ಕೃತವು ಹೇಗೆ ದಕ್ಷಿಣ ಏಶಿಯಾ ದೇಶಗಳಲ್ಲಿ ಹರಡಿಕೊಂಡಿತ್ತು ಅನ್ನುವುದನ್ನು ವಿವರಿಸುವುದಕ್ಕೆ ಈ ಅಧ್ಯಯನಗಳು ಬೆಳಕಿಗೆ ಬಂದಿವೆ.

ಇದೊಂದು ತೋರಿಕೆಯ ನಂಬಿಕೆಯಾಗಿತ್ತು. ಆದರೆ ಅವುಗಳ ಒಳಉದ್ದೇಶ ಮಾತ್ರ ಈ ಭಾಷೆಯು ತನ್ನ ಯಾಜಮಾನ್ಯ ಹಾಗೂ ಪ್ರಾಬಲ್ಯದ ನೆಲೆಗಳನ್ನು ಗುರುತಿಸುವ ಹುನ್ನಾರವೇ ಆಗಿತ್ತು ಅನ್ನುವುದು ಸ್ಪಷ್ಟ. ಈ ಒಳ ಉದ್ದೇಶಗಳು ಸಂಸ್ಕೃತ ಮತ್ತು ಕನ್ನಡದ ನಡುವೆ ಯಾಜಮಾನ್ಯ-ಅಧೀನ ನೆಲೆಯ ಸಂಬಂಧವಿದೆ ಎಂದು ಜಗತ್ತಿಗೆ ಸಾರಿ ಹೇಳಬೇಕಾಗಿತ್ತು. ಇದು ವೈಧಿಕ ಧರ್ಮದ ನಾಜೂಕಿನ ಸಾಂಸ್ಕೃತಿಕ ರಾಜಕಾರಣದ ಮತ್ತೊಂದು ಮುಖವೆಂದೇ ಹೇಳಬೇಕು. ಕನ್ನಡವು ಪ್ರಾಕೃತ, ಪರ್ಷಿಯನ್ ಮುಂತಾದ ಭಾಷೆಗಳ ಪದಸಂಪನ್ಮೂಲವನ್ನು ತನ್ನ ಒಡಲಲ್ಲಿಯೇ ಅಡಗಿಸಿಕೊಂಡಿದೆ. ಇಂತಹ ಭಾಷಿಕ-ಪ್ರಕ್ರಿಯೆಯನ್ನು ಮರೆಮಾಚಿ, ಯಾವುದೇ ಒಂದು ಪ್ರತಿಷ್ಠಿತ ಧರ್ಮದ ಕಪಿಮುಷ್ಠಿಯಲ್ಲಿರುವ ಸಂಸ್ಕೃತ ಭಾಷೆ ತನ್ನ ಪ್ರಾಮುಖ್ಯತೆ ಪಡದಿದೆ. ಇದು ಭಾಷಿಕ-ಸಾಂಸ್ಕೃತಿಕ ಬಹುತ್ವತೆಯ ಚರಿತ್ರೆಗೆ ಮಾಡಿದ ಅಪಚಾರವೆಂದೇ ಹೇಳಬೇಕು. ಇಂತಹ ನಿದರ್ಶನಗಳು ಭಾರತದ ಚರಿತ್ರೆ ಏಕಪಕ್ಷವಾಗಿದೆ ಅನ್ನುವುದನ್ನು ಖಚಿತಪಡಿಸುತ್ತವೆ. ಇದರಿಂದ ಯಾರಿಗೆ ಹಾನಿಯಾಗುತ್ತದೆ ಎನ್ನುವ ಪ್ರಶ್ನೆ ಎದುರಾದಾಗ, ಉತ್ತರಿಸುವ ಮನಸ್ಸುಗಳು ಹಲವು ಮೂಲಗಳಲ್ಲಿ ಹರಡಿಕೊಳ್ಳುತ್ತವೆ. ಯಾಕಂದರೆ, ಚರಿತ್ರೆಯ ಹುನ್ನಾರಗಳನ್ನು ವಿವರಿಸುವ ಆಕೃತಿಗಳು ಬೇರೆ ಬೇರೆ ನೆಲೆಯಿಂದ ಕೂಡಿರುವುದೇ ಇದಕ್ಕೆ ಕಾರಣ.

ಒಂದು ಸಮುದಾಯದ ಬೇಡಿಕೆಗಳನ್ನು ಈಡೇರಿಸುವ ಹೊಣೆ ಅವರಾಡುವ ಭಾಷೆ ಮೇಲೆ ಇರುತ್ತದೆ ಅನ್ನುವುದು ರುಜುವಾತುಪಟ್ಟಿದೆ. ಇದಕ್ಕೆ ಅನುಕೂಲ ಮಾಡಬೇಕಾದ ಪ್ರಭುತ್ವ ಅಥವಾ ಅಧಿಕಾರ ವರ್ಗ ಎಷ್ಟರ ಮಟ್ಟಿಗೆ ಜನಪರ ಕಾಳಜಿ ವಹಿಸುತ್ತವೆ ಅನ್ನುವುದು ಮುಖ್ಯ. ಪ್ರಭುತ್ವವು ಸಂಸ್ಕೃತ ಭಾಷೆಯ ಪರವಾಗಿ ತಳೆಯುವ ನಿಲುವುಗಳನ್ನು, ಕೊಂಕಣಿ, ತುಳು, ಕೊಡವ ಹಾಗೂ ಉರ್ದುದಂತಹ ಸಾಮನ್ಯ ಜನರ ಭಾಷೆಗಳ ಪರವಾಗಿ ಯಾಕೆ ತಾಳುವುದಿಲ್ಲ ಅನ್ನುವ ಪ್ರಶ್ನೆಗಳು ಸಹಜವಾಗಿಯೇ ಸಂಸ್ಕೃತ ವಿಶ್ವವಿದ್ಯಾನಿಲಯ ಸ್ಥಾಪಿಸುವ ಈ ಹೊತ್ತಲ್ಲಿ ಹುಟ್ಟುತ್ತವೆ. ಯಾರು ಯಾವ ಭಾಷೆಯನ್ನು ಪ್ರತಿನಿಧಿಸುತ್ತಾರೆ ಅನ್ನುವುದು ಗಮನಾರ್ಹ.

ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿಯ ಉದ್ಧಾರಕ್ಕೆ ಶ್ರಮಿಸಿದ ಕೆಲ ಧರ್ಮಗಳು ಈಗ ಚರಿತ್ರೆಯ ನೆನಪು ಮಾತ್ರ. ಸಂಸ್ಕೃತ ಭಾಷೆಯು ಕನ್ನಡದಂತಹ ಪ್ರಾದೇಶಿಕ ಭಾಷೆಗಳಿಗೆ ಸಾಹಿತ್ಯಿಕ ಹಾಗೂ ಸಾಂಸ್ಕೃತಿಕ ಸಾಮರ್ಥ್ಯವನ್ನು ಸಿದ್ಧಿಸಿದೆ ಎನ್ನುವ ದೃಢ ನಂಬಿಕೆಗಳು ಬೇರು ಬಿಟ್ಟಿವೆ. ಇಂತಹ ನಂಬಿಕೆಗಳನ್ನು ಸಾಬೀತುಪಡಿಸುವ ಅಧ್ಯಯನಗಳು ಶಲ್ಡನ್ ಪೊಲಾಕ್‌ರಂತಹ 'ಪರ'ದೇಶಿ ವಿದ್ವಾಂಸರಿಂದ ನಡೆದಿವೆ. ವಿಶೇಷವೇನೆಂದರೆ, ಈ ಅಧ್ಯಯನಗಳು ಸಂಸ್ಕೃತ ಭಾಷೆಯು "ಕನ್ನಡ ನುಡಿಗೆ ವಿಶ್ವಾತ್ಮಕ ಚಹರೆಯನ್ನು ತಂದು ಕೊಟ್ಟಿದೆ" ಇದಕ್ಕಾಗಿಯೇ ಸಂಸ್ಕೃತವು ಸ್ಥಳೀಕರಣಗೊಂಡಿದೆ ಎಂಬ ವಾದಗಳನ್ನು ಮಂಡಿಸುತ್ತವೆ.

ಈ ಸಂಸ್ಕೃತ ಭಾಷೆ ಪ್ರತಿನಿಧಿಸುವ ಸಮುದಾಯವು, ಚರಿತ್ರೆಯ ಉದ್ದಕ್ಕೂ ಶೋಷಣೆ, ದೌರ್ಜನ್ಯ, ಸಾಮಾಜಿಕ ಅಸಮಾನ ತೆಯಂತಹ ಜೀವ ವಿರೋಧಿ ರೂಢಿಗಳನ್ನು ಬಲಪಡಿಸುತ್ತಾ ಬಂದಿದೆ. ಇಂತಹ ಧೋರಣೆಗಳು ಖಾಯಂ ಆಗಿ ಸಂಸ್ಕೃತ ಭಾಷೆಯಲ್ಲಿ ನೆಲೆಯೂರಿವೆ. ಈ ವಾದವನ್ನು ಯಾರು ಕೂಡ ತಳ್ಳಿ ಹಾಕಲಾರರು, ಸಂಸ್ಕೃತ ಭಾಷೆ ಸಾಹಿತ್ಯಿಕ, ಭಾಷಿಕ ಒಟ್ಟಾರೆ ಸಾಂಸ್ಕೃತಿಕವಾಗಿ ಶ್ರೀಮಂತವಾಗಿದೆ ಎಂಬೀತ್ಯಾದಿ ವಾದಗಳು ಜನಸಾಮಾನ್ಯರಲ್ಲಿ ರೂಢಿಯಲ್ಲಿವೆ. ಇಂತಹ ವಾದಗಳಿಗೆ ಹೆಚ್ಚು ಹೆಚ್ಚು ಕಸಿ ನೀಡುವ ಅಧ್ಯಯನಗಳನ್ನು ಸಂಸ್ಕೃತ ಪರವಾಗಿರುವ ಪಂಡಿತರು ಮಂಡಿಸುತ್ತಿರುವುದು ಗಮನಾರ್ಹ. ಆದರೆ ಈ ಭಾಷೆ ಯಾರ ಸಾಹಿತ್ಯ ಹಾಗೂ ಸಂಸ್ಕೃತಿಯನ್ನು ಪ್ರತಿನೀ ದಿಸುತ್ತದೆ ಅನ್ನುವುದೇ ಮುಖ್ಯ.

ಶೂದ್ರ ಸಮುದಾಯಗಳ ಸಂವೇದನೆ ಮತ್ತು ವಿವೇಕವನ್ನು ಹೊರಗಿಟ್ಟು ಸಂಸ್ಕೃತ ಸಾಹಿತ್ಯ ರೂಪಗೊಂಡಿದೆ. ಅಂದರೆ ಶೂದ್ರರ ಯಾವ ಸಾಂಸ್ಕೃತಿಕ ಶ್ರೀಮಂತಿಕೆಯನ್ನೂ ಅದು ಒಳಗೊಂಡಿಲ್ಲ ಎಂದರ್ಥ. ಇವರು ಇದೇ ಧೋರಣೆಯನ್ನು ಕನ್ನಡ ಸಾಹಿತ್ಯದಲ್ಲಿಯೂ ಪಡಿಮೂಡಿಸಿರುವರು. ಇಂತಹ ಕಣ್ಣಿಗೆ ರಾಚುವ ವಾಸ್ತವಗಳನ್ನು ಮರೆಮಾಚಿ ಕನ್ನಡ ಸಾಹಿತ್ಯ ಹಾಗೂ ಸಂಸ್ಕೃತಿಯನ್ನು ರೂಪಿಸಿರುವ/ಹೊರಟಿರುವ ಸಂಸ್ಕೃತ ಮೋಹಿಗಳು ಅದನ್ನೇ ಕನ್ನಡದ ಅನನ್ಯತೆ ಎಂದು ವಾದಿಸುತ್ತಾರೆ. ಅಶೂದ್ರ [ವೈದಿಕ] ಚಿಂತಕರು ಮಂಡಿಸಿರುವ ವಾದಗಳಿಗೆ ಅತೀಯಾದ ಪ್ರಾಮುಖ್ಯತೆ ಸಿಕ್ಕಿರುವುದೇ ಇದಕ್ಕೆ ಕಾರಣ. ಈ ಬಗೆಯ ತಿಳವಳಿಕೆಯು ತಳಸಮುದಾಯ ಹಾಗೂ ಹಿಂದುಳಿದದವರ ಸಾಂಸ್ಕೃತಿಕ ಅರಿವು ಮತ್ತು ಅದರ ಹೆಚ್ಚುಗಾರಿಕೆಯನ್ನು ಅಮಾನ್ಯಗೊಳಿಸಿದೆ.

ಇಂತಹ ಒಲುಮೆಗಳೇ ಕನ್ನಡದ ಗುರುತುಗಳಾಗಿ ಮೈದಾಳಿರುವುದು ಚಾರಿತ್ರಿಕ ವಿಪರ್ಯಾಸ. ಕರ್ನಾಟಕದ ಬಹುಜನರ ಸಂಸ್ಕೃತಿ ಹಾಗೂ ಸಂವೇದನೆ ಒಳಗೊಳ್ಳದ ಕನ್ನಡ ಅದುಹೇಗೆ ಕನ್ನಡಿಗರ ತಾಯ್ನುಡಿ ಅಥವಾ ಪರಿಸರ ನುಡಿಯಾಗಿರುವುದಕ್ಕೆ ಸಾಧ್ಯ. ಇಂತಹ ಪ್ರಶ್ನೆಗಳಿಂದಲೇ ನಿಜವಾದ ಕನ್ನಡತನ ಅಂದರೇನು ಅನ್ನುವುದನ್ನು ಅರ್ಥೈಸಿಕೊಳ್ಳಲು ಸಾಧ್ಯವಾಗಬಹುದು. ಶತ-ಶತಮಾನಗಳಿಂದಲೂ ಸಂಸ್ಕೃತವು ವೈದಿಕ-ಅವೈದಿಕ, ಶುದ್ಧ-ಅಶುದ್ಧ, ಮೇಲು-ಕೀಳು ಎಂಬೀತ್ಯಾದಿ ವೈರುಧ್ಯಗಳನ್ನು ಹುಟ್ಟುಹಾಕಿ ಕುಲಗೇಡಿಸುವ ಬೆಜವಾಬ್ದಾರಿಯನ್ನು ಮೆರದಿದ್ದೆ ಹೆಚ್ಚು. ಯಾವುದೇ ಭಾಷೆಗೆ ವರ್ಗ, ಜಾತಿ, ಪ್ರದೇಶ ಮುಂತಾದ ಗುಣಗಳು ರಕ್ತಗತವಾಗಿ ಬಂದಿರುವುದಿಲ್ಲ. ಆದರೆ, ಸಮುದಾಯದೊಡನೆ ಭಾಷೆಗೆ ಇರುವ ನಂಟು ಇಂತಹ ಎಲ್ಲ ಗುಣಗಳನ್ನು ಒಗ್ಗಿಸಿಕೊಡುತ್ತದೆ ಅಥವಾ ಅಂತರ್ಗತಗೊಳಿಸುತ್ತೆ.

ಇದಕ್ಕಾಗಿಯೇ ಮೂಲಭೂತವಾದ, ಕೋಮುವಾದದಂತಹ ಜೀವವಿರೋಧಿ ಗುಣಗಳು ಯಾಕೆ ಸಂಸ್ಕೃತ ಭಾಷೆಗೆ ಅಂಟಿಕೊಂಡಿವೆ ಅಂದರೆ, ಆ ಭಾಷೆಗಿರುವ ಅಂತಹ ಒಂದು ಸಮುದಾಯದ ನಿರಂತರ ಸಹಯೋಗವೇ ಕಾರಣವಾಗಿದೆ. ಭಾಷೆ ಹಾಗೂ ಸಮುದಾಯದ ನಡುವಣ ನಂಟಸ್ಥಿಕೆ ರೂಪಗೊಳ್ಳುವ ಬಗೆಯೇ ಹೀಗೆ. ಈ ಕಾರಣಗಳಿಂದಲೇ ಸಂಸ್ಕೃತ ವೈದಿಕರ, ಉರ್ದು ಮುಸ್ಲಿಮ್‌ರ, ಪಾಲಿ ಬೌದ್ಧರ ಹಾಗೂ ಪ್ರಾಕೃತ ಜೈನರ ಸೊತ್ತಾಗಿ ಬಿಂಬಿತವಾಗಿದೆ. ಯಾವಾಗ ಒಂದು ಭಾಷೆ ಯಾವುದೇ ಧರ್ಮ ಅಥವಾ ಜಾತೀಯ ಭಾಷೆಯಾಗಿ ಗುರುತಿಸಲ್ಪಡುತ್ತದಿಯೋ ಆವಾಗ ಅದಕ್ಕೆ ಸಾಂಸ್ಕೃತಿಕ ಪ್ರತ್ಯೇಕತೆಯನ್ನು ಹುಟ್ಟಿಸುವ ಗುಣವು ಮೈಗೂಡುತ್ತದೆ.

ಪರಿಣಾಮವಾಗಿ, ಸಂಸ್ಕೃತವು ವೈದಿಕ ಧರ್ಮ ಹುಟ್ಟು ಹಾಕಿದ ಎಲ್ಲ ಬಗೆಯ ಸಾಮಾಜಿಕ ಹಾಗೂ ಸಾಂಸ್ಕೃತಿಕ ಯಜಮಾನಿಕೆ, ಪ್ರಾಬಲ್ಯ, ಸಾಮಾಜಿಕ ನಿರಾಕರಣೆ, ಅಸಮಾನತೆ ಮತ್ತು ಕೀಳಹಿರಿಮೆ ಅಂತಹ ಅಪಮೌಲ್ಯಗಳನ್ನು ಅಂತರ್ಗತಮಾಡಿಕೊಂಡಿದೆ. ಅದಕ್ಕಾಗಿ ಸಂಸ್ಕೃತ ಇವತ್ತಿಗೂ ಸಾಂಸ್ಕೃತಿಕ ಅಪಾಯದ ರೂಪಕವಾಗಿಯೇ ಗೋಚರಿಸುತ್ತದೆ. ಈ ಭಾಷೆ ತನ್ನಷ್ಟಕ್ಕೆ "ಸ್ವಯಂಭೂ" ಎನ್ನುವ ಅಹಂನಲ್ಲೇ ತನ್ನ ಹೆಚ್ಚುಗಾರಿಕೆಯನ್ನು ಮೆರದಿದೆ. ಇಂತಹ ಭಾಷೆಯ ವಾರಸುದಾರರು ಯಾವುದನ್ನು ತಮ್ಮ ತಾಯ್ನುಡಿ ಎಂದು ಹೇಳಿಕೊಳ್ಳುತಾರೆ ಅನ್ನುವುದು ಕೂಡ ವಿಶೇಷ. ಸಂಸ್ಕೃತ ಯಾವತ್ತು ಕೂಡ ವ್ಯವಹಾರಿಕ ಹಾಗೂ ಸಾರ್ವಜನಿಕ ಅಗತ್ಯಗಳಿಗೆ ಪ್ರಯೋಜನವೇ ಆಗಿ/ಗಲ್ಲ.

ಆದರೂ ಈ ಭಾಷಿಕರು ಕನ್ನಡದಂತಹ ಭಾಷೆಗಳನ್ನೇ ಅಸಡ್ಡೆಯಿಂದ ನೋಡುವ ಪ್ರವೃತ್ತಿಯನ್ನು ಬೆಳಸಿದ್ದಾರೆ. ಪ್ರಾದೇಶಿಕ ಭಾಷೆಗಳು ತಮ್ಮ ಒಡಲಲ್ಲಿ ಕಾಪಿಟ್ಟುಕೊಂಡ ಸೃಜನಶೀಲ ಪ್ರತಿಭೆ- ಅದರ ವೈವಿಧ್ಯತೆಯನ್ನು ನಾಶಮಾಡಿ, ಸಂಸ್ಕೃತ ತನ್ನ ಸೃಜನಶೀಲತೆಯ ಪ್ರಾಮುಖ್ಯತೆಯನ್ನು ಮೆರದಿದೆ. ಇಷ್ಟೆಲ್ಲ ಆವಾಂತರಗಳನ್ನು ಹುಟ್ಟು ಹಾಕಿದ ಸಂಸ್ಕೃತಕ್ಕೆ ಪಾಪಪ್ರಜ್ಞೆಯೇ ಇಲ್ಲವಲ್ಲ ಅನ್ನುವುದು ಆಶ್ಚರ್ಯ. ಇಂತಹ ಕೀಳಹಿರಿಮೆಯ ನರಳಿಕೆಯಿಂದ ಪ್ರಾದೇಶಿಕ ಭಾಷೆಗಳು ಎಚ್ಚತ್ತುಕೊಳ್ಳುವ ಈ ಹೊತ್ತಿನಲ್ಲಿ ಸಂಸ್ಕೃತ ವಿಶ್ವವಿದ್ಯಾನಿಲಯ ತಲೆ ಎತ್ತಿದೆ. ಸಂಸ್ಕೃತ ತನ್ನ ಅಸ್ತಿತ್ವವನ್ನು ಹೆಚ್ಚು ಹೆಚ್ಚು ಗಟ್ಟಿಪಡಿಸಿಕೊಳ್ಳಲು ಸಾಕಷ್ಟು ಸಮೂಹ ಭಾಷೆಗಳನ್ನು ಬಲಿ ತೆಗೆದುಕೊಂಡಿದೆ.

ಸಂಸ್ಕೃತ ಭಾಷೆಯ ವಾರಸುದಾರರು ಇವತ್ತು ತಾವು ವೈಜ್ಞಾನಿಕ ಹಾಗೂ ಆಧುನಿಕತೆಯ ಲಾಭವನ್ನು ಪಡೆಯಲು, ತಮ್ಮ ಸನಾತನ ಧರ್ಮದ ಅಸ್ಮಿತೆಯ ರೂಪಕ ಆಗಿದ್ದ ಸಂಸ್ಕೃತವನ್ನು ಶೂದ್ರ ಸಮುದಾಯಗಳಿಗೆ ಕಲಿಸುವ ಮೂಲಕ ಅದನ್ನು ಸಂಗೋಪಿಸುವ ಜವಾಬ್ದರಿಯನ್ನು ಇವರಿಗೆ ವರ್ಗಾಯಿಸಿದ್ದಾರೆ. ಒಂದು ಕಾಲದಲ್ಲಿ ಸಂಸ್ಕೃತಕ್ಕೆ ಅಸ್ಪೃಶ್ಯರಾಗಿದ್ದ ಶೂದ್ರ ಸಮುದಾಯಗಳಿಗೆ ಸಂಸ್ಕೃತ ಕಲಿಸಬೇಕು ಎನ್ನುವ ಈ ಶಿಫ್ಟ್ ಹಿಂದಿನ ಹುನ್ನಾರ ಸ್ಪಷ್ಟವಾಗಿದೆ. ವೈದಿಕ ಧರ್ಮ ಪಾಲಿಸುತ್ತ ಬಂದ ಎಲ್ಲ ಕಂದಾಚರಗಳನ್ನು ಮರುಸ್ಥಾಪಿಸುವದೇ ಹೊರತು ಬೇರೆನೂ ಅಲ್ಲ. ಕನ್ನಡ ಹಾಗೂ ಕನ್ನಡಿಗರನ್ನೂ ಯಾವುದೇ ರೀತಿಯಲ್ಲಿ ಭಾದಿಸದ ಶಾಸ್ತ್ರೀಯ ಭಾಷಾ ಸ್ಥಾನಮಾನ ತಮಿಳುಗೆ ಸಿಕ್ಕಾಗ, ಅದನ್ನು ವಿರೋಧಿಸಿ ಕನ್ನಡಕ್ಕೂ ಬೇಕೆಂದು ಹೋರಾಟ ಮಾಡಿದ ಚಳವಳಿಗಾರರಿಗೆ ಏನಾಗಿದೆ? ಇವರಾಕೇ ಸಂಸ್ಕೃತ ವಿಶ್ವವಿದ್ಯಾನಿಲಯ

> **ಕನ್ನಡ ಮಾತನಾಡುವ - ಕನ್ನಡ ನುಡಿಯನ್ನೇ ನೆಚ್ಚಿರುವ ಸಮುದಾಯಗಳ ಆಶೋತ್ತರಗಳನ್ನು ಕಾಪಾಡುವ ಜವಾಬ್ದರಿ ಈ ನಾಡಿನ ಎಲ್ಲ ಬಗೆಯ ಸಮೂಹ ಮಾಧ್ಯಮಕ್ಕೆ ಇದೆ ಎಂದು ನನ್ನ ಬಲವಾದ ನಂಬಿಕೆ. ಯಾಕೆಂದರೆ, ಕರ್ನಾಟಕದ ಹೆಚ್ಚಿನ ಸಮುದಾಯಗಳ ಭಾಷೆ ಕನ್ನಡ. ಕನ್ನಡದ ಏಳ್ಗೆಗೆ ಅಗತ್ಯವಿರುವ ಎಲ್ಲ ಬಗೆಯ ನುಡಿಹಮ್ಮುಗೆ ಅನುಷ್ಠಾನಗೊಳ್ಳಬೇಕು. ಇಂತಹ ಭಾಷಾ ಯೋಜನೆಗಳು ತಾರತಮ್ಯದ ಧೋರಣೆಗಳನ್ನು ಬಿಟ್ಟು ಮುನ್ನಡೆಯಬೇಕು. ಕಾರಣ ಹಲವಾರು ಬೇರೆ ಬೇರೆ ಸಮೂಹ ಭಾಷೆಗಳು ಕರ್ನಾಟಕದಲ್ಲಿವೆ. ಈ ಭಾಷೆಗಳಿಗೂ ಕನ್ನಡದಷ್ಟೇ ಪ್ರಾಮುಖ್ಯತೆ ಸಿಗಬೇಕು. ಇಂತಹ ಒಂದು ಔದಾರ್ಯದ ಮನುಸ್ಸು ಪ್ರಭುತ್ವ - ಅದನ್ನು ನಿಭಾಯಿಸುವ ವರ್ಗಕ್ಕೂ ಇರಲೇಬೇಕು.**

ಸ್ಥಾಪನೆಯನ್ನು ವಿರೋಧಿಸುತ್ತಿಲ್ಲ. ದೂರದರ್ಶನದಲ್ಲಿ ಪ್ರಸಾರ ಆಗುವ ಉರ್ದು ಕಾರ್ಯಕ್ರಮ/ನ್ಯೂಸ್‌ನ್ನು ವಿರೋಧಿಸಿದ ಮನಸ್ಸುಗಳು ಯಾಕೆ ಈಗ ತೆಪ್ಪಗಿವೆ. ದಲಿತ-ಹಿಂದುಳಿದ ವರ್ಗಗಳ ಏಳ್ಗೆಗೆ ಅನುವಾಗಲೆಂದು ಜಾರಿಗೊಳ್ಳಿಸಿದ್ದ ಒಂದನೇ ತರಗತಯಿಂದ ಇಂಗ್ಲಿಶ್ ಭಾಷಾ ಕಲಿಕೆಯನ್ನು ವಿರೋಧಿಸಿದ ಅಪ್ಪಟ ಕನ್ನಡ ಅಭಿಮಾನಿಗಳಿಗೆ ಏನಾಗಿದೆ?

ಇದೆಲ್ಲವುಕ್ಕಿಂತ ಹೆಚ್ಚಾಗಿ ಸಂಸ್ಕೃತವು ಭಾಷಿಕ-ಸಾಂಸ್ಕೃತಿಕ-ಸಾಮಾಜಿಕ ಅಸಹನೆಯನ್ನು ಹುಟ್ಟು ಹಾಕಿದೆ. ಈ ಎಲ್ಲ ಮನಸ್ಸುಗಳ ಹಿಂದಿನ ಶಕ್ತಿ ಯಾವುದೆಂದು ಕೇಳಿದರೆ, ಅದು ಸಂಸ್ಕೃತವೆಂದೇ ಹೇಳಬಹುದು. ಸಂಸ್ಕೃತಕ್ಕೂ ಇಂತಹ ಜನವಿರೋಧಿ ಬೆಳವಣಿಗೆಗಳ ನಡುವೆ ಏನಾದರೂ ತಳುಕು ಇದಿಯೇ ಎಂದೂ ಕೇಳಿದರೆ, ಸಂಸ್ಕೃತವನ್ನು ಕೇವಲ ಒಂದು ಭಾಷೆಯಾಗಿ ನೋಡಿದರೆ ಅದಕ್ಕೆ ಯಾವುದೇ ಜೀವವಿರೋಧಿ ಗುಣವಿಲ್ಲ. ಆದರೆ, ಸಂಸ್ಕೃತವನ್ನು ಒಂದು ಸಮೂಹದ ಭಾಷೆಯಾಗಿ ನೋಡಿದರೆ, ಅದಕ್ಕೆ ಎಲ್ಲಾ ಬಗೆಯ ಗುಣಗಳನ್ನು ರೂಢಿಸಿಕೊಳ್ಳಲು ಸಾಧ್ಯ. ಹಾಗಾಗಿ ಸಂಸ್ಕೃತ ಭಾಷೆಯ ಕೆಳ್ಚಲನೆಯ ಮುಖ್ಯ ಉದ್ದೇಶ ವೈದಿಕಕರಣ ಅಥವಾ ಕೇಸರೀಕರಣವನ್ನು ಮತ್ತೇ ನೆಲೆಯೂರಿಸುವ ಹುನ್ನಾರ ಎಂದು ಯಾಕೆ ಕನ್ನಡಪರ ಹೋರಾಟಗಾರರಿಗೆ ಇನ್ನೂ ಅರ್ಥವಾಗಿಲ್ಲ.

ವೈದಿಕ-ಸಂಸ್ಕೃತದ ಗೀಳು ಅಂಟಿಸಿಕೊಂಡ ಬೈರಪ್ಪನಂಥವರು ಕರ್ನಾಟಕ ಸಂಸ್ಕೃತಿ ಪಾಠವನ್ನು ಹೇಳುವ ಹುಂಬತನಕ್ಕೆ ಏನನ್ನಬೇಕು? ಸಂಸ್ಕೃತ ವಿವಿ ಬೇಕು ಬೇಡ ಎನ್ನುವ ಚರ್ಚೆಯನ್ನು ವಿಜಯ ಕರ್ನಾಟಕ ಪತ್ರಿಕೆಯವರು ಆರಂಭಿಸಿದರು ಅದಕ್ಕೆ 'ನಿಷ್ಪಕ್ಷಪಾತ ಚರ್ಚೆ' ಎಂಬ ಹಣೆಪಟ್ಟಿಯನ್ನು ಅಂಟಿಸಿದ್ದರೂ. ಈ ಚರ್ಚೆಯ ಉದ್ಘಾಟನೆಯನ್ನು ಬೈರಪ್ಪನವರೇ ಮಾಡಿದರು. ಇದರಲ್ಲಿ ಪಾಲ್ಗೊಂಡ ಹೆಚ್ಚಿನ ವಿದ್ವಾಂಸರು ನಿಲಯದ ಕಲಾವಿದರೇ ಆಗಿದ್ದರು ಅನ್ನುವುದು ವಿಶೇಷ. ಈ ಚರ್ಚೆಯಲ್ಲಿ ಪಾಲ್ಗೊಂಡು ಸಂಸ್ಕೃತ ವಿವಿ ಏಕೆ ಬೇಡ ಎಂದೂ ಸಮರ್ಥನೆ ನೀಡಿದ ಪ್ರೊ. ಕೆ. ಪಿ. ನಾರಾಯಣ ಮತ್ತು ಪ್ರೊ. ಎಮ್. ಎಮ್. ಕಲಬುರ್ಗಿಯಂತಹ ಚಿಂತಕರನ್ನು ಭಿನ್ನ ಮತಿಯರೆಂದೂ ಬೀಗಿ ಅದೇ ಬೈರಪ್ಪನವರು ಆ ಚರ್ಚೆಗೆ ಮುಕ್ತಾಯ ಹಾಡಿದ್ದು ಇನ್ನೂ ವಿಶೇಷವಾಗಿತ್ತು.

ರಾಜ್ಯದ ಇನ್ನಿತರ ಪತ್ರಿಕೆಗಳಾದ 'ಸಂವಾದ' 'ಲಂಕೇಶ್' [ಈ ಪತ್ರಿಕೆಯಲ್ಲಿಯೂ ಕೂಡ ಪ್ರೊ.ಲಿಂಗದೇವರು ಹಳೆಮನೆಯವರ ಹೊರತಾಗಿ ಬೇರೆ ಯಾರು ಸಂಸ್ಕೃತ ವಿವಿಗೆ ಪ್ರತಿಕ್ರಿಯಿಸಿದ್ದು ನನಗೆ ಗೊತ್ತಿಲ್ಲ] 'ವಾರ್ತಭಾರತಿ' ಹಾಗೂ 'ಹೊಸತು' ಇವುಗಳು ತಕ್ಕಮಟ್ಟಿಗೆ ಸಂಸ್ಕೃತ ವಿವಿಯನ್ನು ವಿರೋಧಿಸುವುದಕ್ಕೆ ವೇದಿಕೆ ಆಗಿದ್ದು ಗಮನಾರ್ಹ. ಕನ್ನಡ ಸಾರಸತ್ವಕ್ಕೆ ತಮ್ಮನ್ನು ಮುಡುಪಾಗಿಟ್ಟಂತಹ ಎಷ್ಟೋ ಪತ್ರಿಕೆಗಳು ಸಂಸ್ಕೃತ ವಿವಿ ಸ್ಥಾಪನೆ ಕುರಿತು ಚರ್ಚೆಗೆ ಒಂದು ವೇದಿಕೆ ಒದಗಿಸದಿರುವುದು ನೋವಿನ ಸಂಗತಿ.

ಕನ್ನಡ ಮಾತನಾಡುವ ಮತ್ತು ಕನ್ನಡ ನುಡಿಯನ್ನೇ ನೆಚ್ಚಿರುವ ಸಮುದಾಯಗಳ ಆಶೋತ್ತರಗಳನ್ನು ಕಾಪಾಡುವ ಜವಾಬ್ದರಿ ಈ ನಾಡಿನ ಎಲ್ಲ ಬಗೆಯ ಸಮೂಹ ಮಾಧ್ಯಮಕ್ಕೆ ಇದೆ ಎಂದು ನನ್ನ ಬಲವಾದ ನಂಬಿಕೆ. ಯಾಕಂದರೆ, ಕರ್ನಾಟಕದ ಹೆಚ್ಚಿನ ಸಮುದಾಯಗಳ ಭಾಷೆ ಕನ್ನಡ. ಕನ್ನಡದ ಏಳ್ಗೆಗೆ ಅಗತ್ಯವಿರುವ ಎಲ್ಲ ಬಗೆಯ ನುಡಿಹಮ್ಮುಗೆ[ಭಾಷಾಯೋಜನೆ] ಅನುಷ್ಠಾನಗೊಳ್ಳಬೇಕು. ಇಂತಹ ಭಾಷಾಯೋಜನೆಗಳು ತಾರತಮ್ಯದ ಧೋರಣೆಗಳನ್ನು ಬಿಟ್ಟು ಮುನ್ನಡೆಯಬೇಕು. ಕಾರಣ ಹಲವಾರು ಬೇರೆ ಬೇರೆ ಸಮೂಹ ಭಾಷೆಗಳು ಕರ್ನಾಟಕದಲ್ಲಿವೆ. ಈ ಭಾಷೆಗಳಿಗೂ ಕನ್ನಡದಷ್ಟೇ ಪ್ರಾಮುಖ್ಯತೆ ಸಿಗಬೇಕು. ಇಂತಹ ಒಂದು ಔದಾರ್ಯದ ಮನುಸ್ಸು ಪ್ರಭುತ್ವ ಹಾಗೂ ಅದನ್ನು ನಿಭಾಯಿಸುವ ವರ್ಗಕ್ಕೂ ಇರಲೇಬೇಕು.

ಇಲ್ಲವಾದರೆ, ಸಂಸ್ಕೃತದಿಂದ ಕನ್ನಡದ ಮೇಲೆ ನಡೆದಿರುವ ಭಾಷಿಕ ಯಾಜಮಾನ್ಯ ಕನ್ನಡದಿಂದ ಕರ್ನಾಟಕದ ಇತರ ಭಾಷೆಗಳ ಮೇಲಿಯೂ ನಡೆಯುತ್ತದೆ. ಈಗ ಇಂತಹ ಯಾವುದೇ ಯಾಜಮಾನ್ಯ ಪ್ರಭಾವವು ಕನ್ನಡದಿಂದ ಕರ್ನಾಟಕದ ಇತರ ಭಾಷೆಗಳ ಮೇಲೆ ಆಗಿಲ್ಲವೆಂದೂ ನನ್ನ ವಾದವಲ್ಲ. ಆದರೆ ಸಂಸ್ಕೃತ ಕನ್ನಡಕ್ಕೆ ಹೋಲಿಸಿ ನೋಡಿದರೆ, ಕನ್ನಡದಿಂದ ಬೇರೆ ಭಾಷೆಗಳ ಮೇಲೆ ನಡದಿರುವ ಶೋಷಣೆಯ ಪ್ರಮಾಣ ಕಮ್ಮಿಯೆಂದೇ ಹೇಳಬಹುದು. ನೀರು ಕೆಲವರಿಗೆ ಮಾತ್ರ ತೀರ್ಥವಲ್ಲ. ನೀರು ತೀರ್ಥವಾಗಿ ಮಾರ್ಪಡುವ ದ್ರವವಾದರೇ ಅದು ಎಲ್ಲರಿಗೂ ತೀರ್ಥವೇ. ಹಾಗೆನೇ ಆಯಾ ಸಮುದಾಯದ ತಾಯ್ನುಡಿ ಅವರವರ ಅನುಭವವನ್ನು ಕಟ್ಟಿಕೊಡುವ ಮಾಧ್ಯಮವಾಗಬೇಕು. ಇದರಲ್ಲಿ ಯಾವುದೇ ಬಗೆಯ ತರತಮ ಮಾಡುವ ಹುನ್ನಾರಕ್ಕೆ ಅವಕಾಶ ಇರಕೂಡದು. ಪ್ರಭುತ್ವ ಹಾಗೂ ನುಡಿಹಮ್ಮುಗೆ [ಭಾಷಾಯೋಜನೆ] ನುಡಿನಡೆ [ಭಾಷಾನೀತಿ] ಯನ್ನು ರೂಪಿಸುವವರು ತಾಯ್ನುಡಿಯಂತಹ ಪರಿಕಲ್ಪನೆಗೆ ಇರುವ ಮೌಲ್ಯವನ್ನು ಮನಗಾಣಬೇಕಿದೆ. ಬಹುಭಾಷಿಕ-ಸಾಂಸ್ಕೃತಿಕ ಸನ್ನಿವೇಶಗಳ ಹೆಚ್ಚುಗಾರಿಕೆ ಏನು ಹಾಗೂ ಅವುಗಳನ್ನು ಯಾಕೆ ಕಾಪಾಡಬೇಕು ಎಂಬುದನ್ನು ಇನ್ನಾದರೂ ಮನವರಿಕೆ ಮಾಡಿಕೊಳ್ಳುವ ಜರೂರು ಇದೆ. □

ಸಾಹಿತ್ಯ-ಸಂಸ್ಕೃತಿ: ಬಹುಮುಖಿ ಪರಿಕಲ್ಪನೆಗಳ ತಾತ್ವಿಕ ಚಿಂತನೆ

ಡಾ. ಡೊಮಿನಿಕ್‌ರವರ "ಕನ್ನಡ ಸಾಹಿತ್ಯ-ಸಂಸ್ಕೃತಿ: ಏಕರೂಪೀತನದ ಅಪಕಲ್ಪನೆಗಳು" ಒಟ್ಟು ಇಪ್ಪತ್ತೊಂದು ಲೇಖನಗಳನ್ನು ಒಳಗೊಂಡಿರುವ ಕೃತಿ. ಈ ಕೃತಿಯಲ್ಲಿ ಸಾಹಿತ್ಯ, ಸಮಾಜ ಹಾಗು ಸಂಸ್ಕೃತಿಯನ್ನು ಕುರಿತಂತೆ ವಿಭಿನ್ನ ನೆಲೆಗಳಲ್ಲಿ ಚರ್ಚೆಗಳನ್ನು ನಡೆಸಲಾಗಿದೆ.

ಕೃತಿಕಾರರು ತಮ್ಮ ಲೇಖನಗಳನ್ನು ಕುರಿತಂತೆ 'ಓದುವ ಮುನ್ನ' ಎಂಬ ಭಾಗದಲ್ಲಿ ಹೀಗೆ ಹೇಳುವರು: "ಕನ್ನಡ ಸಾಹಿತ್ಯ ಮತ್ತು ತತ್ವಶಾಸ್ತ್ರದ ವಿದ್ಯಾರ್ಥಿಯಾದ ನಾನು, ವಿಭಿನ್ನವಾದ ಅನುಭವಗಳನ್ನು ಅನುಭವಿಸುತ್ತಾ, ಅವುಗಳಿಗೆ ಭಿನ್ನ ರೀತಿಯ ಪ್ರತಿಕ್ರಿಯೆಗಳನ್ನು ನೀಡುತ್ತಾ ಬಂದಿದ್ದೇನೆ. ಹೀಗೆ ಸಾಮಾಜಿಕವಾಗಿ ಗುರುತಿಸಿಕೊಳ್ಳುವ ಪ್ರಕ್ರಿಯೆಯಲ್ಲಿ ಒಂದು ಸಾಂಘಿಕ ಶಕ್ತಿ ಇದೆ ಎಂಬ ಭಾವನೆ ನಮ್ಮ ಭವಿಷ್ಯದ ಕನಸುಗಳನ್ನು ವಿಚಿತ್ರವಾಗಿ ಕಟ್ಟುತ್ತವೆ. ಈ ಎಲ್ಲವುಗಳ ಪ್ರಕ್ರಿಯೆಯಲ್ಲಿ ಕನ್ನಡ ಐಡೆಂಟಿಟಿಯ ಜಾತ್ಯಾತೀತ ನೆಲೆಯನ್ನು ಮೊದಮೊದಲು ನನ್ನದನ್ನಾಗಿ ಮಾಡಿಕೊಂಡರೂ ಸಹ, ಅದರೊಳಗಿನ ತಾರತಮ್ಯದ ಸ್ವರೂಪ ನನ್ನನ್ನು ಬಹುವಾಗಿ ಬಾಧಿಸಿದೆ. ಇದು ಮೊದಲನೆಯ ತಲೆಮಾರಿನವನಾದ ನನ್ನಂತಹ ಅನೇಕರನ್ನು ಕಾಡುವ ಸಂಗತಿಯೇನೋ...? ಅಥವಾ ಏಕರೂಪಿಯಾಗಿ ಸಂಘಟಿಸಿಕೊಟ್ಟಿರುವ ವಸಾಹತುಶಾಹಿ ಪ್ರಜ್ಞೆಯಿಂದ ಬಿಡಿಸಿಕೊಳ್ಳುವ ಕ್ರಮವೂ ಸಹ ಇದೇ ಆಗಿರಬಹುದೇನೋ...!" ಡಾಮ್ನಿಕ್ ಅವರು ವಿಧ್ಯಾರ್ಥಿಯಾದಂದಿನಿಂದ ಅಂದರೆ ಸುಮಾರು 1993ರಿಂದ 2007ರವರೆಗೂ ರಚಿಸಿರುವ ಈ ಲೇಖನಗಳು ಬೇರೆ ಬೇರೆ ಪತ್ರಿಕೆಗಳಲ್ಲಿ ಪ್ರಕಟವಾದಂತವು ಹಾಗೂ ಇಲ್ಲಿನ ಅನೇಕ ಲೇಖನಗಳು ಬೇರೆ ಬೇರೆ ಸಂದರ್ಭಗಳಲ್ಲಿ ಏರ್ಪಟ್ಟ ವಿಚಾರ ಸಂಕಿರಣಗಳಲ್ಲಿ ಮಂಡಿಸಿರುವಂತಹ ಪ್ರಬಂಧಗಳೂ ಆಗಿವೆ.

ಈ ಕೃತಿಗೆ "ಬಹುಮುಖಿ ವಾಸ್ತವಗಳ ನಡುವೆ ಸಾಮಾಜಿಕ ನ್ಯಾಯದ ಹುಡುಕಾಟ" ಎಂಬ ಶೀರ್ಷಿಕೆಯಲ್ಲಿ ಡಾ: ಬಿ.ಯು.ಸುಮಾರವರು ಮುನ್ನುಡಿಯನ್ನು ಬರೆದಿರುವರು.

ಈ ಲೇಖನಗಳ ವೈಶಿಷ್ಟ್ಯವೆಂದರೆ ಕಾವ್ಯ, ನಾಟಕ, ಸಮಾಜ, ಚಳುವಳಿ, ಲಿಂಗಸಂಬಂಧಗಳು, ಕಾರಂತರ ಬರವಣಿಗೆಯ ಸ್ವರೂಪ... ಹೀಗೆ ಬಹುಮುಖಿ ನೆಲೆಗಳಲ್ಲಿ ತಮ್ಮ ಚಿಂತನೆಗಳನ್ನು ಅನೇಕ ಆಕರ ಕೃತಿಗಳೊಂದಿಗೆ ಮತ್ತು ಪತ್ರಿಕೆಗಳಲ್ಲಿನ ಲೇಖನಗಳೊಂದಿಗೆ ತೌಲನಿಕವಾಗಿ ತಮ್ಮ ವಿಚಾರಗಳ ವಿಶ್ಲೇಷಣೆಯನ್ನು ಮಾಡಿರುವುದನ್ನು ನಾವು ಕಾಣುತ್ತೇವೆ.

'ದ್ವಿಮಾನ ವೈರುಧ್ಯಗಳಲ್ಲಿ ಆಲೋಚನೆ-ಒಂದು ವಿಶ್ಲೇಷಣೆ' ಎಂಬ ಲೇಖನದಲ್ಲಿ ಈ ಪರಿಕಲ್ಪನೆಯನ್ನು ಕುರಿತಂತೆ ತುಂಬ ದೀರ್ಘವಾದ ವಿವರಣೆ ಇದೆ. ಸಾಮಾಜಿಕ ಸಂರಚನೆಯ ವ್ಯವಸ್ಥೆಯನ್ನು ಕುರಿತಂತೆ ಇಲ್ಲಿ ವಿಶ್ಲೇಷಣೆ ಇದೆ. ಅಂದರೆ ಸಾಹಿತ್ಯ, ರಾಜಕೀಯ, ಆರ್ಥಿಕ, ಧಾರ್ಮಿಕ, ಜಾತ್ಯಾಧಾರಿತ, ನೈತಿಕ, ಸಾಮಾಜಿಕ, ಲಿಂಗಾಧಾರಿತ ಮತ್ತು ತಾತ್ವಿಕ... ಹೀಗೆ ದ್ವಿಮಾನ ವೈರುಧ್ಯಗಳನ್ನು ಕುರಿತಂತೆ ವರ್ಗೀಕರಿಸಿ ಅವುಗಳನ್ನು ಗುರುತಿಸುತ್ತಾರೆ. ಉದಾಹರಣೆಗೆ, ಜನಪ್ರಿಯxಶಾಸ್ತ್ರೀಯ, ಸ್ವರ್ಗxನರಕ, ಬ್ರಾಹ್ಮಣxದಲಿತ ಗಂಡುxಹೆಣ್ಣು, ಗರತಿxಸೂಳೆ ಎಂಬ ಪ್ರತಿನಿತ್ಯ ಬಳಕೆಯಾಗುವ ದ್ವಿಮಾನ ವೈರುಧ್ಯಗಳನ್ನು ಕುರಿತಂತೆ ಚರ್ಚಿಸುತ್ತಾರೆ. ಈ ದ್ವಿಮಾನ ವೈರುಧ್ಯಗಳ ಹುಟ್ಟಿಗೆ ಲೇಖಕರು ಗುರುತಿಸುವ ಕಾರಣವೆಂದರೆ: 'ಪ್ರತಿಯೊಂದು ದ್ವಿಮಾನ ವೈರುಧ್ಯವೂ ಸಹ ಒಂದು ನಿರ್ದಿಷ್ಟ ಚಾರಿತ್ರಿಕ ಘಟ್ಟದ ಉತ್ಪನ್ನವೇ ಹೊರತು ಸ್ವತಂತ್ರವಾದದ್ದೇನಲ್ಲ. ಅಲ್ಲದೆ ಆಯಾ ಸಂದರ್ಭಕ್ಕೆ ತಕ್ಕಂತೆ ಈ ದ್ವಿಮಾನ ವೈರುಧ್ಯಗಳು ಪ್ರತ್ಯುತ್ಪಾದನೆಗೊಳ್ಳುತ್ತಿರುತ್ತವೆ ಮತ್ತು ತಮ್ಮ ಅಸ್ತಿತ್ವವನ್ನು ಸಮರ್ಥಿಸಿಕೊಳ್ಳುತ್ತಿರುತ್ತವೆ' ಎಂಬ ಅಭಿಪ್ರಾಯ ಲೇಖಕರದ್ದು.

ಕೆಲವು ದ್ವಿಮಾನ ವೈರುಧ್ಯಗಳ ಸೃಷ್ಟಿಗೆ ಕೆಲವು ಚಾರಿತ್ರಿಕ ಸನ್ನಿವೇಶಗಳು ಕಾರಣವಾಗಿರಬಹುದು, ಆದರೆ ಸಮಗ್ರವಾಗಿ ಎಲ್ಲಕ್ಕೂ ಇದು ಅನ್ವಯವಾಗುವುದಿಲ್ಲ. ಯಾಕೆಂದರೆ, ಕಷ್ಟxಸುಖ, ಪಾಪxಪುಣ್ಯ, ಹಗಲುxರಾತ್ರಿ, ಇಂತಹ ಸಂದರ್ಭಗಳಲ್ಲಿ ಚಾರಿತ್ರಿಕ ಸನ್ನಿವೇಶ ಕಾರಣವಾಗುವುದಿಲ್ಲ. ಅಂದರೆ ಅನೇಕ ದ್ವಿಮಾನ ವೈರುಧ್ಯಗಳು ಪರಸ್ಪರ ವಿರುದ್ಧಾರ್ಥಕ ಪದಗಳಾಗಿರುವಂತಹವುಗಳು. ಹೀಗಿದ್ದರೂ ಸಹ ಈ ಲೇಖನವು ದ್ವಿಮಾನ ವೈರುಧ್ಯಗಳನ್ನು ಕುರಿತಂತೆ ಒಟ್ಟು ಸಾಮಾಜಿಕ ವ್ಯವಸ್ಥೆಯನ್ನು ಗಮನದಲ್ಲಿಟ್ಟುಕೊಂಡು ವಿಶ್ಲೇಷಿಸುವ ಚಿಂತನೆ ಹೊಸ ರೀತಿಯದ್ದಾಗಿದೆ.

'ಮಾರ್ಕೆಟ್ ಸಂಬಂಧಗಳು ಮತ್ತು ಸಾಹಿತ್ಯ' ಎನ್ನುವ ಲೇಖನದಲ್ಲಿ ನವವಸಾಹತುಶಾಹಿ ವ್ಯವಸ್ಥೆ ಮಾನವ ಜೀವನದ ಎಲ್ಲ ರಂಗಗಳನ್ನೂ ಹೇಗೆ ಅಕ್ಟೋಪಸ್ ಜೀವಿಯಂತೆ ಆಕ್ರಮಿಸಿಕೊಂಡಿದೆ ಎಂಬುದನ್ನು ಕುರಿತು ಚರ್ಚಿಸಲಾಗಿದೆ. ಶ್ರೀಮಂತವರ್ಗ, ಮಧ್ಯಮವರ್ಗ ಮತ್ತು ಬಡವರಿಗೆ ಹೇಗೆ ಅದು ತನ್ನ ಅಸ್ತಿತ್ವವನ್ನು ತೆರೆದುಕೊಂಡಿದೆ ಎಂಬುದನ್ನು ಕುರಿತು ವಿವರವಾಗಿ ಲೇಖಕರು ಚರ್ಚಿಸುವರು. ಮಾರ್ಕೆಟ್ ಸಂಸ್ಕೃತಿಯ ವೈಶಿಷ್ಟ್ಯ ಏನೆಂದರೆ ಗ್ರಾಹಕ ಸಮಾಜ ಸಂಸ್ಕೃತಿಯನ್ನು ಸೃಷ್ಟಿಸುವುದು ಎಂದು ಲೇಖಕರು ಅಭಿಪ್ರಾಯಪಡುತ್ತಾರೆ. ಅವರೇ ಹೇಳುವಂತೆ 'ಅಧಿಕ ಬಯಕೆಯನ್ನು ಹುಟ್ಟುಹಾಕು' (ಕ್ರಿಯೇಟ್ ಮೋರ್ ಡಿಸಾಯರ್) ಎಂಬ ತತ್ವವೇ ಮುಖ್ಯವಾಗುತ್ತದೆ. ಈಗಿನ ಮಾರುಕಟ್ಟೆ ಸಂಸ್ಕೃತಿಯ ವಾಸ್ತವದ ಚಿತ್ರವೂ ಸಹ ಅದೇ ಆಗಿದೆ. ಮಾರುಕಟ್ಟೆ ಸಂಸ್ಕೃತಿಯು ತನ್ನ ವ್ಯಾಪಕತೆಯನ್ನು ಪಡೆದುಕೊಳ್ಳುವ ಸಂದರ್ಭಗಳಲ್ಲಿ ಸರ್ಕಾರ ಮತ್ತು ಜಾಹೀರಾತುಗಳ ಪಾತ್ರ ಅತ್ಯಂತ ಪ್ರಮುಖವಾದುದು ಎಂಬ ಸೂಕ್ಷ್ಮತೆಯನ್ನು ಇಲ್ಲಿ ಗುರುತಿಸಬಹುದಾಗಿದೆ.

'ಕಾವ್ಯ ಎಂದರೆ ಏನು' ಎಂಬ ಲೇಖನದಲ್ಲಿ ಕಾವ್ಯ ರಚನೆಯನ್ನು ಕುರಿತಂತೆ ಚರ್ಚೆ ಇದೆ. ಭಾಮಹ ಕಾವ್ಯವನ್ನು ಕುರಿತು "ಶಬ್ದಾರ್ಥ ಸಹಿತೌ ಕಾವ್ಯಂ" ಎಂದು ಕಾವ್ಯದ ಲಕ್ಷಣವನ್ನು ಕುರಿತು ಹೇಳಿರುವನು. ಈ ಲೇಖನದ ಪ್ರಕಾರ ನಿರ್ದಿಷ್ಟವಾಗಿ ಕಾವ್ಯ ಎಂದರೆ, ಅದರಲ್ಲೂ ಭಾರತೀಯ ಪರಿಸರದಲ್ಲಿ ಕಾವ್ಯದ ಪ್ರಮುಖ ಉದ್ದೇಶ ಪುರುಷಾರ್ಥ ಸಾಧನೆಯಾಗಿದೆ. ಇಲ್ಲಿ ಒಟ್ಟು ಸಾಮಾಜಿಕ ವ್ಯವಸ್ಥೆಯಲ್ಲಿ ಕಾವ್ಯದ ರಚನೆ ಪ್ರಧಾನವಾಗಿ ಪುರುಷ ಕೇಂದ್ರಿತ ನೆಲೆಯಲ್ಲಿ ಅಭಿವ್ಯಕ್ತಿಯಾಗಿರುವುದು ಎಂದು ತಿಳಿಸುತ್ತಾ ಕಾಲ ಕ್ರಮೇಣ ಕಾವ್ಯ/ಸಾಹಿತ್ಯ ಮಧ್ಯಮ ವರ್ಗದ ಬದುಕಿನ ಅಭಿವ್ಯಕ್ತಿಯೂ ಆಯಿತು ಎಂದು ಚರ್ಚಿಸಲಾಗಿದೆ. ಇಲ್ಲಿ ಕಾವ್ಯವನ್ನು ಕುರಿತಂತೆ ಪಂಪ ಮತ್ತು ಜಿ.ಎಸ್.ಶಿವರುದ್ರಪ್ಪ ಇವರ ಚಿಂತನೆಗಳನ್ನು ಗುರುತಿಸುತ್ತಾ ಭಾರತೀಯ ಮತ್ತು ಪಾಶ್ಚಾತ್ಯ ಪರಿಸರದ ಕಾವ್ಯ ರಚನೆಯನ್ನು ಕುರಿತಂತೆ ಇಲ್ಲಿ ವಿಶ್ಲೇಷಣೆ ಮಾಡಲಾಗಿದೆ. ಪ್ಲೇಟೋ, ಲೆನಿನ್ ಮುಂತಾದವರ ವಿಚಾರಗಳನ್ನು ಕಾವ್ಯ ಚರ್ಚೆಯ ಸಂದರ್ಭದಲ್ಲಿ ಉಲ್ಲೇಖಿಸುವರು.

ಹೆಚ್.ಎಮ್, ಚನ್ನಯ್ಯನವರ 'ಬೂರ್ಶ್ವಾ' ಎಂಬ ಲೇಖನದಲ್ಲಿ 'ಬೂರ್ಶ್ವಾ' ಶಬ್ದ ಆಧುನಿಕ ಬಂಡವಾಳಶಾಹಿ ಆದಿಪತ್ಯ ಸ್ಥಾನದಲ್ಲಿರುವ ವ್ಯಕ್ತಿಯನ್ನು ಸೂಚಿಸುತ್ತಾ, ಉತ್ಪಾದನಾ ವ್ಯವಸ್ಥೆಯ ನಿಯಂತ್ರಣ ಈತನ ಒಡೆತನದಲ್ಲಿರುತ್ತದೆ

ಪುಸ್ತಕ ಅವಲೋಕನ



ಲೇ : ಡಾ. ಡೊಮಿನಿಕ್.ಡಿ
ಬೆಲೆ : 150/-
ಪ್ರಕಟನೆ : ಪ್ರಗತಿ ಗ್ರಾಫಿಕ್ಸ್, ಬೆಂಗಳೂರು
ನಂ.119, 3ನೇ ತಿರುವು,
8ನೇ ಮುಖ್ಯರಸ್ತೆ, ಆರ್.ಪಿ.ಸಿ. ಬಡಾವಣೆ,
ಬೆಂಗಳೂರು-560 104

ಡಾ. ಎಂ. ಮುನಿಯಪ್ಪ

ಎಂದು ಕವನವನ್ನು ಕುಗಿತು ವಿಶ್ಲೇಷಣೆ ನಡೆಸಲಾಗಿದೆ. ನವ್ಯ ಕಾವ್ಯದಲ್ಲಿ ಮುಖ್ಯವಾಗಿ ಅನಾಥಪ್ರಜ್ಞೆ, ಏಕಾಂಗಿತನ, ಕಾಮ, ಪ್ರತಿಮೆ, ರೂಪಕ ಇತ್ಯಾದಿಗಳು... ವ್ಯಕ್ತಿಯ ನೆಲೆಯಲ್ಲಿ ಮುಖ್ಯವಾದ ಸಂಗತಿಗಳು. ಸಮಾಜದಲ್ಲಿರುವ ಬಂಡವಾಳಶಾಹಿಗಳು ಕಾರ್ಮಿಕರ ಪರಿಶ್ರಮದ ಫಲವಾಗಿ ಅತ್ಯಂತ ಐಶಾರಾಮಿ ಜೀವನವನ್ನು ನಡೆಸುವುದು ಹಾಗು ಪರಿಶ್ರಮ ಹಾಗೂ ತಮ್ಮ ದುಡಿಮೆಗೆ ಫಲವಾಗಿ ಕನಿಷ್ಠ ಕೂಲಿಯನ್ನು ಪಡೆದು ಜೀವನವನ್ನು ಸಾಗಿಸುವ ಕಾರ್ಮಿಕ ವರ್ಗವನ್ನು ಲೇಖನದಲ್ಲಿ ಗುರುತಿಸಲಾಗಿದೆ. ಇಲ್ಲಿ ಬಂಡವಾಳಶಾಹಿ ಹಾಗು ಕಾರ್ಮಿಕವರ್ಗದ ನಡುವೆ ಕಂದಕ ಸಮಾಜದಲ್ಲಿ ಹೇಗೆ ನಿರ್ಮಾಣವಾಗಿರುತ್ತದೆ. ಇದರಲ್ಲಿ ಬಂಡವಾಳಶಾಹಿಗಳ ಪಾತ್ರ ಹಾಗು ಶಿಕ್ಷಿತ ವ್ಯಕ್ತಿಯೊಬ್ಬ ಬಂಡವಾಳಶಾಹಿ ವ್ಯವಸ್ಥೆಯ ರೀತಿನೀತಿಗಳನ್ನು, ಅದರ ಐಡಿಯಾಲಜಿಯನ್ನು ಮೈಗೂಡಿಸಿಕೊಂಡರೂ, ಆ ವ್ಯವಸ್ಥೆಯನ್ನು ವಿರೋಧಿಸುವಂತೆ ನಟಿಸುತ್ತಲೇ, ಬಂಡವಾಳಶಾಹಿ ವ್ಯವಸ್ಥೆಯನ್ನು ಅತ್ಯಧಿಕವಾಗಿ ಒಪ್ಪಿಕೊಂಡು ಬದುಕುತ್ತಿರುತತ್ತಾನೆ ಎಂಬ ಸೂಕ್ಷ್ಮವನ್ನು ಇಲ್ಲಿ ಗುರುತಿಸಲಾಗಿದೆ. ಬಾಹ್ಯದಲ್ಲಿ ವ್ಯಕ್ತಿಯ ಸಾಮಾಜಿಕ ಜವಾಬ್ದಾರಿಯನ್ನು ಮಾತನಾಡುತ್ತಿದ್ದರೂ ಸಹ ಒಳಗಡೆ ಅವನ ಗೋಸುಂಬೆತನ ಎರಡನ್ನು ಅಳವಡಿಸಿಕೊಂಡು, ಒಟ್ಟು ಬಂಡವಾಳ ವ್ಯವಸ್ಥೆಯ ಸ್ವರೂಪವನ್ನು ಗುರುತಿಸಿರುವಂತಹದ್ದು ಮುಖ್ಯವಾದದ್ದು. ಕಾವ್ಯದ ನಾಯಕ ಒಟ್ಟು ಬಂಡವಾಳಶಾಹಿ ವ್ಯವಸ್ಥೆಯ ಪ್ರತಿನಿಧಿಯೂ ಹೌದು. ಕಾರ್ಮಿಕ ವರ್ಗವನ್ನು ನಿರಂತರವಾಗಿ ಶೋಷಿಸುವ ಮೂಲಕ ತನ್ನ 'ಬೂರ್ಶ್ವಾ' ವ್ಯಕ್ತಿತ್ವವನ್ನು ತೋರಿಸಿಕೊಳ್ಳುವನು.

"ಮಹಾಚೈತ್ರ ನಾಟಕ ವಾದ-ವಿವಾದಗಳು" ಎನ್ನುವ ಲೇಖನ ಹನ್ನೆರಡನೆಯ ಶತಮಾನದ ವಸ್ತುವನ್ನು ಕುರಿತಂತೆ ರಚನೆಯಾಗಿರುವ ನಾಟಕವು ಸೃಷ್ಟಿಸಿದ ತಳಮಳಗಳನ್ನು ಕುರಿತಂತೆ ಚರ್ಚಿಸುತ್ತದೆ. ಪಠ್ಯ ಕೃತಿಯಾಗಿ ಬಂದ ಸಂದರ್ಭದಲ್ಲಿ ಈ ಕೃತಿಯನ್ನು ಕುರಿತು ವಿವಾದಗಳನ್ನು ಸೃಷ್ಟಿಸಿದವರೆಂದರೆ ಮಾತೆ ಮಹಾದೇವಿ, ಬಸವದಳ ಮತ್ತು ವೀರಶೈವ ಮಠಾದೀಶರು. ಇವರು ಕೃತಿಯ ರದ್ದತಿಗೆ ನೀಡುವ ಕಾರಣಗಳೆಂದರೆ ನಾಟಕದಲ್ಲಿ ಇತಿಹಾಸಕ್ಕೆ ಅಪಚಾರವಾಗಿದೆ; ಬಸವಣ್ಣನ ವ್ಯಕ್ತಿತ್ವಕ್ಕೆ ಅವಮಾನ ಮಾಡಲಾಗಿದೆ. ಈ ಕೃತಿಯಲ್ಲಿ ಅಶ್ಲೀಲ ಪದ ಪ್ರಯೋಗವಾಗಿದೆ; ಅಕ್ಕಮಹಾದೇವಿಯವರನ್ನು ಅವಮಾನಗೊಳಿಸಲಾಗಿದೆ ಮತ್ತು ಚೆನ್ನಬಸವಣ್ಣನ ವ್ಯಕ್ತಿತ್ವವನ್ನು ಕಳಂಕಿತಗೊಳಿಸಲಾಗಿದೆ ಎನ್ನುವವು.

ಮಹಾಚೈತ್ರ ನಾಟಕವನ್ನು ಕುರಿತಂತೆ ಉದ್ಭವವಾದ ಸಮಸ್ಯೆಯ ಮೂಲವನ್ನು ಇಲ್ಲಿ ಗುರುತಿಸುತ್ತಾ, ವಿವಾದಗಳನ್ನು ಕುರಿತಂತೆ ನಾಟಕಕಾರರ ಅಭಿಪ್ರಾಯಗಳನ್ನು ಗಮನಿಸುದು ಸೂಕ್ತ: "ಎಚ್ ಎಸ್ ಶಿವಪ್ರಕಾಶರ ಪ್ರಕಾರ ಈ ನಾಟಕ ರಚನೆಯಲ್ಲಿ ಚರಿತ್ರೆ, ಪುರಾಣ, ಜಾನಪದ ಆಶಯ, ಕಲ್ಪನೆ, ಸ್ವಾನುಭವ ಸಿದ್ಧವಾದ ಒಳನೋಟಗಳು, ವರ್ತಮಾನದ ಕಾಳಜಿಗಳು ಮುಂತಾದ ಅನಿಸಿಕೆಗಳನ್ನು ದಾಖಲಿಸಲಾಗಿದೆ.

ಡೊಮಿನಿಕರವರು ಇಲ್ಲಿ ನಾಟಕವನ್ನು ಕುರಿತಂತೆ ಎದ್ದಿರುವ ವಿವಾದಗಳು ಅನಗತ್ಯವಾದುವು ಎಂಬ ತೀರ್ಮಾನಕ್ಕೆ ಬರುತ್ತಾ ಆ ನಾಟಕವನ್ನು ಸಮರ್ಥಿಸಿಕೊಳ್ಳುವರು. ಕೃತಿಯಲ್ಲಿ ಬಸವಣ್ಣನವರ ವ್ಯಕ್ತಿತ್ವಕ್ಕೆ ಮಸಿಬಳಿಯಲಾಗಿದೆ ಎಂಬ ವಿಚಾರವನ್ನು ಕುರಿತಂತೆ 'ಬಸವಣ್ಣನನ್ನು ಒಬ್ಬ ದೇವತಾ ಪುರುಷನೆಂದು ಪರಿಗಣಿಸಿದರೆ ಈ ಮಾತು ನಿಜವಾಗುತ್ತಿತ್ತು. ಆದರೆ ಚಾರಿತ್ರಿಕವಾಗಿ ಬಸವಣ್ಣನನ್ನು ಗ್ರಹಿಸಿ, ಆತನ ಶಕ್ತಿ ಬಹುಮುಖಿಯಾಗಿತ್ತೆಂದು ಚಿತ್ರಿಸುವುದೇ ನಾಟಕದ ವಸ್ತು. ಬಸವಣ್ಣನವರು ಮನುಷ್ಯರಾಗಿ ತಮ್ಮ ಅಂತರಂಗದ ತೊಳಲಾಟಗಳನ್ನು ಅತ್ಯಂತ ಪ್ರಾಮಾಣಿಕವಾಗಿ ಎದುರಿಸುವ, ಹಲವಾರು ಸಂದರ್ಭಗಳಲ್ಲಿ ಹತಾಶರಾಗುವ, ಆಮೂಲಕ ದೈವತ್ವವನ್ನು ಪಡೆಯುವ ಚಿತ್ರಣವು ನಾಟಕದ ಉದ್ದಕ್ಕೂ ಮೂಡಿ ಬಂದಿದೆ ಎಂದು ವಾಸ್ತವಿಕ ನೆಲೆಯಲ್ಲಿ ಅಭಿಪ್ರಾಯವನ್ನು ವ್ಯಕ್ತಪಡಿಸಲಾಗಿದೆ.

ಹೀಗೆ ವಚನ ಚಳುವಳಿ, ಅದರಲ್ಲಿ ಕಾಣಿಸಿಕೊಂಡ ಅಕ್ಕಮಹಾದೇವಿ, ನಾಟಕದಲ್ಲಿ ಬಳಕೆಯಾಗಿರುವ ಅಶ್ಲೀಲ ಪದಗಳು, ಚೆನ್ನಬಸವಣ್ಣನವರ ವ್ಯಕ್ತಿತ್ವದ ಅವಹೇಳನ ಮುಂತಾದ ವಿವಾದಗಳನ್ನು ಕುರಿತು, ಅವುಗಳು ಅನಗತ್ಯವಾದ ವಿವಾದಗಳೇ ಹೊರತು ನಾಟಕಕಾರರ ಮೂಲ ಆಶಯಗಳಲ್ಲ ಎಂದು ಸರಿಯಾಗಿಯೇ ಗುರುತಿಸುವರು. ಹೀಗೆ ಈ ಲೇಖನದಲ್ಲಿ ಮಹಾಚೈತ್ರ ನಾಟಕದ ವಿವಾದಗಳ ಸೃಷ್ಟಿ ಮತ್ತು ಅವುಗಳ ಸಮರ್ಥನೆ ಹನ್ನೆರಡನೆಯ ಶತಮಾನದ ವಚನ ಚಳುವಳಿಯನ್ನು ಕುರಿತು ಸೂಕ್ಷ್ಮವಾಗಿ ವಿಶ್ಲೇಷಿಸಲಾಗಿದೆ.

'ಕಾರಂತರ ಬರವಣಿಗೆಯ ವ್ಯಾಪ್ತಿ ಮತ್ತು ವೈಶಿಷ್ಟ್ಯ' ಎನ್ನುವ ಲೇಖನದಲ್ಲಿ ಶಿವರಾಮ ಕಾರಂತರ ಒಟ್ಟು ಸಾಹಿತ್ಯವನ್ನು ಕುರಿತಂತೆ ಸಂಕ್ಷಿಪ್ತವಾಗಿ ವಿಶ್ಲೇಷಿಸಲಾಗಿದೆ. ಶಿವರಾಮ ಕಾರಂತರನ್ನು ಕುರಿತಂತೆ ಅನೇಕ ಅಧ್ಯಯನಗಳು ನಡೆದಿವೆ. ಇಲ್ಲಿ ಕಾರಂತರು ಮಕ್ಕಳಿಗಾಗಿ ರಚಿಸಿದಂತಹ ಬಾಲ ಪ್ರಪಂಚ, ವೈಚಾರಿಕ ಸಾಹಿತ್ಯ, ಪ್ರವಾಸ ಸಾಹಿತ್ಯ, ಕಲಾ ಪ್ರಪಂಚ, ಪ್ರಬಂಧ ಸಾಹಿತ್ಯ, ಕಾದಂಬರಿ ಜಗತ್ತು, ತಾತ್ವಿಕ ಬರಹಗಳು... ಎಂಬ ಭಾಗಗಳಲ್ಲಿ ಕಾರಂತರ ಸಾಹಿತ್ಯವನ್ನು ಕುರಿತ ವೈಶಿಷ್ಟ್ಯಗಳನ್ನು ಗುರುತಿಸಲಾಗಿದೆ. ಕಾರಂತರು ಒಂದು ಸಂಸ್ಥೆ ಅಥವಾ ವಿಶ್ವವಿದ್ಯಾಲಯ ಮಾಡುವಂಥ ಅದ್ಭುತ ಕೆಲಸವನ್ನು ಮಾಡಿರುವಂಥವರು ಎಂದು ಗುರುತಿಸಲಾಗಿದೆ. ಬರವಣಿಗೆಯನ್ನೇ ವ್ಯಕ್ತಿತ್ವವನ್ನಾಗಿ ಮಾಡಿಕೊಂಡ ಕಾರಂತರನ್ನು ಕುರಿತು, "ಮನುಷ್ಯನಿಗೆ ಮಾತು ಎಷ್ಟು ಸಹಜವೋ, ಸ್ವಾಭವಿಕವೋ, ಕಾರಂತರಿಗೆ ಬರವಣಿಗೆ ಅಷ್ಟೇ ಸಹಜ-ಸ್ವಾಬಾವಿಕ" ಎಂದು ಲೇಖಕರು ಹೇಳುವರು.

ಈ ಕೃತಿಯಲ್ಲಿನ ಇತರ ಲೇಖನಗಳೆಂದರೆ ಅಪೂರ್ವ ಪಶ್ಚಿಮದಲ್ಲಿ ದೇಶಿ-ವಿದೇಶಿ ಸಂಸ್ಕೃತಿಗಳ ತೌಲನಿಕ ನೋಟ, ಪಂಪಭಾರತ ಪುರುಷ ವ್ಯಾಖ್ಯಾನಗಳ ರೂಪಕವಾಗಿ, ಮಿಶಿನರಿಗಳು ಪರಿಕಲ್ಪಿಸಿದ ಭೂತಾರಾಧನೆ, ಕರ್ನಾಟಕದಲ್ಲಿ ಲಿಂಗ ಸಂಬಂಧಗಳು ಮತ್ತು ಸಮುದಾಯ ಸಂಘಟನೆಯಲ್ಲಿ ವಸಾಹತುಶಾಹಿ ಜನಗಣತಿ ಪಾತ್ರ, ಮಹಿಳಾ ಚಳುವಳಿಯ ಸೈದ್ಧಾಂತಿಕ ನೆಲೆಗಳು, ಭಿನ್ನತೆಯ ಜಾಡುಹಿಡಿದು, ವ್ಯಕ್ತಿತ್ವಕ್ಕೊಂದು ಲೈಂಗಿಕತೆಯ ಕನ್ನಡಿ... ಮುಂತಾದ ಲೇಖನಗಳನ್ನು ಒಳಗೊಂಡಿರುವ ಈ ಕೃತಿಯು ಸಾಂಸ್ಕೃತಿಕವಾಗಿ ಬಹಳ ವಿಶಿಷ್ಟವಾದುದು. ಇಲ್ಲಿನ ಬಹಳಷ್ಟು ಲೇಖನಗಳು ನಿರ್ದಿಷ್ಟವಾಗಿ ಯಾವುದಾದರೂ ಒಂದು ನೆಲೆಗೆ ಸಂಬಂಧಿಸದೆ ವಿಭಿನ್ನ ನೆಲೆಗಳಿಗೆ ಸಂಬಂಧಿಸಿದವುಗಳಾಗಿವೆ. ಸಾಹಿತ್ಯಿಕ ನೆಲೆಗೆ ಮಾತ್ರ ಸೀಮಿತವಾಗದೆ ಸಾಮಾಜಿಕ, ರಾಜಕೀಯ, ಆರ್ಥಿಕ, ಧಾರ್ಮಿಕ, ವಸಾಹತುಶಾಹಿ, ಕಾವ್ಯ ಮತ್ತು ವ್ಯಕ್ತಿ... ಹೀಗೆ ಬೇರೆ ಬೇರೆ ಶಿಸ್ತುಗಳಿಗೆ ಸಂಬಂಧಿಸಿದ ಈ ಲೇಖನಗಳು ಬಹಳ ವೈವಿಧ್ಯಮಯವಾದವುಗಳು. ಕೃತಿಕಾರರು ಸಮಾಜವನ್ನು ಸಾಂಸ್ಕೃತಿಕವಾಗಿ ಗ್ರಹಿಸಿ, ವಾಸ್ತವ ನೆಲೆಯಲ್ಲಿ ಸಮಾಜ ಮತ್ತು ಸಂಸ್ಕೃತಿಯನ್ನು ಕುರಿತಂತೆ ವಿಶ್ಲೇಷಿಸುವ ಹೊಸ ಪ್ರಯತ್ನ ಸ್ತುತ್ಯಾರ್ಹವಾದದ್ದು.

ಈ ಕೃತಿಯಲ್ಲಿ ಬಹಳಷ್ಟು ಲೇಖನಗಳು ಒಂದೇ ಓದಿಗೆ ಹಿಡಿತಕ್ಕೆ ಸಿಗುವುದಿಲ್ಲ. ಕಾರಣ ಕೃತಿಕಾರರು ಬಳಸಿರುವ ಭಾಷೆ ಮತ್ತು ಪರಿಕಲ್ಪನೆಯ ವಿಧಾನಗಳು ಎಂದು ಹೇಳಬಹುದು. ಓದುಗ ಮತ್ತೆ ಮತ್ತೆ ಓದಿಕೊಂಡಾಗ ಮಾತ್ರ ದಕ್ಕಿಸಿಕೊಳ್ಳಲು ಸಾಧ್ಯ. ಸಾಮಾಜಿಕ ವ್ಯವಸ್ಥೆಯ ಸಂರಚನೆಯನ್ನು ಕುರಿತಂತೆ ಬಹಳ ಸಂಕೀರ್ಣವಾದ ವಿಷಯಗಳನ್ನು ಚರ್ಚಿಸಲಾಗಿದೆ. ಕೃತಿಕಾರರು ತಮ್ಮ ವಿಚಾರಗಳನ್ನು ಮಂಡಿಸುತ್ತಾ, ಅದಕ್ಕೆ ಪೂರಕವಾದ ಆಕರಗಳನ್ನು ಬಹಳವಾಗಿ ಬಳಸಿಕೊಂಡಿದ್ದಾರೆ. ಅವು ಅಷ್ಟು ಅವಶ್ಯಕತೆಯಿರಲಿಲ್ಲವೇನೋ ಎಂಬುದು ನನ್ನ ಅನಿಸಿಕೆ. ಏಕೆಂದರೆ ಪ್ರತಿಯೊಂದು ಲೇಖನಕ್ಕೂ ಆಕರಗಳನ್ನು ಬಳಸಿಕೊಳ್ಳುವಾಗ ಮುಖ್ಯವಾದ ನಾಲ್ಕೈದು ವಿದ್ವಾಂಸರ ಆಕರಗಳನ್ನು ಬಳಸಿಕೊಂಡು, ತಮ್ಮ ವಿಚಾರಗಳನ್ನು ಅದಕ್ಕೆ ಪೂರಕವಾಗಿ ಬಳಸಿಕೊಂಡಿದ್ದರೆ ಹೆಚ್ಚು ಸೂಕ್ತವಾಗುತ್ತಿತ್ತು.

ಒಟ್ಟಿನಲ್ಲಿ ಈ ಕೃತಿಯು ಕನ್ನಡ ಸಾಹಿತ್ಯ-ಸಂಸ್ಕೃತಿಯ ಸಂದರ್ಭದಲ್ಲಿ ಹೊಸ ಚಿಂತನೆಗಳನ್ನು ಹುಟ್ಟುಹಾಕುವ ಕೃತಿಯಾಗಿದೆ. □

'ಮಾರ್ಕೆಟ್ ಸಂಬಂಧಗಳು ಮತ್ತು ಸಾಹಿತ್ಯ' ಎನ್ನುವ ಲೇಖನದಲ್ಲಿ ನವವಸಾಹತುಶಾಹಿ ವ್ಯವಸ್ಥೆ ಮಾನವ ಜೀವನದ ಎಲ್ಲ ರಂಗಗಳನ್ನೂ ಹೇಗೆ ಅಕ್ಟೋಪಸ್ ಜೀವಿಯಂತೆ ಆಕ್ರಮಿಸಿಕೊಂಡಿದೆ ಎಂಬುದನ್ನು ಕುರಿತು ಚರ್ಚಿಸಲಾಗಿದೆ. ಶ್ರೀಮಂತವರ್ಗ, ಮಧ್ಯಮವರ್ಗ ಮತ್ತು ಬಡವರಿಗೆ ಹೇಗೆ ಅದು ತನ್ನ ಅಸ್ತಿತ್ವವನ್ನು ತೆರೆದುಕೊಂಡಿದೆ ಎಂಬುದನ್ನು ಕುರಿತು ವಿವರವಾಗಿ ಲೇಖಕರು ಚರ್ಚಿಸುವರು. ಮಾರ್ಕೆಟ್ ಸಂಸ್ಕೃತಿಯ ವೈಶಿಷ್ಟ್ಯ ಏನೆಂದರೆ ಗ್ರಾಹಕ ಸಮಾಜ ಸಂಸ್ಕೃತಿಯನ್ನು ಸೃಷ್ಟಿಸುವುದು ಎಂದು ಲೇಖಕರು ಅಭಿಪ್ರಾಯಪಡುತ್ತಾರೆ. ಅವರೇ ಹೇಳುವಂತೆ 'ಅಧಿಕ ಬಯಕೆಯನ್ನು ಹುಟ್ಟುಹಾಕು' ಎಂಬ ತತ್ವವೇ ಮುಖ್ಯವಾಗುತ್ತದೆ. ಈಗಿನ ಮಾರುಕಟ್ಟೆ ಸಂಸ್ಕೃತಿಯ ವಾಸ್ತವದ ಚಿತ್ರವೂ ಸಹ ಅದೇ ಆಗಿದೆ. ಮಾರುಕಟ್ಟೆ ಸಂಸ್ಕೃತಿಯು ತನ್ನ ವ್ಯಾಪಕತೆಯನ್ನು ಪಡೆದುಕೊಳ್ಳುವ ಸಂದರ್ಭಗಳಲ್ಲಿ ಸರ್ಕಾರ ಮತ್ತು ಜಾಹೀರಾತುಗಳ ಪಾತ್ರ ಅತ್ಯಂತ ಪ್ರಮುಖವಾದುದು ಎಂಬ ಸೂಕ್ಷ್ಮತೆಯನ್ನು ಇಲ್ಲಿ ಗುರುತಿಸಬಹುದಾಗಿದೆ.

ದಲಿತ-ಮುಸ್ಲಿಂ ಚಳುವಳಿ: ಮೀಸಲಾತಿ ಸಮಸ್ಯೆ

ಕಾಲಮಾನ-೨

ಡಾ. ಮುಜಾಫರ್ ಅಸ್ಸಾದಿ

ಪಾರ್ಲಿಮೆಂಟ್ ಈಗ ಹೊಸ ಚರ್ಚೆಯೊಂದನ್ನು ಆರಂಭಿಸಬೇಕಾಗಿದೆ. ಅಲ್ಪ ಸಂಖ್ಯಾಕ ಆಯೋಗದ ಅಧ್ಯಕ್ಷರಾದ ರಂಗನಾಥ ಮಿಶ್ರರವರು ತಮ್ಮ ಶಿಫಾರಸ್ಸಿನಲ್ಲಿ ಮುಸ್ಲಿಂರಲ್ಲಿರುವ ದಲಿತರಿಗೆ ಹಾಗೂ ಕ್ರಿಶ್ಚಿಯನ್‌ರಿಗೆ ಪ್ರತ್ಯೇಕ ಮೀಸಲಾತಿ ನೀಡಬೇಕೆಂದು ಹೇಳಿರುವುದು ಇಲ್ಲಿ ಗಮನಾರ್ಹ ವಿಷಯ. ಈ ವಿಷಯವೇನು ಹೊಸತೇನಲ್ಲ. ಈಗಾಗಲೇ ಈ ವಿಷಯ ಭಾರತದ ಸುಪ್ರಿಮ್ ಕೋರ್ಟ್‌ನ ಎದುರು 2004 ರಿಂದಲೇ ಇದೆ. ಸುಪ್ರಿಮ್ ಕೋರ್ಟ್ ಕೇಂದ್ರ ಸರಕಾರದ ನಿಲುವುವನ್ನು ಈ ಮೊದಲೇ ಕೇಳಿತ್ತು. ಡಿಸೆಂಬರ್ 2ರಂದು ಕೂಡ ಈ ವಿಷಯ ರಾಜ್ಯಸಭೆಗೆ ಚರ್ಚೆಗೆ ಬಂದಿತ್ತು. ಬಿಹಾರದ ರಾಜ್ಯಸಭಾ ಸದಸ್ಯರೊಬ್ಬು ದಲಿತ ಮುಸ್ಲಿಂಮರಿಗೆ ಮೀಸಲಾತಿ ನೀಡಬೇಕೆಂದು ಒತ್ತಾಯಿಸಿದ್ದು ಇಲ್ಲಿ ಉಲ್ಲೇಖನೀಯ. ಈ ಒತ್ತಾಯದಲ್ಲಿ ಎರಡು ಅಂಶಗಳಿದ್ದವು: 1950ರ ರಾಷ್ಟ್ರಪತಿಯವರ ಆದೇಶದಲ್ಲಿ ತಿದ್ದುಪಡಿ, ಹಾಗೂ ಮುಸ್ಲಿಂರಲ್ಲಿ ದಲಿತ ಐಡೆಂಟಿಟಿಯ ಗುರುತಿಸುವಿಕೆ. ಈಗಾಗಲೇ 12 ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳು ದಲಿತ ಮುಸ್ಲಿಂಮರಿಗೆ ಮೀಸಲಾತಿ ನೀಡಲು ಒಪ್ಪಿಗೆ ನೀಡಿವೆ. ಆಂಧ್ರ ಪ್ರದೇಶ, ಉತ್ತರ ಪ್ರದೇಶ ಹಾಗೂ ಬಿಹಾರ್ ಅಸೆಂಬ್ಲಿಗಳು ಈಗಾಗಲೇ ದಲಿತ ಮುಸ್ಲಿಂಮರಿಗೆ ಪರಿಶಿಷ್ಟ ಜಾತಿಯೊಳಗೆ ಮೀಸಲಾತಿ ನೀಡಬೇಕೆಂಬ ನಿರ್ಣಯವನ್ನು ಕೈಗೊಂಡಿವೆ.

ಇವೆಲ್ಲಾ ಗೊಂದಲಗಳಿಗೆ, ರಾಜಕಾರಣಕ್ಕೆ ಕಾರಣವಾದದ್ದು 1950ರ ರಾಷ್ಟ್ರಪತಿಯವರ ಆದೇಶ.ವಾಸ್ತವವಾಗಿ 1950ರ ಮೊದಲೇ ಮುಸ್ಲಿಂ ಸಮುದಾಯದೊಳಗಿನ ಕೆಲವು ಜಾತಿಗಳು ಸರಕಾರಿ ಪಟ್ಟಿಯಲ್ಲಿ ಪ. ಜಾತಿಗಳಾಗಿ ಗುರುತಿಸಲ್ಪಟ್ಟಿದ್ದವು. 1936ರ Government of India Act ಈ ಗುರುತಿಸುವಿಕೆಯನ್ನು ಮಾಡಿತ್ತು. ಅದು ಕೆಲವು ಪರಿಶಿಷ್ಟ ಜಾತಿಗಳನ್ನು ಅತ್ಯಂತ ಹಿಂದುಳಿದ ಜಾತಿಗಳನ್ನಾಗಿ ಗುರುತಿಸಿತ್ತು. ಈ ಗುರುತುಸುವಿಕೆ ಸಂದರ್ಭದಲ್ಲಿ ಧರ್ಮ ಮುಖ್ಯವಾಗಿರಲಿಲ್ಲ. ಈ ಜಾತಿಗಳಿಗೆ ಸರಕಾರ ವಿಶೇಷ ಸವಲತ್ತುಗಳನ್ನು ಕೂಡ ನೀಡಿತ್ತು. ಕೆಲವು ಜಾತಿಗಳನ್ನು ಎಲ್ಲಾ ಧರ್ಮಗಳಲ್ಲೂ ಗುರುತಿಸಬಹುದಾಗಿತ್ತು. ಅವುಗಳಲ್ಲಿ ಧೋಭಿ, ಹಲಾಲ್ ಕೋರ(ಭಂಗಿ), ಮೋಚಿ ಇತ್ಯಾದಿ. 1950ರ ರಾಷ್ಟ್ರಪತಿಯವರ ಆದೇಶ ಇವೆಲ್ಲವನ್ನು ಕೊನೆಗಾಣಿಸಿತ್ತು.

1950ರ ರಾಷ್ಟ್ರಪತಿಯವರ ಆದೇಶವನ್ನು ಎರಡು ಬಾರಿ ತಿದ್ದುಪಡಿ ಮಾಡಲಾಯಿತು. 1956ರಲ್ಲಿ ಸಿಖ್ಖರಲ್ಲಿರುವ ದಲಿತರಿಗೆ ಮೀಸಲಾತಿಯನ್ನು ಹಾಗೂ 1990ರಲ್ಲಿ ಬೌದ್ಧರಲ್ಲಿರುವ ದಲಿತರಿಗೂ ಮೀಸಲಾತಿಯನ್ನು ಕಲ್ಪಿಸಲಾಯಿತು. ದಲಿತ-ಮುಸ್ಲಿಂಮರಿಗೆ ಏಕೆ ಈ ಸೌಲಭ್ಯಗಳಿಲ್ಲ ಎಂಬ ಪ್ರಶ್ನೆ ಉದ್ಭವಿಸುವುದು ಸ್ವಾಭಾವಿಕ. ಒಂದೆಡೆ ಧರ್ಮದಾರಿತವಾಗಿ ಮೀಸಲಾತಿಯನ್ನು ನಿರಾಕರಿಸುತ್ತಾ ಮತ್ತೊಂದೆಡೆ ಧರ್ಮವನ್ನೇ ಆಧರಿಸಿ ಮೀಸಲಾತಿ ನೀಡುವುದು ವಿರೋಧಾ ಭಾಸವಲ್ಲವೇ?. ಸಿಖ್ಖ್ ಹಾಗೂ ಬೌದ್ಧ ಧರ್ಮವನ್ನು ಹಿಂದೂ ಧರ್ಮದ ಭಾಗವನನ್ನಾಗಿಸಿದರಲ್ಲಿ ಇದರ ರಾಜಕಾರಣವನ್ನು ನೋಡಬಹುದು.

ಮುಸ್ಲಿಂರನ್ನು ದಲಿತ ಮುಸ್ಲಿಂ, ಹಿಂದುಳಿದ ಮುಸ್ಲಿಂ ಎಂದೆಲ್ಲಾ ವಿಭಜಿಸುವುದು ಸರಿಯೇ ಎಂಬ ಪ್ರಶ್ನೆ ಮೂಡುವುದು ಸಹಜ. ಈ ಪ್ರಶ್ನೆಯ ಹಿಂದೆ ಮುಸ್ಲಿಂರನ್ನು ಏಕರೂಪಿಯಾಗಿ ನೋಡುವ ಯತ್ನ ಇದೆ. ವಾಸ್ತವವಾಗಿ ಮೀಸಲಾತಿ ವಿರೋಧಿಗಳು ಮುಂದಿಡುವ ವಾದ ಕೂಡ ಇದರಿಂದ ವಿಭಿನ್ನವೇನಲ್ಲ. ಅವರ ವಾದದಲ್ಲಿ ಒಂದೆರಡು ಹೊಸ ವಾದಗಳು ಸೇರಿ ರುವುದನ್ನು ನಾವು ಗುರುತಿಸಬೇಕು. ಅವರ ಪ್ರಕಾರ ಈ ಮೀಸಲಾತಿ ಇನ್ನಷ್ಟು ಜಾತಿಗಳಿಗೆ ದಾರಿ ಮಾಡಿಕೊಡುತ್ತದೆ. ಭಾರತದ ಜಾತೀಯ ತೆಯ ಮೌಲ್ಯಗಳಿಗೆ ತಿಲಾಂಜಲಿ ನೀಡುತ್ತದೆ. ಅಲ್ಲದೇ ಇದು ಇಸ್ಲಾಂ ಧರ್ಮದ ಮೂಲ ತತ್ವಕ್ಕೆ ವಿರುದ್ಧವಾಗಿದೆ. ಆದಕಾರಣ ಮೀಸಲಾತಿ ವಿರೋಧಿಗಳ ಪ್ರಕಾರ ದಲಿತ ಮುಸ್ಲಿಂವೆಂಬುದು ಒಂದು ಕೃತಕ ನಿರ್ಮಿತಿ, ಅದು ರಾಜಕೀಯ ನಿರ್ಮಿತಿಯೂ ಹೌದು.

ಭಾರತದ ಮುಸ್ಲಿಂರು ಜಗತ್ತಿನ ಇನ್ನಿತರ ಮುಸ್ಲಿಂಮರಿಂದ ವಿಭಿನ್ನರು. ಇಲ್ಲಿನ ಬಹುಸಂಖ್ಯಾಕ ಮುಸ್ಲಿಂಮರು ಕೆಳ ಹಾಗೂ ಹಿಂದುಳಿದ ಜಾತಿಗಳಿಂದ ಇತಿಹಾಸದಲ್ಲಿ ಮತಾಂತರಗೊಂಡವರು. ಆದಕಾರಣ "ಝಾತ್" "ನೀಚ್ ಝಾತ್" ಹಾಗೂ "ಊಂಚಿ ಝಾತ್" ಎಂಬ ಶಬ್ದದ ಪ್ರಯೋಗ ಸರ್ವೆಸಾಮಾನ್ಯ. ಐತಿಹಾಸಿಕವಾಗಿ ಭಾರತದ ಮುಸ್ಲಿಂಮರಲ್ಲಿ ಮೂರು ಜಾತಿಗಳನ್ನು ಗುರುತಿಸಲಾಗುತ್ತದೆ. ಮೊದಲನೇದಾಗಿ ಆಶ್ರಫ್‌ಗಳು, ಇವರು ಮೇಲ್ಜಾತಿಗಳು. ಮೂಲತಃವಾಗಿ ಭಾರತಕ್ಕೆ ವಲಸೆ ಬಂದು ನೆಲೆ ನಿಂತ ಸಮುದಾಯಗಳು, ಅಲ್ಲದೇ ಮೇಲ್ಜಾತಿಗಳಿಂದ ಸರಕಾರ ಸವಲತ್ತುಗಳಿಗಾಗಿ ಇತಿಹಾಸದಲ್ಲಿ ಮತಾಂತರಗೊಂಡವರು. ಎರಡನೇ ಜಾತಿಗಳೆಂದರೆ "ಅಜ್ಲಫ್"ಗಳು. ಇವುಗಳು ಮೂಲತಃವಾಗಿ ಭಾರತೀಯ ನೆಲೆಗಟ್ಟಿನಿಂದ ಬಂದವುಗಳು. ಇವುಗಳ ಸಾಮಾಜಿಕ ತಳಹದಿಯನ್ನು ಹಿಂದುಳಿದ ವರ್ಗಗಳಲ್ಲಿ ನೋಡಬಹುದು. ಅಜ್ಲಫ್‌ಗಳಲ್ಲಿ ಕುರುಬರನ್ನು, ದನಗಾಯಿಗಳು, ಬಡಗಿಗಳು, ಇತ್ಯಾದಿಯವರನ್ನು ಗುರುತಿಸಬಹುದು. ಮೂರನೇ ಜಾತಿ ಸಮುದಾಯವೆಂದರೆ "ಅಜ್ರಲ್ಸ್"ಗಳು. ಅವುಗಳನ್ನು "ನೀಚ್ ಝಾತ್ ಅಥವಾ ಪಾಸ್ಬಂದ್"ಗಳೆಂದೂ ಕೂಡ ಕರೆಯಲಾಗುತ್ತದೆ. ವಾಸ್ತವವಾಗಿ ಇವುಗಳ ಸಾಮಾಜಿಕ ತಳಹದಿ ದಲಿತ ಸಮುದಾಯದಲ್ಲಿದೆ.

ದಲಿತ ಮುಸ್ಲಿಂಮರ ಉಲ್ಲೇಖವನ್ನು 1901 ಜನಗಣತಿಯಲ್ಲಿಯೇ ನೋಡಬಹುದು. "ದಲಿತ ಮುಸ್ಲಿಂರು ಯಾವುದೇ ಮುಸ್ಲಿಂ ಸಮುದಾಯದ ಭಾಗವಾಗದೇ ಇರುವುದು, ಅವರಿಗೆ ಮಸೀದಿಯೊಳಗೆ ಹೋಗಲು ಅವಕಾಶವಿಲ್ಲದಿರುವುದು, ಸ್ಮಶಾನಗಳಲ್ಲಿ ಹೂಳಲು ಅವಕಾಶವಿಲ್ಲದಿರುವುದನ್ನು" ಈ ಜನಗಣತಿ ಗುರುತಿಸಿತ್ತು.

ವಾಸ್ತವವಾಗಿ ಮೀಸಲಾತಿಯನ್ನು ದಲಿತ ಮುಸ್ಲಿಂ ವರ್ಗಗಳಿಗೆ ನೀಡಬೇಕೆಂದು ವಾದಿಸುವವರು ಕೆಲವು ವಾದಗಳನ್ನು ಮುಂದಿಡುತ್ತಾರೆ. ಮೊದಲನೇದಾಗಿ, ದಲಿತ ಮುಸ್ಲಿಮರ ಸ್ಥಿತಿಗಳು ಮತಾಂತರ ನಂತರವೂ, ಸಾಮಾಜಿಕವಾಗಿ ಈಗಲೂ ಬದಲಾಗಿಲ್ಲ. ಜಾತೀಯ ತಾರತಮ್ಯಗಳೂ ಈಗಲೂ ಜೀವಂತವಾಗಿವೆ. ಸಮಾನತೆ ಎಂಬುದು ಈಗಲೂ ಮರೀಚಿಕೆ. ಜಾತಿಯ ಶ್ರೇಣಿಕೃತ ವ್ಯವಸ್ಥೆ ಈಗಲೂ

ಭಾರತದ ಮುಸ್ಲಿಂರು ಜಗತ್ತಿನ ಇನ್ನಿತರ ಮುಸ್ಲಿಂಮರಿಂದ ವಿಭಿನ್ನರು. ಇಲ್ಲಿನ ಬಹು ಸಂಖ್ಯಾಕ ಮುಸ್ಲಿಂ ಮರು ಕೆಳ ಹಾಗೂ ಹಿಂದುಳಿದ ಜಾತಿಗಳಿಂದ ಇತಿಹಾಸದಲ್ಲಿ ಮತಾಂತರಗೊಂಡವರು. ಆದಕಾರಣ "ಝಾತ್" "ನೀಚ್ ಝಾತ್" ಹಾಗೂ "ಊಂಚಿ ಝಾತ್" ಎಂಬ ಶಬ್ಧದ ಪ್ರಯೋಗ ಸರ್ವೆ ಸಾಮಾನ್ಯ. ಐತಿಹಾಸಿಕವಾಗಿ ಭಾರತದ ಮುಸ್ಲಿಂಮರಲ್ಲಿ ಮೂರು ಜಾತಿಗಳನ್ನು ಗುರುತಿಸಲಾಗುತ್ತದೆ. ಮೊದಲನೇದಾಗಿ ಆಶ್ರಫ್‌ಗಳು, ಇವರು ಮೇಲ್ಜಾತಿಗಳು. ಮೂಲತಃವಾಗಿ ಭಾರತಕ್ಕೆ ವಲಸೆ ಬಂದು ನೆಲೆ ನಿಂತ ಸಮುದಾಯಗಳು, ಅಲ್ಲದೇ ಮೇಲ್ಜಾತಿಗಳಿಂದ ಸರಕಾರ ಸವಲತ್ತುಗಳಿಗಾಗಿ ಇತಿಹಾಸದಲ್ಲಿ ಮತಾಂತರಗೊಂಡವರು. ಎರಡನೇ ಜಾತಿಗಳೆಂದರೆ "ಅಜ್ಲಫ್"ಗಳು. ಇವುಗಳು ಮೂಲತಃವಾಗಿ ಭಾರತೀಯ ನೆಲೆಗಟ್ಟಿನಿಂದ ಬಂದವುಗಳು.

ಚಾಲ್ತಿಯಲ್ಲಿದೆ. ಇದಕ್ಕೆ ಉತ್ತಮ ಉದಾಹರಣೆ ಬಿಹಾರದ ಪೂರ್ವ ಚಂಪಾರಣ್‌ನಲ್ಲಿ ಅಶ್ರಫ್ ಅಥವಾ ಮೇಲ್ ಜಾತಿಗಳ ಅಟ್ಟಹಾಸ. 2007 ಡಿಸೆಂಬರ್ 6 ರಂದು ಬಾಬ್ರಿ ಮಸೀದಿಯ ಧ್ವಂಸದ ದಿನವೇ ಬಿಹಾರದ ಚಂಪಾರಣ್‌ನಲ್ಲಿ ಒಂದು ಮಸೀದಿಯನ್ನು ಧ್ವಂಸ ಮಾಡಲಾಯಿತು.

ಅದಕ್ಕೆ ಕಾರಣ: ಆ ಮಸೀದಿಯನ್ನು ಕಟ್ಟಿದವರು ಅಜ್ರಲ್ಸ್‌ಗಳು– ಕೆಳಜಾತಿಯ ಮುಸ್ಲಿಂಮರು ಕಟ್ಟಿದರು ಎಂಬ ಒಂದೇ ಕಾರಣಕ್ಕೆ ಮಸೀದಿಯನ್ನು ಬೀಳಿಸಲಾಯಿತು. ಇಂತಹ ಬಹಳಷ್ಟು ಉದಾಹರಣೆಗಳನ್ನು ನೀಡುತ್ತಾರೆ. ಈ ಸಂಧರ್ಭದಲ್ಲಿ ಜರೀನಾ ಭಟ್ಟಿಯವರ ಉಲ್ಲೇಖ ಹಾಗೂ ಸಂಶೋಧನೆ ಪ್ರಸ್ತುತವೆನಿಸುತ್ತದೆ. ಅವರು ತಮ್ಮ ಸಂಶೋಧನೆಯಲ್ಲಿ ಮುಸ್ಲಿಂಮರಲ್ಲಿ ಜಾತಿ ಪದ್ಧತಿ ನಿಚ್ಚಳವಾಗಿರುವುದನ್ನು ಗುರುತಿಸುತ್ತಾರೆ. ಈ ರೀತಿಯ ವಿಶ್ಲೇಷಣೆ ಸಾಚಾರ್ ವರದಿಯಿಂದ ಸ್ವಲ್ಪ ಭಿನ್ನವೆನಿಸಿದರೂ ಅಂತಿಮವಾಗಿ ವಿಶ್ಲೇಷಣೆಯ ತಾತ್ಪರ್ಯ ಒಂದೇ ಅನಿಸುತ್ತದೆ. ಅವರು ಮುಸ್ಲಿಂಮರಲ್ಲಿ ಎರಡು ಜಾತಿಗಳಿರುವುದನ್ನು ಗುರುತಿಸುತ್ತಾರೆ: ಅಶ್ರಫ್ ಹಾಗೂ ಅಶ್ರಫೇತರರು. ಅಶ್ರಫ್‌ಗಳಲ್ಲಿ ನಾಲ್ಕು ಜಾತಿಗಳನ್ನು ಗುರುತಿಸುತ್ತಾರೆ: ಸೈಯ್ಯದ್. ಶೇಖ್.ಮೊಗಲ್ಸ್, ಹಾಗೂ ಪಠಾಣ್. ದಲಿತ ಮುಸ್ಲಿಂರ ಬಗ್ಗೆ ಬೆಳಕು ಚೆಲ್ಲುವ ಇನ್ನೊಂದು ಪುಸ್ತಕವೆಂದರೆ: ಆಲಿ ಅನ್ವರ್ ಅನ್ಸಾರಿ ಬರೆದ ಮಹಾವರ್ ಕಿ ಜಂಗ್. ಇದು ಬಹಳ ಚರ್ಚೆಗಳಗಾದ ಪುಸ್ತಕವೂ ಹೌದು.

ದಲಿತ ಮುಸ್ಲಿಂ ರಾಜಕಾರಣ ಎದುರಿಸುತ್ತಿರುವ ಒಂದು ಪ್ರಮುಖ ಸಮಸ್ಯೆಯೆಂದರೆ ದಲಿತರನ್ನು ಹಿಂದುಳಿದ ವರ್ಗಗಳಿಂದ ಹೇಗೆ ಬೇರ್ಪಡಿಸುವುದಾಗಿದೆ. ಮೀಸಲಾತಿ ಸಂದರ್ಭದಲ್ಲಿ ಅವರನ್ನು ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ ಸೇರಿಸಿದ್ದೇ ಇವೆಲ್ಲಾ ಅವಂತಾರಕ್ಕೆ ಕಾರಣ. ದಲಿತ ಮುಸ್ಲಿಂಗಳಾದ ಗಧರಿ, ಗೋರ್ಕುನ್, ಲಬ್ಬೇಗ್, ಮೆಟಾರ್ಸ್, ಹಲಾಲ್ಕೋರ, ಧೋಭಿ, ಭಾಕೋ, ನಾವ್ಸ್, ಪಮರಿಯಾಸ್ ಇತ್ಯಾದಿಗಳನ್ನು ಇವತ್ತು ಹಿಂದುಳಿದ ಪಟ್ಟಿಯಲ್ಲಿ ಸೇರಿಸಲಾಗಿದೆ. ಇಂತಹ ಸಮುದಾಯಗಳ ಸಂಖ್ಯೆ ಕಡಿಮೆಯೇನಿಲ್ಲ. ಉತ್ತರಪ್ರದೇಶದಲ್ಲಿ ಗಧೇಡ್, ಪಸ್ಮಂಡಾ, ಜಲಾರಿ, ಮತ್, ಭಂಘಿ, ಇವು ದಲಿತ ಜನಾಂಗಕ್ಕೆ ಸೇರಿದವುಗಳು. ಕರ್ನಾಟಕ ಇದರಿಂದ ಹೊರತಾಗಿಲ್ಲ. ದಲಿತ ಹಿನ್ನಲೆಯ ಸಮುದಾಯಗಳನ್ನು ಒಂದೋ ಒಂದು ಪ್ರವರ್ಗದಲ್ಲಿ ಸೇರಿಸಲಾಯಿತು, ಇಲ್ಲವೇ ಎರಡು ಬಿ ಪ್ರವರ್ಗದಲ್ಲಿ ಸೇರಿಸಲಾಯಿತು. ಕರ್ನಾಟಕದಲ್ಲಿ ದಲಿತ ಸಮುದಾಯಗಳೆಂದು ಗುರುತುಸಲ್ಪಡುವ ಸಮುದಾಯಗಳೆಂದರೆ: ನಧಾಫ್, ಪಿಂಜಾರ, ನಲ್ ಭಂದ್, ಚಪ್ಪರ್ ಭಂದ್, ಧರ್ವೆಶ್. ಇಲ್ಲಿರುವ ವಾದವೆಂದರೆ ಈ ಸಮುದಾಯ ಅಥವಾ ಜಾತಿಗಳು ಮುಂದುವರಿಯಬೇಕಾದರೆ ಅವುಗಳಿಗೆ ಪರಿಶಿಷ್ಟ ಜಾತಿಗಳಾಗಿ ಗುರುತಿಸಿ ಮೀಸಲಾತಿ ನೀಡಬೇಕು.

ದಲಿತ ಮುಸ್ಲಿಂಮರ ರಾಜಕಾರಣಕ್ಕೆ ಒಂದು ನಿರ್ದಿಷ್ಟ ಆಯಾಮ ದೊರೆತದ್ದು ಹೋರಾಟ ಅಥವಾ ಚಳುವಳಿಗಳಿಂದ ಅನ್ನಬಹುದು. ಬಹಳಷ್ಟು ಸಲ 1990ರ ದಶಕವನ್ನು ದಲಿತ ಮುಸ್ಲಿಂರ ಹೋರಾಟದ ಆರಂಭದ ಘಟ್ಟವಾಗಿ ನೋಡಲಾಗುತ್ತದೆ, ಇಲ್ಲವೇ ವಿಶ್ಲೇಷಿಸಲಾಗುತ್ತದೆ. ವಾಸ್ತವವಾಗಿ ಹೋರಾಟದ ಆರಂಭವನ್ನು ರಾಷ್ಟ್ರೀಯ ಹೋರಾಟದ ಸಂದರ್ಭದಲ್ಲಿ ನೋಡಬೇಕು. 1930ರಲ್ಲಿ ಮೋಮಿನ್ ಚಳುವಳಿ ದಲಿತ ಮುಸ್ಲಿಂಮರ ಚಳುವಳಿಗೆ ಆಯಾಮವನ್ನು ನೀಡಿತ್ತಲ್ಲದೇ, ಹೊಸ ಸಂಕಥನವನ್ನು ಕೂಡ ನಿರ್ಮಿಸಿತ್ತು. ಮೋಮಿನ್ ಚಳುವಳಿಯ ದುರಂತವೇನೆಂದರೆ ಅದೂ ಕೂಡ ಕಾಲಾಂತರದಲ್ಲಿ ಕಾಂಗ್ರೆಸ್ ರಾಜಕಾರಣದೊಂದಿಗೆ ವಿಲೀನವಾಗಿ ತನ್ನ ಸ್ವತಂತ್ರ ಐಡೆಂಟಟಿಯನ್ನು ಕಳೆದುಕೊಂಡಿತ್ತು. ಸ್ವಾತಂತ್ರದ ನಂತರ ಚಳುವಳಿಗೆ ಹೊಸತನ ಬಂದದ್ದು 1980ರ ಮಂಡಲ್ ವರದಿ ಸಮಯದಲ್ಲಿ. 1993ರಲ್ಲಿ ಸ್ಥಾಪಿತವಾದ ಆಲ್ ಇಂಡಿಯಾ ಯುನೈಟೆಡ್ ಮುಸ್ಲಿಂ ಮೋರ್ಚ ಹಾಗೂ 1998ರಲ್ಲಿ ಸ್ಥಾಪಿತವಾದ ಅಖಿಲ ಭಾರತ ಪಾಸ್‌ಬಂದ್ ಮುಸ್ಲಿಂ ಮಹಜ್ ದಲಿತ ಮುಸ್ಲಿಂಗಳಿಗೆ ಹೊಸ ದೃಷ್ಟಿಕೋನವನ್ನು ನೀಡಲು ಯತ್ನಿಸಿದವು. ಇದೊಂದು ಅಪೂರ್ಣಗೊಂಡ ಚಳುವಳಿ. ಅವುಗಳ ಹೋರಾಟಗಳಿಗೆ ಹೊಸ ಹೊಸ ಸಂಘಟನೆಗಳು ಕೂಡ ಸೇರುತ್ತಿವೆ. ಜಾರ್ಖಂಡಿನ ಅನ್ಸಾರಿ ಮಹಾ ಪಂಚಾಯತ್ ಇದರಲ್ಲಿ ಒಂದು. ಅವುಗಳ ಮುಖ್ಯ ಧ್ಯೇಯ ಮೀಸಲಾತಿಯೊಂದಿಗೆ ದಲಿತ ಮುಸ್ಲಿಂಮರಿಗೆ ಹೊಸ ಐಡೆಂಟಟಿಯನ್ನು ನೀಡುವುದಾಗಿದೆ.

ಈ ಸಂದರ್ಭದಲ್ಲಿ ದಲಿತ ಮುಸ್ಲಿಂ ಚಳುವಳಿಗಾರರು ಒಂದು ಪ್ರಮುಖವಾದ ವಾದವನ್ನು ಮುಂದಿಡುತ್ತಾರೆ. ಅದೇನೆಂದರೆ ತಾವು ಪ್ರಪ್ರಥಮವಾಗಿ ಬಹುಜನ ಮೂಲನಿವಾಸಿಗಳು. ತದನಂತರ ಮುಸ್ಲಿಂಮರು. ಅಲ್ಲದೇ ತಮ್ಮನ್ನು ಶೂದ್ರರು, ಅತೀಶೂದ್ರರೆಂದೂ ಗುರಿತಿಸುತ್ತಾರೆ. ಇಲ್ಲಿ ಮೂಲ ಐಡೆಂಟಟಿಯ ಸಮಸ್ಯೆ ನಿಚ್ಚಳವಾಗಿರುವುದವನ್ನು ಗಮನಿಸಬೇಕು. ಈ ವಾದ ಗಡಿನಾಡ ಗಾಂಧಿ ಯಾಧ ಖಾನ್ ಅಬ್ದುಲ್ ಗಫ್ಫಾರ್ ಖಾನ್‌ರ ಮೊಮ್ಮಗ ಖಾನ್ ವಲೀ ಖಾನ್‌ರ ವಾದವನ್ನು ನೆನಪಿಗೆ ತರಿಸುತ್ತದೆ. ಒಮ್ಮೆ ಪರ್ತಕರ್ತರು ಅವರಲ್ಲಿ ಒಂದು ಪ್ರಶ್ನೆ ಕೇಳುತ್ತಾರೆ." ನಿಮ್ಮ ಐಡೆಂಟಟಿ ಯಾವುದು'? ಅದಕ್ಕೆ ಅವರು ನೀಡಿದ ಉತ್ತರ ಹೀಗಿತ್ತು. "ಹತ್ತು ಸಾವಿರ ವರುಷದಿಂದ ನಾನು ಪಠಾಣ್, ಒಂದು ಸಾವಿರ ವರುಷದಿಂದ ನಾನು ಮುಸ್ಲಿಂ, ಐನೂರು ವರುಷದಿಂದಾಚೆ ನಾನು ಅಫಘಾನಿ, ಐವತ್ತು ವರುಷದಿಂದಾಚೆ ನಾನು ತೃತೀಯ ಜಗತ್ತಿನವ.ಹಾಗಾದರೆ ನನ್ನ ಐಡೆಂಟಟಿಯನ್ನು ಹೇಗೆ ನಿರ್ಮಿಸುತ್ತೀರಿ?". ಈ ಸಮಸ್ಯೆಯಿಂದ ದಲಿತ ಮುಸ್ಲಿಂಮರು ಹೊರತಾಗಿಲ್ಲ. ಹಾಗಾದರೆ ಅವರ ಮೂಲ ಐಡೆಂಟಟಿ ಯಾವುದು? ಅವರನ್ನು ಶೂದ್ರರೆಂದು ಒಪ್ಪಿಕೊಂಡರೆ ಅವರು ಅಂತಿಮ ವಿಶ್ಲೇಷಣೆಯಲ್ಲಿ ಮತ್ತೊಮ್ಮೆ ಹಿಂದುಳಿದ ವರ್ಗಗಳ ಚೌಕಟ್ಟಿನೊಳಗೆ ಸೇರಿಬಿಡುವ ಭಯ ಇದೆ. ಶೂದ್ರ ಐಡೆಂಟಟಿಯನ್ನು ಮುಂದಿಟ್ಟು ಮತ್ತೊಮ್ಮೆ ಮೀಸಲಾತಿಯನ್ನು ಕೇಳಿದರೆ ಅದರ ಲಾಭವನ್ನು ದಲಿತ ಮುಸ್ಲಿಂಮರು ಪಡೆಯದೇ ಹೋಗಬಹುದು.

ದಲಿತ ಮುಸ್ಲಿಂ ರಾಜಕಾರಣ ಎದುರಿಸುತ್ತಿರುವ ಒಂದು ಪ್ರಮುಖ ಸಮಸ್ಯೆಯೆಂದರೆ ದಲಿತರನ್ನು ಹಿಂದುಳಿದ ವರ್ಗಗಳಿಂದ ಹೇಗೆ ಬೇರ್ಪಡಿಸುವುದಾಗಿದೆ. ಮೀಸಲಾತಿ ಸಂದರ್ಭದಲ್ಲಿ ಅವರನ್ನು ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ ಸೇರಿಸಿದ್ದೇ ಇವೆಲ್ಲಾ ಅವಂತಾರಕ್ಕೆ ಕಾರಣ. ದಲಿತ ಮುಸ್ಲಿಂಗಳಾದ ಗಧರಿ, ಗೋರ್ಕುನ್, ಲಬ್ಬೇಗ್, ಮೆಟಾರ್ಸ್, ಹಲಾಲ್ಕೋರ, ಧೋಭಿ, ಭಾಕೋ, ನಾವ್ಸ್, ಪಮರಿಯಾಸ್ ಇತ್ಯಾದಿಗಳನ್ನು ಇವತ್ತು ಹಿಂದುಳಿದ ಪಟ್ಟಿಯಲ್ಲಿ ಸೇರಿಸಲಾಗಿದೆ.

ಕೆಳಸ್ತರದ ಸಮುದಾಯಗಳು ತಮ್ಮ ಐತಿಹಾಸಿಕ ಐಡೆಂಟಟಿಯನ್ನು ನಿರ್ಮಿಸುವ ಸಂದರ್ಭದಲ್ಲಿ ಚಾರಿತ್ರಿಕ ಸಂಕೇತಗಳನ್ನು ಉಪಯೋಗಿಸುವುದು ಸಹಜ. ಇದಕ್ಕೆ ದಲಿತ ಮುಸ್ಲಿಂಮರು ಹೊರತಾಗಿಲ್ಲ. ಅಬ್ದುಲ್ ಖಯ್ಯಾಮ್ ಅನ್ಸಾರಿ, ಅಬ್ದುಲ್ ಹಮೀದ್ ಹಾಗೂ ಬಿಸ್ಮಿಲ್ಲಾ ಖಾನ್ ದಲಿತ ಮುಸ್ಲಿಂಮರ ಆಧುನಿಕ ಸಂಕೇತಗಳು. ಅವುಗಳು ರಾಷ್ಟ್ರ ನಿರ್ಮಾಣದ ಸಂಕೇತಗಳು ಎಂದೆಲ್ಲಾ ಪ್ರತಿಬಿಂಬಿಸಲಾಗುತ್ತಿದೆ. ಅನ್ಸಾರಿ ಮೂಲತಃವಾಗಿ ಜುಲಾಹ ಅಥವಾ ನೇಕಾರ ಜಾತಿಯವವರು.ಅವರ ಕೊಡುಗೆ ಬಹಳ ಮುಖ್ಯವಾಗಿರುವುದು,' ಮುಸ್ಲಿಂ ಲೀಗ್‌ನ ದ್ವಿರಾಷ್ಟ್ರ ಸಿದ್ದಾಂತ"ದ ವಿರೋಧ ಹಾಗೂ ಅದರ ರಾಜಕಾಣದ ವಿರೋಧದಲ್ಲಿ. ಇತಿಹಾಸದ ದುರಂತವೇನೆಂದರೆ ಅನ್ಸಾರಿಯವರನ್ನು ಮುಂದೆ ಕಾಂಗ್ರೆಸ್ ತನ್ನ ರಾಜಕಾರಣದ ಭಾಗವನ್ನಾಗಿಸುತ್ತದೆ. ಅವರು ಕಾಂಗ್ರೆಸ್‌ನ ಮುಖವಾಣಿಯಾಗಿ ಪರಿವರ್ತಿತವಾಗುವುದು ಇತಿಹಾಸದ

(49ನೇ ಪುಟಕ್ಕೆ)

ಪ್ರಾದೇಶಿಕ ಭಾಷೆ- ಇಂಗ್ಲಿಷ್ ನಡುವಿನ ಸಂಘರ್ಷ

ಚಂದ್ರಭಾನ್ ಪ್ರಸಾದ್

ದಲಿತ್ ಡೈರಿ

ಅನು: ಸತ್ಯಪ್ರಕಾಶ್ ಎಂ ಆರ್

ನಿಮ್ಮ ಭಾಷೆ ಎಲ್ಲಿ?

ಮಹಾರಾಷ್ಟ್ರ ವಿಧಾನಸಭೆಯಲ್ಲಿ ಹೊಸದಾಗಿ ಚುನಾಯಿತರಾಗಿರುವ ಹಿಂದಿ- ಮರಾಠಿ ಭಾಷಿಕರ ನಡುವೆ ಇತ್ತೀಚೆಗೆ ತೀರ ಕೆಳಮಟ್ಟದ ಜಟಾಪಟಿ ನಡೆದದ್ದು ನಮಗೆ ನೆನಪಿದೆ. ಅಂದು ಸಮಾಜವಾದಿ ಪಕ್ಷದ ಅಬು ಅಜ್ಮಿ ಹಿಂದಿ ಭಾಷೆಯಲ್ಲಿ ಪ್ರಮಾಣ ವಚನ ಸ್ವೀಕರಿಸುವುದಾಗಿ ಪಟ್ಟು ಹಿಡಿದದ್ದು ದೊಡ್ಡ ಸಮಸ್ಯೆಯ ಸೃಷ್ಟಿಗೆ ಕಾರಣವಾಗಿತ್ತು. ಈ ವಿಚಾರದಲ್ಲಿ ಮುಸಲ್ಮಾನರಾದ ಅಜ್ಮಿ ಕೂಡ 'ಮನು'ಕುಲದ ಮಗುವಾಗಿ ವರ್ತಿಸಿರುವುದರಲ್ಲಿ ಸಂದೇಹವಿಲ್ಲ.

ಹಿಂದಿ ಭಾಷಿಕರ ಪ್ರದೇಶದಲ್ಲಿ ಹುಟ್ಟಿದ್ದರೂ, ಅಜ್ಮಿ ಮಹಾರಾಷ್ಟ್ರದಲ್ಲಿಯೇ ತಮ್ಮ ಜೀವನವನ್ನು ಕಂಡುಕೊಂಡಿದ್ದು, ಈ ರಾಜ್ಯದ ಒಂದು ಕ್ಷೇತ್ರವನ್ನು ಪ್ರತಿನಿಧಿಸುತ್ತಿದ್ದಾರೆ. ಹೀಗಾಗಿ ಮರಾಠಿ ಭಾಷೆಯನ್ನು ಅಜ್ಮಿ ಕಲಿತಿರಬೇಕಿತ್ತು ಮತ್ತು ಪ್ರಮಾಣವಚನವನ್ನು ಕೂಡ ಮರಾಠಿ ಭಾಷೆಯಲ್ಲಿ ಸ್ವೀಕರಿಸಬೇಕಿತ್ತು. ಆದರೆ ಭಾಷಾ ದುರಭಿಮಾನ ಹೊಂದಿರುವ ಅಜ್ಮಿ, ಹಿಂದಿ ಭಾಷೆಯಲ್ಲಿ ಪ್ರಮಾಣ ವಚನ ಸ್ವೀಕರಿಸುವ ಮೂಲಕ ಮರಾಠಿ ಶಾಸಕರ ಕೆಂಗಣ್ಣಿಗೆ ಗುರಿಯಾಗಬೇಕಾಯಿತು. ಸ್ವಾಭಾವಿಕವಾಗಿ ಮರಾಠಿ ಭಾಷಾ ಜನಪ್ರತಿನಿಧಿಗಳು ಅಜ್ಮಿ ಹಿಂದಿ ಭಾಷೆಯಲ್ಲಿ ಪ್ರಮಾಣವಚನ ಸ್ವೀಕರಿಸಲು ಅಡ್ಡಿಪಡಿಸಿದ್ದಾರೆ.

ಅದೇನೇ ಇರಲಿ, ಘಟನೆಯ ನಂತರ ನಡೆದ ಬೆಳವಣಿಗೆಗಳು ಮಾತ್ರ ಇನ್ನೂ ಅಸಹ್ಯ ಹುಟ್ಟಿಸುವಂತಿದೆ. ಅಜ್ಮಿ ಜೊತೆಗೂಡಿದ ಹಿಂದಿ ಪತ್ರಿಕೆಗಳು ಎಂಎನ್ಎಸ್(ಮಹಾರಾಷ್ಟ್ರ ನವನಿರ್ಮಾಣ ಸೇನೆ) ಸದಸ್ಯರ ವರ್ತನೆಯನ್ನು ಖಂಡಿಸಿದವು. ಮಹಾರಾಷ್ಟ್ರದಲ್ಲಿ ಮರಾಠಿ ಪತ್ರಿಕೆಗಳ ಒಂದು ಗುಂಪು ಅಜ್ಮಿ ಅವರ ಧೋರಣೆಯನ್ನು ಖಂಡಿಸಿದವು. ಪ್ರಾದೇಶಿಕ ಭಾಷೆಗಳು ಎಷ್ಟು ಸಂಕುಚಿತವಾಗಿವೆ ಎಂಬುದಕ್ಕೆ ಇದೊಂದು ಸ್ಪಷ್ಟ ನಿದರ್ಶನವಾಗಿದೆ. ಮೇಲ್ನೋಟಕ್ಕೆ ಕಾಣಿಸಿದಷ್ಟು ಸರಳವಾಗಿಲ್ಲ ಈ ಸಮಸ್ಯೆ. ಇಂದು ಪ್ರಾದೇಶಿಕ ಭಾಷೆಗಳು ಭಾರತೀಯರು ಪರಸ್ಪರ ಕಚ್ಚಾಡುವಂತೆ ಮಾಡಿವೆ. ಭಾರತದ ಏಕತೆಗೆ ಪ್ರಾದೇಶಿಕ ಭಾಷೆಗಳು ಬಹುದೊಡ್ಡ ತೊಡಕಾಗಿದೆ ಎಂದರೂ ತಪ್ಪಾಗಲಾರದು.

ಬಾಂಬೆ ನಗರವನ್ನು ಮುಂಬೈ ಎಂದು ನಾಮಕರಣ ಮಾಡಿದ ಕಾರಣವನ್ನು ವಿಶ್ಲೇಷಿಸೋಣ. ಬಾಂಬೆ ಜಾಗತಿಕ ಮಟ್ಟದಲ್ಲಿ ಬ್ರ್ಯಾಂಡ್ ಮೌಲ್ಯವನ್ನು ಅದಾಗಲೇ ಪಡೆದಿತ್ತು. ಯಾವ ಪರಮಾರ್ಥಕ್ಕಾಗಿ ಇದನ್ನು ಹಾಸ್ಯಾಸ್ಪದವಾಗಿ ಮುಂಬೈ ಎಂದು ಬದಲಾಯಿಸಲಾಯಿತು? ಮುಂಬೈ ಮರಾಠಿ ಪದ ಮತ್ತು ಬಾಂಬೆ ಪರಕೀಯ ಪದ ಎಂಬ ಕಾರಣಕ್ಕಾಗಿಯೇ?

ಮದ್ರಾಸ್ ನಗರವನ್ನು ಚೆನ್ನೈ ಎಂದು ಯಾಕೆ ಬದಲಾಯಿಸಲಾಯಿತು? ಚೆನ್ನೈ ತಮಿಳು ಭಾಷೆಯ ಪದ, ಮದ್ರಾಸ್ ಇಂಗ್ಲಿಷರು ಕೊಟ್ಟ ಹೆಸರು ಎಂಬ ಕಾರಣಕ್ಕಾಗಿಯೇ? ಮದ್ರಾಸ್ ಕೂಡ ಜಾಗತಿಕ ಮಟ್ಟದಲ್ಲಿ ಬ್ರ್ಯಾಂಡ್ ಮೌಲ್ಯವನ್ನು ಪಡೆದಿತ್ತು. ಮದ್ರಾಸ್ ನಗರವನ್ನು ಚೆನ್ನೈ ಎಂದು ನಾಮಕರಣ ಮಾಡುವ ಅಗತ್ಯವಾದರೂ ಏನಿತ್ತು?

ಕ್ಯಾಲ್ಕಟಾ ನಗರವನ್ನು ಕೊಲ್ಕೊತಾ ಎಂದು ಬದಲಾವಣೆ ಮಾಡುವ ಅಗತ್ಯವಾದರೂ ಏನಿತ್ತು? ಕ್ಯಾಲ್ಕಟಾ ಬ್ರಿಟಿಷ್ ಹೆಸರು, ಹೀಗಾಗಿ ಪರಕೀಯವಾದುದು, ಕೊಲ್ಕೊತಾ ಬೆಂಗಾಲಿ ಎಂಬ ಕಾರಣಕ್ಕಾಗಿ ಅಲ್ಲವೇ ಈ ಮರು ನಾಮಕರಣ? ಕ್ಯಾಲ್ಕಟಾ ಕೂಡ ಜಾಗತಿಕ ಮಟ್ಟದಲ್ಲಿ ಗುರುತಿಸಿಕೊಂಡಿದ್ದ ನಗರ.

ಇನ್ನು ಬ್ಯಾಂಗಲೋರ್ ನಗರವನ್ನು ಬೆಂಗಳೂರು ಎಂದು ನಾಮಕರಣ ಯಾಕೆ ಮಾಡಲಾಯಿತು. ಬ್ಯಾಂಗಲೋರ್ ಇಂಗ್ಲಿಷ್ ಪದ ಹಾಗೂ ಬೆಂಗಳೂರು ಅಪ್ಪಟ ಕನ್ನಡ ಪದ ಎಂಬ ಕಾರಣಕ್ಕಾಗಿಯೇ? ಬ್ಯಾಂಗ ಲೋರ್ ಕೂಡ ಜಾಗತಿಕ ಮಟ್ಟದ ಬ್ರ್ಯಾಂಡ್ ಮೌಲ್ಯವನ್ನು ಪಡೆದಿದ್ದ ನಗರ. ಹೀಗಿದ್ದರೂ ಬ್ಯಾಂಗಲೋರ್, ಬೆಂಗಳೂರು ಎಂದು ಮರು ನಾಮಕರಣ ಹೊಂದಿತು.

ಹೀಗೆ ಬಹಳಷ್ಟು ನಗರಗಳು, ರಸ್ತೆಗಳು ಭಾರತೀಯ ಭಾಷೆಯ ಹೆಸರುಗಳೊಂದಿಗೆ ಮರು ನಾಮಕರಣ ಹೊಂದುತ್ತಿವೆ. ಈ ಮರು ನಾಮಕರಣ ಪ್ರಕ್ರಿಯೆಗೆ ಒಂದು ಟ್ರೆಂಡ್ ಇದೆ. ಭಾರತೀಯ ಹೆಸರುಗಳಿಂದ ಮರು ನಾಮಕರಣ ಹೊಂದುತ್ತಿರುವ ಬಹುತೇಕ ನಗರಗಳು, ರಸ್ತೆಗಳು ಇಂಗ್ಲಿಷ್ ಹೆಸರುಗಳೊಂದಿಗೆ ಜನಪ್ರಿಯವಾಗಿದ್ದಂತಹವುಗಳಾಗಿವೆ. ಅಂದರೆ ಭಾರತದ ಪ್ರಾದೇಶಿಕ ಭಾಷೆಗಳು ಇಂಗ್ಲಿಷ್ ಭಾಷೆಗೆ ಸೆಡ್ಡು ಹೊಡೆದು ನಿಂತಿವೆ.

ಇಂಗ್ಲಿಷ್ ವಿರುದ್ಧ ಈ ದಿಢೀರ್ ಪ್ರತಿರೋಧ ಯಾಕೆ?

ಭಾರತ ದಿನದಿಂದ ದಿನಕ್ಕೆ ಬದಲಾಗುತ್ತಿದೆ. ಅಭಿವೃದ್ಧಿಯ ದೃಷ್ಟಿಯಿಂದ ಇದೊಂದು ಉತ್ತಮ ಬದಲಾವಣೆ. ಒಂದೆಡೆ ಕೈಗಾರಿಕೀಕರಣದ ಪ್ರಕ್ರಿಯೆ ಹಿಂದೆಂದಿಗಿಂತಲೂ ವೇಗವಾಗಿ ನಡೆಯುತ್ತಿದ್ದರೆ, ಕೃಷಿ ಕ್ಷೇತ್ರ ತನ್ನ ಛಾಪನ್ನು ಕಳೆದುಕೊಳ್ಳುತ್ತಿದೆ. ಇನ್ನೂ ಸ್ಪಷ್ಟವಾಗಿ ಹೇಳಬೇಕೆಂದರೆ, ಭಾರತದ ಜಮೀನ್ದಾರಿ ವ್ಯವಸ್ಥೆ ತನ್ನ ಅಸ್ತಿತ್ವದ ಕೊನೆಯ ಹೋರಾಟ ನಡೆಸುತ್ತಿದೆ. ಬಂಡವಾಳಶಾಹಿ ವ್ಯವಸ್ಥೆ, ಜಮೀನ್ದಾರಿ ವ್ಯವಸ್ಥೆಗೆ ನರಕಸದೃಶ ಸ್ಥಿತಿ ತಂದೊಡ್ಡಿದೆ. ಬಂಡವಾಳಶಾಹಿತ್ವದ ಪರಿಣಾಮವಾಗಿ ನಗರೀಕರಣ ಪ್ರಕ್ರಿಯೆ ಕೂಡ ಹಿಂದೆಂದಿಗಿಂತಲೂ ವೇಗವಾಗಿ ನಡೆಯುತ್ತಿದೆ. ಶತಮಾನಗಳಿಂದ ಹಳ್ಳಿಗಳಲ್ಲಿ ಹಿಡಿತ ಸಾಧಿಸಿದ್ದ ಜಾತಿ ವ್ಯವಸ್ಥೆಗೆ ನಗರಗಳಲ್ಲಿ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಲಾಗುತ್ತಿಲ್ಲ.

ಭಾರತದ ಆರ್ಥಿಕ ವ್ಯವಸ್ಥೆ, ಉತ್ಪಾದನೆಯ ಆಯಾಮ, ಸಾಮಾಜಿಕ ಸಂಬಂಧ, ಸಂಸ್ಕೃತಿ ಮತ್ತು ಭಾಷೆ ಎಲ್ಲವೂ ಬದಲಾಗುತ್ತಿದೆ. ಹೊಸದಾಗಿ ವಿಕಸನ ಹೊಂದುತ್ತಿರುವ ಸಾಮಾಜಿಕ ಮತ್ತು ಆರ್ಥಿಕ ವ್ಯವಸ್ಥೆಯ ಲಾಭ ಪಡೆಯಲಿಚ್ಛಿಸುವವರೆಲ್ಲರೂ ಇಂಗ್ಲಿಷ್ ಭಾಷೆಯನ್ನು ಕಲಿತಿರಬೇಕಾದ ಅನಿವಾರ್ಯತೆ ಕೂಡ ಸೃಷ್ಟಿಯಾಗಿದೆ. ಈ ಹಿನ್ನೆಲೆಯಲ್ಲಿ ಸ್ಥಳೀಯರ ಇಂಗ್ಲಿಷ್

ಭಾರತ ದಿನದಿಂದ ದಿನಕ್ಕೆ ಬದಲಾಗುತ್ತಿದೆ. ಅಭಿವೃದ್ಧಿಯ ದೃಷ್ಟಿಯಿಂದ ಇದೊಂದು ಉತ್ತಮ ಬದಲಾವಣೆ. ಒಂದೆಡೆ ಕೈಗಾರಿಕೀಕರಣದ ಪ್ರಕ್ರಿಯೆ ಹಿಂದೆಂದಿಗಿಂತಲೂ ವೇಗವಾಗಿ ನಡೆಯುತ್ತಿದ್ದರೆ, ಕೃಷಿ ಕ್ಷೇತ್ರ ತನ್ನ ಛಾಪನ್ನು ಕಳೆದುಕೊಳ್ಳುತ್ತಿದೆ. ಇನ್ನೂ ಸ್ಪಷ್ಟವಾಗಿ ಹೇಳಬೇಕೆಂದರೆ, ಭಾರತದ ಜಮೀನ್ದಾರಿ ವ್ಯವಸ್ಥೆ ತನ್ನ ಅಸ್ತಿತ್ವದ ಕೊನೆಯ ಹೋರಾಟ ನಡೆಸುತ್ತಿದೆ. ಬಂಡವಾಳ ಶಾಹಿ ವ್ಯವಸ್ಥೆ, ಜಮೀನ್ದಾರಿ ವ್ಯವಸ್ಥೆಗೆ ನರಕಸದೃಶ ಸ್ಥಿತಿ ತಂದೊಡ್ಡಿದೆ. ಬಂಡವಾಳಶಾಹಿತ್ವದ ಪರಿಣಾಮವಾಗಿ ನಗರೀಕರಣ ಪ್ರಕ್ರಿಯೆ ಕೂಡ ಹಿಂದೆಂದಿಗಿಂತಲೂ ವೇಗವಾಗಿ ನಡೆಯುತ್ತಿದೆ. ಶತಮಾನಗಳಿಂದ ಹಳ್ಳಿಗಳಲ್ಲಿ ಹಿಡಿತ ಸಾಧಿಸಿದ್ದ ಜಾತಿ ವ್ಯವಸ್ಥೆಗೆ ನಗರಗಳಲ್ಲಿ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಲಾಗುತ್ತಿಲ್ಲ.

ವಿರೋಧವನ್ನು ಗಮನಿಸಬೇಕು.

ಭಾರತದ ಹಳ್ಳಿಗಳಲ್ಲಿ ಹುಟ್ಟಿದ ಜಾತಿಯಂತಹ ಅಧಿಮ ಸಂಸ್ಥೆಗಳಿಗೆ ಹೊಸ ವ್ಯವಸ್ಥೆಯಲ್ಲಿ ಸ್ಥಾನವಿಲ್ಲದಿರುವುದರಿಂದ, ಇವುಗಳು ಸ್ಥಳೀಯ ಭಾಷೆಯನ್ನು ಬಳಸಿಕೊಂಡು ಹೊಸ ಸಾಮಾಜಿಕ ಮತ್ತು ಆರ್ಥಿಕ ವ್ಯವಸ್ಥೆಗೆ ತಡೆಯೊಡ್ಡುವ ಕೆಲಸವನ್ನು ಮಾಡುತ್ತಿವೆ. ಆರ್ಥಿಕ ಬದಲಾವಣೆಯ ಹರಿಕಾರನಂತಿರುವ ಇಂಗ್ಲಿಷ್ ಭಾಷೆಯನ್ನು ಸ್ಥಳೀಯ ಭಾಷೆಗಳು ವಿರೋಧಿಸು ತ್ತಿರುವುದನ್ನು ಈ ನೆಲೆಗಟ್ಟಿನಲ್ಲಿ ಅರ್ಥೈಸಿಕೊಳ್ಳಬೇಕಿದೆ.

ಇದು ಕೇವಲ ಇಂಗ್ಲಿಷ್ ಭಾಷೆ ಮತ್ತು ಪ್ರಾದೇಶಿಕ ಭಾಷೆಗಳ ನಡುವಿನ ಸಂಘರ್ಷವಲ್ಲ; ಇದು ಹಳೆಯ ಮತ್ತು ಹೊಸ ವ್ಯವಸ್ಥೆಗಳ ನಡುವಿನ ಸಂಘರ್ಷ, ಒಳಿತು-ಕೆಡುಕುಗಳ ಸಂಘರ್ಷ, ಪರಂಪರೆ ಮತ್ತು ಆಧುನಿಕತೆಯ ನಡುವಿನ ಸಂಘರ್ಷ, ಜಾತಿಯಾಧಾರಿತ ಮತ್ತು ಜಾತಿರಹಿತ ಸಮಾಜಗಳ ನಡುವಿನ ಸಂಘರ್ಷ.

ಭಾರತದ ಎಲ್ಲ ಪ್ರಾದೇಶಿಕ ಭಾಷೆಗಳು ಕೆಡುಕಿನ ಸಂಕೇತಗಳಾಗಿವೆ. ಮಹಾರಾಷ್ಟ್ರ ವಿಧಾನಸಭೆಯಲ್ಲಿ ನಡೆದ ಘಟನೆ ಪ್ರಾದೇಶಿಕ ಭಾಷೆಗಳು ಸೃಷ್ಟಿಸಬಹುದಾದ ದೊಡ್ಡ ಬಿಕ್ಕಟ್ಟಿನ ಸಣ್ಣ ಸ್ಯಾಂಪಲ್ ಮಾತ್ರ. ಹೀಗಾಗಿ ಸ್ವಾತಂತ್ರ್ಯ, ಸಮಾನತೆ, ಅಭಿವೃದ್ಧಿ ಮತ್ತು ಸಂತೋಷ ಬಯಸುವ ದಲಿತರೆಲ್ಲರೂ ಪ್ರಾದೇಶಿಕ ಭಾಷೆಗಳ ವಿರುದ್ಧ ಹೋರಾಡುವಲ್ಲಿ ಮುಂಚೂಣಿ ಪಾತ್ರ ವಹಿಸಬೇಕು. ಸಹಸ್ರ ಸಂಖ್ಯೆಯಲ್ಲಿ ಇಂಗ್ಲಿಷ್ ಭಾಷೆಯನ್ನು ತಮ್ಮದಾಗಿಸಿಕೊಳ್ಳುವ ಮೂಲಕ ಮೆಕಾಲೆ ಮತ್ತು 'ಮನುಕುಲ'ದ ಮಕ್ಕಳ ನಡುವೆ ನಡೆಯುತ್ತಿರುವ ಈ ಯುದ್ಧದಲ್ಲಿ ದಲಿತರು ಇಂಗ್ಲಿಷ್ ಪರವಾಗಿ ನಿಲ್ಲಬೇಕಿದೆ.

ಇಂಗ್ಲಿಷ್ ಉಡುಗೆ ಧರಿಸಿ

ಡಾ. ಬಿ ಆರ್ ಅಂಬೇಡ್ಕರ್ ಪಾಶ್ಚಾತ್ಯ ವಸ್ತ್ರ ಧರಿಸಿ ವಿಶ್ವಮಟ್ಟದ ನಾಯಕರಂತೆ ಮಾತನಾಡುತ್ತಿದ್ದರು. ಗಾಂಧೀಜಿ ಸ್ಥಳೀಯರ ವಸ್ತ್ರ ಧರಿಸಿ ಗ್ರಾಮಸ್ಥರಂತೆ ಮಾತನಾಡುತ್ತಿದ್ದರು. ಭಾಷೆ ಕೇವಲ ಭಾವನೆಗಳನ್ನು ವ್ಯಕ್ತಪಡಿಸುವ ಸಂವಹನ ಮಾಧ್ಯಮ ಮಾತ್ರವಲ್ಲ; ಭಾಷೆ ಸಾಮಾಜಿಕ ಮತ್ತು ಸೈದ್ಧಾಂತಿಕ ನಡಾವಳಿಯೂ ಹೌದು.

ದಶಕದ ಹಿಂದೆ ಪಶ್ಚಿಮ ಉತ್ತರಪ್ರದೇಶದ ಗ್ರಾಮವೊಂದು ಸುದ್ದಿಯಲ್ಲಿತ್ತು. ಆಗ ಗ್ರಾಮದಲ್ಲಿ ಜಾಟ್ ಮತ್ತು ದಲಿತ ಸಮುದಾಯದ ನಡುವೆ ಘರ್ಷಣೆ ಏರ್ಪಟ್ಟಿತ್ತು. ಕುಲಕ್ ಸಮುದಾಯದ ಮಹೇಂದ್ರ ಸಿಂಗ್ ಟಿಕಾಯತ್ ಸಮಸ್ಯೆ ಬಗೆಹರಿಸುವ ಉದ್ದೇಶದಿಂದ ಗ್ರಾಮಕ್ಕೆ ಭೇಟಿ ನೀಡಿದ್ದರು. ಅವರ ಪ್ರಕಾರ ಒಟ್ಟಾರೆ ಸಮಸ್ಯೆಗೆ ದಲಿತರೇ ಹೊಣೆಯಾಗಿದ್ದರು. ಆ ಸಂದರ್ಭದಲ್ಲಿ ದಲಿತರು ತಮ್ಮ ಪಾದದವರೆಗೆ ಧೋತಿಗಳನ್ನು ಯಾಕೆ ಧರಿಸಬೇಕಿತ್ತು ಎಂದು ಅವರು ಪತ್ರಕರ್ತರಿಗೆ ಸವಾಲೆಸೆದಿದ್ದರು ಟಿಕಾಯತ್. ದಲಿತರ ಈ ಕಾರ್ಯವನ್ನು ಜಾಟ್ ಸಮುದಾಯವರು ಸಹಿಸಿಕೊಳ್ಳಲಿಲ್ಲ. ಜಾತಿ ಸಂಪ್ರದಾಯದ ಪ್ರಕಾರ ದಲಿತರು ಪಾದದವರೆಗೆ ಧೋತಿ ಧರಿಸುವಂತಿಲ್ಲ.

ಸ್ಥಳೀಯ ಭಾಷೆಯಂತೆ, ಸ್ಥಳೀಯ ಉಡುಗೆ ತೊಡುಗೆಗಳು ಕೂಡ ಸಾಮಾಜಿಕ ಶ್ರೇಣೀಕರಣವನ್ನು ಸೂಚಿಸುತ್ತದೆ. ಭಾಷೆ ಮತ್ತು ಉಡುಗೆಗಳು ಒಂದಕ್ಕೊಂದು ಪೂರಕವಾಗಿರುತ್ತವೆ. ಸಂಸ್ಕೃತ ಭಾಷೆ ಬೋಧಿಸುವ ಶಿಕ್ಷಕ ಸೂಟ್ ಧರಿಸುವುದನ್ನು ನಾವು ನೋಡಲು ಸಾಧ್ಯವೇ? ಅದೇ ರೀತಿ ಇಂಗ್ಲಿಷ್ ಭಾಷೆ ಬೋಧಿಸುವ ಶಿಕ್ಷಕ ಧೋತಿ-ಕುರ್ತಾ ಧರಿಸುವುದನ್ನು ಸಾಮಾನ್ಯವಾಗಿ ನೋಡಲು ಸಾಧ್ಯವೇ?

ದಶಕದ ಹಿಂದೆ ಪಶ್ಚಿಮ ಉತ್ತರಪ್ರದೇಶದ ಗ್ರಾಮ ವೊಂದು ಸುದ್ದಿಯಲ್ಲಿತ್ತು. ಆಗ ಗ್ರಾಮದಲ್ಲಿ ಜಾಟ್ ಮತ್ತು ದಲಿತ ಸಮುದಾಯದ ನಡುವೆ ಘರ್ಷಣೆ ಏರ್ಪಟ್ಟಿತ್ತು. ಕುಲಕ್ ಸಮುದಾಯದ ಮಹೇಂದ್ರ ಸಿಂಗ್ ಟಿಕಾಯತ್ ಸಮಸ್ಯೆ ಬಗೆಹರಿಸುವ ಉದ್ದೇಶದಿಂದ ಗ್ರಾಮಕ್ಕೆ ಭೇಟಿ ನೀಡಿದ್ದರು. ಅವರ ಪ್ರಕಾರ ಒಟ್ಟಾರೆ ಸಮಸ್ಯೆಗೆ ದಲಿತರೇ ಹೊಣೆಯಾಗಿದ್ದರು. ಆ ಸಂದರ್ಭದಲ್ಲಿ ದಲಿತರು ತಮ್ಮ ಪಾದದವರೆಗೆ ಧೋತಿಗಳನ್ನು ಯಾಕೆ ಧರಿಸಬೇಕಿತ್ತು ಎಂದು ಅವರು ಪತ್ರಕರ್ತರಿಗೆ ಸವಾಲೆಸೆದಿದ್ದರು ಟಿಕಾಯತ್. ದಲಿತರ ಈ ಕಾರ್ಯವನ್ನು ಜಾಟ್ ಸಮುದಾಯವರು ಸಹಿಸಿಕೊಳ್ಳಲಿಲ್ಲ. ಜಾತಿ ಸಂಪ್ರದಾಯದ ಪ್ರಕಾರ ದಲಿತರು ಪಾದದವರೆಗೆ ಧೋತಿ ಧರಿಸುವಂತಿಲ್ಲ.

ಪ್ರಾದೇಶಿಕ ಭಾಷೆಯ ಹಾಗೆ, ಪ್ರಾದೇಶಿಕ ಉಡುಗೆ ತೊಡುಗೆಗಳು ಕೂಡ ಸಾಮಾಜಿಕ ತಾರತಮ್ಯದ ಮಾಧ್ಯಮಗಳಾಗಿವೆ ಎಂದರೆ ತಪ್ಪಾಗಲಾರದು. ಜೊತೆಗೆ ಸ್ಥಳೀಯ ಉಡುಗೆ ತೊಡುಗೆಗಳು ವ್ಯವಸ್ಥೆಯ ಬಲಿಪಶುಗಳನ್ನು ಬಂಧಿಸಿಡುವುದಲ್ಲದೆ, ಆ ವ್ಯಕ್ತಿಗಳು ತಂತಮ್ಮ ವ್ಯಕ್ತಿತ್ವವನ್ನು ಕಂಡುಕೊಳ್ಳುವುದಕ್ಕೂ ಬಿಡುವುದಿಲ್ಲ. ಉದಾಹರಣೆಗೆ ಆರು ಮೀಟರ್‌ನ ಸೀರೆ ಮಹಿಳೆಯರನ್ನು ಒಂದು ರೀತಿಯಲ್ಲಿ ಬಂಧಿಸಿಡುತ್ತದೆ. ಗಂಡಸರ ದೌರ್ಜನ್ಯದಿಂದ ಕೆಲವೊಮ್ಮೆ ತಪ್ಪಿಸಿಕೊಂಡು ಓಡಲು ಈ ಆರು ಮೀಟರ್‌ನ ಸೀರೆ ಅವಕಾಶ ನೀಡುವುದಿಲ್ಲ. ಇನ್ನು ಸ್ಥಳೀಯ ವಸ್ತ್ರ ಧರಿಸುವ ಭಾರತೀಯ ಪುರುಷರಿಂದ ಮಹಿಳೆಯರಿಗಂತೂ ದೊಡ್ಡ ಅಪಾಯವಿದೆ. ಸೀರೆ ಧರಿಸಿ ಮಹಿಳೆಯರು ಟೆನಿಸ್ ಆಡಲು ಸಾಧ್ಯವೇ? ಈಜಲು ಸಾಧ್ಯವೇ? ಇಂತಹ ಸಾವಿರ ಉದಾಹರಣೆಗಳನ್ನು ನೀಡಬಹುದು. ಒಟ್ಟಾರೆ ಸ್ಥಳೀಯ ಉಡುಗೆ ತೊಡುಗೆಗಳು ಜೀತದ ಸಂಕೇತವಲ್ಲದೆ ಇನ್ನೇನೂ ಅಲ್ಲ.

ಪಾರಂಪರಿಕ ವಸ್ತ್ರ ಧರಿಸುವ ಸ್ಥಳೀಯರು ಚಿಂಪಾಂಜಿಗಳಿಗಿಂತ ಸ್ವಲ್ಪ ಮೇಲ್ಮಟ್ಟದವನೆಂದು ಹೇಳಬಹುದು. ಧೋತಿ ಧರಿಸಿ ಯಾವುದೇ ಸ್ಪರ್ಧೆಯನ್ನು ಗೆಲ್ಲಲಾಗದೆ, ಗೆದ್ದವರ ವಿರುದ್ಧ ಆರೋಪ ಮಾಡುವುದು ಇವರ ಚಾಳಿ. ಧೋತಿ-ಕುರ್ತಾ ಧರಿಸಿ ಯಾವುದೇ ವ್ಯಕ್ತಿ ಏರೋಬಿಕ್ಸ್ ಮಾಡಲು ಸಾಧ್ಯವೇ? ಸ್ಥಳೀಯ ಉಡುಗೆ ತೊಡುಗೆಗಳು ನಮ್ಮ ಆತ್ಮವಿಶ್ವಾಸವನ್ನು ಕೂಡ ಕುಗ್ಗಿಸುತ್ತದೆ. ಪಾರಂಪರಿಕವಾಗಿ ಸ್ಥಳೀಯ ವಸ್ತ್ರಪದ್ಧತಿಯಲ್ಲಿ ಒಳ ಉಡುಗೆಗಳ ಕಲ್ಪನೆಯೇ ಇಲ್ಲ.

ಆದರೆ ಇದಕ್ಕೆ ವ್ಯತಿರಿಕ್ತವಾಗಿ ಪಾಶ್ಚಾತ್ಯ ಉಡುಗೆ ತೊಡುಗೆಗಳು ಬಿಡುಗಡೆಯ ಸಂಕೇತಗಳಾಗಿವೆ. ಇಂಗ್ಲಿಷರ ಉಡುಗೆಗಳಲ್ಲಿ ಶ್ರೇಣೀಕರಣವಿರುವುದಿಲ್ಲ, ಎಲ್ಲರೂ ಸಮಾನರೇ. ಕೆಳವರ್ಗ, ಮಧ್ಯಮವರ್ಗದ ಜನರು ಕೂಡ ಸೂಟ್ ಧರಿಸಿ ಆತ್ಮವಿಶ್ವಾಸದಿಂದ ತಲೆಯೆತ್ತಿ ನಡೆಯುತ್ತಾರೆ. ಜೊತೆಗೆ, ಇಂಗ್ಲಿಷ್ ವಸ್ತ್ರ ಧರಿಸಿದ ಮಹಿಳೆಯರು ಮತ್ತು ಪುರುಷರು ಸುಂದರವಾಗಿಯೂ ಕಾಣುತ್ತಾರೆ. ಒಂದು ಗಂಡಿನ ವ್ಯಕ್ತಿತ್ವವನ್ನು ಜಾಗತಿಕ ಮಟ್ಟಕ್ಕೆ ಕೊಂಡೊಯ್ಯಬಲ್ಲ ಶಕ್ತಿ ಇಂಗ್ಲಿಷ್ ವಸ್ತ್ರಗಳಿಗಿವೆ. ಪಾಶ್ಚಿಮಾತ್ಯ ವಸ್ತ್ರ ಧರಿಸಿದ ಇಂಗ್ಲಿಷರು ಭಾರತದಲ್ಲಿ ಅಣೆಕಟ್ಟೆಗಳನ್ನು, ರೈಲ್ವೆ ಜಾಲವನ್ನು, ಶಾಲಾ-ಕಾಲೇಜುಗಳನ್ನು, ವಿಶ್ವವಿದ್ಯಾನಿಲಯಗಳನ್ನು ಕಟ್ಟಿ ಬೆಳೆಸಿದರೆ, ಸ್ಥಳೀಯ ವಸ್ತ್ರ ಧರಿಸಿದ ಅರಸರು ಯಾರಿಗೂ ಪ್ರಯೋಜನಕ್ಕೆ ಬಾರದ ಕೋಟೆ ಕೊತ್ತಲಗಳು, ಅರಮನೆಗಳನ್ನು ಕಟ್ಟಿದರು ಎಂಬುದು ಇತಿಹಾಸ.

ಆದಾಯದಲ್ಲಿ ವ್ಯತ್ಯಾಸಗಳೇನೇ ಇರಲಿ ದಲಿತರೆಲ್ಲರೂ ಸ್ಥಳೀಯ ವಸ್ತ್ರಗಳನ್ನು ತ್ಯಜಿಸಿ ಪ್ಯಾಂಟ್-ಷರ್ಟ್ ಧರಿಸಲು ಆರಂಭಿಸಬೇಕು. ದಲಿತರು ಕೃಷಿ ಚಟುವಟಿಕೆಗಳನ್ನು ತೊರೆದು ನಗರಗಳಿಗೆ ಬರಲು ಇಂಗ್ಲಿಷ್ ಉಡುಗೆ ಪ್ರೇರಣೆ ನೀಡುತ್ತದೆ. ದಲಿತರನ್ನು ಜಮೀನ್ದಾರಿ ವ್ಯವಸ್ಥೆಯ ಕಪಿಮುಷ್ಟಿಯಲ್ಲಿ ಬಂಧಿಸಿಡುವ ಕೃಷಿ ಚಟುವಟಿಕೆ ದಲಿತರಿಗೇಕೆ ಬೇಕು? ದಲಿತ ಯುವಕರೆಲ್ಲರೂ ಕನಿಷ್ಠ ಒಂದು ಜೀನ್ಸ್ ಪ್ಯಾಂಟ್ ಹೊಂದಿರಬೇಕು; ಇದು ಅವರ ಆತ್ಮವಿಶ್ವಾಸವನ್ನು ಹೆಚ್ಚಿಸುತ್ತದೆ. ದಲಿತ ಮಹಿಳೆಯರು ದಿಗ್ಬಂಧನದ ಸಂಕೇತವಾದ ಸೀರೆಯನ್ನು ತೊರೆಯಬೇಕಿದೆ. ದಲಿತ ಯುವತಿಯರು ಜೀನ್ಸ್ ಅಥವಾ ಸ್ಕರ್ಟ್ಸ್ ಮತ್ತು ಟಾಪ್‌ಗಳನ್ನು ಧರಿಸಬೇಕು.

ದಲಿತ ಮಧ್ಯಮವರ್ಗ ಈ ಬದಲಾವಣೆಯ ನಾಯಕತ್ವ ವಹಿಸಬೇಕಿದೆ. ಮಾಸಿಕ 15,000 ರೂ.ಗಿಂತ ಅಧಿಕ ಆದಾಯ ಹೊಂದಿರುವ ದಲಿತರೆಲ್ಲರೂ ಕನಿಷ್ಠ ಒಂದು ಸೂಟ್ ಹೊಂದಿರಬೇಕು. ದಲಿತ ಐಎಎಸ್ ಅಧಿಕಾರಿಗಳು, ವೈದ್ಯರು, ಸಾರ್ವಜನಿಕ ವಲಯದ ಅಧಿಕಾರಿಗಳು, ಕಾಲೇಜು ಮತ್ತು ವಿಶ್ವವಿದ್ಯಾನಿಲಯಗಳ ಶಿಕ್ಷಕರು ಅಧಿಕ ಬೆಲೆಯ ಉತ್ತಮ ಗುಣಮಟ್ಟದ ಸೂಟ್‌ಗಳನ್ನು ಖರೀದಿಸಬೇಕು. ದಲಿತ ಮಹಿಳೆಯರು ಕನಿಷ್ಠ ಒಂದು ಚಳಿಗಾಲದ ಉದ್ದನೆಯ ಕೋಟ್ ಹೊಂದಿರಬೇಕು. 15,000 ರೂ.ಗಿಂತ ಅಧಿಕ ಮಾಸಿಕ ಆದಾಯ ಹೊಂದಿರುವವರೆಲ್ಲರೂ ತಂಪು ಕನ್ನಡಕಗಳನ್ನು ಧರಿಸಬೇಕು.

ಶಾಲಾ ಶಿಕ್ಷಕರು, ಇನ್ಸ್‌ಪೆಕ್ಟರ್‌ಗಳು, ಗುಮಾಸ್ತರು, ಕಾನ್ಸ್‌ಟೆಬಲ್‌ಗಳನ್ನು ಸಾಮಾನ್ಯವಾಗಿ ದಲಿತ ಮಧ್ಯಮ ವರ್ಗದಲ್ಲಿ ಕಂಡು ಬರುವ ವೃತ್ತಿನಿರತರು ಎಂದು ಗುರುತಿಸಲಾಗುತ್ತದೆ. ಇವರು ಸಮಾಜದಲ್ಲಿ ಎಲ್ಲರಿಗೂ ಕಾಣುವ ದಲಿತರ ಪ್ರತಿನಿಧಿಗಳಾಗಿದ್ದಾರೆ. ಹೀಗಾಗಿ ಈ ವರ್ಗದ ಮೇಲೆ ಹೆಚ್ಚಿನ ಜವಾಬ್ದಾರಿಯಿದೆ. ದಲಿತ ಶಾಲಾ ಶಿಕ್ಷಕ ಎಷ್ಟು ಪರಿಪಕ್ವವಾಗಿ ವಸ್ತ್ರ ಧರಿಸಬೇಕೆಂದರೆ, ಶಾಲೆಯ ಪ್ರಾಂಶುಪಾಲ ಅವನ ಕೈಕೆಳಗೆ ಕೆಲಸ ಮಾಡುವ ಗುಮಾಸ್ತನಂತೆ ಕಾಣುವಂತಿರಬೇಕು. ದಲಿತ ಇನ್ಸ್‌ಪೆಕ್ಟರ್‌ಗಳು ಮತ್ತು ಗುಮಾಸ್ತರು ಯಾವ ರೀತಿ ಉಡುಗೆ ತೊಡಬೇಕೆಂದರೆ, ಇವರ ಮೇಲಧಿಕಾರಿಗಳು ಡ್ರೈವರ್‌ಗಳಂತೆ ಕಾಣುವಂತಿರಬೇಕು. ಇನ್ನು ದಲಿತ ಡ್ರೈವರ್‌ಗಳು ಯಾವ ರೀತಿ ಉಡುಗೆ ಧರಿಸಬೇಕೆಂದರೆ, ಇವರ ಮುಂದೆ ಉನ್ನತ ಅಧಿಕಾರಿಗಳು ಅಟೆಂಡರ್‌ಗಳಂತೆ ಕಾಣುವಂತಿರಬೇಕು.

ಇಂಗ್ಲಿಷ್ ವಸ್ತ್ರಗಳಿಗೆ ಸಾಮಾಜಿಕ ಕ್ರಾಂತಿಯನ್ನು ತರುವ ಸಾಮರ್ಥ್ಯವಿದೆ. ಪಾಶ್ಚಿಮಾತ್ಯ ಉಡುಗೆ ತೊಡುಗೆಗಳ ಮೇಲೆ ಬಂಡವಾಳ ಹೂಡಿದರೆ ಸಾಮಾಜಿಕ

ಇಂಗ್ಲಿಷ್ ಜೀವನಶೈಲಿ ಅನುಸರಿಸಿ

ಕಾಂತಿಗೆ ಪ್ರೇರಣೆ ನೀಡಿದಂತಾಗುತ್ತದೆ. ದಲಿತರೆಲ್ಲರೂ ಬಾಬಾ ಸಾಹೇಬ್ ಅವರನ್ನು ಅನುಸರಿಸಿ, ಅವರ ಉಡುಗೆಯ ವಿಧಾನವನ್ನು ಅನುಸರಿಸಿ. ಬಾಬಾ ಸಾಹೇಬರು ಬುದ್ಧಿಮತ್ತೆಯಲ್ಲಿ ಮತ್ತು ಉಡುಗೆ ತೊಡುಗೆಯ ವಿಷಯದಲ್ಲಿ ನೆಹರೂ ಅವರಿಗಿಂತ ಅತ್ಯುತ್ತಮರಾಗಿದ್ದರು. ಈ ಕಥೆಯ ಸಾರಾಂಶ ಇಷ್ಟೆ: "ಇಂಗ್ಲಿಷ್ ವಸ್ತ್ರ ಧರಿಸಿ, ಭಾರತದಲ್ಲಿ ಆಳ್ವಿಕೆ ನಡೆಸಿ."

* * * * *

ವಿಶ್ವದಾದ್ಯಂತ ಸಾಮಾನ್ಯ ಜನರು, ಮಧ್ಯಮ ವರ್ಗದ ಜೀವನಶೈಲಿಯನ್ನು ಅನುಸರಿಸುತ್ತಾರೆ. ಇನ್ನು ಮಧ್ಯಮ ವರ್ಗ, ಶ್ರೀಮಂತ ವರ್ಗವನ್ನು ಅನುಸರಿಸುತ್ತದೆ. ಹೀಗಾಗಿ ಕೆಳವರ್ಗದ ದಲಿತರಿಗೆ, ದಲಿತ ಮಧ್ಯಮವರ್ಗವೇ ಆದರ್ಶ. ದಲಿತ ಸಮುದಾಯದಲ್ಲಿ ಇನ್ನೂ ಶ್ರೀಮಂತ ವರ್ಗ ಇಲ್ಲದ ಕಾರಣ, ದಲಿತ ಮಧ್ಯಮವರ್ಗ ಇಂಗ್ಲಿಷರ ಜೀವನಶೈಲಿ ಮತ್ತು ಅವರ ರೀತಿ ರಿವಾಜುಗಳನ್ನು ಅನುಸರಿಸವಂತಾಗಬೇಕು.

ಮಧ್ಯಮವರ್ಗದ ದಲಿತರು, ಕೆಳವರ್ಗದ ತಮ್ಮ ಸಹೋದರರ ಜೊತೆಗೆ ಸಮಯ ಕಳೆಯುವ ಅವಕಾಶ ಸಿಕ್ಕಿದಾಗಲೆಲ್ಲಾ ಉತ್ತಮ ನಡವಳಿಕೆಯನ್ನು ಅವರಿಗೆ ತಿಳಿಸಿ, ಕಲಿಸುವ ಪ್ರಯತ್ನ ಮಾಡಬೇಕು. ಉದ್ಧಾಹರಣೆಗೆ ಒಂದು ವೇಳೆ ಕೆಳವರ್ಗದ ದಲಿತರು ಕುಡಿಯುವುದು ಅನಿವಾರ್ಯವಾದರೆ ಸ್ಥಳೀಯ ಮಟ್ಟದ ಸಾರಾಯಿ ಕುಡಿಯುವ ಬದಲು ಉತ್ತಮ ಗುಣಮಟ್ಟದ ಮದ್ಯಸೇವನೆ ಮಾಡುವಂತೆ ಬುದ್ಧಿ ಹೇಳಬೇಕು.

ರಸ್ತೆ ಬದಿಯಲ್ಲಿ ಮೂತ್ರ ವಿಸರ್ಜನೆ ಮಾಡುವವರು, ಉಗುಳುವವರು ಬಹುತೇಕ ಮಂದಿ ಇಂಗ್ಲಿಷ್ ಭಾಷೆ ಗೊತ್ತಿಲ್ಲದ ಜನರೇ ಆಗಿರುತ್ತಾರೆ. ಇದು ಕೆಳಮಟ್ಟದ ಸಂಸ್ಕೃತಿ. ಹೀಗಾಗಿ ದಲಿತರ ಮಧ್ಯಮವರ್ಗ ಇಂತಹ ನಡವಳಿಕೆಗಳ ವಿರುದ್ಧ ತಮ್ಮ ಸಮುದಾಯದಲ್ಲಿ ಪ್ರಚಾರ ಮಾಡಬೇಕು.

ದಲಿತ ಮಧ್ಯಮವರ್ಗದ ಮನೆಗಳಲ್ಲಿ ಸ್ಪೂನ್ ಮತ್ತು ಫೋರ್ಕ್‌ಗಳನ್ನು ಬಳಸಲು ಆರಂಭಿಸಬೇಕು. ಆಹಾರ ಸೇವಿಸಲು ಕೈಗಳನ್ನು ಬಳಸುವುದು ಇಂಗ್ಲಿಷ್ ಜೀವನಶೈಲಿಯಲ್ಲ. ಮಕ್ಕಳು ಕೂಡ ಇವುಗಳನ್ನು ಬಳಸುವುದನ್ನು ಕಲಿಯಬೇಕು. ವೈನ್ ಓಪನರ್‌ಗಳನ್ನು ಕೂಡ ಮನೆಯಲ್ಲಿರಿಸಿಕೊಳ್ಳುವುದು ಒಳ್ಳೆಯದು. ದಲಿತರ ಮನೆಗಳಲ್ಲಿ ಇಂಗ್ಲಿಷ್ ವಾತಾವರಣ ನಿರ್ಮಿಸುವುದರಲ್ಲಿ ಇವೆಲ್ಲವುಗಳ ಪಾತ್ರ ದೊಡ್ಡದು.

ಸ್ನೇಹಿತರ ಮದುವೆ ಮತ್ತು ನಾಮಕರಣ ಮತ್ತಿತರ ಸಮಾರಂಭಗಳಿಗೆ ಭೇಟಿ ನೀಡುವಾಗ ಸಿಹಿ ತಿಂಡಿಗಳನ್ನು ತೆಗೆದುಕೊಂಡು ಹೋಗುವುದು ಇಂಗ್ಲಿಷ್ ರೀತಿ ನೀತಿಯಲ್ಲ. ಇದರ ಬದಲಿಗೆ ಹೂಗುಚ್ಛ ಅಥವಾ ಚಾಕಲೇಟ್ ಖರೀದಿಸಿ ಉಡುಗೊರೆಯಾಗಿ ನೀಡಬಹುದು. ದಲಿತರು ನಮಸ್ತೆ, ಪ್ರಣಾಮ ಮತ್ತಿತರ ಸಂಬೋಧನೆಗಳನ್ನು ನಿಲ್ಲಿಸಬೇಕು. ನಮಸ್ತೆ ಅಥವಾ ಪ್ರಣಾಮ ಮಾಡುವಾಗ ನೀವು ತಲೆಬಾಗಬೇಕಾಗುತ್ತದೆ. ಇದರ ಬದಲಿಗೆ Hai, Hello, Good morning, Good bye ಮತ್ತಿತರ ಸಂಬೋಧನೆಗಳನ್ನು ಬಳಸಬಹುದು. ಇದು ಸಮಾನತೆಯನ್ನು ಹೊಂದಿರುವ ಸಂಬೋಧನೆಗಳು. ದಲಿತರು ತಮ್ಮ ಮಕ್ಕಳಿಗೆ Thanks, Sorry, Excuse me, Beg your pardon, Most welcome, Feel free ಮತ್ತಿತರ ದೈನಂದಿನ ಬಳಕೆಯ ಮಾತುಗಳನ್ನು ಕಲಿಸಿಕೊಡಬೇಕು.

ದಲಿತರು ಸಮಾಜದಲ್ಲಿ ತಾಳ್ಮೆ, ಆತ್ಮಗೌರವವನ್ನು ತೋರ್ಪಡಿಸಬೇಕು. ಬಸ್‌ಗಳನ್ನು ಹತ್ತುವಾಗ, ಇಳಿಯುವಾಗ ವೃದ್ಧರು, ಮಹಿಳೆಯರು ಮತ್ತು ಮಕ್ಕಳು ಇಳಿಯುವವರೆಗೆ ಕಾದಿದ್ದು ನಂತರ ಹೊರಡಬೇಕು. ಕಚೇರಿಗಳಲ್ಲಿ ಲಿಫ್ಟ್‌ಗಳನ್ನು ಬಳಸುವಾಗ ಹಿರಿಯರಿಗೆ ಮೊದಲು ಅವಕಾಶ ಮಾಡಿಕೊಡಬೇಕು. ನಂತರ ಮಹಿಳೆಯರು ಮತ್ತು ಮಕ್ಕಳು ಲಿಫ್ಟ್ ಬಳಸಲು ಅನುವು ಮಾಡಿಕೊಡಬೇಕು. ಆದರೆ ದಲಿತರು ತಮ್ಮ ಕಚೇರಿಗಳಿಗೆ ಎಲ್ಲರಿಗಿಂತ ಮೊದಲು ತಲುಪುವುದಷ್ಟೇ ಅಲ್ಲದೇ, ಎಲ್ಲರೂ ತೆರಳಿದ ಮೇಲೆ ವಾಪಸ್ಸಾಗಬೇಕು.

ದಲಿತ ಪೋಷಕರು ತಮ್ಮ ಮಕ್ಕಳು ಸೌಜನ್ಯದಿಂದ ಮಾತನಾಡುವುದನ್ನು ಕಲಿಸಬೇಕು. ಎತ್ತರದ ದನಿಯಲ್ಲಿ ಮಾತನಾಡಿದರೆ ಉತ್ತಮವಾದ ಅಭಿಪ್ರಾಯ ವ್ಯಕ್ತಪಡಿಸುತ್ತಿರುವಿರೆಂದು ಅರ್ಥವಲ್ಲ. ಮಾತಿನಲ್ಲಿ ಸ್ಪಷ್ಟತೆ ಮತ್ತು ನಿಖರತೆ ಒಬ್ಬ ವ್ಯಕ್ತಿಯ ಬಗ್ಗೆ ಇತರರಲ್ಲಿ ಸದಭಿಪ್ರಾಯ ಮೂಡಲು ಕಾರಣವಾಗುತ್ತದೆ. ಸಂತೋಷವನ್ನು ಹಂಚಿಕೊಳ್ಳುವುದು ಒಳ್ಳೆಯದು. ಆದರೆ ಸಾರ್ವಜನಿಕ ಸ್ಥಳಗಳಲ್ಲಿ ಗೊಳ್ಳೆಂದು ನಗುವುದನ್ನು ನಿಲ್ಲಿಸಬೇಕು. ಕಿರುನಗೆ ಬೀರಿ, ರಾಕ್ಷಸ ನಗು ಬೇಡ. ಹೊಸಬರನ್ನು ದಿಟ್ಟಿಸಿ ನೋಡುವುದು ಖಂಡಿತ ಒಳ್ಳೆಯ ನಡವಳಿಕೆಯಲ್ಲ.

ಮಧ್ಯಮವರ್ಗದ ದಲಿತರು, ಕೆಳವರ್ಗದ ತಮ್ಮ ಸಹೋದರರ ಜೊತೆಗೆ ಸಮಯ ಕಳೆಯುವ ಅವಕಾಶ ಸಿಕ್ಕಿದಾಗಲೆಲ್ಲಾ ಉತ್ತಮ ನಡವಳಿಕೆಯನ್ನು ಅವರಿಗೆ ತಿಳಿಸಿ, ಕಲಿಸುವ ಪ್ರಯತ್ನ ಮಾಡಬೇಕು. ಉದಾಹರಣೆಗೆ ಒಂದು ವೇಳೆ ಕೆಳವರ್ಗದ ದಲಿತರು ಕುಡಿಯುವುದು ಅನಿವಾರ್ಯವಾದರೆ ಸ್ಥಳೀಯ ಮಟ್ಟದ ಸಾರಾಯಿ ಕುಡಿಯುವ ಬದಲು ಉತ್ತಮ ಗುಣಮಟ್ಟದ ಮದ್ಯಸೇವನೆ ಮಾಡುವಂತೆ ಬುದ್ಧಿ ಹೇಳಬೇಕು.
ರಸ್ತೆ ಬದಿಯಲ್ಲಿ ಮೂತ್ರ ವಿಸರ್ಜನೆ ಮಾಡುವ ವರು, ಉಗುಳುವವರು ಬಹುತೇಕ ಮಂದಿ ಇಂಗ್ಲಿಷ್ ಭಾಷೆ ಗೊತ್ತಿಲ್ಲದ ಜನರೇ ಆಗಿರುತ್ತಾರೆ. ಇದು ಕೆಳಮಟ್ಟದ ಸಂಸ್ಕೃತಿ. ಹೀಗಾಗಿ ದಲಿತರ ಮಧ್ಯಮ ವರ್ಗ ಇಂತಹ ನಡವಳಿಕೆಗಳ ವಿರುದ್ಧ ತಮ್ಮ ಸಮುದಾಯದಲ್ಲಿ ಪ್ರಚಾರ ಮಾಡಬೇಕು.

ಬಾತ್‌ರೂಂ ಚಪ್ಪಲಿಗಳನ್ನು ಹಾಕಿಕೊಂಡು ಸಾರ್ವಜನಿಕ ಸ್ಥಳಗಳಲ್ಲಿ ಎಂದಿಗೂ ಕಾಣಿಸಿಕೊಳ್ಳಬೇಡಿ. ಕಾಲ್ಚೀಲ ಧರಿಸದೆ ಬೂಟು ತೊಡಬೇಡಿ. ಮಕ್ಕಳು ಮಾತ್ರ ಹಳದಿ ಮತ್ತು ಕೆಂಪು ಬಣ್ಣದ ಕಾಲ್ಚೀಲಗಳನ್ನು ತೊಡುವುದು ಸೂಕ್ತ. ಪಾಲಿಷ್ ಮಾಡದ ಷೂಗಳನ್ನು ಧರಿಸಿ ಸಾರ್ವಜನಿಕ ಸ್ಥಳಗಳಿಗೆ ತೆರಳಬೇಡಿ. ಒಂದು ವೇಳೆ ಮನೆಯಲ್ಲಿ ಬೂಟ್ ಪಾಲಿಷ್ ಖಾಲಿಯಾಗಿದ್ದರೆ, ಹತ್ತಿರದ ಚಮ್ಮಾರ ರಜೆಯಲ್ಲಿದ್ದರೆ, ಆ ದಿನ ನೀವು ಮನೆಯಿಂದ ಹೊರಗೆ ಹೋಗಲೇಬೇಡಿ. ಫಾರ್ಮಲ್ ವಸ್ತ್ರ ಧರಿಸಿರುವಾಗ ಸ್ಪೋರ್ಟ್ಸ್ ಷೂಗಳನ್ನು ಖಂಡಿತಾ ಧರಿಸಬೇಡಿ.

ಇತರರನ್ನು ಭೇಟಿ ಮಾಡುವ ಸಂದರ್ಭದಲ್ಲಿ ಕೈ ಕುಲುಕುವುದು ಉತ್ತಮ ನಡವಳಿಕೆಯ ಲಕ್ಷಣ. ವ್ಯಕ್ತಿ ನಿಮಗಿಂತ ಕಿರಿಯರಾಗಿದ್ದರೆ ಅಥವಾ ವೃತ್ತಿಯಲ್ಲಿ ನಿಮಗಿಂತ ಕಡಿಮೆ ಮಟ್ಟದಲ್ಲಿದ್ದರೆ ನೀವು ಮೊದಲು ಕೈ ಮುಂದೆ ಮಾಡಬೇಡಿ. ಆದರೆ ವ್ಯಕ್ತಿ ನಿಮಗಿಂತ ಹಿರಿಯರಾಗಿದ್ದರೆ ನೀವೇ ಕೈಕುಲುಕುವ ಪ್ರಯತ್ನ ಮಾಡಿ. ಇನ್ನು ದಲಿತ ಮಧ್ಯಮವರ್ಗದವರು ತಮ್ಮ ಗಂಡು ಮಕ್ಕಳಿಗೆ ಅಡುಗೆ ಮಾಡುವುದನ್ನು ಕೂಡ ಕಲಿಸಬೇಕು. "ಕೇವಲ ಹೆಂಗಸರು ಅಡುಗೆ ಮಾಡುವುದು" ಸರಿಯಲ್ಲ. ಹೆಂಡತಿಯನ್ನು ಹೊಡೆದು ಬಡಿದು ಹಿಂಸಿಸುವುದು ಭಾರತೀಯ ಸಂಸ್ಕೃತಿ, ಇಂಗ್ಲಿಷ್ ಸಂಸ್ಕೃತಿಯಲ್ಲ. ಆದ್ದರಿಂದ ಮಹಿಳೆಯರನ್ನು ಯಾವಾಗಲೂ ಗೌರವದಿಂದ ಕಾಣಿರಿ.

ಮನೆಗೆ ಬಂದ ಅತಿಥಿಗಳಿಗೆ ಕರಿದ ತಿಂಡಿ ತಿನಿಸುಗಳನ್ನು ನೀಡಿ ಸತ್ಕರಿಸಬೇಡಿ. ನೀವು ಕೂಡ ಕರಿದ ತಿಂಡಿ ತಿನಿಸು ತಿನ್ನುವುದನ್ನು ನಿಲ್ಲಿಸಿ. ಬೇಯಿಸಿದ ಮೊಟ್ಟೆ ತಿನ್ನಬಹುದು. ಸಲಾಡ್ ಇಲ್ಲದೆ ಊಟ ಮಾಡಬೇಡಿ. ಊಟದ ಶೇ. 50ರಷ್ಟು ಪೌಷ್ಟಿಕಾಂಶಗಳನ್ನು ಹಣ್ಣು, ಹಸಿರು ತರಕಾರಿ, ಸೊಪ್ಪು, ಹಣ್ಣಿನರಸ ಇವುಗಳಿಂದ ಪಡೆಯಬೇಕು. ವಿಶ್ವದಾದ್ಯಂತ ಭಾರತೀಯರು ಕೆಟ್ಟ ನಡವಳಿಕೆಗೆ ಕುಖ್ಯಾತರಾಗಿದ್ದಾರೆ.

ನಾಗರೀಕತೆಯ ನೆಲೆಗಟ್ಟಿನಲ್ಲಿ ನೋಡಿದರೆ ಭಾರತದಲ್ಲಿ ಗೌರವಸೂಚಕ ಕಟ್ಟಳೆಗಳಿಗಿಂತ, ಅಗೌರವ ಸೂಚಕ ರೀತಿ ರಿವಾಜುಗಳೇ ಹೆಚ್ಚು. ಹೀಗಾಗಿ ಪ್ರಸ್ತುತ ಸಂದರ್ಭದಲ್ಲಿ ಭಾರತೀಯ ಸಮಾಜದ ಯಾವುದಾದರೂ ಒಂದು ವರ್ಗ ಉತ್ತಮ ನಡವಳಿಕೆ, ರೀತಿ ರಿವಾಜುಗಳನ್ನು ಪ್ರಚುರಪಡಿಸಬೇಕಾಗಿದೆ.

ವಿಶ್ವದಾದ್ಯಂತ ಇಂಗ್ಲಿಷರು ತಮ್ಮ ನಡವಳಿಕೆಗೆ ಹೆಸರುವಾಸಿ. ಭಾರತೀಯ ಸಮಾಜದಲ್ಲಿ ಬಲಿಪಶುಗಳಾಗಿರುವ ದಲಿತರು ಸ್ಥಳೀಯ ಸಂಸ್ಕೃತಿಯ ಮೇಲೆ ಯಾವುದೇ ರೀತಿಯ ಗೌರವವಿರಿಸಿಕೊಳ್ಳದೆ ಇಂಗ್ಲಿಷರ ಜೀವನಶೈಲಿಯನ್ನು, ಅವರ ರೀತಿ ರಿವಾಜುಗಳನ್ನು ಅನುಸರಿಸುವುದೇ ಸೂಕ್ತ. ಈ ಹಿನ್ನೆಲೆಯಲ್ಲಿ ದಲಿತ ಮಧ್ಯಮ ವರ್ಗ ಕೇವಲ ದಲಿತರು ಮಾತ್ರವಲ್ಲದೆ, ಇಡೀ ಭಾರತವನ್ನು ಇಂಗ್ಲಿಷ್ ಜೀವನಶೈಲಿಯತ್ತ ಕರೆದೊಯ್ಯುವ ಕೆಲಸ ಮಾಡಬೇಕಿದೆ. □

ದಲಿತ-ಮುಸ್ಲಿಂ ಚಳುವಳಿ

(45ನೇ ಪುಟದಿಂದ)

ಧುರಂತಗಳಲ್ಲಿ ಒಂದು. ಇದು ಕಾಂಗ್ರೆಸ್ ಬಾಬು ಜಗಜೀವನ್ ರಾಂಗೆ ಮಾಡಿದ ರಾಜಕೀಯವನ್ನು ನೆನಪಿಸುತ್ತದೆ. ಅಬ್ದುಲ್ ಹಮೀದ್ ನಮಗೆಲ್ಲ ತಿಳಿದ ವ್ಯಕ್ತಿ.

ನಮ್ಮ ಪಠ್ಯ ಪುಸ್ತಕಗಳಲ್ಲಿ ರಾಷ್ಟ್ರ ಭಕ್ತಿಗೆ ಒಂದು ಸಂಕೇತವಾಗಿ ಹೊರ ಹೊಮ್ಮಿದ ವ್ಯಕ್ತಿ. ದರ್ಜಿ ಜಾತಿಗೆ ಸೇರಿದ ಹಮೀದ್ ಭಾರತ ಪಾಕಿಸ್ತಾನ ಯುದ್ಧದಲ್ಲಿ ಮಡಿದ ವೀರ ಯೋಧ. ಅವರಿಗೆ ಮರಣೋತ್ತರ ಪರಮ ವೀರ ಚಕ್ರ ಪ್ರಶಸ್ತಿ ದೊರೆತದ್ದು ಎಲ್ಲರಿಗೂ ತಿಳಿದ ಸಂಗತಿ. ಅವರು ದಲಿತ ಮುಸ್ಲಿಂಮರ ಐಡೆಂಟಿಯ ಸಂಕೇತವಾಗುವುದರಲ್ಲಿ ಆಶ್ಚರ್ಯವಿಲ್ಲ. ಬಹಳ ಮುಖ್ಯವಾಗಿರುವ ಇನ್ನೊಂದು ಸಂಕೇತವೆಂದರೆ ಖ್ಯಾತ ಶೆಹೆನಾಹಿ ವಾದಕ ಬಿಸ್ಮಿಲ್ಲ ಖಾನ್.ಬಿಸ್ಮಿಲ್ಲಾ ಖಾನ್ ಮೂಲತಃವಾಗಿ ಹಲಾಲ್ ಖೋರ್ ಅಥವಾ ಭಂಗಿ ಜಾತಿಗೆ ಸೇರಿದವರು. ಬನರಾಸಿನಲ್ಲಿ ಮಸೀದಿ ಹಾಗೂ ದೇವಸ್ಥಾನಗಳ ನಡುವೆ ಯಾವುದೇ ವ್ಯತ್ಯಾಸಗಳನ್ನು ಮಾಡದವರು.

ಈ ಸಂಕೇತಗಳ ಮೂಲಕ ಸಮುದಾಯ ಹೊಸ ಐಡೆಂಟಿಯನ್ನು ನಿರ್ಮಿಸಲು ಪ್ರಯತ್ನಿಸುತ್ತಿದೆ. ಅದರ ಸಫಲತೆ ಐಡೆಂಟಿಟಿಗಳು ಪಡೆಯುವ ಮನ್ನಣೆಯಲ್ಲಿದೆ.

ಇಲ್ಲಿರುವ ಇನ್ನೊಂದು ಸಮಸ್ಯೆಯೆಂದರೆ ದಲಿತ ಮುಸ್ಲಿಂ ಸಂಖ್ಯೆಯನ್ನು ಲೆಕ್ಕ ಹಾಕಬಹುದೇ? 61ನೇ ರಾಷ್ಟ್ರೀಯ ಸ್ಯಾಂಪಲ್ ಪ್ರಕಾರ ಒಟ್ಟು ಮುಸ್ಲಿಂರಲ್ಲಿ 0.80 ಶೇಕಡಾದಷ್ಟು ದಲಿತರೂ, 0.50ಶೇಕಡಾದಷ್ಟು ಪರಿಶಿಷ್ಟ ಪಂಗಡಗಳು ಇವೆ. ಅವರ ಆರ್ಥಿಕ ಸ್ಥಾನಮಾನದಲ್ಲಿ ಯಾವುದೇ ಬದಲಾವಣೆಗಳಿದ್ದನ್ನು ಕೂಡ ರಾಷ್ಟ್ರೀಯ ಆಯೋಗಳು ಗಮನಿಸಿವೆ. ರಂಗನಾಥ್ ಮಿಶ್ರ ಆಯೋಗದ ಪ್ರಕಾರ 39.6 ಶೇಕಡಾದಷ್ಟು ದಲಿತ ಮುಸ್ಲಿಂಮರು ಈಗಲೂ ಕಡುಬಡತನದ ರೇಖೆಯಿಂದ ಕೆಳಗಿದ್ದಾರೆ. ಅವರ ತಿಂಗಳ ಆದಾಯ ಸರಾಸರಿ ರೂ.356.30. ನಗರ ಪ್ರದೇಶದಲ್ಲಿ ಬಡತನದ ರೇಖೆಗಿಂತ ಕೆಳಗಿರುವ ದಲಿತ ಮುಸ್ಲಿಂಮರ ಸಂಖ್ಯೆ ಕಡಿಮೆ ಎನಿಲ್ಲ.

ನಗರ ಪ್ರದೇಶದಲ್ಲಿ 46.8 ಶೇಕಡಾದಷ್ಟು ಕಡು ಬಡತನದ ರೇಖೆಗಿಂತ ಕೆಳಗಿದ್ದಾರೆ. ರಂಗನಾಥ ಮಿಶ್ರ ಸಮಿತಿ ಆದಕಾರಣವೇ ದಲಿತ ಮುಸ್ಲಿಂಮರಿಗೆ ಹಾಗೂ ದಲಿತ ಕ್ರಿಶ್ಚಿಯನ್ನರಿಗೆ ಈಗಾಗಲೇ ದಲಿತರಿಗೆ ನೀಡುತ್ತಿರುವ 15 ಶೇಕಡಾ ಮೀಸಲಾತಿಯೊಳಗೆ ಮೀಸಲಾತಿಯನ್ನು ಕಲ್ಪಿಸಬೇಕೆಂದು ಸಲಹೆ ನೀಡಿದೆ. ಇದರ ಬಗ್ಗೆ ತಕರಾರು ಬರುವುದು ಸಹಜ.

ಈಗಾಗಲೇ ರಾಷ್ಟ್ರೀಯ ಪರಿಶಿಷ್ಟ ಜಾತಿಯ ಕಮಿಷನ್ ಇದರ ಕುರಿತು ತನ್ನ ನಿಲುವನ್ನು ಸ್ಪಷ್ಟ ಪಡಿಸಿದೆ. ವಾಸ್ತವವಾಗಿ ದಲಿತ ಮುಸ್ಲಿಂರಿಗೆ ಮೀಸಲಾತಿ ನೀಡುವುದರ ಬಗ್ಗೆ ಅದರ ತಕರಾರು ಇಲ್ಲ ಅಥವಾ ಯಾವುದೇ ಭಿನ್ನಭಿಪ್ರಾಯವಿಲ್ಲ. ಅದರ ತಕರಾರು ಇರುವುದು ದಲಿತ ಮುಸ್ಲಿಂಮರಿಗೆ ಈಗಾಗಲೇ ಇರುವ 15% ದೊಳಗಿನ ಮೀಸಲಾತಿಯಲ್ಲಿ ನಿರ್ದಿಷ್ಟ ಮೀಸಲಾತಿಯನ್ನು ನೀಡುವುದರ ಕುರಿತಾಗಿದೆ. ಈ ಅಸಮಧಾನ ಯಾವ ಸ್ವರೂಪವನ್ನು ಪಡೆಯುತ್ತದೆ ಎಂಬುದನ್ನು ಕಾದು ನೋಡ ಬೇಕಾಗಿದೆ. ಇದರ ಫಲಶ್ರುತಿಯಲ್ಲಿ ದಲಿತ ಮುಸ್ಲಿಂಮರ ಐಡೆಂಟಿಟಿಯ ಪ್ರಶ್ನೆಗಳು ಅಡಗಿಕೊಂಡಿದೆ. □

ಕಾವ್ಯ

ಮಗು ಹೋದ ದಿಕ್ಕಿನಲ್ಲಿ



ಎದೆಹಾಲು ಬಿಟ್ಟ ಮಗು
ಅಂಬೆಗಾಲಿಡುತ್ತ
ಹಸಿವು–
ನೀಗಿಸಲು ಹೇಗೋ ಕಾಡಿ ಬೇಡಿ ಸಿಕ್ಕ
ತುತ್ತು ಅನ್ನದ ಸುಖದಲಿ ಅರಳಿಸಿತ್ತು
ಮುಖ

ಧುತ್ತೆಂದು ಅನ್ನ ಕಸಿದವ
ಭಕ್ತ–
ಧ್ಯಾನಿಸುತ್ತಿದ್ದಾನೆ ದೇವರೆದುರು ಮಂಡಿಯೂರಿ.

ಅನ್ನ ಅನ್ನ ಎಂದು ಅಲೆದಿದೆ ಮಗು
ಇನ್ನೂ ವಿಕಲಾಂಗ ತಾಯಿಯ ಕೈಹಿಡಿದು
ಬೀದಿಯುದ್ದಕ್ಕೂ ಕಣ್ಣೀರು ಕುಡಿದು
ಒಡಲ ಬೇಗೆಗೆ ದಣಿದಣಿದು
ಪ್ರಾರ್ಥನೆ ಮುಂದುರೆಸಿದ್ದಾನೆ ಅನ್ನ ಕಸಿದವ.
ಆಮೆನ್ ಆಮೆನ್ ಎನ್ನುತ್ತ.

ಬೊಗಸೆಯ ಮುಂದೊಡ್ಡಿ ಬೇಡುತ್ತಿದ್ದಾನೆ
ಅನ್ನ ಕಸಿದವನೀಗ
ಬೇಡುವ ಮಗುವಿನ ತಟ್ಟೆಯ ಹಾಗೆ ಬೊಗಸೆ ಹಿಡಿದು.

ಮಗು ತಟ್ಟೆಯಲ್ಲಿದ್ದ ಹಿಡಿ ಅನ್ನ ಹಾಕಿ ಮುನ್ನಡೆದಿದೆ.
ಕಣ್ಣರಳಿಸಿ ನೋಡುತ್ತಲೇ ನಿಂತಿದ್ದಾನೆ, ಅವನೀಗ
ದೇವಾಲಯದ ಬಾಗಿಲಲ್ಲಿ
ನೋಡುತ್ತ ಮುಂದೆ ಮುಂದೆ
ಮಗು ಹೋದ ದಿಕ್ಕಿನಲ್ಲಿ ಕಣ್ಣರಳಿಸಿ.

ಕಾಣದ ಆ ದಿಕ್ಕು ನೋಡಿ ನೋಡಿ
ಸೋತ ಕಣ್ಣು ಹೊತ್ತು
ಮಗು ಹಾಕಿರುವ ಅನ್ನವನ್ನೇ ದಿಟ್ಟಿಸುತ್ತಿದ್ದಾನೆ.

○ ರಂಗನಾಥ ಕಂಟನಕುಂಟೆ

ಬುದ್ಧಾಯಣ

೫೨

ಹಿಂಸೆ ತರವಲ್ಲ ಸೂಕ್ಷ್ಮತೆಯಿಂದ ಬೇಧಿಸಿ

ಅಂದಿನ ದಿನಗಳಲ್ಲಿ ಗೌತಮ ಬುದ್ಧರು ಜೇತವನದಲ್ಲಿ ತಂಗಿದ್ದರು. ಆದಕ್ಕೂ ಬಹುಕಾಲದ ಹಿಂದೆ ಬೋಧಿಸತ್ವರು ವಾರಣಾಸಿ ನಗರದ ಅಗರ್ಭ ಶ್ರೀಮಂತ ಕುಟುಂಬದಲ್ಲಿ ಜನಿಸಿದ್ದರು. ಅಂದಿನ ದಿನದಲ್ಲಿ ಆ ರಾಜ್ಯವನ್ನು ಬ್ರಹ್ಮದತ್ತ ರಾಜನು ಆಳುತ್ತಿದ್ದನು. ಬೋಧಿಸತ್ವರು ಬೆಳೆದು ದೊಡ್ಡವರಾದ ನಂತರ ಸಮಸ್ತ ವಿದ್ಯೆಗಳನ್ನು ವ್ಯಾಸಂಗ ಮಾಡಿ ಪಂಡಿತರೆನಿಸಿಕೊಂಡರು. ಮುಂದೆ ಬ್ರಹ್ಮದತ್ತ ರಾಜನಲ್ಲಿ ಮಂತ್ರಿಯಾಗಿ ನೇಮಕಗೊಂಡರು.

ಒಂದು ದಿನ ರಾಜನು ಉದ್ಯಾನ ವನದಲ್ಲಿ ಸಂಚರಿಸುವಾಗ ಮನೋಹರವಾದ ಮಂಗಳ ಪುಷ್ಕರಣಿಯಲ್ಲಿ ಜಲಕ್ರೀಡೆಯಾಡಲು ಮನಸ್ಸಾಯಿತು. ಅತಃಪುರದಿಂದ ತನ್ನ ಸ್ತ್ರೀಯರನ್ನು ಕರೆಸಿದ. ಅವರುಗಳು ಅತ್ಯಂತ ಹರ್ಷಚಿತ್ತರಾಗಿ ತಾವು ತೊಟ್ಟ ಉಡುಗೆ ತೊಡುಗೆ ಮತ್ತು ವಸ್ತ್ರಾಭರಣಗಳನ್ನು ಕಳಚಿ ದಾಸಿಯೊಬ್ಬಳ ಕಾವಲಿನಲ್ಲಿ ಇರಿಸಿ ರಾಜನೊಂದಿಗೆ ಜಲಕ್ರೀಡೆಗೆ ತೊಡಗಿದರು. ಆ ವನದಲ್ಲಿ ವಿಪರೀತ ಮಂಗಗಳಿದ್ದವು. ಅವುಗಳಲ್ಲೊಂದು ಹೆಣ್ಣು ಕೋತಿಯು ರಾಣಿಯ ಕಂಠಿಹಾರದ ಮೇಲೆ ಕಣ್ಣಾಕಿ ಮನಸೋತಿತ್ತು. ಕಾವಲಿನವಳು ತೂಕಳಿಸುವ ಸಮಯಕ್ಕಾಗಿ ಕಾದು ಕುಳಿತಿತ್ತು. ಆಕೆಯು ತೂಕಳಿಸುವ ಸಮಯವನ್ನು ಸಾಧಿಸಿ ಮರದ ಕೊಂಬೆಯಿಂದ ಚಿಗಿದು ಬಂದ ಆ ಕೋತಿಯು ಮಹಾರಾಣಿಯ ಕಂಠಿಹಾರವನ್ನು ಅಪಹರಿಸಿಕೊಂಡು ಹೋಗಿ ಒಂದು ಮರದ ಪೊಟರೆಯಲ್ಲಿ ಹಾಕಿ ಆ ಮರದ ರಂಬೆಯೊಂದರ ಮೇಲೆ ಕಾವಲಿಗೆ ಕುಳಿತು ಬಿಟ್ಟಿತು.

ನಿದ್ರೆ ಮಾಡುತ್ತಿದ್ದ ದಾಸಿಯು ತೂಕಡಿಕೆಯಿಂದ ಎಚ್ಚೆತ್ತ ಮೇಲೆ ನೋಡಿದಾಗ ಮಹಾರಾಣಿಯ ಕಂಠಿಹಾರವು ನಾಪತ್ತೆಯಾಗಿತು. ರಾಜ ಮತ್ತು ಅವನ ರಾಣಿಯರು ಜಲಕ್ರೀಡೆ ಮುಗಿಸಿ ಮೇಲೆ ಬಂದ ನಂತರ "ನನ್ನ ಹಾರ ಎಲ್ಲಿ?" ಎಂದು ಕೇಳಿದರೆ ನಾನೇನು ಮಾಡುವುದು ಎಂದು ಹೆದರಿದ ಆಕೆಯು :

"ಕಳ್ಳನು ದೇವಿಯವರ ಮುತ್ತಿನ ಹಾರವನ್ನು ಅಪಹರಿಸಿಕೊಂಡು ಓಡಿ ಹೋಗುತ್ತಿದ್ದಾನೆ..!" ಎಂದು ಬೊಬ್ಬೆಯೊಡೆಯ ತೊಡಗಿದಳು. ಜಲಕ್ರೀಡೆಯಿಂದ ಮೇಲೆದ್ದು ಬಂದ ರಾಜನು ತನ್ನ ಸೈನಿಕರನ್ನು ಉದ್ದೇಶಿಸಿ "ಕಳ್ಳನನ್ನು ಹಿಡಿದು ತನ್ನಿ..!" ಎಂದು ಆಜ್ಞೆ ಮಾಡಿದ. ಸೈನಿಕರು ದಶದಿಕ್ಕಿಗೂ ದಾಳಿ ಇಟ್ಟರು. ಅವರುಗಳ ಕಣ್ಣಿಗೆ ಯಾರೂ ಕಾಣಲ್ಲಿಲ್ಲ. ದೂರದ ಗದ್ದೆಯೊಂದರಲ್ಲಿ ನಾಟಿ ಮಡುತ್ತಿದ್ದ ರೈತನೊಬ್ಬನನ್ನು ಕಂಡರು. ಬೇರೆ ವಿಧಿ ಇಲ್ಲದ ಸೈನಿಕರು ಆ ರೈತನನ್ನು ಬಂಧಿಸಿ ಹಿಂಸಿಸುತ್ತಾ : "ಎಲೈ ದುಷ್ಟ ಕಳ್ಳನೇ ರಾಣಿಯ ಕಂಠಿಹಾರವೆಲ್ಲಿ?" ಆತ ಹಿಂದೆ ಮುಂದೆ ತಿಳಿಯದೆ "ಅಯ್ಯಾ, ನಾನು ನೀರಾಪರಾಧಿ ನನಗೆ ಏನು ತಿಳಿಯದು" ಎಂದು ಅಂಗಲಾಚಿದ. ಆತನನ್ನು ಮತ್ತೂ ಹಿಂಸಿಸ ತೊಡಗಿದಾಗ ; "ಹೌದು ನಾನೇ ಕಳ್ಳ!" ಎಂದು ಒಪ್ಪಿಕೊಂಡ. ಬಳಿಕ ಆ ಸೈನಿಕರು ಮುತ್ತಿನ ಹಾರವನ್ನು "ಎಲ್ಲಿ ಬಚ್ಚಿಟ್ಟಿರುವೆ?" ಎನ್ನಲು "ನನ್ನನ್ನು ರಾಜನ ಬಳಿಗೆ ಕರೆದ್ಯೊಯಿರಿ" ಎಂದ. ಅವರು ಹಾಗೆಯೇ ಮಾಡಿದರು.

ರಾಜನಿಗೆ ವಂದಿಸುತ್ತಾ: "ಪ್ರಭು, ನಾನು ನಿಜಕ್ಕೂ ನಿರಾಪರಾಧಿ! ನಾನು ಇಲ್ಲಿಯ ತನಕ ಬೆಲೆಬಾಳುವ ಮಂಚವನ್ನು ಕೂಡ ನೋಡಿಲ್ಲ. ಆಗಿರುವಾಗ ನಾನೇಗೆ ಕಂಠಿಹಾರವನ್ನು ನೋಡಲು ಸಾಧ್ಯ? ನನ್ನ ಮೇಲೆ ಕೃಪೆ ತೋರಿ ಬಿಡುಗಡೆ ಮಾಡಿ!" ಎಂದು ಬೇಡಿಕೊಂಡ. ಅವಿವೇಕಿಯಾದ ರಾಜನು ನ್ಯಾಯ ಅನ್ಯಾಯಗಳನ್ನು ಸರಿಯಾಗಿ ಪರೀಶಿಲಿಸದೆ ಸೈನಿಕರನ್ನು ಕರೆದು "ಈತ ನಿಜವನ್ನು ಒಪ್ಪಿಕೊಳುವ



"ದೇವಾ, ನನಗೆ ಇಂಥಹ ಶ್ರೇಷ್ಠಿಯೊಬ್ಬ ಹಾರವನ್ನು ಕದಿಯಲು ಹೇಳಿದ್ದ. ನಾನು ಕದ್ದೆ!" ಎಂದು ಜೀವ ಉಳಿಸಿಕೊಳ್ಳಲು ಅಸತ್ಯವನ್ನು ನುಡಿದ. ರಾಜನು ಶ್ರೇಷ್ಠಿಯನ್ನು ಕರೆದು ವಿಚಾರಿಸಲಾಗಿ ಆತ ಮುಂದಿನ ಪರಿಣಾಮವನ್ನು ಅರಿತು ; "ಪ್ರಭು, ನಾನು ಪುರೋಹಿತನಿಗೆ ಕೊಟ್ಟಿದ್ದೇನೆ !" ಎಂದನು. ಪುರೋಹಿತನನ್ನು ಕರೆಹಿಸಲು ,ಆತ "ಪ್ರಭು, ನಾನು ಸಂಗೀತಗಾರನಿಗೆ ಕೊಟ್ಟಿದ್ದೇನೆ!" ಎಂದ. ಸಂಗೀತಗಾರನನ್ನು ಕರೆಸಲು ಆತ ; "ಪ್ರಭು, ನಾನು ಒಬ್ಬಳು ವೇಶ್ಯೆಗೆ ಕೊಟ್ಟಿದ್ದೇನೆ" ಎಂದು ಉತ್ತರಿಸಿದ.

ಸಿ. ಹೆಚ್. ರಾಜಶೇಖರ್

ತನಕ ದಂಡನೆಯನ್ನು ಕೊಡಿ" ಎನ್ನಲು ರೈತನು ಇನ್ನು ಇವರು ನನ್ನನ್ನು ಜೀವಸಹಿತ ಬಿಡುವುದಿಲ್ಲ ಎಂಬುದು ತಿಳಿದು "ಮಹಾರಾಜ ನಾನೇ ಕಳ್ಳ.. ನನ್ನನ್ನು ಮತ್ತೂ ಶಿಕ್ಷಿಸಬೇಡಿ" ಎನ್ನಲು "ಹಾಗಾದರೆ ಕದ್ದ ಮಾಲು ಎಲ್ಲಿ?"

"ದೇವಾ, ನನಗೆ ಇಂಥಹ ಶ್ರೇಷ್ಠಿಯೊಬ್ಬ ಹಾರವನ್ನು ಕದಿಯಲು ಹೇಳಿದ್ದ. ನಾನು ಕದ್ದೆ!" ಎಂದು ಜೀವ ಉಳಿಸಿಕೊಳ್ಳಲು ಅಸತ್ಯವನ್ನು ನುಡಿದ.

ರಾಜನು ಶ್ರೇಷ್ಠಿಯನ್ನು ಕರೆದು ವಿಚಾರಿಸಲಾಗಿ ಆತ ಮುಂದಿನ ಪರಿಣಾಮವನ್ನು ಅರಿತು;

"ಪ್ರಭು, ನಾನು ಪುರೋಹಿತನಿಗೆ ಕೊಟ್ಟಿದ್ದೇನೆ!" ಎಂದನು. ಪುರೋಹಿತನನ್ನು ಕರೆಹಿಸಲು, ಆತ

"ಪ್ರಭು, ನಾನು ಸಂಗೀತಗಾರನಿಗೆ ಕೊಟ್ಟಿದ್ದೇನೆ!" ಎಂದ. ಸಂಗೀತಗಾರನನ್ನು ಕರೆಸಲು ಆತ;

"ಪ್ರಭು, ನಾನು ಒಬ್ಬಳು ವೇಶ್ಯೆಗೆ ಕೊಟ್ಟಿದ್ದೇನೆ" ಎಂದು ಉತ್ತರಿಸಿದ. ರಾಜ ಆತ ಹೇಳಿದ ವೇಶ್ಯೆಯನ್ನು ಕರೆಸಿ ವಿಚಾರಿಸಿದಾಗ: "ಪ್ರಭು, ನಾನು ಈ ಸಂಗೀತಗಾರನನ್ನು ಇದುವರೆವಿಗೂ ಕಂಡೆ ಇಲ್ಲ" ಎಂದು ದಿಟವಾಗಿ ನುಡಿದಳು.

ರಾಜನು ಗೊಂದಲಕ್ಕೆ ಸಿಲುಕಿಕೊಂಡನು. ಕೊನೆಗೆ ಅವರುಗಳು ಸತ್ಯವನ್ನು ಒಪ್ಪಿಕೊಳ್ಳುವ ತನಕ ಆ ಎಲ್ಲರನ್ನು ಸೆರೆ ಮನೆಗೆ ತಳ್ಳಲು ಆಜ್ಞೆ ಮಾಡಿದ. ಈ ವಿಷಯವು ಬೋಧಿಸತ್ವರಿಗೆ ತಿಳಿಯಲು ರಾಜನನ್ನು ಕಂಡು:

"ಪ್ರಭು, ಈ ವಿಷಯವನ್ನು ನನಗೆ ಒಪ್ಪಿಸಿ ನಾನು ಹಿಂಸೆ ಇಲ್ಲದೆ ಪರಿಹರಿಸುತ್ತೇನೆ!" ಎನ್ನಲು ರಾಜನು ಒಪ್ಪಿದನು.

ಭೋಧಿಸತ್ವರು ಸೆರೆಮನೆಯ ಆಳನ್ನು ಕರೆದು "ಆ ಐವರನ್ನು ಒಂದೇ ಕೋಣೆಗೆ ಕೂಡಿ ಹಾಕು. ಅವರುಗಳು ಪರಸ್ಪರ ಏನೇನು ಮಾತನಾಡಿಕೊಳ್ಳುತ್ತಾರೋ ನನಗೆ ಬಂದು ಹೇಳು!" ಎಂದರು. ಅವರು ಹಾಗೇಯೇ ಮಾಡಿದರು. ಅಂದು ರಾತ್ರಿ ಶ್ರೇಷ್ಠಿಯು ರೈತನನ್ನು ಉದ್ದೇಶಿಸಿ; "ಎಲೈ ಪಾಪಿ ರೈತನೇ , ನಾನು ಎಂದಾದರು ನಿನ್ನನ್ನು ಈ ಮೊದಲು ನೋಡಿರುವೆನೇ?" ಎನ್ನಲು ಆತ "ಸ್ವಾಮಿ, ನಿಜಕ್ಕೂ ನೀವಾಗಲೀ ನಾನಾಗಲೀ ನಿಮ್ಮನ್ನು ಈ ಮೊದಲು ಎಲ್ಲಿಯು ನೋಡಿಲ್ಲ. ಸಂಧಿಸಿಲ್ಲ, ಮಾತನಾಡಿಸಿಲ್ಲ!" ಎಂದನು.

" ಆಗಿರಲು ನನ್ನ ಮೇಲೆ ಏಕೆ ದೂರು ಕೊಟ್ಟೆ?"

"ಸ್ವಾಮಿ, ತಾವು ನನಗಿಂತ ಹಣದಿಂದ ಗುಣದಿಂದ ಮತ್ತು ಪ್ರಭಾವದಿಂದ ಬಲಶಾಲಿಗಳು. ತಮ್ಮ ಕರುಣೆ ಯಿಂದ ನಾನು ಬದುಕಿ ಉಳಿಯಬಹುದು ಎಂಬ ದೂರದ ಆಸೆಯೊಂದು ನನಗೆ ಈ ಬಗೆಯ ತಪ್ಪು ಮಾಡಲು ಪ್ರಚೋದಿಸಿತು. ಇದರಲ್ಲಿ ತಮ್ಮ ತಪ್ಪು ತೃಣ ಮಾತ್ರವೂ ಇಲ್ಲ. ನನ್ನನ್ನು ಕ್ಷಮಿಸಿ ಬಿಡಿ!" ಎಂದು ಕ್ಷಮೆ ಯಾಚಿಸಿದ. ಮಿಕ್ಕ ಉಳಿದವರ ಪಾಡೂ ಇದೇ ಆಯಿತು. ಈ ವಿಷಯವನ್ನೆಲ್ಲ ಸಂಗ್ರಹಿಸಿದ ಕಾವಲುಗಾರ ಚಾಚೂ ತಪ್ಪದೆ ಭೋಧಿಸತ್ವರಿಗೆ ವರದಿ ಮಾಡಿದ. ಆಗ ಅವರು ಆ ಐವರೂ ನಿರಾಪರಾಧಿಗಳು ಎಂಬ ತೀರ್ಮಾನಕ್ಕೆ ಬಂದರು. ಇದಕ್ಕೂ ಮೊದಲು ಬೋಧಿಸತ್ವರು ಹೀಗೆ ಯೋಚಿಸಿದ್ದರು; ಉದ್ಯಾನದ ಸುತ್ತಲು ಎತ್ತರವಾದ ಕೋಟೆಯ ಗೋಡೆ ಇದೆ. ಅದರ ಸುತ್ತ ಮತ್ತು ದ್ವಾರದ ಬಳಿ ಬಲವಾದ ಕಾವಲಿದೆ. ಈ ಎಲ್ಲವನ್ನು ಬೇಧಿಸಿ ಕೊಂಡು ಒಳಗಿನವರು ಹೇಗೆ ಹೋರಗೆ ಹೋದರು? ಹೋರಗಿನವರು ಹೇಗೆ ಒಳಗೆ ಬಂದರು? ಇದು ಸಾಧ್ಯವಿಲ್ಲದ ಮಾತೇ ಸರಿ.

"ಸ್ವಾಮಿ, ತಾವು ನನಗಿಂತ ಹಣದಿಂದ ಗುಣದಿಂದ ಮತ್ತು ಪ್ರಭಾವದಿಂದ ಬಲಶಾಲಿಗಳು. ತಮ್ಮ ಕರುಣೆ ಯಿಂದ ನಾನು ಬದುಕಿ ಉಳಿಯ ಬಹುದು ಎಂಬ ದೂರದ ಆಸೆಯೊಂದು ನನಗೆ ಈ ಬಗೆಯ ತಪ್ಪು ಮಾಡಲು ಪ್ರಚೋಧಿಸಿತು. ಇದರಲ್ಲಿ ತಮ್ಮ ತಪ್ಪು ತೃಣ ಮಾತ್ರವೂ ಇಲ್ಲ. ನನ್ನನ್ನು ಕ್ಷಮಿಸಿ ಬಿಡಿ!" ಎಂದು ಕ್ಷಮೆ ಯಾಚಿಸಿದ. ಮಿಕ್ಕ ಉಳಿದವರ ಪಾಡೂ ಇದೇ ಆಯಿತು. ಈ ವಿಷಯವನ್ನೆಲ್ಲ ಸಂಗ್ರಹಿಸಿದ ಕಾವಲುಗಾರ ಚಾಚೂ ತಪ್ಪದೆ ಭೋಧಿಸತ್ವರಿಗೆ ವರದಿ ಮಾಡಿದ. ಆಗ ಅವರು ಆ ಐವರೂ ನಿರಾಪರಾಧಿಗಳು ಎಂಬ ತೀರ್ಮಾನಕ್ಕೆ ಬಂದರು. ಇದಕ್ಕೂ ಮೊದಲು ಬೋಧಿ ಸತ್ವರು ಹೀಗೆ ಯೋಚಿಸಿದ್ದರು ; ಉದ್ಯಾನದ ಸುತ್ತಲು ಎತ್ತರವಾದ ಕೋಟೆಯ ಗೋಡೆ ಇದೆ. ಅದರ ಸುತ್ತ ಮತ್ತು ದ್ವಾರದ ಬಳಿ ಬಲವಾದ ಕಾವಲಿದೆ. ಈ ಎಲ್ಲವನ್ನು ಬೇಧಿಸಿ ಕೊಂಡು ಒಳಗಿನವರು ಹೇಗೆ ಹೋರಗೆ ಹೋದರು? ಹೋರಗಿನವರು ಹೇಗೆ ಒಳಗೆ ಬಂದರು? ಇದು ಸಾಧ್ಯವಿಲ್ಲದ ಮಾತೇ ಸರಿ. ಅಲ್ಲಿ ಇದ್ದವಳು ಕಾವಲಿನ ದಾಸಿ ಮಾತ್ರ. ಆಕೆ ಒಮ್ಮೆ ಕದ್ದರೆ ಆದರ ಪರಿಣಾಮ ಏನು ಎಂಬುದರ ಅರಿವಿದೆ. ಒಂದು ಪಕ್ಷ ಆಕೆಯೇ ಕದ್ದಿದ್ದರೂ ರಾಜ ಮತ್ತು ಸೈನಿಕರು ಆಕೆಯನ್ನು ಜೀವಸಹಿತ ಬಿಡುತ್ತಿರಲ್ಲಿಲ್ಲ. ವಾಸ್ತವ ಹೀಗಿರಲು ಕದ್ದವರು ಯಾರೂ? ಮನುಷ್ಯರಂತು ಅಲ್ಲ!

ಅಲ್ಲಿ ಇದ್ದವಳು ಕಾವಲಿನ ದಾಸಿ ಮಾತ್ರ. ಆಕೆ ಒಮ್ಮೆ ಕದ್ದರೆ ಆದರ ಪರಿಣಾಮ ಏನು ಎಂಬುದರ ಅರಿವಿದೆ. ಒಂದು ಪಕ್ಷ ಆಕೆಯೇ ಕದ್ದಿದ್ದರೂ ರಾಜ ಮತ್ತು ಸೈನಿಕರು ಆಕೆಯನ್ನು ಜೀವಸಹಿತ ಬಿಡುತ್ತಿರಲ್ಲಿಲ್ಲ. ವಾಸ್ತವ ಹೀಗಿರಲು ಕದ್ದವರು ಯಾರೂ? ಮನುಷ್ಯರಂತು ಅಲ್ಲ! ಅಂದರೆ ಪ್ರಾಣಿಗಳಾಗಿರಬೇಕು. ಅಲ್ಲಿರುವ ಪ್ರಾಣಿ ಎಂದರೆ ಮಂಗಗಳೇ ಆಗಿವೆ ಎಂಬ ನಿರ್ಧಾರಕ್ಕೆ ಬಂದಿದ್ದರು. ಈಗ ಆ ವಾದವು ಸತ್ಯವೆನಿಸಿತು.

ಮರು ದಿನ ಬೋಧಿಸತ್ವರು ಆಭರಣ ಮಾಡುವ ಕುಶಲಕಮ್ಮಿಗಳನ್ನು ಕರೆಸಿ ನಕಲಿ ಕಂಠಿಹಾರ ಮುಂತಾದ ವಿವಿಧ ಆಭರಣಗಳನ್ನು ತಯಾರು ಮಾಡಿಸಿದರು. ನಂತರ ಕೈಗೆ ಸಿಕ್ಕ ಮಂಗಗಳನ್ನು ಬಲೆ ಬೀಸಿ ಹಿಡಿಸಿದರು. ಅವುಗಳ ಕೈಗೆ ಕುತ್ತಿಗೆಗೆ ಮತ್ತು ಕಾಲುಗಳಿಗೆ ಆ ನಕಲಿ ಆಭರಣಗಳನ್ನು ತೊಡಿಸಿ ಬಲೆಯಿಂದ ಹೊರ ಬಿಟ್ಟರು. ಅವುಗಳು ಅಪಾರ ಸಂತೋಷದಿಂದ ಕುಣಿಯುತ್ತಾ ನಲಿಯುತ್ತಾ ನರ್ತಿಸ ತೊಡಗಿದವು. ಅವುಗಳಲ್ಲಿ ಒಂದು ಹೆಣ್ಣು ಕೋತಿಯು ಅಸಲಿ ಕಂಠಿಹಾರವನ್ನು ಕದ್ದ ಕೋತಿಯ ಬಳಿ ಬಂದು :

"ಎಲೈ, ಅವಿವೇಕಿಯೆ ನೀನೇಕೆ ರಾಜನ ಸೇವಕರು ಬೀಸಿದ ಬಲೆಗೆ ಬೀಳಲಿಲ್ಲ? ನೋಡು ಬಲೆಗೆ ಬಿದ್ದ ನಮಗೆ ಎಂಥಹ ಆಭರಣಗಳನ್ನು ಉಡುಗೊರೆಯಾಗಿ ನೀಡಿದ್ದಾರೆ" ಎಂದು ಹಂಗಿಸಿತು. ಇದರಿಂದ ಆ ಕಳ್ಳ ಕೋತಿಯ ಸ್ವಾಭಿಮಾನಕ್ಕೆ ಧಕ್ಕೆಯಾಗಲು ಕುಳಿತಲ್ಲಿಂದ ಪೊಟರೆಯ ಬಳಿ ಜಿಗಿದು ಅಲ್ಲಿ ಕದ್ದು ಇಟ್ಟಿದ್ದ ಅಸಲಿ ಕಂಠಿಹಾರವನ್ನು ಕೊರಳಿಗೆ ಧರಿಸಿ ಜಂಬದಿಂದ ;

"ಎಲೈ ಮೂರ್ಖಳೇ, ಇದು ಅಸಲಿ ಕಂಠಿಹಾರ! ನೀನು ಧರಿಸಿರುವುದು ನಕಲಿ ಕಂಠಿಹಾರ. ಈಗ ಹೇಳು ನಮ್ಮಿಬ್ಬರಲ್ಲಿ ಯಾರು ಅವಿವೇಕಿ..?" ಎನ್ನಲು ಈ ಸಮಯಕ್ಕಾಗಿಯೇ ಹೊಂಚುಹಾಕಿ ಕಾಯುತ್ತಿದ್ದ ಬೋಧಿಸತ್ವರು ಸೈನಿಕರನ್ನು ಉದ್ದೇಶಿಸಿ :

"ಆ ಹೆಣ್ಣು ಕೋತಿಯನ್ನು ಸೆರೆ ಹಿಡಿದು ತನ್ನಿ..!" ಎಂದು ಆಜ್ಞೆ ಮಾಡಿದರು. ಆ ಕೋತಿಯನ್ನು ಹಿಂಬಾಲಿಸಿ ಕೊನೆಗೂ ಸೆರೆ ಹಿಡಿದು ತಂದು ಬೋಧಿಸತ್ವರಿಗೆ ಒಪ್ಪಿಸಿದರು. ಆ ಕೋತಿಯ ಕೊರಳಿನಿಂದ ಮಹಾರಾಣಿಯ ಬೆಲೆಬಾಳುವ ಕಂಠಿಹಾರವನ್ನು ಕಸಿದುಕೊಂಡು ರಾಜನ ಬಳಿ ಬಂದು;

"ಮಹಾರಾಜ, ಇದೇ ಏನು ರಾಣಿಯವರ ಕಂಠಿಹಾರ?" ಎನ್ನಲು ರಾಜನು ತಬ್ಬಿಬಾಗಿ

"ಹೌದು, ಇದೇ ಹಾರ! ಇದನ್ನು ನೀವು ಹೇಗೆ ಪತ್ತೆ ಹಚ್ಚಿದಿರಿ ಎನ್ನಲು!" ನೆಡೆದ ಸಂಗತಿಯನ್ನು ವಿವರವಾಗಿ ತಿಳಿಸಿದ ನಂತರ "ಪ್ರಭು, ಸೆರೆಮನೆಯಲ್ಲಿರುವ ಈ ಐವರು ನಿರಪರಾಧಿಗಳು. ಅವರುಗಳನ್ನು ಬಂಧ ಮುಕ್ತಗೊಳಿಸಿ. ಇಷ್ಟೆಲ್ಲ ರಾದ್ಧಾಂತಕ್ಕೆ ಕಾವಲಿನ ದಾಸಿಯೇ ಕಾರಣ. ಆಕೆ ಶಿಕ್ಷೆಗೆ ಹೆದರಿ ಸತ್ಯವನ್ನು ಮರೆಮಾಚಿದ್ದಾಳೆ.!" ಎಂದರು. ಇದರಿಂದ ಸಂತೋಷಗೊಂಡ ರಾಜನು:

"ಪಂಡಿತನೇ, ರಾಜನಾದವನು ಯುದ್ಧದಲ್ಲಿ ಶೂರರು ಸಿಗಲಿ ಎಂದು ಆಶಿಸುತ್ತಾನೆ. ಸಲಹೆ ನೀಡುವಲ್ಲಿ ನನಗಿಂತ ಜ್ಞಾನಿ ಸಿಗಲಿ ಎಂದು ಆಶಿಸುತ್ತಾನೆ. ಸಂದಿಗ್ಧ ಪರಿಸ್ಥಿತಿಯಲ್ಲಿ ರಹಸ್ಯವನ್ನು ಬಯಲು ಮಾಡದಿರುವ ಸ್ವಾಮಿನಿಷ್ಠ ಸಿಗಲಿ ಎಂದು ಆಶಿಸುತ್ತಾನೆ. ಮನೆಯಲ್ಲಿ ಸಂಪತ್ತಿದ್ದಾಗ ಪ್ರೀಯನಾದ ಅತಿಥಿ ಉಪಚಾರಕ್ಕಾಗಿ ಬರಲಿ ಎಂದು ಬಯಸುತ್ತಾನೆ. ಆದರೆ ಬೋಧಿಸತ್ವರೆ, ನೀವು ನನಗೆ ಬಯಸದೆ ಬಂದ ಭಾಗ್ಯವಾಗಿ ದೊರೆತ್ತಿರುವಿರಿ. ನಾನು ಎಲ್ಲಾ ಸಮಸ್ಯೆಯನ್ನು ಕೇವಲ ಹಿಂಸೆಯಿಂದ ಮಾತ್ರ ಪರಿಹರಿಸಲು ಸಾಧ್ಯ ಎಂದು ನಂಬಿದ್ದಾಗ ನೀವು ಅಹಿಂಸೆ ಮತ್ತು ಸೂಕ್ಷ್ಮತೆಯಿಂದ ಏನನ್ನು ಬೇಕಾದರೂ ಬೇಧಿಸಬಹುದು ಎಂದು ತೋರಿಸಿ ನನ್ನ ಅಜ್ಞಾನಕ್ಕೆ ಬೆಳಕು ನೀಡಿದಿರಿ" ಎನ್ನುತ್ತಾ ಬೋಧಿಸತ್ವರನ್ನು ಸನ್ಮಾನಿಸಿದರು. □

'SAMVADA' Kannada Monthly, January 2010 RNI-KAR KAN/2002/9246 CPMG/KA/BGW-706/2009-11
Office of Posting: 'Mail Business Center West' Bangalore-560104, Date of Posting: 1st & 7th of Every Month

ರೇಷ್ಮೆ ಇಲಾಖೆ

ರೇಷ್ಮೆ ಕೃಷಿಕರು / ಉದ್ದಿಮೆದಾರರಿಗೆ ಸರ್ಕಾರದ ಉತ್ತೇಜನ

ಶ್ರೀ ಬಿ.ಎಸ್. ಯಡಿಯೂರಪ್ಪ
ಸನ್ಮಾನ್ಯ ಮುಖ್ಯಮಂತ್ರಿಗಳು

ಶ್ರೀ ವೆಂಕಟರಮಣಪ್ಪ
ಸನ್ಮಾನ್ಯ ಸಣ್ಣ ಕೈಗಾರಿಕೆ ಮತ್ತು ರೇಷ್ಮೆ ಸಚಿವರು

ಕರ್ನಾಟಕ ರೇಷ್ಮೆ ಉದ್ಯಮಕ್ಕೆ ಪ್ರಶಸ್ತವಾದ ತಾಣ. ಸರ್ಕಾರವು ರೇಷ್ಮೆ ಕೃಷಿ ಅಭಿವೃದ್ಧಿಗೆ ಎಲ್ಲಾ ರೀತಿಯ ನೆರವು ಪ್ರೋತ್ಸಾಹ ನೀಡುತ್ತಿದೆ. ಕೃಷಿ ಬೆಳೆಗಾರರು ಮತ್ತು ಉದ್ಯಮದಲ್ಲಿ ತೊಡಗಿರುವ ರೀಲರ್‌ಗಳ ಹಿತರಕ್ಷಣೆಗೆ ಪೂರಕವಾದ ನೀತಿ ನಿಯಮಗಳನ್ನು ರೂಪಿಸಿ ಜಾರಿಗೊಳಿಸಿದೆ.

- ರೇಷ್ಮೆ ವರದಾನ ಯೋಜನೆಯಡಿ 1200 ಹೆಕ್ಟೇರ್ ಪ್ರದೇಶದಲ್ಲಿ ಹೊಸದಾಗಿ ಹಿಪ್ಪುನೇರಳೆ ನಾಟಿಗೆ ರೂ.140.50 ಲಕ್ಷಗಳನ್ನು ಪ್ರೋತ್ಸಾಹ ಧನವಾಗಿ ನೀಡಲಾಗಿದೆ.
- ಕೇಂದ್ರ ಪುರಸ್ಕೃತ ಕೆಟಲಿಟಿಕ್ ಅಭಿವೃದ್ಧಿ ಯೋಜನೆಯಡಿ 1900 ಹೆಕ್ಟೇರ್ ಹಿಪ್ಪುನೇರಳೆ ಪ್ರದೇಶದಲ್ಲಿ ಹನಿ ನೀರಾವರಿ ಘಟಕಗಳ ಅಳವಡಿಕೆಗೆ ರೂ.697.00 ಲಕ್ಷಗಳ ಸಹಾಯಧನ ನೀಡಲಾಗಿದೆ.
- ಕೇಂದ್ರ ಪುರಸ್ಕೃತ ಕೆಟಲಿಟಿಕ್ ಅಭಿವೃದ್ಧಿ ಯೋಜನೆಯಡಿ 2510 ಪ್ರತ್ಯೇಕ ಹುಳು ಸಾಕಾಣಿಕೆ ಮನೆ ನಿರ್ಮಾಣಕ್ಕೆ ರೂ.1632.00 ಲಕ್ಷಗಳ ಸಹಾಯಧನ ನೀಡಲಾಗಿದೆ.
- ರೇಷ್ಮೆ ವರದಾನ ಯೋಜನೆಯಡಿ 375 ಹಣ್ಣು ಹುಳುವಿನ ಮನೆ (ಮೌಂಟಿಂಗ್ ಹಾಲ್) ಗಳ ನಿರ್ಮಾಣಕ್ಕೆ ರೂ.140.45 ಲಕ್ಷಗಳ ಸಹಾಯಧನವನ್ನು ನೀಡಲಾಗಿದೆ.
- ಕೇಂದ್ರ ಪುರಸ್ಕೃತ ಕೆಟಲಿಟಿಕ್ ಅಭಿವೃದ್ಧಿ ಯೋಜನೆಯಡಿ 773 ಫಲಾನುಭವಿಗಳಿಗೆ ಚಾಕಿ ಸಾಕಾಣಿಕೆ ಕಟ್ಟಡ ನಿರ್ಮಾಣ ಹಾಗೂ ರೇಷ್ಮೆ ಹುಳು ಸಾಕುವ ಸಲಕರಣೆಗಳ ಖರೀದಿಗೆ ರೂ.127.68 ಲಕ್ಷಗಳ ಸಹಾಯಧನವನ್ನು ನೀಡಲಾಗಿದೆ.
- ಕೇಂದ್ರ ಪುರಸ್ಕೃತ ಕೆಟಲಿಟಿಕ್ ಅಭಿವೃದ್ಧಿ ಯೋಜನೆಯಡಿ ಇಬ್ಬರು ರೇಷ್ಮೆ ನೂಲು ಬಿಚ್ಚಾಣಿಕೆದಾರರಿಗೆ ಸ್ವಯಂಚಾಲಿತ ರೀಲಿಂಗ್ ಯಂತ್ರಗಳನ್ನು ಅಳವಡಿಸಲು ರೂ.150 ಲಕ್ಷಗಳ ಸಹಾಯ ಧನವನ್ನು ನೀಡಲಾಗಿದೆ.
- ಆರೋಗ್ಯ ವಿಮೆ ಯೋಜನೆಯಡಿ 10,000 ರೇಷ್ಮೆ ಬೆಳೆಗಾರರು ಹಾಗೂ ರೀಲರ್‌ಗಳಿಗೆ ರೂ.72.60 ಲಕ್ಷಗಳನ್ನು ವಿಮಾ ಕಂತಾಗಿ ಸಂದಾಯ ಮಾಡಲಾಗಿದೆ.
- ವಿವಿಧ ಯೋಜನೆಗಳಡಿ ರೇಷ್ಮೆ ನೂಲು ಬಿಚ್ಚಾಣಿಕೆದಾರರಿಗೆ ರೂ.590.00 ಲಕ್ಷಗಳ ಪ್ರೋತ್ಸಾಹ / ಸಹಾಯಧನ ನೀಡಲಾಗಿದೆ.
- ಮೈಸೂರು ಬಿತ್ತನೆ ಪ್ರದೇಶದ ರೇಷ್ಮೆ ಬೆಳೆಗಾರರ ಹಿತರಕ್ಷಣೆಗಾಗಿ ರೂ.107.40 ಲಕ್ಷಗಳನ್ನು ಬೋನಸ್ / ಸಹಾಯಧನವಾಗಿ ನೀಡಲಾಗಿದೆ.
- ಪರಿಶಿಷ್ಟ ಜಾತಿ / ಪಂಗಡದ ರೇಷ್ಮೆ ಬೆಳೆಗಾರರು / ರೀಲರುಗಳಿಗೆ ಪ್ರತ್ಯೇಕ ಯೋಜನೆಗಳಿದ್ದು ರೂ.315.00 ಲಕ್ಷಗಳ ಸೌಲಭ್ಯಗಳನ್ನು ಒದಗಿಸಲಾಗಿದೆ.
- ಸಾಲ ಯೋಜನೆಯಡಿ ರೇಷ್ಮೆ ಕೃಷಿ ಚಟುವಟಿಕೆಗಳಿಗೆ 3120 ಫಲಾನುಭವಿಗಳಿಗೆ ವಾಣಿಜ್ಯ ಸಂಸ್ಥೆಗಳ ಮೂಲಕ ರೂ.2547.10 ಲಕ್ಷಗಳ ಸಾಲವನ್ನು ಒದಗಿಸಲಾಗಿದೆ.
- ರಾಜ್ಯ / ಜಿಲ್ಲಾ ಮಟ್ಟದ ಪ್ರಗತಿಪರ ರೇಷ್ಮೆ ಕೃಷಿಕರ / ರೀಲರುಗಳ ಪ್ರಗತಿಯನ್ನು ಆಧರಿಸಿ ಇಲಾಖೆಯಿಂದ ನಗದು ಬಹುಮಾನ ನೀಡಿ ಪ್ರೋತ್ಸಾಹಿಸಲಾಗುತ್ತಿದೆ.

2009-10ನೇ ಸಾಲಿನಲ್ಲೂ ಮೇಲ್ಕಂಡ ಯೋಜನೆಗಳು ಅನುಷ್ಠಾನದಲ್ಲಿದ್ದು ಇವುಗಳ ಪ್ರಯೋಜನವನ್ನು ಪಡೆಯಲು ರೇಷ್ಮೆ ಇಲಾಖೆಯ ಸ್ಥಳೀಯ ಅಧಿಕಾರಿಗಳನ್ನು ಸಂಪರ್ಕಿಸಿ.

ಕರ್ನಾಟಕ ವಾರ್ತೆ